**ಕರ್ನಾಟಕ ವಿಧಾನ ಪರಿಷತ್ತು**

**ನೂರ ಐವತ್ತೆಂಟನೆಯ ಅಧಿವೇಶನ**

**೩೦ನೇ ಜನವರಿ 2026**
**ಶುಕ್ರವಾರ**

# ವಿಷಯಾನುಕ್ರಮಣಿಕೆ (INDEX)


**1. ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು ಸದನದಲ್ಲಿ ಬಳಸಿದ ಅಸಂಸದೀಯ ಪದಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ ನಂತರವೂ ಅವರನ್ನು ಸದನದಿಂದ ಅಮಾನತುಗೊಳಿಸಬೇಕೆನ್ನುವ ಬಗ್ಗೆ.**

– ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

– ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು)

**2. ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**3. ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು ಸದನದಲ್ಲಿ ಬಳಸಿದ ಅಸಂಸದೀಯ ಪದಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ ನಂತರವೂ ಅವರನ್ನು ಸದನದಿಂದ ಅಮಾನತುಗೊಳಿಸಬೇಕೆನ್ನುವ ಬಗ್ಗೆ ಮುಂದುವರೆದ ಚರ್ಚೆ.**

– ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
– ಶ್ರೀ ಅಡಗೂರು ಹೆಚ್. ವಿಶ್ವನಾಥ್
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

**4. ಪ್ರಕಟಣೆ**

**5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಅಡಗೂರು .ಹೆಚ್.ವಿಶ್ವನಾಥ್
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)
– ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
– ಶ್ರೀ ರಮೇಶ್ ಬಾಬು
– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
– ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)
– ಶ್ರೀ ವೈ.ಎಂ.ಸತೀಶ್
– ಶ್ರೀ ಶಿವಕುಮಾರ್.ಕೆ

- ಶ್ರೀ ಎಂ. ನಾಗರಾಜು
- ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀಮತಿ ಬಲ್ಕೀಸ್ ಬಾನು

**6. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**428 – ಕೋಲಾರ ಜಿಲ್ಲೆಯಲ್ಲಿ ಗ್ರಾಮೀಣ ರಸ್ತೆ ಸಂಪೂರ್ಣ ಹಾಳಾಗಿರುವ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

552– **ರಾಜ್ಯ ಸರ್ಕಾರದಿಂದ ಆಚರಿಸಲ್ಪಡುತ್ತಿರುವ ಜಯಂತಿ/ಜನ್ಮದಿನಾಚರಣೆಗಳ ಕುರಿತು.**

- ಡಾ॥ ಧನಂಜಯ ಸರ್ಜಿ
- ಶ್ರೀ ಶಿವರಾಜ್ ಎಸ್. ತಂಗಡಗಿ(ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**504 – ಪ್ರವರ್ಗ–1 ರ ಜಾತಿಗಳಿಗೆ ವಿದ್ಯಾರ್ಥಿ ನಿಲಯಗಳ ಬಗ್ಗೆ**

- ಶ್ರೀ ಡಿ.ಟಿ.ಶ್ರೀನಿವಾಸ(ಡಿಟಿಎಸ್)
- ಶ್ರೀ ಶಿವರಾಜ್ ಎಸ್. ತಂಗಡಗಿ(ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**522 – ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಹಣವನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿರುವ ಕುರಿತು**

- ಶ್ರೀಮತಿ ಹೇಮಲತಾ ನಾಯಕ್
- ಡಾ॥ ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**471 – ಅನ್ನದಾತರ ಆತ್ಮಹತ್ಯೆಯ ಕುರಿತು.**

- ಶ್ರೀ ಹಣಮಂತ್ ನಿರಾಣಿ ರುದ್ರಪ್ಪ
- ಶ್ರೀ ಚಲುವರಾಯ ಸ್ವಾಮಿ (ಕೃಷಿ ಸಚಿವರು)

**436 – ರಾಜ್ಯದಲ್ಲಿರುವ ವಿದ್ಯಾರ್ಥಿ ವಸತಿ ನಿಲಯಗಳ ಬಗ್ಗೆ.**

- ಶ್ರೀ ಕೆ.ಎಸ್.ನವೀನ್
- ಡಾ॥ ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**446+526 – 'ಉದಯರವಿ' ನಿವಾಸವನ್ನು ವಸ್ತುಸಂಗ್ರಹಾಲಯವನ್ನಾಗಿ ರೂಪಿಸುವ ಬಗ್ಗೆ.**

- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ಶಿವರಾಜ್ ಎಸ್. ತಂಗಡಗಿ(ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**510 – ಕಲಬುರಗಿಯಲ್ಲಿ `ಮೆಗಾ ಹಾಸ್ಟೆಲ್' ನಿರ್ಮಾಣದ ಕುರಿತು.**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಡಾ॥ ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**461 – ಕಳಪೆ ಕಾಮಗಾರಿ ಕುರಿತು.**

- ಶ್ರೀ ಭೀಮರಾವ್ ಬಸವರಾಜ ಪಾಟೀಲ್
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

**479 – ರಾಜ್ಯದ ರೈತರಿಗೆ ರಾಸಾಯನಿಕ ಗೊಬ್ಬರ ನೀಡುವ ಕುರಿತು.**

- ಶ್ರೀ ಕೆ. ವಿವೇಕಾನಂದ
- ಶ್ರೀ ಚಲುವರಾಯ ಸ್ವಾಮಿ (ಕೃಷಿ ಸಚಿವರು)

170– **ರಾಜ್ಯದ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳಲ್ಲಿನ ಸುರಕ್ಷತಾ ಕ್ರಮಗಳ ಕುರಿತು.**

- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

7. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಹಾಗೂ ಸರ್ಕಾರಿ, ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಧ್ಯಾಪಕರಿಗೆ ಪಿಂಚಣಿಯಲ್ಲಿ ಕಡಿತ ಆಗುತ್ತಿರುವ ಕುರಿತು.**

- ಶ್ರೀ ಎಸ್.ವಿ.ಸಂಕನೂರ
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

**ಆ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 50 ವರ್ಷ ಹಳೆಯ ಒಳಚರಂಡಿ ಜಾಲವನ್ನು ಅಭಿವೃದ್ಧಿಪಡಿಸುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

ಇ) **ಬಾಗಲಕೋಟೆ ಜಿಲ್ಲೆ ರಬಕವಿ–ಬನಹಟ್ಟಿ ಜಾಕ್‌ವೆಲ್‌ನ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಮಹಿಷವಾಡಗಿ ಸೇತುವೆ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸುವ ಕುರಿತು.**

- ಶ್ರೀ ಹಣಮಂತ್ ನಿರಾಣಿ ರುದ್ರಪ್ಪ
- ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು)

**ಈ) ಬೆಳಗಾವಿ ನಗರದ ಐತಿಹಾಸಿಕ ಕೋಟೆ ಕೆರೆಯ ಮಧ್ಯದಲ್ಲಿ 100 ಅಡಿ ಎತ್ತರದ ಬುದ್ಧ ಮೂರ್ತಿಯ ಸ್ಥಾಪನೆಯ ವಿಳಂಬದ ಕುರಿತು.**

- ಶ್ರೀ ಎಫ್.ಹೆಚ್.ಜಕ್ಕಪ್ಪನವರ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಖಾಸಗಿ ಬಸ್‌ಗಳಿಗೆ ಸ್ಪೀಡ್ ಗರ್ವನರ್ ಅಳವಡಿಸಿ ಸಂಭವಿಸಬಹುದಾದ ಅನಾಹುತಗಳನ್ನು ತಪ್ಪಿಸುವ ಕುರಿತು.**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ಕಲಬುರಗಿ ಕೋಟೆಯ ವಿಶ್ವದ ಅತಿದೊಡ್ಡ "ಬಾರಾ ಗಾಜಿ ತೋಪಿ"ನ ರಕ್ಷಣೆ ಹಾಗೂ ಗಿನ್ನಿಸ್ ದಾಖಲೆಗೆ ಸೇರಿಸುವ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಕುರಿತು**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು)

**ಋ) ಚಿಕ್ಕಮಗಳೂರು ಜಿಲ್ಲೆ ಅತ್ಯಂತ ಸೂಕ್ಷ್ಮ ಪರಿಸರ ವಲಯವಾದ ಚಂದ್ರದ್ರೋಣ ಪರ್ವತ ಶ್ರೇಣಿಯ ತಪ್ಪಲಿನಲ್ಲಿ ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ರೆಸಾರ್ಟ್ ನಿರ್ಮಾಣ ಮಾಡುತ್ತಿರುವ ಕುರಿತು.**

- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮ ಪಂಚಾಯಿತಿ, ಬೊಮ್ಮೆನಹಳ್ಳಿ ಗ್ರಾಮದ ಸರ್ವೆ ನಂಬರ್ 76 ಮತ್ತು 77 ಒಟ್ಟು 12 ಎಕರೆ ವಿಸ್ತೀರ್ಣದಲ್ಲಿ 3ನೇ ಹಂತದ ಬಡಾವಣೆ ವ್ಯಾಪ್ತಿಯಲ್ಲಿ ತಡೆಗೋಡೆ ನಿರ್ಮಿಸಿರುವುದನ್ನು ತೆರವುಗೊಳಿಸುವ ಕುರಿತು.**

- ಶ್ರೀ ರಮೇಶ್ ಬಾಬು
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಏ) ಅಲೆಮಾರಿ ಅರೆ ಅಲೆಮಾರಿ ಜನರಿಗೆ ಸೂರು ಒದಗಿಸುವಂತೆ ಆಹೋರಾತ್ರಿ ಧರಣಿ ನಡೆಸುತ್ತಿರುವ ಕುರಿತು.**

- ಡಾ॥ ಚಂದ್ರಶೇಖರ ಬಿ ಪಾಟೀಲ್
- ಶ್ರೀ ಶಿವರಾಜ್ ಎಸ್. ತಂಗಡಗಿ(ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**ಐ) ಹೊಸಪೇಟೆ ಅಣೆಕಟ್ಟೆ ಕ್ರೆಸ್ಟ್‌ಗೇಟ್ ಬದಲಾವಣೆಗೆ ನಿಯೋಜಿಸಿರುವ ಸಿಬ್ಬಂದಿಗಳ ಸಂಬಳ, ಸಾರಿಗೆ, ಇತರೆ ವೆಚ್ಚಗಳಿಗೆ ಆಂಧ್ರಪ್ರದೇಶ ಸರ್ಕಾರ ಬಿಡುಗಡೆ ಮಾಡಿದ್ದ ರೂ.35.62 ಕೋಟಿಯಲ್ಲಿ, ರೂ. 10 ಕೋಟಿಯನ್ನು ಕರ್ನಾಟಕ ಸರಕಾರ ಹಿಡಿದಿಟ್ಟುಕೊಂಡಿರುವ ಕುರಿತು.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**೮. ನಿಯಮ ೭೨ಎ ಮೇರೆಗೆ ಶೂನ್ಯವೇಳೆಯ ಪ್ರಸ್ತಾವಗಳಿಗೆ ಸರ್ಕಾರದ ಲಿಖಿತ ಉತ್ತರಗಳ ಮಂಡನೆ.**

**ಅ) ಶಿವಮೊಗ್ಗ ಜಿಲ್ಲೆಯ ಅರೆಬಿಳಚಿ ಸರ್ಕಾರಿ ಆಸ್ಪತ್ರೆಯ ಕಟ್ಟಡದ ಸಿಮೆಂಟ್ ಪ್ಲಾಸ್ಟರಿಂಗ್ ಹಾಗೂ ಅಳವಡಿಸಿರುವ ಬಾಗಿಲುಗಳು ಕಳಪೆಯಾಗಿರುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಆ) ರಾಜ್ಯದಲ್ಲಿ ದ್ವೇಷ ಭಾಷಣ ಕಾಯಿದೆ ಜಾರಿಯಾಗದಿದ್ದರೂ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ಪೊಲೀಸ್ ನಿರೀಕ್ಷಕರು ಕಾಯಿದೆಯಡಿ ಕ್ರಮಕೈಗೊಂಡಿರುವ ಬಗ್ಗೆ.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ಗೃಹಸಚಿವರ ಪರವಾಗಿ)

**ಇ) ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಲು ಅರ್ಹತಾ ಮಾನದಂಡ, ಪಾರದರ್ಶಕ ಆಯ್ಕೆ ಪ್ರಕ್ರಿಯೆ ಹಾಗೂ ತಜ್ಞರ ಸಮಿತಿಯ ಶಿಫಾರಸ್ಸು ಕಡ್ಡಾಯ ಮಾಡುವುದರ ಜೊತೆಗೆ ಯಾವುದೇ ಪ್ರಭಾವಕ್ಕೆ ಒಳಗಾಗಿ ಪದವಿ ನೀಡಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಕಾಯಿದೆಯನ್ನು ರೂಪಿಸಬೇಕೆನ್ನುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ದುಡಿಯುತ್ತಿರುವ ಅಧಿಕಾರಿ ನೌಕರರಿಗೆ ವೇತನ ಪರಿಷ್ಕರಣೆಯಾಗದಿರುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

**ಉ) ಬಾಗಲಕೋಟೆಯ ಪ್ರವಾಸಿ ತಾಣಗಳ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ)

ಊ) **ಬೆಳಗಾವಿ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ಅಮಟೂರು ಬಾಳಪ್ಪ ಅವರ ಪ್ರತಿಮೆ ಸ್ಥಾಪಿಸುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಋ) ಗ್ರಾಮೀಣ ಭಾಗದಲ್ಲಿ ಆಸ್ತಿ ಮತ್ತು ದಾಖಲೆಗಳನ್ನು ಇ–ಸ್ವತ್ತು ೨.೦ ತಂತ್ರಾಂಶದಲ್ಲಿ ಅಳವಡಿಸುವಲ್ಲಿ ಆಗುತ್ತಿರುವ ಲೋಪದೋಷಗಳನ್ನು ಸರಿಪಡಿಸುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಎ) ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚು ನಿಯಂತ್ರಣಕ್ಕೆ ಆಧುನಿಕ ಉಪಕ್ರಮಗಳನ್ನು ಹಾಗೂ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)

೨. ಗಮನ ಸೆಳೆಯುವ ಸೂಚನೆಗಳು.

**ಅ) ಬೆಂಗಳೂರು ಕೊಳಚೆ ನೀರನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮೂಲಕ ಸಂಸ್ಕರಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ಕೆ.ಸಿ.ವ್ಯಾಲಿ ಯೋಜನೆ ಬಗ್ಗೆ.**

– ಶ್ರೀ ಕೆ.ಶಿವಕುಮಾರ್
– ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**ಆ) ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಿ, ಉದ್ಯೋಗವನ್ನು ಒದಗಿಸುವ ನಿಟ್ಟಿನಲ್ಲಿ ಪ್ರತ್ಯೇಕವಾದ ಪ್ರವಾಸೋದ್ಯಮ ನೀತಿಯನ್ನು ಸ್ಥಾಪಿಸುವುದು ಮತ್ತು ಸಿ.ಆರ್.ಜೆಡ್. ತೊಂದರೆಗಳನ್ನು ಸರಳೀಕರಿಸುವ ಕುರಿತು.**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

೧೦. ನಿಯಮ ೩೩೦ರ ಮೇರೆಗೆ ಮುಂದುವರೆದ ಚರ್ಚೆ.

**ಅ) ಅಬಕಾರಿ ಇಲಾಖೆಯಲ್ಲಿ ಸಿಎಲ್-2, ಸಿಎಲ್-7 ಸಿಎಲ್-9ಗಳಿಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಮುಂದುವರಿದ ಚರ್ಚೆ.**

– ಶ್ರೀ ಕೆ.ಎಸ್.ನವೀನ್
– ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
– ಡಾ॥ ಧನಂಜಯ ಸರ್ಜಿ
– ಶ್ರೀ ಆರ್.ಬಿ.ತಿಮ್ಮಾಪುರ (ಅಬಕಾರಿ ಸಚಿವರು)
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
– ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು
– ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)

**ಆ) ರಾಜ್ಯದಲ್ಲಿ ಬಹುತೇಕ ಕೈಗಾರಿಕೆಗಳು ಹಾಗೂ ಕಂಪನಿಗಳು ತಮ್ಮ ಲಾಭಾಂಶದಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ(ಸಿ.ಎಸ್.ಆರ್) ನಿಧಿಯನ್ನು ರಾಜ್ಯದ ಮೂಲಭೂತ ಸೌಕರ್ಯಗಳಿಗೆ ನೀಡದೆ ವಂಚಿಸುತ್ತಿರುವ ಬಗ್ಗೆ.**

– ಶ್ರೀ ರಮೇಶ್ ಬಾಬು
– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)

~~~~~~~~~~~~~~~~
~~~~~~~~~~~~~~~~

(069) 30.01.2026 11.20 ಎಸ್‌ವಿ-ಎಕೆ

# ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ, 30ನೇ ಜನವರಿ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 25 ನಿಮಿಷಗಳಿಗೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು

ಪೀಠದಲ್ಲಿ ಉಪಸ್ಥಿತರಾದರು

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಒಂದು submission. ಪ್ರತಿ ಶುಕ್ರವಾರ ಖಾಸಗಿ ಮಸೂದೆಗೆ ಅವಕಾಶವಿದೆ...

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:–** ಮಾನ್ಯ ರಮೇಶ್ ಬಾಬು ಅವರೆ, ಒಂದು ನಿಮಿಷ ಇರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ನಿಮಗೆ ನಂತರ ಅವಕಾಶ ಕೊಡುತ್ತೇನೆ.

1. **ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು ಸದನದಲ್ಲಿ ಬಳಸಿದ ಅಸಂಸದೀಯ ಪದಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ ನಂತರವೂ ಅವರನ್ನು ಸದನದಿಂದ ಅಮಾನತುಗೊಳಿಸಬೇಕೆನ್ನುವ ಬಗ್ಗೆ.**

***

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಿನ್ನೆ ತಾವು ರೂಲಿಂಗ್ ಕೊಟ್ಟು ಹೋದಿರಿ. ನಿಮ್ಮ ರೂಲಿಂಗ್ ಅನ್ನು ನಾವು ಗೌರವಿಸಿದ್ದೇವೆ. ಅದು ಬೇರೆಯ ವಿಷಯ. ಆದರೆ ಮಾನ್ಯ ಹರಿಪ್ರಸಾದ್ ಅವರನ್ನು ಅಮಾನತುಗೊಳಿಸಬೇಕೆಂದು ನಮ್ಮ ಸದಸ್ಯರೆಲ್ಲರೂ ಒತ್ತಾಯ ಮಾಡುತ್ತಿದ್ದರು. ಈಗ ನಮಗೆ ಆಗಬೇಕಾಗಿರುವುದು, ಇಷ್ಟೊಂದು ಅಪಮಾನಕರವಾದ ಮಾತುಗಳನ್ನು, ನಿಂದನೆಗಳನ್ನು ನಾವು ಕೇಳಿಸಿಕೊಂಡರೂ ನಿಂದನೆಯನ್ನು ನಾವು ಸಹಿಸಿಕೊಂಡಿದ್ದೇವೆ. ಇಷ್ಟೊಂದು ಕನಿಷ್ಠವಾಗಿ ನಮ್ಮನ್ನು ಟೀಕೆ ಮಾಡಿದ ಮೇಲೆ ಕ್ಷಮೆ ಯಾಚನೆ ಮಾಡಬೇಕೆಂಬುದು ಸದನದ ಎಲ್ಲಾ ಸದಸ್ಯರ ಒಕ್ಕೊರಲಿನ ಮಾತಾಗಿತ್ತು. ಏಕೆಂದರೆ ಈ ಸದನಕ್ಕೆ ಗೌರವ ಬರಬೇಕು. ಇಂಥವುಗಳನ್ನು ನಾವು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

ಸಮಾಜ ಬಹಳ ದೊಡ್ಡದು. ಅದು ಒಂದು ಸಮುದ್ರವಿದ್ದಂತೆ. ಕೆಟ್ಟದ್ದು, ಒಳ್ಳೆಯದು ಎಲ್ಲವೂ ಕೂಡ ಸಮಾಜದಲ್ಲಿರುತ್ತದೆ. ಸುಳ್ಳು ಹೇಳಬಹುದು, ವಂಚನೆ ಮಾಡಬಹುದು, ಮೋಸ ಮಾಡಬಹುದು, ಲಫಂಗತನ ಮಾಡಬಹುದು. ಅಲ್ಲಿ ಎಲ್ಲವನ್ನೂ ಮಾಡಬಹುದು. ಆದರೆ ಸಮಾಜ ಅದನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಳ್ಳುತ್ತದೆ. ಆದರೆ ತಪ್ಪು ಮಾಡಿದ್ದನ್ನು ಸರಿಪಡಿಸಲಿಕ್ಕೆ ಅವರನ್ನು ನಾವು ತಿದ್ದಿ ಸರಿದಾರಿಯಲ್ಲಿ ನಡೆಸಬೇಕು ಎನ್ನುವ ವ್ಯವಸ್ಥೆ ಇದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂಥವುಗಳನ್ನು ಸರಿಪಡಿಸಬೇಕೆಂದೇ ಈ ಸದನಗಳಿಗೆ ಬರುತ್ತೇವೆ. ಆದರೆ ಅಲ್ಲಿ ಮಾತನಾಡುವ ಭಾಷೆಗಳನ್ನು ತಹಬದಿಗೆ ತರಬೇಕೆಂದು ನಾವು ಈ ಸ್ಥಾನಗಳನ್ನು ತುಂಬಿಕೊಂಡು ಅದನ್ನೇ ಮಾಡುವುದಿದ್ದರೆ ಅದನ್ನು ಯಾರೂ ವ್ಯವಸ್ಥೆ ಎನ್ನುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ನಮಗೆ ಬಹಳ ನೋವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಯಾವುದೇ ಪದ ಬಳಕೆ ಮಾಡಿದರೂ ನಮಗೇನೂ ಆಗುವುದಿಲ್ಲ. ಏಕೆಂದರೆ ನಾವು ಆ ಕ್ಯಾಟಗರಿಯವರಲ್ಲ. ಅವರು ಅವರ ಅನುಭವದ ಮಾತುಗಳನ್ನು ಹೇಳಿದರೆ, ಅದನ್ನು ನಮ್ಮ ತಲೆಗೆ ಕಟ್ಟಿದರೆ ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರನ್ನು ಅಮಾನತುಗೊಳಿಸಬೇಕು ಎನ್ನುವುದು ನಮ್ಮ ಡಿಮ್ಯಾಂಡ್. ಒಂದು ವಿಷಯದಲ್ಲಿ ಅಲ್ಲ, ಅನೇಕ ವಿಷಯಗಳಲ್ಲಿ ಇದೆ. ನಿನ್ನೆ ನಡೆದದ್ದು ಕೇವಲ ಅವರ ಭಾಷಾ ಪ್ರಯೋಗಕ್ಕಾಗಿ ಮಾತ್ರ ಸೀಮಿತವಾಗಿತ್ತು. ಆದರೆ ಸದನದ ಈ ನಡವಳಿ ಪುಸ್ತಕದಲ್ಲಿ ಏನಿದೆ, ಅದನ್ನು ಮಾನ್ಯ ಸಿ.ಟಿ.ರವಿಯವರು ತಮ್ಮ ಮುಂದೆ ನಾಲ್ಕೈದು ಬಾರಿ ಓದಿ ವಿವರಣೆಯನ್ನು ಕೊಟ್ಟಿದ್ದಾರೆ. ಅದನ್ನು ತಾವು accept ಮಾಡಿದ್ದೀರಿ. ಅದು ನಿಜ. ಆದರೆ ಅದರ ಪರವಾಗಿ ಆಗಲಿಲ್ಲ. ಈ ಕೆಟ್ಟ ಪದಗಳನ್ನೊಳಗೊಂಡ ಭಾಷೆ ಬಂದಾಗ ನಮಗೂ ಆಕ್ರೋಶ ಬರುತ್ತದೆ. ನಾವೂ ಉಪ್ಪು, ಖಾರ ತಿನ್ನುವವರಲ್ಲವೇ? ಆಕ್ರೋಶವನ್ನು ನಾವು ಬೇರೆ ರೀತಿಯಲ್ಲಿ ಕೆಟ್ಟ ಭಾಷೆಗಳಲ್ಲಿ, ಕೆಟ್ಟ ನಡವಳಿಕೆಗಳಲ್ಲಿ ಸದನದ ಮುಂದೆ ಪ್ರದರ್ಶನ ಮಾಡಿಲ್ಲ. ಅದನ್ನು ಮಾಡುವುದು ಸರಿಯಲ್ಲ. ಹಾಗೆ ಮಾಡಿದಲ್ಲಿ ನಾವು ಇಲ್ಲಿಗೆ ಬರುವುದರ ಉದ್ದೇಶ ಕೆಟ್ಟು ಹೋಗುತ್ತದೆ. ಆದ್ದರಿಂದ ನಾವು ಮಾಡಿಲ್ಲ. ಆದರೆ ಅದರ ಬಗ್ಗೆ ತೀವ್ರ ಕ್ರಮ ಜರುಗಿಸಬೇಕೆನ್ನುದು ನಮ್ಮ ಮನವಿ. ನಿನ್ನೆ ನಾವು ಇಷ್ಟು ಜನರು ತಮಗೆ ಮನವಿಯನ್ನು ಕೊಟ್ಟಿದ್ದೇವೆ. ಅದಾದ ಮೇಲೆ ತಾವು ರೂಲಿಂಗ್ ಕೊಟ್ಟಿರಿ. ನಾವು ರೂಲಿಂಗ್ ಅನ್ನು ವಿರೋಧ ಮಾಡಲಿಲ್ಲ. ಆದರೆ ನಮ್ಮ ಬೇಡಿಕೆ ಈಡೇರಲಿಲ್ಲ. ಆ ಕಾರಣದಿಂದ ನಮಗೂ ಕೂಡ ನೋವಿದೆ. ಇಲ್ಲಿ ಮಾನ್ಯ ಹೆಚ್.ವಿಶ್ವನಾಥ್ ಅವರು, ಮಾನ್ಯ ಭೋಜೇಗೌಡರು, ಮಾನ್ಯ ರವಿಕುಮಾರ್ ಅವರು ಎಲ್ಲರೂ ಹಿರಿಯ ಸದಸ್ಯರಿದ್ದಾರೆ. ವಿಶೇಷವಾಗಿ ಮಾನ್ಯ ಭಾರತಿ ಶೆಟ್ಟಿಯವರು ನನ್ನನ್ನು ಹೇಗೆ ನಿಂದಿಸಿದರೆಂದರೆ " ಏನ್ರೀ ನೀವೆಲ್ಲರೂ, ನಾವೆಲ್ಲಾ ಒಂದು ವ್ಯವಸ್ಥೆಯಲ್ಲಿದ್ದೇವೆ. ಹೆಣ್ಣುಮಕ್ಕಳ ಬಗ್ಗೆ ಇಂಥದ್ದನ್ನು ಮಾತನಾಡಿದರೂ ಸಹಿಸಿಕೊಳ್ಳುತ್ತೀರಿ ಎಂದರೆ ನಾವು ಸದನಕ್ಕೆ ಏಕೆ ಬರಬೇಕು? ನಾವು ಇಲ್ಲಿ ಏಕೆ ಇರಬೇಕು?" ಎಂದು ನನ್ನನ್ನು ಕೇಳಿದರು. ಈ ಸದನದ ಒಳಗೆ ನಡೆಯತಕ್ಕ ನಡವಳಿಕೆಗಳು ಇದಲ್ಲ. ಮಾನ್ಯ ಸಭಾಪತಿಯವರೆ, ಆ ಕಾರಣದಿಂದ ತಾವು ನಮ್ಮ ಮನವಿಯನ್ನು ಸ್ವೀಕಾರ ಮಾಡಬೇಕು.

**(ಮುಂದು)**

(70) 30.01.2026 11.30 **ಕೆಜಿ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು.,):-**

ಇನ್ನಿದು ಎಲ್ಲೂ ಈ ರೀತಿ ಸದನದ ಒಳಗಡೆ ನಡೆಯಬಾರದು. ಅದಕ್ಕೆ ತಾವು ಅವರನ್ನು suspend ಮಾಡುವುದೇ ಸರಿಯಾದ ಕ್ರಮವೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ಬೇಡ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾವು ಹೇಳಬೇಕಲ್ಲವೇ;

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ಬೇಡ. ತಾವು ಎಷ್ಟು ಮಾತನಾಡುತ್ತೀರಿ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅವರು ಹೇಳಬೇಕಲ್ಲವೇ;

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ನೀವು ಏಕೆ ಹೇಳುತ್ತೀರಿ? ನಾನು ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಿನ್ನೆ ದಿವಸ ತಾವು ruling ಕೊಟ್ಟಿದ್ದೀರಿ.,

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ನಾನು ಯಾರಿಗೂ ಏನು ಹೇಳುವುದಿಲ್ಲ. ತಮಗೆ ಬೇಕಾದ್ದು ಮಾತನಾಡಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಆ ರೀತಿ ಅಲ್ಲ. ನಿನ್ನೆ ದಿವಸ ತಾವು ruling ಕೊಟ್ಟಿದ್ದೀರಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ಹೇಳುತ್ತಾರೆ? ದಯಮಾಡಿ ಎಲ್ಲರೂ ಕೇಳಿ. ಸದನದಲ್ಲಿ ಘಟನೆಗಳು ಹೆಚ್ಚು ಕಡಿಮೆ ಆಗುತ್ತವೆ. ಆಗಿವೆ. ಅದರ ಬಗ್ಗೆ ನಿನ್ನೆ ದಿವಸ ಮಾತನಾಡಿ ಚರ್ಚೆ ಮಾಡಿದ ಮೇಲೆ ಅವರು ವಿಷಾದ ವ್ಯಕ್ತ ಪಡಿಸಿದ್ದಾರೆ. ಈ ವಿಷಯವನ್ನು ನಿನ್ನೆ ದಿವಸ ಅಲ್ಲಿಗೆ ಮುಕ್ತಾಯ ಮಾಡಿದ್ದೇನೆ. ಒಂದು ಬಾರಿ ruling ಕೊಟ್ಟಿದ್ದೇನೆ. ದಯಮಾಡಿ ruling ಕೊಟ್ಟ ಮೇಲೆ ಯಾರು ಒತ್ತಾಯ ಮಾಡಬೇಡಿ. ನಮ್ಮ ಸದನದ ಮುಂದೆ ಬಹಳಷ್ಟು ಕೆಲಸಗಳು ಇವೆ. ಮಾನ್ಯ 'ರಾಜ್ಯಪಾಲರ ವಂದನಾ ನಿರ್ಣಯ'ದ ಮೇಲೆ ಮಾತನಾಡಬೇಕು. ಇದರ ಮೇಲೆ ಮಾತನಾಡುವವರು ಬಹಳಷ್ಟು ಸದಸ್ಯರು ಇದ್ದಾರೆ. ದಯಮಾಡಿ ಇದಕ್ಕೆ ಇಲ್ಲಿಗೆ ಕೊಟ್ಟಿರುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿ ನಡೆಯಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ,.,

**(ಗೊಂದಲ)**

**ಸಭಾಪತಿಯವರು:–** ಶ್ರೀ ರಮೇಶ್ ಬಾಬುರವರೇ, ಇಲ್ಲ. ಆಗುವುದಿಲ್ಲ. ಮಾನ್ಯ ಸಭಾನಾಯಕರೇ, ಸಭೆಯ ಮುಂದೆ ಇಡಲಾದ ಕಾಗದ ಪತ್ರಗಳು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅಡಗೂರ್ ಹೆಚ್.ವಿಶ್ವನಾಥ್‌ರವರು ಒಂದು ನಿಮಿಷ ಮಾತನಾಡುತ್ತಾರೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಇಲ್ಲ. ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಸಭೆಯ ಮುಂದೆ ಇಡಲಾದ ಕಾಗದ ಪತ್ರಗಳು. ಶ್ರೀ ರಮೇಶ್‌ಬಾಬುರವರೇ ಏನ್ರೀ ಮಾತನಾಡುತ್ತೀರಿ?

**ಶ್ರೀ ರಮೇಶ್ ಬಾಬು (ನಾಮನರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಖಾಸಗಿ ಮಸೂದೆಗೆ ಸಂಬಂಧಪಟ್ಟಂತೆ ಒಂದು ನಿಮಿಷ ಮಾತನಾಡುತ್ತೇನೆ. ಖಾಸಗಿ ಮಸೂದೆಗಳನ್ನು ಮಂಡನೆ ಮಾಡುವುದು ಸದನ ಒಂದು ಭಾಗ. ನಾನು ಮೂರು ಮಸೂದೆಗಳನ್ನು ಮಂಡನೆ ಮಾಡಿದ್ದೇನೆ.

**ಸಭಾಪತಿಯವರು:–** ಶ್ರೀ ರಮೇಶ್‌ಬಾಬುರವರೇ. ಆಯಿತು. ತೆಗೆದುಕೊಳ್ಳುತ್ತೇನೆ.

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೇ, ಪ್ರತಿ ಶುಕ್ರವಾರ ಇರುವಂತಹದ್ದೇ ಖಾಸಗಿ ಮಸೂದೆಗೆ ಅವಕಾಶ ಇದೆ. ಒಂದು ಲೋಕಾಯುಕ್ತದ ಒಂದು ಕಾಯಿದೆ ತಿದ್ದುಪಡಿ ಆಗಬೇಕಾಗಿದೆ. ದಯಮಾಡಿ.,

**ಸಭಾಪತಿಯವರು:–** ಶ್ರೀ ರಮೇಶ್‌ಬಾಬುರವರೇ. ಆಯಿತು. ಚರ್ಚೆ ಮಾಡಿ ತೆಗೆದುಕೊಳ್ಳುತ್ತೇನೆ.

**(ಗೊಂದಲ)**

## 2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**I. ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):–**ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ಕೆಳಕಂಡ ವರದಿಗಳನ್ನು ಮಂಡಿಸುವುದು

1. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ವಾಣಿಜ್ಯ) ವರದಿ (2025ರ ವರದಿ ಸಂಖ್ಯೆ–10)

2. ಸ್ಮಾರ್ಟ್ ಸಿಟಿ ಮಿಷನ್ ಅನುಷ್ಠಾನದ ವರದಿ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್) 2025ರ ವರದಿ ಸಂಖ್ಯೆ– 11)

**ಸಭಾಪತಿಯವರು:–** ಮಂಡಿಸಲಾಯಿತು.

**೩. ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು ಸದನದಲ್ಲಿ ಬಳಸಿದ ಅಸಂಸದೀಯ ಪದಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದರೂ ಅವರನ್ನು ಸದನದಿಂದ ಅಮಾನತುಗೊಳಸಬೇಕೆನ್ನುವ ಬಗ್ಗೆ ಮುಂದುವರೆದ ಚರ್ಚೆ.**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, just a minute.

**ಸಭಾಪತಿಯವರು:-** ದಯಮಾಡಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಶ್ರೀ ಎನ್.ರವಿಕುಮಾರ್‌ರವರೇ, ತಾವು ದಯವಿಟ್ಟು ಕುಳತುಕೊಳ್ಳಿ. ನಾನು ಹೇಳದಾಗ ಕುಳತುಕೊಳ್ಳಿ. ಒಂದೊಂದು ಬಾರಿ ಆರ್ಚಾತುಯದಿಂದ ಘಟನೆಗಳು ನಡೆಯುತ್ತವೆ. Emotion ನಿಂದ ಮಾತನಾಡುತ್ತಾರೆ. ಎಲ್ಲಾ ಮಾತನಾಡುತ್ತಾರೆ. ಸಾಕಾಗಿದೆ. ಸಾಕಷ್ಟು ಚರ್ಚೆ ಮಾಡಿದ್ದೀರಿ. ನಮ್ಮ ಸದನದ ಬಗ್ಗೆ ಮಾಧ್ಯಮಗಳಲ್ಲಿ ಬಂದಿರುವಂತಹ ವಿಷಯವನ್ನು ಎಲ್ಲರೂ ತಿಳದುಕೊಳ್ಳಿ. ದಯಮಾಡಿ, ಇದನ್ನು ಇಲ್ಲಿಗೆ stop ಮಾಡಿ. ಮುಂದೆ ಯಾವುದಾದರೂ ಪ್ರಸಂಗ ಬಂದಾಗ ಹೊರಗಡೆ ಚರ್ಚೆ ಮಾಡೋಣ. ಈಗ ಇದನ್ನು ಚರ್ಚೆ ಮಾಡುವುದು ಬೇಡ. ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸೋಮವಾರದಂದು ಬಂದು ಉತ್ತರ ಕೊಡುತ್ತಾರೆ. ಅದಕ್ಕೆ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ ತಾವು ಪ್ರಾರಂಭ ಮಾಡಿ. ಒಬ್ಬೊಬರಿಗೆ 10 ನಿಮಿಷಗಳ ಕಾಲವಕಾಶ ನೀಡುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ವಿರೋಧ ಇಲ್ಲ. ತಾವು ಮಾಡಿ. ಆದರೆ, ಒಂದು.,

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಇವತ್ತು ಸದನ ನಡೆಯಬೇಕೆಂದು ತೀರ್ಮಾನ ಮಾಡಿ ಬಂದಿದ್ದೇವೆ. ಸಭೆಯ ಗೌರವವನ್ನು ಉಳಸಬೇಕು. ನಮ್ಮ ಬಗ್ಗೆ ಹೊರಗಡೆ ಜನರು ಮಾತನಾಡಬಾರದು. ಇದಕ್ಕೆ ಪರಂಪರೆ ಇದೆ. ಮಾನ್ಯ ಸದಸ್ಯರಾದ ಅಡಗೂರ್ ಹೆಚ್.ವಿಶ್ವನಾಥ್‌ರವರು ಒಂದು ನಿಮಿಷ ಮಾತನಾಡುತ್ತಾರೆ. ನಮ್ಮ ಬಗ್ಗೆ ಪದ ಬಳಕೆಯಾಗಿದೆ ಅಲ್ಲವೇ, ಅದು ಏನಾದರೂ ಆ ರೀತಿ ಆಗಿದ್ದರೆ, ಇದಕ್ಕಿಂತ ಹೆಚ್ಚಿನ ಕಾಲ ನಾನು ಕೂಡ ಅಧಿಕಾರವನ್ನು ಅನುಭವಿಸಬಹುದಾಗಿತ್ತು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮ್ಮ ಕೊಡ (ಜೊತೆಯಲ್ಲಿ) ಮಾತನಾಡಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಅನುಭವಿಸಿದ್ದಾರೆ. ಅದೇ ಕಾರಣಕ್ಕೆ ಹೇಳಿದವರೆಲ್ಲರೂ ಅನುಭವಿಸಿದ್ದಾರೆ. ನಾನು ಮತ್ತೆ ಅದನ್ನು ಎತ್ತುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮ್ಮ ಜೊತೆಗೆ ಒಂದು ಬಾರಿ ಎಲ್ಲಾ ಮಾತನಾಡಿ amicable settlement ಮಾಡಿದ್ದೇವೆ. ಆಯಿತು. ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದ್ದು. ಈಗ ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರೇ ತಾವು ಮಾತನಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

**ಸಭಾಪತಿಯವರು:–** ಇಲ್ಲ. ನಿಮಗೆ ಅವಕಾಶ ಕೊಡುವುದಿಲ್ಲ. ಕುಳಿತುಕೊಳ್ಳಿ. ಅಡಗೂರ್ ಹೆಚ್.ವಿಶ್ವನಾಥ್‌ರವರೇ ತಾವು ಮಾತನಾಡಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಇದು ಘಟನೆ ಆಗಿಹೋಗಿದೆ. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಬಹಳ ಹಿರಿಯ ಸದಸ್ಯರು ಹಾಗೂ ಈ ರಾಜ್ಯದಲ್ಲಿ ಬಹಳ ಹಿರಿಯ ರಾಜಕಾರಣಿಯಾಗಿದ್ದಾರೆ. ನಾವು ಕೆಲವು ಸಂದರ್ಭದಲ್ಲಿ 'slip of the tongue' ಎಂದು ಹೇಳುತ್ತೇವೆ. ಅದು ಆಗಿಹೋಗಿದೆ. ಆದರೆ, ಅದನ್ನೇ ಹೆಚ್ಚು ಎಳೆದಾಡುವುದು ಸಹ ನಮ್ಮ ಸಂವಿಧಾನದ ವ್ಯವಸ್ಥೆಗೂ ಒಳ್ಳೆಯದಲ್ಲ.

**ಸಭಾಪತಿಯವರು:–** ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರೇ, ಆ ವಿಷಯವನ್ನು ಮುಗಿಸಿದ್ದೇವೆ. ಮತ್ತೆ ಅದನ್ನೇ ಮಾತನಾಡುವುದು ಬೇಡ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನಾನು ಒಂದು ಪ್ರಸಂಗವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 1981ನೇ ಸಾಲಿನಲ್ಲಿ ಶ್ರೀ

ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದರು. ಆಗ ಶ್ರೀ ದೇವರಾಜು ಅರಸುರವರು ವಿರೋಧ ಪಕ್ಷದ ನಾಯಕರಾಗಿದ್ದರು. ಶ್ರೀ ಸಿ.ಎಂ.ಇಬ್ರಾಹಿಂರವರು Food and Civil Supplies ಮಂತ್ರಿ ಆಗಿದ್ದರು. ಯಾವುದೋ ಕಾರಣಕ್ಕೆ ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ ಶ್ರೀ ಸಿ.ಎಂ.ಇಬ್ರಾಹಿಂರವರು ಶ್ರೀ ದೇವರಾಜು ಅರಸುರವರಿಗೆ ಬಹಳ ಕೆಟ್ಟದಾಗಿ ಮಾತನಾಡಿದರು. ಆದರೆ, ಆಗ ಇಡೀ ಸದನ ಅದನ್ನು ಸಹಿಸಲಿಲ್ಲ.

**ಸಭಾಪತಿಯವರು:–** ಶ್ರೀ ಅಡಗೂರ್ ಹೆಚ್.ವಿಶ್ವನಾಥ್‌ರವರೇ, ನಾವು ಆಗ ಇದ್ದೇವು.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಆಗ ಇಡೀ ಸದನ, opposition party, ruling party ಯವರು ಎಲ್ಲರೂ ಎದ್ದುನಿಂತೆವು. ಶ್ರೀ ಸಿ.ಎಂ.ಇಬ್ರಾಹಿಂರವರು ಸದನದಿಂದ ಹೊರಗಡೆಗೆ ಓಡಿಹೋದರು. ಅದು ಆ ತರಹದ್ದು. ಇದು ಆ ತರಹದ್ದು ಆಗಿದ್ದರೆ, ಇಡೀ ಸದನ ಒಟ್ಟಾರೆಯಾಗಿ ತೆಗೆದುಕೊಳ್ಳುತ್ತಿತೆಂದು, ಹಾಗಾಗಿ, ನಾನು ಈ ಸಂದರ್ಭದಲ್ಲಿ ನಮ್ಮ ಗೆಳೆಯರನ್ನು ಹಾಗೂ ಎಲ್ಲರನ್ನು ವಿನಂತಿ ಮಾಡುತ್ತೇನೆ. ಹೌದು. ಇದು ಆಗಿಹೋಗಿದೆ. Forget this. Withdraw this. ನಾನು ಇಷ್ಟನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ನಾವು ಅದನ್ನು ನಿನ್ನೆ ದಿವಸ ಮಾಡಿದ್ದೇವೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾವು ಅದನ್ನು ತಿಳಿದುಕೊಳ್ಳುತ್ತೇವೆ. ಸದನ ನಮ್ಮೆಲ್ಲರಗಿಂತ ದೊಡ್ಡದು..,

**(ಗೊಂದಲ)**

**ಸಭಾಪತಿಯವರು:–** ನಾನ್ನಿನ್ನೂ ಯಾರಿಗೂ ಏನು ಹೇಳುವುದಿಲ್ಲ. ಯಾರು ಬೇಕಾದರೂ ಎದ್ದು ನಿಂತು ಮಾತನಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆರ್.ಎಸ್.ಎಸ್. ಬಗ್ಗೆ ಹೀಯಾಳಿಸಿರುವುದು, ಮಹಿಳೆ ಬಗ್ಗೆ ಹೀಯಾಳಿಸಿರುವುದು.,

**ಸಭಾಪತಿಯವರು:–** ಶ್ರೀ ಎನ್.ರವಿಕುಮಾರ್‌ರವರೇ, ನಾನು ಅದರ ಬಗ್ಗೆ ಮಾತನಾಡಬೇಡಿ ಎಂದು ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇನ್ನೊಂದು ಬಾರಿ ಏನಾದರೂ repeat ಆದರೆ,.

**(ಗೊಂದಲ)**

**ಸಭಾಪತಿಯವರು:–** ಇದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರು ಶ್ರೀ ಎನ್.ರವಿಕುಮಾರ್‌ರವರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದೆಂದು ಸೂಚಿಸಿದ್ದರ ಮೇರೆಗೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಎಲ್ಲಾ ಮಾತನಾಡಿದ್ದೇವೆ. ಆ ಪದಗಳನ್ನು ಕಡತದಿಂದ ತೆಗೆಯಲಾಗಿದೆ. ಅದಕ್ಕೆ ವಿಷಾದ ವ್ಯಕ್ತಪಡಿಸಿದ್ದು ಆಗಿದೆ. ಎಲ್ಲರೂ ಒಂದಾಗಿ ನಡೆಸಿಕೊಂಡು ಹೋಗೋಣವೆಂದು ಮಾತುಕತೆಯಾಗಿದೆ. ಇವತ್ತು ಅವರು ಅದನ್ನೇ ಮಾತನಾಡುತ್ತಾರೆ. ಅವರು ಹೇಳಿದ್ದನ್ನು ಅರ್ಥ ಮಾಡಿಕೊಳ್ಳುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅನೇಕ ಸಭೆಗಳಲ್ಲಿ ಬಹಳ ಮುತುವರ್ಜಿವಹಿಸಿ ಕೆಲಸವನ್ನು ಮಾಡಿದ್ದೀರಿ, ವಿರೋಧ ಪಕ್ಷದವರನ್ನು ಹಾಗೂ ಆಡಳಿತ ಪಕ್ಷದವರನ್ನು ಕುಳ್ಳಿಸಿ ಹತ್ತಾರು ಸಭೆಗಳನ್ನು ಮಾಡಿದ್ದೀರಿ, ಸುದೀರ್ಘವಾದ ಚರ್ಚೆಯಾದ ನಂತರ ಅವರು ಒಂದು ruling ಅನ್ನು ಕೊಟ್ಟಿದ್ದಾರೆ. ಈಗ ನಾವು ಸದನ ನಡೆಯುವುದಕ್ಕೆ ಬಿಡೋಣ. ಆದರೆ, ಈ ರೀತಿ ಮುಂದೆ ಪುನರಾವರ್ತನೆಯಾಗದ ರೀತಿಯಲ್ಲಿ ಸರಿಯಾದ ಬಂದೋಬಸ್ತ್‌ನ್ನು ಪೀಠದಿಂದ ತಾವು ಮಾಡಬೇಕಾಗುತ್ತದೆ. ಇದು ನಮ್ಮ ಸದನದ ಗೌರವದ ಪ್ರಶ್ನೆ. ಇದು ಮೇಲ್ಮನೆ. ಈ ಸದನಕ್ಕೆ ಅದರದ್ದೇ ಅದಂತಹ ಹಿರಿಮೆ–ಗರಿಮೆ ಇದೆ. ಆ ಹಿರಿಮೆ–ಗರಿಮೆಗಳು ಉಳಿಯಬೇಕೆಂದರೆ, ಇದು ಯಾವುದೇ ಕಾರಣಕ್ಕೂ ಮುಂದೆ ಪುನರಾವರ್ತನೆಯಾಗಬಾರದು ಎನ್ನುವ ವಿಚಾರದಲ್ಲಿ ಎರಡು ಮಾತಿಲ್ಲ. ಎಲ್ಲಾ

ಸದಸ್ಯರ ಒಕ್ಕೊರಲಿನ ಅಭಿಪ್ರಾಯ ಇದೆ. Put an end to this. ಅದನ್ನು ಮಾತನಾಡಿ, ಮಾನ್ಯ ರಾಜ್ಯ ಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮೇಲೆ ಮಾತನಾಡುವುದನ್ನು ಮುಂದುವರೆಸೋಣವೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ.

**ಸಭಾಪತಿಯವರು:–** ನಾನು ನಿನ್ನೆ ದಿವಸ ಚರ್ಚೆ ಮಾಡಿದ್ದೇನೆ.,

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಾರಂತೆ, ತಾವು ಅವರಿಗೆ ಅವಕಾಶ ಕೊಡಿ.

**ಸಭಾಪತಿಯವರು:–** ಈಗ ಯಾರು ಮಾತನಾಡುವುದು ಬೇಡ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯವಿಟ್ಟು ಒಂದು ನಿಮಿಷ.

**ಸಭಾಪತಿಯವರು:–** ಶ್ರೀ ಪುಟ್ಟಣ್ಣರವರೇ, ಏಕೆ? ಅದು ಅಲ್ಲಿಗೆ ಮುಗಿದಿದೆ. ಅದನ್ನು ಮತ್ತೆ ಏಕೆ ತೆಗೆಯುತ್ತೀರಿ? ನೀವು ಏಕೆ ಮಾತನಾಡುತ್ತೀರಿ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ. ಮಾತನಾಡುತ್ತೇನೆ.

**ಸಭಾಪತಿಯವರು:–** ಶ್ರೀ ಪುಟ್ಟಣ್ಣರವರೇ ದಯವಿಟ್ಟು ಬೇಡ. ಕುಳಿತುಕೊಳ್ಳಿ. ನಾನು ಹೇಳುತ್ತೇನೆ ಕೇಳಿ. ಶ್ರೀ ಎಂ.ನಾಗರಾಜುರವರೇ, ತಮಗೂ ಅವಕಾಶ ಕೊಡುವುದಿಲ್ಲ. ಕುಳಿತುಕೊಳ್ಳಿ. ನಾನು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ಮಾದ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಮತ್ತು ಟಿ.ವಿಗಳಲ್ಲಿ ನಮ್ಮ ಸದನದ ಘನತೆ ಗೌರವ ಏನಾಗುತ್ತದೆ ಎಂದು ನೋಡಿ. ನನ್ನಿಂದ ಹಿಡಿದು ಎಲ್ಲರ ಜವಬ್ದಾರಿ ಇದೆ. ದಯಮಾಡಿ ಆಗಿದ್ದು ಆಗಿ ಹೋಗಿದೆ. ನಿನ್ನೆ ದಿವಸ ಎಲ್ಲವನ್ನು ಸರಿಪಡಿಸಿದೆ. ಅದರಿಂದ ಒಬ್ಬರ ಮನಸ್ಸಿಗೆ ಸಮಾಧಾನ ಆಗಿರುವುದಿಲ್ಲ. ಇನ್ನೊಬ್ಬರ ಮನಸ್ಸಿಗೆ ಹೆಚ್ಚು ಸಮಾಧಾನ ಆಗಿರಬಹುದು. ಈಗ ಎಲ್ಲವನ್ನು ಮರೆಯಿರಿ. ನಾವೆಲ್ಲರೂ ಒಂದೇ ಮನೆಯ ಸದಸ್ಯರು ಎಂದು ತಿಳಿದುಕೊಂಡು ಇವತ್ತಿನಿಂದ ಸದನವನ್ನು ಸರಿಯಾಗಿ ನಡೆಸೋಣ. ದಯಮಾಡಿ ಯಾರು ಸಹ ಅನ್ಯತಾ ಭಾವಿಸಬೇಡಿ. ಎಲ್ಲವೂ ಇನ್ನೊಬ್ಬರು ಹೇಳಿದಂತೆ ಆಗುವುದಿಲ್ಲ. ಆ ವಿಷಯವನ್ನು ನಿನ್ನೆ ದಿವಸ ಮುಗಿಸಿದ್ದೇವೆ. ಅವರು ಹೇಳಿದ್ದಾರೆ. ನೀವು ಹೇಳಿದ್ದೀರಿ.

ಅದನ್ನು ಅಲ್ಲಿಗೆ ಮುಗಿಸಿದ್ದೇವೆ. ಹಾಗಾಗಿ, ಅದು ಪುನರಾವರ್ತನೆ ಆಗುವುದು ಬೇಡ. ಈಗ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ ತಾವು ಮಾತನಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದರಿಂದ ಸಮಾಧಾನವಾಗುತ್ತದೆ ಎಂದರೆ, ನಮ್ಮ ತೊಂದರೆ ಇಲ್ಲ.

**ಸಭಾಪತಿಯವರು:–** ಶ್ರೀ ಎನ್.ರವಿಕುಮಾರ್‌ರವರೇ, ತಾವು ಇನ್ನು ಮೇಲಾದರೂ ಸಹ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಕುಳಿತುಕೊಳ್ಳುತ್ತೇನೆ. ತಾವು ruling ಕೊಟ್ಟಿದ್ದೀರಿ, ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ನನಗೆ ಆ ಶಬ್ದಗಳ pain ಗೊತ್ತು.

**ಸಭಾಪತಿಯವರು:–** ಶ್ರೀ ಎನ್.ರವಿಕುಮಾರ್‌ರವರೇ, ತಾವು ಒಂದು ನಿಮಿಷ ಕೇಳಿ. ಸಭಾಪತಿಯವರು ಹೇಳಿದ ನಂತರ ಮತ್ತೆ ಮಾತನಾಡುವುದು ಪದ್ಧತಿಯೇ? ಆಯಿತು. ಒಂದು ಮನೆಯಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಅದನ್ನು ಒಂದು ಬಾರಿ ಬಗೆಹರಿಸಿದ್ದೇವೆ. ನಾವೆಲ್ಲರೂ ಒಂದೇ ಕುಟುಂಬದವರು ಎನ್ನುವ ರೀತಿಯಿಂದ ಅದನ್ನು ಬಗೆಹರಿಸಿದ್ದೇವೆ. ಆದರೆ, ಎಲ್ಲರ ಮನಸ್ಸಿಗೂ ಸಮಾಧಾನ ಮಾಡುವುದಕ್ಕೆ ಯಾರಿಂದಲೂ ಆಗುವುದಿಲ್ಲ. ನಾನು ತಮಗೆ ವಿನಂತಿ ಮಾಡುತ್ತೇನೆ. ಅದು close ಆಯಿತು. ಅದು ಅಲ್ಲಿಗೆ ಮುಗಿದಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅಡೂರ್ ಹೆಚ್.ವಿಶ್ವನಾಥ್‌ರವರು ಆಗಲೇ ಒಂದೇ ಮಾತನ್ನು ಹೇಳಿದರು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಎಲ್ಲರೂ ಒಪ್ಪಿಕೊಂಡಿದ್ದೇವೆ ಅಲ್ಲವೇ;

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮದ್ದು ಅಭ್ಯಂತರ ಇಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಎಲ್ಲರೂ ಒಪ್ಪಿಕೊಂಡಿದ್ದೇವೆ ಅಲ್ಲವೇ; ನಿಮ್ಮ ಒಬ್ಬರದ್ದೇ ಅಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ರೀತಿ ಮುಂದೆ ಆಗಬಾರದು. ಒಂದು ವೇಳೆ ಆಗುವುದಾದರೆ, ತಾವು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ಇನ್ನು ಮೇಲೆ ಈ ರೀತಿಯ ಅಹಿತಕರ ಘಟನೆಗಳು ನಡೆದರೆ, ತಾವು ಹೇಳಿದಂತೆ ನಾನು ಏನೇ ಬರಲಿ ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಳ್ಳುವಂತಹ ಜವಬ್ದಾರಿಯನ್ನು ತೆಗೆದುಕೊಂಡಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರಿಗೆ ಮೂರು ಬಾರಿ ಅವಕಾಶ ಕೊಟ್ಟಿದ್ದೀರಿ. ಅವರು ಸುಮಾರು ಒಂದು ಗಂಟೆ ಕಾಲ ಮಾತನಾಡಿದ್ದಾರೆ. ಈಗ ಅವರಿಗೆ ಅನುಮೋದನೆ ಮಾಡುವುದಕ್ಕೆ ಟೈಮ್ ಕೊಡಿ.

**ಸಭಾಪತಿಯವರು:–** ಈಗ ಒಂದು ಪ್ರಕಟಣೆ ಇದೆ.

**ಶ್ರೀ ಐವನ್ ಡಿ;ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ್ದು ಒಂದು ಶಬ್ದವಾದರೂ ಸಹ ಶ್ರೀ ಎಸ್.ಎಲ್.ಭೋಜೇಗೌಡರವರಿಗೆ ಗೊತ್ತಾಗಿದೆಯೇ?

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ, ಸಾಕು ಬಿಡಿ. ಈ ರೀತಿಯಾದರೆ, ತಮಗೆ ಏನು ಮಾಡಬೇಕು ಹೇಳಿ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ, ಒಂದು ನಿಮಿಷ ಒಂದು ಪ್ರಕಟಣೆ ಇದೆ.

4. **ಪ್ರಕಟಣೆ**

ದಿನಾಂಕ 30-01-2026 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನ ಮಾಡಲಾಗಿದೆ.

ದಿನಾಂಕ 22-01-2026ರಿಂದ ಪ್ರಾರಂಭವಾಗಿರುವ 158ನೇ ಅಧಿವೇಶನವು ಉಪವೇಶನವು ದಿನಾಂಕ 04-02-2026 ರವರೆಗೆ ವಿಸ್ತರಿಸಲಾಗಿದೆ.

ದಿನಾಂಕ 02-02-2026 ರಂದು ಸಂಜೆ 4-00 ಗಂಟೆಯ ನಂತರ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇರೆಗೆ ಸರ್ಕಾರದಿಂದ ಉತ್ತರ.

ದಿನಾಂಕ 03-02-2026ರಂದು ಮತ್ತು ದಿನಾಂಕ 04-02-2026 ರಂದು ಅಧಿಕೃತ ನಿರ್ಣಯದ ಮೇಲೆ ಚರ್ಚೆ, ಅಂಗೀಕಾರ, ವಿತ್ತ ಸರ್ಕಾರಿ ಕಾರ್ಯಕಲಾಪಗಳು.

ದಿನಾಂಕ 31-01-2026 ರಂದು ಸದನದ ಕಾರ್ಯಕಲಾಪಗಲೂ ಇರುವುದಿಲ್ಲ. ಈ ತೀರ್ಮಾನಕ್ಕೆ ತಾವೆಲ್ಲರೂ ಒಪ್ಪುತ್ತೀರಿ ಎಂದು ಭಾವಿಸುತ್ತೇನೆ.

**(ಮುಂದು.,)**

(071) 30.01.2026/11.40/ಎಂವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2026ನೇ ಜನವರಿ 22ರಂದು ಘನತೆವೆತ್ತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ವಿಧಾನ ಪರಿಷತ್ತಿನ ಶಾಸಕರಾದ ನಾವುಗಳು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆಯನ್ನು ಕೋರಿ, ವಂದನಾರ್ಪಣಾ ಪ್ರಸ್ತಾವನೆಯನ್ನು ಈ ಸದನದ ಮುಂದೆ ಮಂಡಿಸಿದ್ದೇನೆ. ಮತ್ತೆ ಅದು ಈಗಾಗಲೇ ಸ್ವೀಕಾರ ಕೂಡ ಆಗಿದೆ. ಇವತ್ತು ಘನತೆವೆತ್ತ ರಾಜ್ಯಪಾಲರ ಬಗ್ಗೆ ಅಥವಾ ಘನತೆವೆತ್ತ ರಾಷ್ಟ್ರಪತಿಗಳ ಬಗ್ಗೆ ಯಾವುದೇ ಟೀಕೆ-ಟಿಪ್ಪಣಿಗಳನ್ನು ಮಾಡಬಾರದೆಂದು ತಾವು ಸದನದಲ್ಲಿ ಒಂದು ರೂಲಿಂಗ್ ಕೊಟ್ಟಿದ್ದೀರಿ. ನಾನು ಅದನ್ನು ಗಮನದಲ್ಲಿಟ್ಟುಕೊಂಡು ಹೇಳಬಯಸುವುದೇನೆಂದರೆ, ಮಾನ್ಯ ರಾಜ್ಯಪಾಲರು ಈ ರಾಜ್ಯದ Constitutional Head ಮತ್ತು ಮಾನ್ಯ ಮುಖ್ಯಮಂತ್ರಿಗಳು Executive Head. ಹಾಗಾಗಿ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಾವು ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿ, ಮಾನ್ಯ ರಾಜ್ಯಪಾಲರು ಮಾತನಾಡಿದಂತಹ ಪ್ರತಿಯೊಂದು ಶಬ್ಧಗಳು ಈ ರಾಜ್ಯದ ಪ್ರಗತಿಯ ಹೆಜ್ಜೆಗೆ ಅದು ಒಂದು ದಾರಿಯಾಗಿದೆ ಎಂದು ನಾನು ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ಮೊದಲ ಹಂತದಲ್ಲಿಯೇ ಹೇಳಿದರು. ಮಾನ್ಯ ರಾಜ್ಯಪಾಲರು ಓದಿದಂತಹ ಎರಡು paragraph ಗಳಲ್ಲೂ ಕೂಡ ತಮ್ಮ ಭಾಷಣದ ಎಲ್ಲಾ ವಿಚಾರಗಳನ್ನು ನಮ್ಮ ಮುಂದೆ ತರುವಂತಹ ಪ್ರಯತ್ನವನ್ನು ಮಾಡಿ ಹೇಳಿದ್ದಾರೆ. ಅಂದರೆ, "ನನ್ನ ಸರ್ಕಾರ ಒಟ್ಟಾರೆ ರಾಜ್ಯದ ಆರ್ಥಿಕ, ಸಾಮಾಜಿಕ ಹಾಗೂ ಭೌತಿಕ ಅಭಿವೃದ್ಧಿಯ ವೇಗವನ್ನು ದ್ವಿಗುಣಗೊಳಿಸಲು ಕಂಕಣಬದ್ಧವಾಗಿದೆ" ಎಂದು ಹೇಳಿ, ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದ್ದಾರೆ. ಸುಮಾರು 46 ಪುಟಗಳ ಭಾಷಣವನ್ನು 54 ಸೆಕೆಂಡ್‌ಗಳಲ್ಲಿ ಓದಿ ಮುಗಿಸಿದ್ದಾರೆ. ಆದರೆ, ನಾವು ಇವತ್ತು ನಿರ್ಣಯ ಮಾಡಿದ್ದೇವೆ. ಅಂದರೆ, ಸಂವಿಧಾನದಲ್ಲಿ ಆ ಭಾಷಣವು ಒಂದು ಸಮರ್ಪಕವಾದಂತಹ full-fledged speech ಎಂದು ನಾವು ಸ್ವೀಕಾರ ಮಾಡಬೇಕಾಗುತ್ತದೆ. ಮತ್ತೆ ನಾವು ಅದನ್ನು ಮಾಡಿದ್ದೇವೆ. ಇಂತಹ ವ್ಯವಸ್ಥೆ ಕಾನೂನಿನಲ್ಲಿಯೂ ಕೂಡ ಅದು it is legally entitled ಇದೆ. ಆದರೆ, ಸಮಾಜಕ್ಕೆ ಯಾವ ರೀತಿಯ ಸಂದೇಶ ಹೋಗಿದೆ ಎಂದರೆ, ಮಾನ್ಯ ರಾಜ್ಯಪಾಲರು ಭಾಷಣವನ್ನು

ಸಂಪೂರ್ಣವಾಗಿ ಓದದೆ ಇರುವುದು, ಅವರು ಕೇಂದ್ರ ಸರ್ಕಾರದಿಂದ nominate ಆದಂತಹ ರಾಜ್ಯಪಾಲರು, ಈ ರಾಜ್ಯದಲ್ಲಿ ಬೇರೆ ಪಕ್ಷವಾದ ಕಾಂಗ್ರೆಸ್ ಪಕ್ಷದ ಸರ್ಕಾರವಿದೆ. ಕೇಂದ್ರದಲ್ಲಿ ಬಿ.ಜೆ.ಪಿ. ಪಕ್ಷದ ಸರ್ಕಾರವಿದೆ. ಹಾಗಾಗಿ, ಅವರು ಓದಲಿಲ್ಲವೆಂದು ಹೇಳುವುದು ಸಮಾಜದ ಮುಂದೆ ಇದೆ. ನಾನು ನನಗೆ ಅನಿಸಿದ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈ ಹಿಂದೆ ದಿನಾಂಕ 25.01.2007ರಲ್ಲಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದಾಗ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ರಾಜ್ಯದಲ್ಲಿ ಬಿ.ಜೆ.ಪಿ. ಪಕ್ಷದ ಆಡಳಿತವಿತ್ತು. ಆಗ ಮಾನ್ಯ ರಾಜ್ಯಪಾಲರು ರಾಷ್ಟ್ರೀಯ ಹೆದ್ದಾರಿಗಳನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುವುದು, ಬಂದರುಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾಯೋಜನೆಯನ್ನು ರೂಪಿಸಿ ಕೇಂದ್ರ ಸರ್ಕಾರದ ಮುಂದೆ ಇಡಲಾಗುವುದೆಂದು ಹೇಳುವಂತಹ comment ಗಳನ್ನು ಮತ್ತೆ ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಅದೇ ರೀತಿ 2009ರಲ್ಲಿ ಹೊಸ ಸರ್ಕಾರ ಬಂದಾಗ ಬೆಳಗಾವಿಯಲ್ಲಿ ರಾಜ್ಯಗಳಿಗೆ ಕೇಂದ್ರದಿಂದ ಸಾಕಷ್ಟು ತಾಂತ್ರಿಕ ಮತ್ತು ಆರ್ಥಿಕ ನೆರವು ಪರಿಗಣಿತ ಪಡೆಗಳ ಸಹಾಯ ಅತ್ಯಗತ್ಯವೆಂದು ಹೇಳುವುದನ್ನು ಸಹ ಹೇಳಿದ್ದಾರೆ. ಅದೇ ರೀತಿ ಅನೇಕ ವಿಚಾರಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧಗಳ ಬಗ್ಗೆ ಕೇಂದ್ರದಿಂದ ನಾವು ಏನನ್ನು ಬಯಸುತ್ತೇವೆ ಎನ್ನುವುದನ್ನು ಅವರು ಹೇಳಿದ್ದು ಸಹ ಇದೆ. ಅದೇ ರೀತಿ ಭಾರತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಅಂದರೆ, ಜನರ ಜೀವಕ್ಕೆ, ಜಾನುವಾರುಗಳಿಗೆ, ಬೆಳೆಗಳಿಗೆ ಆದಂತಹ ಹಾನಿ ಮತ್ತು ಮನೆಗಳಿಗೆ ಆದಂತಹ ನಷ್ಟಕ್ಕೆ ಪರಿಹಾರವನ್ನು ಒದಗಿಸುವುದು ಮತ್ತು ಮೂಲಸೌಕರ್ಯದ ನೆರವನ್ನು ಒದಗಿಸುವುದಕ್ಕಾಗಿ ಭಾರತ ಸರ್ಕಾರ ಹಣ ಬಿಡುಗಡೆ ಮಾಡುವುದನ್ನು ಕಾಯದೆ ನನ್ನ ಸರ್ಕಾರ 1,078 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದು ಕೂಡ ಈ ಹಿಂದೆ 2010ರಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿರುವುದು ಇದೆ. ಇದೇ ರೀತಿ ಬೇರೆ ಬೇರೆ ಸಂದರ್ಭಗಳಲ್ಲಿ ಮಾನ್ಯ ರಾಜ್ಯಪಾಲರು ರಾಜ್ಯದ ಹಿತದೃಷ್ಟಿಯಿಂದ ಮತ್ತು ರಾಜ್ಯಕ್ಕೆ ಬೇಕಾದಂತಹ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಭಾಷಣದಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಹೇಳಿದ್ದು ಇದೇ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದೇ ರೀತಿ 2019ರಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಇರಲಿಲ್ಲ. ಆ ಸಂದರ್ಭದಲ್ಲೂ ಕೂಡ ಅನೇಕ ವಿಚಾರಗಳನ್ನು ಹೇಳಿರುವಂಥದ್ದು ಇದೆ.

ಅದೇ ರೀತಿ ನಾವು ಇವತ್ತು ಮನರೇಗಾ ಬಗ್ಗೆ ಮಾತನಾಡುತ್ತಿದ್ದೇವೆ. ಮನರೇಗಾದ ಬಗ್ಗೆ ಕೂಡ ಮಾನ್ಯ ರಾಜ್ಯಪಾಲರು ಅನೇಕ ಬಾರಿ, ತಮ್ಮ ಅನೇಕ ಭಾಷಣಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವಿಚಾರವಾಗಿ ಮಾತನಾಡಿದ್ದಾರೆ. ಮಾನ್ಯ ರಾಜ್ಯಪಾಲರು 2010ರಲ್ಲಿ ಭಾಷಣ ಮಾಡುತ್ತಾ ನೀರಾವರಿ ಯೋಜನೆಗಳ

ಬಗ್ಗೆ ಮಾತನಾಡುತ್ತಾ ಹೇಳಿದ್ದಾರೆ. ಭಾರತ ಸರ್ಕಾರ 776 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬಹುದೆಂದು ನಾವು ನಿರೀಕ್ಷೆ ಮಾಡಿದ್ದೆವು ಎಂದು ಹೇಳಿ comments ಅನ್ನು ಸಹ ಮಾಡಿದ್ದಾರೆ. ಅದೇ ರೀತಿ ಗ್ರಾಮಾಭಿವೃದ್ಧಿಯ ಬಗ್ಗೆ ಅನೇಕ ಬಾರಿ ಮಾನ್ಯ ರಾಜ್ಯಪಾಲರುಗಳು ಕೇಂದ್ರದಲ್ಲಿ ಬೇರೆ ಸರ್ಕಾರ ಇತ್ತು. ರಾಜ್ಯದಲ್ಲಿ ಬೇರೆ ಸರ್ಕಾರ ಇತ್ತು. ಆಗ ಕೂಡ ಮಾನ್ಯ ರಾಜ್ಯಪಾಲರು ಮನರೇಗಾ ಯೋಜನೆ ಬಗ್ಗೆ ನನ್ನ ಸರ್ಕಾರವು ರಾಜ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದ್ಯತೆ ನೀಡಲು ಮುಂದುವರೆಸಿದೆ. ಇದರಿಂದ ಸುಮಾರು 19 ಲಕ್ಷ ಜನರಿಗೆ ಉದ್ಯೋಗ ನೀಡುವ ಮೂಲಕ ಸುಮಾರು 2.33 ಕೋಟಿ ರೂಪಾಯಿಗಳ ಮಾನವ ದಿನಗಳ ಕೆಲಸವನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. 2012ರಲ್ಲಿ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ, ರಾಜ್ಯ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹೆಚ್ಚಿನ ಆದ್ಯತೆ ನೀಡಿದೆ. 2011ನೇ ಇಸವಿಯಿಂದ 54 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಉದ್ಯೋಗವನ್ನು ನೀಡಿದೆ ಎಂದು ತಿಳಿಸಿದ್ದಾರೆ. ಇದರಲ್ಲಿ ನಮಗೆ ಏನು ಅರ್ಥವಾಗುತ್ತದೆಂದರೆ, ಕೇಂದ್ರದಲ್ಲಿ ಬೇರೆ ಪಕ್ಷದ ಸರ್ಕಾರ ಇದ್ದರೂ ಕೂಡ, ರಾಜ್ಯದ ಆಡಳಿತ ರಾಜ್ಯ ಸರ್ಕಾರದ Constitutional Head ಆಗಿ ಅವರ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಇರುವುದರಿಂದ ರಾಜ್ಯ ಸರ್ಕಾರ ಏನು ಸಲಹೆಗಳನ್ನು ನೀಡಿ, ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಭಾಷಣವನ್ನು ತಯಾರಿಸಿ ಕೊಡುತ್ತದೆಯೋ ಅದೇ ಭಾಷಣವನ್ನು ಮಾನ್ಯ ರಾಜ್ಯಪಾಲರು ಓದುವ ಮೂಲಕ ತನ್ನ ರಾಜ್ಯದಲ್ಲಿ ಇರುವಂತಹ ರಾಜ್ಯಕ್ಕೆ ನ್ಯಾಯವನ್ನು ಕೊಡತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ, ನಿನ್ನೆ ಮತ್ತು ಮೊನ್ನೆಯ ದಿವಸ ಏನು ಘಟನೆ ನಡೆಯಿತು. ಅದು ಏನು ಹೊಸ ಘಟನೆ ಅಲ್ಲ ಅಥವಾ ಮಾನ್ಯ ರಾಜ್ಯಪಾಲರಿಗೋಸ್ಕರವೇ ರಾಜ್ಯ ಸರ್ಕಾರ ಮಾನ್ಯ ರಾಜ್ಯಪಾಲರು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದಕ್ಕೋಸ್ಕರವೇ ಭಾಷಣವನ್ನು ಮಾಡಿಸಿದ್ದೀರಿ ಎಂದು ಹೇಳುವಂತಹ ಭಾವನೆ ಜನರಿಗೆ ಇದೆ. ಅದು ತಪ್ಪು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾನಿರ್ಣಯದ ಮೇಲೆ ಚರ್ಚೆ ಪ್ರಾರಂಭವಾಗಿದೆ. ಆದರೆ, ಸದನದಲ್ಲಿ ಏಳು ಜನ ಸಚಿವರು ಇಲ್ಲ. ಅದೇ ರೀತಿ ಸದನದಲ್ಲಿ ಹಿರಿಯ ಅಧಿಕಾರಿಗಳು ಸಹ ಇಲ್ಲ. ಸದನದಲ್ಲಿ ಒಬ್ಬರೂ ಸಹ ಇಲ್ಲ. ಮಾನ್ಯ ಸಭಾನಾಯಕರು ಅವರನ್ನು ಕೂರಿಸಿಕೊಳ್ಳಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತು ಈ ಭಾಷಣದ ವಿಚಾರವಾಗಿ, ಮಾನ್ಯ ರಾಜ್ಯಪಾಲರ ವಿಚಾರಗಳು ಮತ್ತು ಅವರು ಮಾಡಿದಂತಹ ಭಾಷಣದ ಬಗ್ಗೆ ಇಡೀ ರಾಜ್ಯದಲ್ಲಿ ಒಂದು ರೀತಿಯ ಗೊಂದಲಮಯ ವಾತಾವರಣ ಸೃಷ್ಟಿಯಾಯಿತು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಅವರನ್ನು ಸದನಕ್ಕೆ ಕರೆಯಿಸಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತು ಒಕ್ಕೂಟ ವ್ಯವಸ್ಥೆಯಲ್ಲಿ ಏನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧವಿದೆ. ಅದು ಒಟ್ಟಾರೆಯಾಗಿ ರಾಜ್ಯಕ್ಕೆ ಪೂರಕವಾಗಿರತಕ್ಕಂತಹ ರೀತಿಯಲ್ಲಿ ಮಾನ್ಯ ರಾಜ್ಯಪಾಲರು ರಾಜ್ಯದಲ್ಲಿ ಕರ್ತವ್ಯವನ್ನು ಮಾಡಬೇಕಾಗುತ್ತದೆ ಎಂದು ಹೇಳುವಂಥದ್ದು ನನ್ನ ದೃಢವಾದಂತಹ ನಂಬಿಕೆ ಮತ್ತು ಸಂವಿಧಾನದ ಆಶಯ ಕೂಡ. ಇವತ್ತು ಮಾನ್ಯ ರಾಜ್ಯಪಾಲರು ಹೇಳಿದಂತಹ ಭಾಷಣದ ಕೆಲವು ವಿಚಾರಗಳನ್ನು ನಾನು ಸ್ವಾಗತಿಸುತ್ತಾ, ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮಗೆ ಮೊದಲು ಕಾಣಿಸುವಂಥದ್ದು ಪ್ಯಾರಾ ನಂ.2ರಲ್ಲಿ ರಾಜ್ಯದ ಒಕ್ಕೂಟ ವ್ಯವಸ್ಥೆಯ ಆರ್ಥಿಕ ಮತ್ತು ನೀತಿಕಾರಕ ವಿಚಾರದ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯ ಸರ್ಕಾರದ ಭಾಷಣದಲ್ಲಿ ನಾನು ಗಮನಿಸುವಂಥದ್ದು ಏನೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ಒಕ್ಕೂಟ ವ್ಯವಸ್ಥೆಯಲ್ಲಿ ಇರುವುದರಿಂದ ಕೇಂದ್ರ ಸರ್ಕಾರ ರಾಜ್ಯಕ್ಕೆ ತೊಂದರೆಗಳಾದಾಗ ಕೇಂದ್ರ ಸರ್ಕಾರ ರಾಜ್ಯ ಸರ್ಕಾರವನ್ನು ಆರ್ಥಿಕವಾಗಿ ಮತ್ತು ತನ್ನ ಯೋಜನೆಗಳ ಮೂಲಕ ಸಹಕಾರ ಮಾಡುವಂಥದ್ದು ಒಕ್ಕೂಟ ವ್ಯವಸ್ಥೆಯ ಕ್ರಮವಾಗಿದೆ. ಆದರೆ, ಇವತ್ತು ರಾಜ್ಯದ ಒಟ್ಟಾರೆ ವ್ಯವಸ್ಥೆಯನ್ನು ನೋಡಿದಾಗ, ಕೇಂದ್ರ ಸರ್ಕಾರ ಪುರಸ್ಕೃತ ಅನೇಕ ಯೋಜನೆಗಳು ಈ ರಾಜ್ಯದಲ್ಲಿ ಜಾರಿಯಲ್ಲಿವೆ. ಇದನ್ನು ರಾಜ್ಯ ಸರ್ಕಾರ ಜಾರಿ ಮಾಡತಕ್ಕಂಥದ್ದು ಅದು 60X40 ಇರಬಹುದು ಅಥವಾ 20X30 ಇರಬಹುದು. ಈ ರೀತಿ ಬೇರೆ ಬೇರೆ ರೀತಿಯ ಅನುಪಾತದಲ್ಲಿ ಯೋಜನೆಗಳು ಜಾರಿಗೆ ಬರುತ್ತವೆ. ಆದರೆ, ಇವತ್ತು ಒಟ್ಟಾರೆಯಾಗಿ ಹೇಳಬೇಕಾದರೆ, ನಮ್ಮ ಕರ್ನಾಟಕ ರಾಜ್ಯದಿಂದ 2024-25ರಲ್ಲಿ highest ಅಂದರೆ ಸುಮಾರು 1.6 ಲಕ್ಷ ಕೋಟಿ ರೂಪಾಯಿಗಳ ಜಿ.ಎಸ್.ಟಿ.ಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ದೇಶದಲ್ಲಿಯೇ ಕರ್ನಾಟಕ ರಾಜ್ಯ the second-highest GST ಯ revenue ಅನ್ನು ಸಂಪಾದನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕೊಡತಕ್ಕಂಥದ್ದು.

**(ಮುಂದು)**

(72) 30.01.2026 11.50 **LL-RN** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಐವನ್ ಡಿ' ಸೋಜಾ (ಮುಂದು):-**

ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳ ಒಟ್ಟಾರೆ ವ್ಯವಸ್ಥೆಯನ್ನು ನೋಡಿ, ಯಾವ ರಾಜ್ಯಗಳಿಂದ ಹೆಚ್ಚು ಸಂಪನ್ಮೂಲಗಳು ಬರುತ್ತವೆ, ಆ ರಾಜ್ಯಕ್ಕೆ ಹೆಚ್ಚು ಗಮನ ಕೊಡುವಂಥದ್ದು ಇಂದಿನ ಅವಶ್ಯಕತೆ ಇತ್ತು. ಈ ಸಾಲಿನ ಕೇಂದ್ರ ಸರ್ಕಾರದ ಬಜೆಟ್ ಆದಿತ್ಯವಾರ ಮಂಡನೆಯಾಗಲಿದೆ. ಆದರೆ, ಕಳೆದ ಸಾಲಿನ ಕೇಂದ್ರ ಸರ್ಕಾರದ ಬಜೆಟ್ ಅಂದರೆ, 2025-26ನೇ ಸಾಲಿನ ಬಜೆಟ್ ಅನ್ನು ನೋಡಿದಾಗ,...

**ಸಭಾಪತಿಯವರು:-** ಇನ್ನು ಐದು ನಿಮಿಷದಲ್ಲಿ ಮುಕ್ತಾಯಗೊಳಿಸಿ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, I have to go with all...

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಬಹಳಷ್ಟು ಸದಸ್ಯರಿಗೆ ಸಮಯ ನಿಗದಿ ಮಾಡಲಾಗಿದೆ. ಹಾಗಾಗಿ, ಇನ್ನು ಐದು ನಿಮಿಷದಲ್ಲಿ ತಾವು ತಮ್ಮ ಮಾತನ್ನು ಮುಕ್ತಾಯಗೊಳಿಸಿ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ನನಗೆ ಕನಿಷ್ಠ ಪಕ್ಷ 30 ನಿಮಿಷ ಕಾಲಾವಕಾಶ ನೀಡಿ. I will finish it by 12-30 p.m.

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ. ಐದು ನಿಮಿಷದಲ್ಲಿ ತಾವು ತಮ್ಮ ಮಾತನ್ನು ಮುಕ್ತಾಯಗೊಳಿಸಬೇಕು. ತಾವು 11 ಗಂಟೆ 40 ನಿಮಿಷಕ್ಕೆ ಮಾತನಾಡಲು ಪ್ರಾರಂಭ ಮಾಡಿದ್ದೀರಿ. ತಮ್ಮ ಸಮಯವನ್ನು ನಾನು ಬರೆದಿಟ್ಟುಕೊಂಡಿರುತ್ತೇನೆ. ತಮಗೆ 15 ನಿಮಿಷ ಕಾಲಾವಕಾಶ ನೀಡುತ್ತೇನೆ. ಅಷ್ಟರೊಳಗೆ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಬಹಳಷ್ಟು ಸಿದ್ಧತೆ ಮಾಡಿಕೊಂಡು ಬಂದಿದ್ದೇನೆ. ಹಾಗಾಗಿ, ನಾನು ಅದನ್ನು ಹೇಳಬೇಕಲ್ಲವೇ? ಆದುದರಿಂದ, ತಾವು ನನಗೆ 12.30 ರವರೆಗೆ ಮಾತನಾಡಲು ಅವಕಾಶ ನೀಡಿ. 12.30 ಕ್ಕೆ full stop ಹಾಕಿ ಮುಗಿಸುತ್ತೇನೆ.

**ಸಭಾಪತಿಯವರು:–** ಇಲ್ಲ ಆಗುವುದಿಲ್ಲ. 12 ಗಂಟೆಗೆ 05 ನಿಮಿಷ ಇರುವಾಗ ತಾವು ತಮ್ಮ ಮಾತನ್ನು ಮುಕ್ತಾಯಗೊಳಸಬೇಕು.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, full stop ಹಾಕಿ ಮುಗಿಸುತ್ತೇನೆ.

**ಸಭಾಪತಿಯವರು:–** ತಾವು ನಾನು ಹೇಳದ್ದನ್ನು ಕೇಳುತ್ತೀರೋ ಅಥವಾ ತಾವು ಹೇಳುವುದನ್ನು ನಾನು ಕೇಳಬೇಕೇ?

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ಅವರಿಗೆ disturb ಮಾಡಬೇಡಿ ಎಂದು ಹೇಳ.

**ಸಭಾಪತಿಯವರು:–** ಇಲ್ಲ, ಇಲ್ಲ ಎಲ್ಲರೂ ಮಾತನಾಡಬೇಕಿದೆ. ಈ ವಿಷಯದ ಬಗ್ಗೆ ಮಾತನಾಡುವವರು ಆಡಳತ ಪಕ್ಷದವರೇ 37 ಮಂದಿ ಇದ್ದಾರೆ. ಹಾಗಾಗಿ, ತಾವು ಆದಷ್ಟು ಬೇಗ ತಮ್ಮ ಮಾತುಗಳನ್ನು ಮುಕ್ತಾಯಗೊಳಸಬೇಕು.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಹೌದು. ತಾವು ಹೇಳುವುದು ಸರಿಯಾಗಿದೆ. ಆದರೆ, ನಾನು ನನ್ನ ಮಾತುಗಳನ್ನು ಹೇಳಬೇಕಲ್ಲವೇ?

**ಸಭಾಪತಿಯವರು:–** ಇಲ್ಲ ಆಗುವುದಿಲ್ಲ. ತಾವು ವಾದ ಮಾಡಬೇಡಿ. ತಮ್ಮ ಮಾತುಗಳನ್ನು ಮುಕ್ತಾಯಗೊಳಸಿ ಎಂದು ಹೇಳದರೆ, ತಾವು ಮುಕ್ತಾಯಗೊಳಸಬೇಕು.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಅದೇ ರೀತಿ ಕೇಂದ್ರ ಸರ್ಕಾರ ಇವೊತ್ತಿನ ದಿವಸ ನಮ್ಮ ರಾಜ್ಯಕ್ಕೆ ಕೊಡಬೇಕಾದಂತಹ ಜಿ.ಎಸ್.ಟಿ. ಪಾಲು ಕೊಡಲಿಲ್ಲ ಎಂದು ಹೇಳುವುದು ನಮ್ಮ ಮುಖ್ಯವಾದ ಆರೋಪವಾಗಿದೆ. ಏಕೆಂದರೆ, ಕಳೆದ ಸಾಲಿನ ಬಜೆಟ್‌ನಲ್ಲಿ ನಮ್ಮ ರಾಜ್ಯದಿಂದ ರೂ.1.6 ಲಕ್ಷ ಕೋಟಿ ರೂಪಾಯಿಗಳ ಜಿ.ಎಸ್.ಟಿ. ಹಣವನ್ನು ಕೊಟ್ಟಿದ್ದೇವೆ. ಆದರೆ, ಬಿಹಾರ ರಾಜ್ಯದಲ್ಲಿ ರೂ.14,291 ಕೋಟಿಗಳ ಜಿ.ಎಸ್.ಟಿ. ಹಣವನ್ನು ಕೊಟ್ಟಿರುತ್ತಾರೆ. ಅದೇ ರೀತಿ, ಆಂಧ್ರಪ್ರದೇಶ ರಾಜ್ಯ ರೂ.54,321 ಕೋಟಿಗಳ ಜಿ.ಎಸ್.ಟಿ. ಹಣವನ್ನು ಕೊಟ್ಟಿರುತ್ತಾರೆ. ಆದರೆ, ಕೇಂದ್ರ ಸರ್ಕಾರ ಇವೊತ್ತಿನ ದಿವಸ ಆ ರಾಜ್ಯಗಳು ಕೊಟ್ಟಿರುವಂತಹ ಒಟ್ಟಾರೆ ಜಿ.ಎಸ್.ಟಿ. ಹಣಕ್ಕಿಂತಲೂ ಎರಡು ಪಾಲು ಜಾಸ್ತಿ ಅನುದಾನವನ್ನು ಆ ರಾಜ್ಯಗಳಗೆ ಕೊಟ್ಟಿರುತ್ತದೆ. ಆದರೆ, ಕೇಂದ್ರ ಸರ್ಕಾರ

ನಮ್ಮ ರಾಜ್ಯಕ್ಕೆ ರೂ.57,000 ಕೋಟಿಗಳನ್ನು ಮಾತ್ರ ಕೊಟ್ಟಿರುತ್ತದೆ. ಇದರ ಜೊತೆಗೆ, ನಮ್ಮ ರಾಜ್ಯಕ್ಕೆ ಯಾವುದೇ ದೊಡ್ಡ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಹೋಗಲಿಲ್ಲ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಐವನ್ ಡಿ ಸೋಜಾರವರೇ, ತಾವು ಒಂದು ನಿಮಿಷ ಯೀಲ್ಡ್ ಆದರೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ಅಲ್ಲದೇ, ನಾನು ಅದಕ್ಕಾಗಿ ಜಾಸ್ತಿ ಸಮಯ ಕೂಡ ತೆಗೆದುಕೊಳ್ಳುವುದಿಲ್ಲ. ಜಿ.ಎಸ್.ಟಿ. ಬಗ್ಗೆ ಮಾನ್ಯ ಸದಸ್ಯರು ಇಷ್ಟೊಂದು ರೋಷಾವೇಷದಿಂದ ಮಾತನಾಡುತ್ತಾರಲ್ಲವೇ, ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯವರೆಗೂ ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಏತಕ್ಕೆ ಹೋಗಿರುವುದಿಲ್ಲ? How many GST Meetings our Hon'ble Chief Minister has attended? ಏತಕ್ಕೆ ಅವರು ಹೋಗಿರುವುದಿಲ್ಲ?

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ಮಾನ್ಯ ಸದಸ್ಯರ ಮಾತಿಗೆ ಬೆಂಬಲ ಸೂಚಿಸಿದರು)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಂತರ ಚರ್ಚೆ ಮಾಡೋಣ. ಅವರು ಹೋಗದಿದ್ದರೆ.., Hon'ble Chief Minister has sent his own representative.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, No. No.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹೋಗಬೇಕೆಂದು ಎಲ್ಲಿಯೂ ಇರುವುದಿಲ್ಲ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಅಲ್ಲಿಗೆ ಹೋಗಿ ಮಾತನಾಡಬೇಕು. ಇಲ್ಲಿ ಮಾತನಾಡುವುದಲ್ಲ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, Hon'ble Chief Minister can send his own representative. ಯಾರು ಸಮರ್ಥರಾಗಿ ನಿಭಾಯಿಸುವವರಿದ್ದಾರೆ, ಅವರನ್ನು ಕಳುಹಿಸಬಹುದಾಗಿರುತ್ತದೆ.

**(ಗೊಂದಲ)**

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಶಿವಕುಮಾರ್ ಕೆ.:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ನೀಡಿ. ಅವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ.:–** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ 11 ರಾಜ್ಯಗಳ ಮುಖ್ಯ ಮಂತ್ರಿಗಳು ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಹೋಗಿರುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ...ಆದರೆ, ಇವರು ಮೋಸ ಮಾಡಿದ್ದಾರೆಂದು ಹೇಳಲಿ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ನೀಡಿ. ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ.:–** ಮಾನ್ಯ ಸಭಾಪತಿಯವರೇ, ...ಮಾನ್ಯ ನಿತೀಶ್ ಕುಮಾರ್‌ರವರು ಕಂಪ್ಲೆಂಟ್ ಮಾಡಿದ್ದರು. ಕೇವಲ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಮಾತ್ರ ಹೋಗಿರುವುದಿಲ್ಲ ಅಲ್ಲ, ಇಡೀ ದೇಶದಲ್ಲಿ 11 ರಾಜ್ಯಗಳ ಮುಖ್ಯ ಮಂತ್ರಿಗಳು ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಹೋಗಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿಶ್ವನಾಥ್‌ರವರೇ, ಒಂದು ನಿಮಿಷ. ಅವರು ಯೀಲ್ಡ್ ಆಗಿರುವುದಿಲ್ಲ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾದ ಅಂಶವನ್ನು ನಾನು ಎತ್ತಿದ್ದೇನೆ. ಜಿ.ಎಸ್.ಟಿ. ಬಗ್ಗೆ ಇವರು ಇಷ್ಟೊಂದು ಮಾತನಾಡುತ್ತಾರಲ್ಲವೇ, ರಾಜ್ಯಪಾಲರ ಬಗ್ಗೆಯೂ ಕೂಡ ಇಷ್ಟೆಲ್ಲಾ ಹೇಳಿದ್ದಾರಲ್ಲವೇ?

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ...

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ತಾವು ಏತಕ್ಕೆ ಯೀಲ್ಡ್ ಆಗಿರುತ್ತೀರಿ?

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ರಮೇಶ್‌ರವರೇ, who are you to question me? ಕುಳಿತುಕೊಳ್ಳಿ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಬಗ್ಗೆ...

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಎಷ್ಟು ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಹೋಗಿದ್ದಾರೆಂದು ಹೇಳಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರಮೇಶ್ ಬಾಬುರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಿಂದ 17 ಜನ ಎಂ.ಪಿ.ಗಳು ಬಿ.ಜೆ.ಪಿ. ಪಕ್ಷದಿಂದ ಚುನಾಯಿತರಾಗಿದ್ದಾರೆ. ಅದರಲ್ಲಿ 5 ಜನ ಮಂತ್ರಿಗಳಾಗಿದ್ದಾರೆ.

**(ಗೊಂದಲ)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳೇ ಹಣಕಾಸು ಸಚಿವರಾಗಿದ್ದಾರೆ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಅವರು ಯಾವಾಗಲಾದರೂ ಒಂದು ದಿವಸ ಪಾರ್ಲಿಮೆಂಟ್‌ನಲ್ಲಿ ಈ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ, ನಮಗೆ ನ್ಯಾಯ ಕೊಡಿ ಎಂದು ಕೇಳಿದ್ದು ನನಗೆ ಗೊತ್ತಿರುವುದಿಲ್ಲ.

**ಸಭಾಪತಿಯವರು:–** ಮಾನ್ಯ ಐವನ್ ಡಿ' ಸೋಜಾರವರೇ, ತಾವು ಒಂದು ನಿಮಿಷ ಯೀಲ್ಡ್ ಆಗಿ, ಅವರು ಮಾತನಾಡುತ್ತಾರೆ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಹಾಗಾದರೆ ತಾವು ನನಗೆ ಹೆಚ್ಚುವರಿ ಸಮಯ ಕೊಡಬೇಕು.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೇ ಹಣಕಾಸು ಮಂತ್ರಿಯಾಗಿದ್ದಾರೆ. ಹಾಗಾಗಿ, ಅವರು ಎಷ್ಟು ಬಾರಿ ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಹಾಜರಾಗುವುದಕ್ಕಾಗಿ ದೆಹಲಿಗೆ ಹೋಗಿ, ಅಲ್ಲಿ ಇದನ್ನು ಪ್ರತಿಪಾದನೆ ಮಾಡಿದ್ದಾರೆ? ಇಲ್ಲ. ಅದನ್ನು ಕೇವಲ ಇಲ್ಲಿ ಹೇಳಿಕೊಂಡು ಕುಳಿತರೆ ಏನಾಗುತ್ತದೆ?

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾವು ಉತ್ತರ ಕೊಡುತ್ತೇವೆ ಬಿಡಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವನಾಥ್‌ರವರು ಬಹಳ ಹಿರಿಯರಾಗಿದ್ದು, ನಮಗೆಲ್ಲಾ ಮಾರ್ಗದರ್ಶನ ನೀಡುವವರಾಗಿದ್ದಾರೆ. ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಹೋಗದೆ ಇದ್ದರೂ ಸಹ, ನಮ್ಮ ರಾಜ್ಯದ ಪರಿಸ್ಥಿತಿಯನ್ನು ಜಿ.ಎಸ್.ಟಿ. ಕೌನ್ಸಿಲ್ ಸಭೆ ಮುಂದೆ ಪ್ರತಿಪಾದಿಸುವಂತಹವವರನ್ನು ಹಾಗೂ ಸಾಕಷ್ಟು ವಿಚಾರ ಇರುವಂತವವರನ್ನು ಅಲ್ಲಿಗೆ ಕಳುಹಿಸಿಕೊಡಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ರಾಜ್ಯದ ಪರಿಸ್ಥಿತಿ ಬಗ್ಗೆ ನೇರವಾಗಿ ಸ್ವತಃ ಕೇಂದ್ರದ ಅರ್ಥ ಸಚಿವರ ಬಳಿ ಹಾಗೂ

ಮಾನ್ಯ ಪ್ರಧಾನ ಮಂತ್ರಿಗಳ ಬಳ ಹತ್ತಾರು ಬಾರಿ ಹೋಗಿ, ಅನೇಕ ವಿಷಯಗಳನ್ನು ಅವರಲ್ಲಿ ಪ್ರಸ್ತಾಪ ಮಾಡಿರುತ್ತಾರೆ. ಅದರಿಂದ ನಮಗೆ reply ಸಿಕ್ಕಿರುತ್ತದೆಯೇ? ಏನಾದರೂ ಸಮಾಧಾನವಾಗಿದೆಯೇ?

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಸಾಕು ಬಿಡಿ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಕೇಂದ್ರ ಸರ್ಕಾರದ ಬಳ ಹೋಗಿ, ಸಂಬಂಧಪಟ್ಟವರ ಜೊತೆ ಮಾತನಾಡಿ...

**(ಗೊಂದಲ)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ತಾವು ಅಲ್ಲೆಲ್ಲೋ ಹೋಗಿ ಮಾತನಾಡುವುದಲ್ಲ. ಅಲ್ಲದೇ, ಕೇಂದ್ರ ಸರ್ಕಾರದವರು ಜಿ.ಎಸ್.ಟಿ. ಕೌನ್ಸಿಲ್ ಸಭೆ ಏತಕ್ಕೆ ಕರೆಯುತ್ತಾರೆ?

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಇದ್ದಂತಹ ಸಂದರ್ಭದಲ್ಲಿ, ಕೇಂದ್ರ ಬಜೆಟ್‌ನಲ್ಲಿ ರೂ.11,430 ಕೋಟಿ ಹಣವನ್ನು ನಮ್ಮ ರಾಜ್ಯಕ್ಕೆ ಘೋಷಣೆ ಮಾಡಿ, ಇವತ್ತಿನವರೆಗೂ ಹಣ ಬಿಡುಗಡೆ ಮಾಡಿರುವುದಿಲ್ಲ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಕರೆಯುವಂತಹ ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಹೋಗುವವರು ಯಾರು ಎಂದರೆ, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಹೋಗುತ್ತಾರೆ. ಇಲ್ಲ, ಇಲ್ಲ. ಇದು ವಿತಂಡವಾದ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ. ಪಾಲನ್ನು ಕೊಡಬೇಕೆಂದು ಅವೊತ್ತಿನಿಂದ ಇವೊತ್ತಿನವರೆಗೂ ಹೋರಾಟ ನಡೆಯುತ್ತಲೇ ಇದೆ. ಅಲ್ಲದೇ, ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ದೆಹಲಿಯ ಜಂತರ್–ಮಂತರ್‌ನಲ್ಲಿ ಕುಳಿತುಕೊಂಡು ಮುಷ್ಕರ ಮಾಡಿರುತ್ತೇವೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಇದು ವಿತಂಡ ವಾದ. ನಾನು ಇದನ್ನು ಒಪ್ಪುವುದಕ್ಕೆ ತಯಾರಿಲ್ಲ. ಪ್ರತಿ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಮಾಡುವಂತಹ ಸಭೆ ಜಿ.ಎಸ್.ಟಿ. ಕೌನ್ಸಿಲ್ ಸಭೆ. ಆ ಸಭೆಗೆ ರಾಜ್ಯದ ಮುಖ್ಯಮಂತ್ರಿಗಳು ಏತಕ್ಕೆ ಹೋಗುವುದಿಲ್ಲ? ಆ ಸಭೆಗೆ ಬೇರೆ ರಾಜ್ಯಗಳ

ಮುಖ್ಯಮಂತ್ರಿಗಳು ಹೋಗುತ್ತಾರಲ್ಲವೇ? ಅಲ್ಲಿ ನಮ್ಮ ವಾದವನ್ನು ಮಂಡನೆ ಮಾಡಬೇಕೇ ಹೊರತು, ಇಲ್ಲಿ ಎಲ್ಲಿಯೂ ಅಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈಗ ಇದಕ್ಕೆ ಉತ್ತರ ಕೊಡಬೇಡಿ. ಮಾನ್ಯ ಸದಸ್ಯರು ಮಾತನಾಡಿದ ವಿಚಾರಗಳನ್ನು ತಾವು ಬರೆದಿಟ್ಟುಕೊಂಡು ನಂತರ, ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಕೊಡಿ. ಈಗ ಸದನದ ಸಮಯವನ್ನು ವ್ಯರ್ಥ ಮಾಡಬೇಡಿ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಹೋಗಿರುವುದಿಲ್ಲವೆಂದು ನಾವು ಹೇಳಬೇಕಲ್ಲವೇ?

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ all Chief Ministers are members of G.S.T. Council and they are free to nominate any member of the cabinet as their representative. ಈ ಹಿಂದೆ ಕೂಡ ಜಿ.ಎಸ್.ಟಿ. ಅನುಷ್ಠಾನಕ್ಕೆ ಬರಬೇಕಾದಾಗ, ನಮ್ಮ ಸರ್ಕಾರದ ವತಿಯಿಂದ ಶ್ರೀ ಕೃಷ್ಣ ಬೈರೇಗೌಡರವರು ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಹೋಗಿರುತ್ತಾರೆ. ಈಗಲೂ ಸಹ ಅವರೇ, ಜಿ.ಎಸ್.ಟಿ. ಕೌನ್ಸಿಲ್ ಸಭೆಗೆ ಮೆಂಬರ್ ಇದ್ದಾರೆ. ಈ ಹಿಂದೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀ ಬಸವರಾಜ ಬೊಮ್ಮಾಯಿಯವರು ಮೆಂಬರ್ ಇದ್ದರು. He has gone and attended the G.S.T. Council Meeting as a representative on behalf of the then Chief Minister of Karnataka State. It is not compulsory that the Chief Minister only has to attend that GST Council Meeting. The most important thing is only to protect the interest of the State.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಅನುಭವಸ್ಥರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಗ್ಗೆ ಅವರು ಇಷ್ಟೆಲ್ಲಾ ಮಾತನಾಡುತ್ತಾರಲ್ಲಾ,...

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಉತ್ತರ ನೀಡುವುದಕ್ಕೆ ಅವರು ಮತ್ತೆ ಮೇಲೇಳುತ್ತಾರೆ. ಈಗಾಗಲೇ ಅವರು ತಮ್ಮ ಅಭಿಪ್ರಾಯವನ್ನು ಹೇಳಿರುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳಿದರೆ ತಾವು ಕೇಳುವುದಿಲ್ಲ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಚಾರವಾಗಿದೆ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ತಾವು ಅದನ್ನು ಹೇಳುತ್ತೀರಿ, ಇದನ್ನು ಟ್ಯಾಗ್ ಮಾಡುತ್ತೀರಿ. ನಾನು ಏನು ಮಾಡುವುದು?

**ಸಭಾಪತಿಯವರು:–** ಮಾನ್ಯ ವಿಶ್ವನಾಥ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಐವನ್ ಡಿ' ಸೋಜಾರವರೇ ತಾವು ಮಾತನಾಡಿ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ,...

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಅಡಗೂರ್ ಹೆಚ್. ವಿಶ್ವನಾಥ್‌ರವರೇ, ತಮ್ಮ ಮೇಲೆ ನಮಗೆ ಗೌರವವಿದೆ. ತಾವು ನಂತರ ಮಾತನಾಡಿ, ಈಗ ದಯಮಾಡಿ ಕುಳಿತುಕೊಳ್ಳಿ.

**ಸಭಾಪತಿಯವರು:–** ಮಾನ್ಯ ವಿಶ್ವನಾಥ್‌ರವರೇ, ಅವರು ಉತ್ತರ ಹೇಳುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ನನ್ನ ಸಮಯದಲ್ಲಿ ಅವರಿಗೆ ಅವಕಾಶ ನೀಡಬೇಕೆಂದು ತಾವು ಹೇಳಿದರೆ, ನಾನು ನನ್ನ ಸಮಯನ್ನು ಕೊಡುತ್ತೇನೆ. ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ. ನಾನು ಕೂಡ ಡಿಬೇಟ್‌ಗೆ ತಯಾರಿದ್ದೇನೆ.

**ಸಭಾಪತಿಯವರು:–** ತಾವು ಮಾತನಾಡಿ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ಹೇಳುತ್ತೀರಿ. ಆದರೆ, ಅವರಿಗೂ ಮಾತನಾಡುವುದಕ್ಕೆ ಅವಕಾಶ ನೀಡಿ ಎಂದು ಹೇಳುತ್ತೀರಿ.

**ಸಭಾಪತಿಯವರು:–** ಹೌದು, ಒಂದೊಂದು ಸಾರಿ ಅವರಿಗೂ ಅವಕಾಶ ನೀಡಬೇಕಾಗುತ್ತದೆ. ಹೀಗೆಯೇ ಹೋಗಬೇಕೆಂದು ಗೆರೆ ಹಾಕುವುದಕ್ಕೆ ಆಗುತ್ತದೆಯೇ?

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ನನ್ನ ಉದ್ದೇಶ ಇರುವಂಥದ್ದು, ಕರ್ನಾಟಕ ರಾಜ್ಯದಿಂದ ಗೆದ್ದಂತಹ ಬಿ.ಜೆ.ಪಿ. ಯ 17 ಹಾಗೂ ಜೆ.ಡಿ.(ಎಸ್) ನ 2 ಸದಸ್ಯರು ಸೇರಿದಂತೆ ಒಟ್ಟು 19 ಜನ ಪಾರ್ಲಿಮೆಂಟ್‌ಗೆ ಹೋಗಿದ್ದಾರೆ. ಅದರಲ್ಲಿ 5 ಜನ ಕೇಂದ್ರ ಸಚಿವರಾಗಿದ್ದಾರೆ. ಅವರುಗಳು ಒಂದೇ ಒಂದು ದಿವಸ ಈ ರಾಜ್ಯಕ್ಕೆ ಸಲ್ಲಬೇಕಾದ ಗೌರವ ಕೊಡಿ, ಆರ್ಥಿಕ ವ್ಯವಸ್ಥೆ ಕೊಡಿ, ರಾಜ್ಯದ ಯೋಜನೆಗಳನ್ನು ಕೊಡಿ, ನ್ಯಾಯ ಕೊಡಿ, ನಮ್ಮ ರಾಜ್ಯಕ್ಕೆ ದೊಡ್ಡ ದೊಡ್ಡ ಯೋಜನೆಗಳನ್ನು ಕೊಡಿ ಎಂದು ಹೇಳುವಂತಹ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ, ಬಿ.ಜೆ.ಪಿ.ಯವರು ಕೇಂದ್ರ ಸರ್ಕಾರದಲ್ಲಿ ಇವೊತ್ತಿನ ದಿವಸ ರಾಜ್ಯ ಸರ್ಕಾರದ ವಿರುದ್ಧವಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಾಗಾಗಿ, ಘನತೆವೆತ್ತ ರಾಜ್ಯಪಾಲರು ಬಹಳ ಸ್ಪಷ್ಟವಾಗಿ ಹೇಳಿರುವುದೇನೆಂದರೆ, ಕೇಂದ್ರ ಪುರಸ್ಕೃತ ಯೋಜನೆಗಳಿರಬಹುದು, ರಾಜ್ಯಕ್ಕೆ ಬರಬೇಕಾದಂತಹ ನ್ಯಾಯ ಇರಬಹುದು, ಅದನ್ನು ಕೊಡುವುದಕ್ಕೆ ಬಿ.ಜೆ.ಪಿ. ಯ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಹೇಳುವುದರಲ್ಲಿ ತಪ್ಪಾದರೂ ಏನಿದೆ ಎನ್ನುವುದು ನನ್ನ ಪ್ರಶ್ನೆ. ಇನ್ನೊಂದು ವಿಚಾರವೇನೆಂದರೆ, ನಮ್ಮ ರಾಜ್ಯದ ಎಂ.ಪಿ.ಗಳು ಅಥವಾ ರಾಜ್ಯದಿಂದ ಹೋಗಿ ಕೇಂದ್ರದಲ್ಲಿ ಮಂತ್ರಿಗಳಾಗಿರುವವರು ಪಾರ್ಲಿಮೆಂಟ್ನಲ್ಲಿ ಒಂದೇ ಒಂದು ಶಬ್ದವನ್ನು ಬಾಯಿ ಬಿಟ್ಟು ಮಾತನಾಡಿರುವುದಿಲ್ಲ. ಅಲ್ಲದೇ, ಅವರು ಶ್ರೀ ನರೇಂದ್ರ ಮೋದಿಯವರ ಬಳಿ ಹೋಗಲೇ ಇಲ್ಲ. ಅವರುಗಳಿಗೆ ಶ್ರೀ ನರೇಂದ್ರ ಮೋದಿಯವರ ಮುಂದೆ ನಿಲ್ಲುವುದು ಎಂದರೆ, ಕೈ–ಕಾಲುಗಳು 'ಗಡಗಡ' ಎಂದು ನಡುಗುತ್ತವೆ. ಒಂದು ಸಲವಾದರೂ ಈ ರಾಜ್ಯದ ರೈತರಿಗೆ ಅನ್ಯಾಯವಾಯಿತು, ನಮಗೆ ಬರ ಪರಿಹಾರಕ್ಕೆ ನೀಡಬೇಕಾದಂತಹ ಹಣವನ್ನು ನೀಡಬೇಕೆಂದು ಮಾನ್ಯ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕಾಯಿತು. ಅಂದರೆ, ರಾಜ್ಯಕ್ಕೆ ನೀಡಬೇಕಾದಂತಹ ಬರ ಮತ್ತು ನೆರೆ ಹಾವಳಿಯಿಂದ ಆದಂತಹ ನಷ್ಟಕ್ಕೆ ಪರಿಹಾರ ಹಣ ನೀಡಬೇಕೆಂದು, ನಾವು ಮಾನ್ಯ ಸುಪ್ರೀಂ ಕೋರ್ಟ್‌ಗೆ ಹೋಗಿ, ಅಲ್ಲಿಂದ ಆದೇಶ ಕೊಡುವವರೆಗೂ ಕೇಂದ್ರ ಸರ್ಕಾರ ನಮಗೆ ಪರಿಹಾರ

ಹಣ ಕೊಡಲಿಲ್ಲವೆಂದರೆ, ಬಿ.ಜೆ.ಪಿ. ಯ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ರಾಜ್ಯದ ಬಿ.ಜೆ.ಪಿ. ಯ ನಾಯಕರು ಇದ್ದಾರೆ, ಅವರು ರಾಜ್ಯದ ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಇನ್ನು ರಸ್ತೆಗಳು ಇರಬಹುದು, ಬೇರೆ ಬೇರೆ ಕೇಂದ್ರ ಪುರಸ್ಕೃತ ಯೋಜನೆಗಳಿರಬಹುದು, ಯಾವುದೇ ಯೋಜನೆಗಳಿಗೂ ಸಹ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೊಡಬೇಕಾದಂತಹ ಪಾಲನ್ನು ಕೊಟ್ಟಿರುವುದಿಲ್ಲ. ಜಿ.ಎಸ್.ಟಿ. ಪಾಲನ್ನು ಕೊಟ್ಟಿರುವುದಿಲ್ಲ. ನೀರಾವರಿ ಯೋಜನೆಗಳನ್ನು ಸಹ ಕೈಗೆತ್ತಿಕೊಂಡಿರುವುದಿಲ್ಲ. ಅದು ಮೇಕೆದಾಟು ಯೋಜನೆ ಇರಬಹುದು ಅಥವಾ ಕೃಷ್ಣಾ ಮೇಲ್ದಂಡೆ ಯೋಜನೆಗಳು ಇರಬಹುದು. ಈ ಯೋಜನೆಗಳಿಗಾಗಿ ಕೇಂದ್ರ ಬಜೆಟ್‌ನಲ್ಲಿ ಹಣ ಘೋಷಣೆ ಮಾಡಿಯೂ ಸಹ, ಆ ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೆ ರಾಜ್ಯದ ಬಿ.ಜೆ.ಪಿ. ನಾಯಕರಿಗೆ ಕೇಂದ್ರ ಸರ್ಕಾರದಲ್ಲಿ ಸಾಧ್ಯವಾಗಲಿಲ್ಲವೆಂದರೆ, ನೀವು ರಾಜ್ಯಕ್ಕೆ ಅನ್ಯಾಯ ಮಾಡಿದ್ದೀರಿ ಎಂದು ಅವರಿಗೆ ಅನಿಸುವುದಿಲ್ಲವೇ ಎನ್ನುವ ಪ್ರಶ್ನೆಯನ್ನು ನಾನು ಅವರಿಗೆ ಕೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಆಯಿತು, ಮಾನ್ಯ ಐವನ್ ಡಿ' ಸೋಜಾರವರೇ ಸಾಕು ದಯಮಾಡಿ ಕುಳಿತುಕೊಳ್ಳಿ. ಶ್ರೀ ರಮೇಶ್ ಬಾಬುರವರೇ, ಈಗ ತಾವು ಮಾತನಾಡಿ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ನಾನು 12.30 ಕ್ಕೆ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ಇಲ್ಲ ಆಗುವುದಿಲ್ಲ. ಒಂದು ನಿಮಿಷ ನನ್ನ ಮಾತನ್ನು ಕೇಳಿ. ನಾವು ತಮಗೆ 20 ನಿಮಿಷ ಕಾಲಾವಕಾಶ ನೀಡಿರುತ್ತೇವೆ. ಸಾಕು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಇನ್ನು ಎರಡು ವಿಷಯಗಳಿವೆ. ಅದನ್ನು ಹೇಳಿ 12.30 ಗಂಟೆಗೆ ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ಇಲ್ಲ, ನಾನು ಈಗಾಗಲೇ ಶ್ರೀ ರಮೇಶ್ ಬಾಬುರವರ ಹೆಸರನ್ನು ಕರೆದಿದ್ದೇನೆ. ತಾವು ಮುಕ್ತಾಯಗೊಳಿಸಿ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ತಾವು ಇಲ್ಲ ಎಂದು ಹೇಳಿದರೆ ನಾನು ನನ್ನ ಭಾಷಣವನ್ನು ಏನು ಸಿದ್ಧತೆ ಮಾಡಿಕೊಂಡು ಬಂದಿದ್ದೇನೆ, ಅದನ್ನು ಈಗಲೇ ತೆಗೆದುಕೊಂಡು ಹೋಗುತ್ತೇನೆ ಅಥವಾ ತಾವು ಅದನ್ನು ನೋಟ್ ಮಾಡಿಕೊಳ್ಳಿ.

**ಸಭಾಪತಿಯವರು:-** ಅದು ತಮಗೆ ಬಿಟ್ಟಿದ್ದು. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ಸಭಾನಾಯಕರೇ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು 37 ಜನ ಇದ್ದಾರೆ. ಅವರಿಗೆ ನಾನು 5 ಗಂಟೆ 30 ನಿಮಿಷ ಸಮಯಾವಕಾಶ ನೀಡಿದ್ದೇನೆ. ಭಾರತೀಯ ಜನತಾ ಪಕ್ಷದ ಸದಸ್ಯರು 29 ಜನ ಇದ್ದಾರೆ. ಅವರಿಗೆ ನಾನು 4 ಗಂಟೆ 15 ನಿಮಿಷ ಕಾಲಾವಕಾಶ ನೀಡಿದ್ದೇನೆ. ಜಾತ್ಯಾತೀತ ಜನತಾದಳ(ಎಸ್) ಪಕ್ಷದವರು 7 ಜನ ಇದ್ದು, ಅವರಿಗೆ 1 ಗಂಟೆ 02 ನಿಮಿಷ ಕಾಲಾವಕಾಶ ನೀಡಿದ್ದೇನೆ. ಪಕ್ಷೇತರರು ಒಬ್ಬರು ಇದ್ದು, ಅವರಿಗೆ 9 ನಿಮಿಷ ಕಾಲಾವಕಾಶ ನೀಡಿದ್ದೇನೆ. **(ಮುಂದು...)**

(073) 30.01.2026 ವೈಎಲ್-ವಿಕೆ 12.00 (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ನಾನು ನಿಗದಿಪಡಿಸಿರುವಂಥ ಸಮಯದೊಳಗೆ ತಾವೆಲ್ಲರೂ ತಮ್ಮ ಭಾಷಣವನ್ನು ಮುಗಿಸಬೇಕು. ಒಂದು ವೇಳೆ ತಾವೊಬ್ಬರೆ ಮಾತನಾಡುವುದಾದರೆ ಮಾತನಾಡಿ. ನನ್ನ ಅಭ್ಯಂತರವೇನಿಲ್ಲ. ನಾನು ಬೆಲ್ ಮಾಡಿದ ತರುವಾಯ ತಾವು ಕುಳಿತುಕೊಳ್ಳಬೇಕು. ತಾವೇನಾದರೂ ನಾನು ಬೆಲ್ ಮಾಡಿದ ಮೇಲೆಯೂ ಕುಳಿತುಕೊಳ್ಳಲಿಲ್ಲವೆಂದರೆ, ನಾನು ಸಹ ಏನು ಮಾಡಲು ಆಗುವುದಿಲ್ಲ. ನಾನು ಯಾರ ಹೆಸರನ್ನು ಉಲ್ಲೇಖ ಮಾಡುತ್ತೇನೆ ಅವರ ಸಮಯದ ಅವಧಿಯನ್ನು ಕಡಿತ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಪ್ರಮುಖ ಅಂಶದ ಬಗ್ಗೆ ಹೇಳುವುದೇನೆಂದರೆ,...

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ನಾನು ಈಗಾಗಲೇ ತಮಗೆ ಹೇಳಿದಂತೆ ತಮ್ಮ ಮಾತನ್ನು ಮುಕ್ತಾಯಗೊಳಿಸಬೇಕು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು 12 ಗಂಟೆ 30 ನಿಮಿಷಕ್ಕೆ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಆ ರೀತಿ ಆಗುವುದಿಲ್ಲ. ತಾವು ಹೇಳಿದ ಹಾಗೆ ನಾನು ಕೇಳಬೇಕಾ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನನ್ನ ಸಮಯ ಏನಿದೆ ಅದರಂತೆ ನಾನು ಮಾತನಾಡಬೇಕಾಗಿದ್ದು, ನನಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಈಗಾಗಲೇ ಸುಮಾರು 20 ನಿಮಿಷಗಳವರೆಗೂ ಮಾತನಾಡಿದ್ದು, ಮತ್ತೆಷ್ಟು ಸಮಯ ಕೊಡಬೇಕು? ಮತ್ತೆ ತಮಗೆ ಮಾತನಾಡಲು ಸಮಯ ಕೊಡಲು ಆಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದು ನನ್ನ ಪಕ್ಷದ ಸಮಯ. ನಾನು 12 ಗಂಟೆ 30 ನಿಮಿಷಕ್ಕೆ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಆ ರೀತಿ ಸಮಯ ಕೊಡಲು ಆಗುವುದಿಲ್ಲ. ಈಗಲೇ ತಮ್ಮ ಮಾತನ್ನು ಮುಗಿಸಬೇಕು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಕೊನೆಪಕ್ಷ 10 ನಿಮಿಷವಾದರೂ ನನಗೆ ಮಾತನಾಡಲು ಸಮಯಕೊಡಿ. 12 ಗಂಟೆ 10 ನಿಮಿಷದೊಳಗೆ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** 10 ನಿಮಿಷವೂ ಸಮಯ ಕೊಡಲು ಆಗುವುದಿಲ್ಲ. 5 ನಿಮಿಷದೊಳಗೆ ತಮ್ಮ ಮಾತನ್ನು ಮುಗಿಸಿ. ಮಾನ್ಯ ಸಭಾನಾಯಕರೇ, ಅವರು ಹೇಳಿದ ಹಾಗೆ ಕೇಳುವುದಕ್ಕೆ ನಾನು ಇಲ್ಲಿ ಇರುವುದಲ್ಲ. ಸ್ವಲ್ಪವೂ ಅರ್ಥ ಮಾಡಿಕೊಳ್ಳುವುದಿಲ್ಲವೆಂದರೆ ಹೇಗೆ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಮನರೇಗಾ ಯೋಜನೆಯ ಅನೇಕ ವಿಚಾರಗಳನ್ನು ಸದನದ ಮುಂದೆ ತಂದು, ತಮ್ಮ ಭಾಷಣದ ಮೂಲಕ ವ್ಯಕ್ತಪಡಿಸಿದ್ದಾರೆ. ಯಾವುದೇ ಒಂದು ರಾಜ್ಯವೂ ಮನರೇಗಾ ಯೋಜನೆಗೆ ಸುಮಾರು ರೂ.86,000 ಕೋಟಿಗಳಷ್ಟು ಭರಿಸುತ್ತದೆ. ಆ ರೀತಿ ಇದ್ದಾಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಂಪರ್ಕ ಹೇಗೆ ಇರಬೇಕು? ಸುಮಾರು ರೂ.86,000 ಕೋಟಿಗಳಷ್ಟು ಭರಿಸುವಂಥ ಯೋಜನೆಯಾಗಿದ್ದು, ಸುಮಾರು 20 ವರ್ಷಗಳಿಂದ ಜಾರಿಯಲ್ಲಿದೆ. ಪ್ರತಿಯೊಂದು

ಗ್ರಾಮಗಳಲ್ಲಿ ಅತ್ಯಂತ ಯಶಸ್ವಿಯಾಗಿರುವಂಥ ಯೋಜನೆಯಾಗಿದ್ದು, ಭಾರತ ದೇಶದ ಈ ಯೋಜನೆಯನ್ನು ಇಡೀ ಪ್ರಪಂಚವೇ ಮೆಚ್ಚುಕೊಂಡಿದೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿಸೋಜಾರವರು ಮನರೇಗಾ ಯೋಜನೆ ವಿಚಾರವಾಗಿ ಮಾತನಾಡಲು ಬೇರೆ ದಿನ ಇದೆ. ಹಾಗಾಗಿ, ಅದನ್ನು ಬಿಟ್ಟು, ಬೇರೆ ವಿಚಾರಗಳವೆ ಅದರ ಬಗ್ಗೆ ಮಾತನಾಡಲಿ.

**ಸಭಾಪತಿಯವರು:–** ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಬೇಕಾದಂಥ ವಿಚಾರಗಳನ್ನು ಮಾತನಾಡಬಹುದು, ಮಾತನಾಡಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮನರೇಗಾ ಯೋಜನೆಯನ್ನು ತೆಗೆದು, refill ಮಾಡಿ 'ವಿಬಿ ಜಿ ರಾಮ್ ಜಿ' ಎನ್ನುವಂಥ ಯೋಜನೆಯನ್ನು ಜಾರಿಗೆ ತಂದಿದ್ದು, ಅದರ ಉದ್ದೇಶವೇನು? ಗ್ರಾಮೀಣ ಭಾಗದ ಯೋಜನೆಯಾಗಿದ್ದು, ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿದ್ದಾಗ ಈ ಯೋಜನೆ ಕುರಿತು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಬಹಳ ಸಲ ಉಲ್ಲೇಖಿಸಲಾಗಿದ್ದು, ಇದೊಂದು ಬಹಳ ದೊಡ್ಡ ಯೋಜನೆ ಎಂದು ಹೇಳಲಾಗಿದೆ. ಈ ಯೋಜನೆ ಬಹಳ ಉಪಕಾರಿಯಾದ ಯೋಜನೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು 11 ವರ್ಷಗಳು ಕಳೆದಿದ್ದು, ಈ ಯೋಜನೆಯನ್ನು ನಡೆಸಿಕೊಂಡು ಬಂದಿದ್ದಾರೆ. ಆದರೆ, ಮನರೇಗಾ ಎನ್ನುವ ಬದಲು 'ವಿಬಿ  ಜಿ ರಾಮ್ ಜಿ' ಎಂದು ಬದಲಾವಣೆ ಮಾಡಿರುವ ಸಿಟ್ಟಿನ ಉದ್ದೇಶವೇನು? ಅದರ ಉದ್ದೇಶವೇನೆಂದರೆ, ಮನರೇಗಾ ಯೋಜನೆಯೂ ಮಹಾತ್ಮಗಾಂಧೀಜಿಯವರ ಹೆಸರಿನಲ್ಲಿದೆ. ಇವತ್ತು ಮಹಾತ್ಮಗಾಂಧೀಜಿಯವರು ಹುತಾತ್ಮರಾದ ದಿನವಾಗಿದ್ದು, ಅವರ ಪುತ್ಥಳಿಕೆ ಹತ್ತಿರ ಹೋಗಿ ನಮನವನ್ನು ಸಲ್ಲಿಸಿದ್ದೇನೆ. ಮಹಾತ್ಮಗಾಂಧೀಜಿಯವರು ಈ ದೇಶದ ಯಾವುದೇ ಹುದ್ದೆಯನ್ನು ಬಯಸಿಲ್ಲ. ಮಹಾತ್ಮ ಎನ್ನುವ ಹೆಸರನ್ನು ಇಡೀ ಪ್ರಪಂಚವೇ ಒಪ್ಪಿಕೊಂಡಿದೆ. ಸುಮಾರು ೮೦ ಕ್ಕಿಂತ ಹೆಚ್ಚು ರಾಷ್ಟ್ರಗಳು ಮಹಾತ್ಮಗಾಂಧೀಜಿಯವರ ತತ್ವ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ. ಆ ರೀತಿ ಇದ್ದರೂ ಕೂಡ ಅವರ ಹೆಸರನ್ನು ತೆಗೆಯಬೇಕೆಂಬ ಒಂದೇ ಉದ್ದೇಶ ಈ ಯೋಜನೆಯಲ್ಲಿದೆ. 'ವಿಬಿ  ಜಿ ರಾಮ್ ಜಿ' ಎನ್ನುವ ಹೆಸರೇನಿದೆ, it is nothing but ಮಹಾತ್ಮಗಾಂಧೀಜಿಯವರ ಹೆಸರನ್ನು ತೆಗೆಯಬೇಕು ಎನ್ನುವಂಥದ್ದಾಗಿದೆ. ಆಗಲಿ, ಮಹಾತ್ಮಗಾಂಧೀಜಿಯವರ ಹೆಸರನ್ನು ತೆಗೆಯಲಿ. ಅವರ ಉದ್ದೇಶದಂತೆ ಮಹಾತ್ಮಗಾಂಧೀಜಿಯವರ ಹೆಸರನ್ನು

ತೆಗೆದರೆ ಪರವಾಗಿಲ್ಲ. ಆದರೆ, ಬಡವರ ಹೊಟ್ಟೆ ಮೇಲೆ ಏತಕ್ಕೆ ಹೊಡೆದಿದ್ದಾರೆ? ಕಾರ್ಮಿಕರ ಹೊಟ್ಟೆ ಮೇಲೆ ಏತಕ್ಕೆ ಹೊಡೆದಿದ್ದಾರೆ? 100 ದಿವಸಗಳ ಕಾಲ ಅವರಿಗೆ ಕೆಲಸ ಕೊಡಬೇಕೆನ್ನುವುದಾಗಿತ್ತು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 100 ದಿವಸಗಳಲ್ಲ, 125 ದಿವಸಗಳು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, 125 ದಿವಸಗಳು ಕೆಲಸ ನೀಡುತ್ತೇವೆ ಎನ್ನುವ ಬದಲಾಗಿ ಖಾಯಂ ಆಗಿ ಅವರನ್ನು ಕೆಲಸದಿಂದ ತೆಗೆಯುವಂಥ ಒಂದು fake ಯೋಜನೆ, ಡೊಂಗಿ ಶಾಸನ, ಮರಣ ಶಾಸನ ಎಂದು ಏನಾದರೂ ಇದ್ದರೆ ಅದು 'ವಿಬಿ ಜಿ ರಾಮ್ ಜಿ' ಯೋಜನೆ ಎಂದು ಹೇಳಬಯಸುತ್ತೇನೆ. ನಾನು ಸಹ ಗ್ರಾಮೀಣ ಭಾಗದಿಂದ ಬಂದಿದ್ದು, ಮಂಡಲ್ ಪಂಚಾಯಿತಿಯಿಂದ ಕೆಲಸ ಮಾಡಿಕೊಂಡು ಬಂದಿದ್ದೇನೆ. ಗ್ರಾಮೀಣ ಜನತೆಯ ಕಷ್ಟಗಳು ನನಗೆ ಗೊತ್ತಿದೆ. 100 ದಿನಗಳು ಉದ್ಯೋಗಖಾತ್ರಿ ಇತ್ತು, ಅವರು ತಂದಿರುವಂಥ ಯೋಜನೆಯಲ್ಲಿ ಏನಾದರೂ ಖಾತ್ರಿ ಇದೆಯೇ? ಖಾತ್ರಿಯನ್ನು ತೆಗೆದು ಹಾಕಿ, ಕತ್ತರಿ ಹಾಕಿ, ಈ ರಾಜ್ಯವನ್ನು ಹರಾಜು ಮಾಡುವಂಥ ಕೆಲಸ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಪೀಠದ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ರಾಜ್ಯವನ್ನು ಅರಾಜಕತೆ ಮಾಡಲಿಕ್ಕೆ ಬಿ.ಜೆ.ಪಿ.ಯವರು ಹೊರಟಿದ್ದಾರೆ. ಯಾವಾಗ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿಯವರು ಅಧಿಕಾರಕ್ಕೆ ಬಂದರೂ ಆ ದಿನದಿಂದಲೇ ಈ ದೇಶದ ಚರಿತ್ರೆ ಎಂದು ಹೇಳುವ ಮೂಲಕ ಪ್ರಾಜೆಕ್ಟ್ ಕೊಡುವಂಥ ಕೆಲಸವನ್ನು ಬಿ.ಜೆ.ಪಿ.ಯವರು ಮಾಡುತ್ತಿದ್ದಾರೆ. ನಾನು ಸಹ ಬಹಳ ಸಂಯಮದಿಂದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಹೆಸರಿನಲ್ಲಿ ರಸ್ತೆ ಇದೆ ಅದನ್ನು ನಾವು ಒಪ್ಪಿಕೊಂಡಿಲ್ಲವೇ? ಸಂಯುಕ್ತ ವ್ಯವಸ್ಥೆ ಮತ್ತು ಒಕ್ಕೂಟದ ವ್ಯವಸ್ಥೆಯಲ್ಲಿ ಯಾರು ದೇಶಕ್ಕಾಗಿ ಕೆಲಸ ಮಾಡಿದ್ದಾರೆ, ಯಾರು ದೇಶಕ್ಕಾಗಿ ನಾಯಕತ್ವವನ್ನು ತಂದು ಕೊಟ್ಟಿದ್ದಾರೆ, ಸಾಮಾಜಿಕವಾಗಿ ಕೆಲಸ ಮಾಡಿದ್ದಾರೆ ಅಂಥವರನ್ನು ಗೌರವಿಸುವುದು ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲರೂ ಒಪ್ಪಲೇಬೇಕಾದ ವಿಚಾರವಾಗಿದೆ. ಆದರೆ, ಇವತ್ತು ಮಹಾತ್ಮಗಾಂಧೀಜಿಯವರ ಹೆಸರನ್ನು ತೆಗೆದುಹಾಕಿದ್ದಾರೆ. ಒಂದು

ವೇಳೆ ಈ ಯೋಜನೆಯನ್ನು ಮತ್ತಷ್ಟು ಗಟ್ಟಿ ಮಾಡಿದ್ದೇವೆ ಎಂದು ಹೇಳುವುದಾದರೆ, ಅವರಿಗೆ ಕೊಡುವ ಸಂಬಳ ಏನಿದೆ, ಅದನ್ನು ರೂ.೩೫೯ ರಿಂದ ರೂ.೪೦೦ ವರೆಗೂ ಕೊಡಬಹುದಾಗಿತ್ತಲ್ಲವೇ? ಏತಕ್ಕೆ ಕೊಡಲಿಲ್ಲ?

**ಸಭಾಪತಿಯವರು:–** ಮಾನ್ಯ ಐವನ್ ಡಿಸೋಜಾರವರೇ ತಮ್ಮ ಸಮಯ ಮುಗಿದಿದೆ ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬುರವರು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಹಾಗಾಗಿ, ನಾನು ಹೇಳುವುದೇನೆಂದರೆ, ಈ ಯೋಜನೆಯನ್ನು ಮರುಸ್ಥಾಪನೆ ಮಾಡಬೇಕು.

**ಸಭಾಪತಿಯವರು:–** ಮಾನ್ಯ ಐವನ್ ಡಿಸೋಜಾರವರೇ,...

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಎಲ್ಲಿಯವರೆಗೂ ಮರುಸ್ಥಾಪನೆ ಮಾಡುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಹೋರಾಟ ಇದ್ದೇ ಇರುತ್ತದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ತಾವಾದರೂ ಮಾನ್ಯ ಐವನ್ ಡಿ'ಸೋಜಾರವರಿಗೆ ಕುಳಿತುಕೊಳ್ಳಲು ಹೇಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಎರಡೂ ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ಈ ಯೋಜನೆಗಳನ್ನು ತಂದು, ತೆಗೆದು ಬಿಸಾಕುವಂಥದು ಹೊಸದೇನಲ್ಲ. ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿದ್ದಾಗ ಎ.ಪಿ.ಎಂ.ಸಿ. ಕಾಯ್ದೆಯನ್ನು ಜಾರಿಗೆ ತಂದರು. ಆ ಕಾಯ್ದೆ ಜಾರಿಗೆ ತಂದು ರೈತರ ಮೇಲೆ ಟ್ರಾಕ್ಟರ್ ಓಡಿಸಿ, ರೈತರನ್ನು ಕೊಂದು ಹಾಕಿದರು. ರೈತರು ಹೋರಾಟ ಮಾಡಿದರು. ಕೊನೆಗೆ ರೈತರ ಆಶೋತ್ತರಗಳಿಗೆ ತಲೆಬಾಗಿ ಆ ಕಾಯ್ದೆಯನ್ನು ಹಿಂಪಡೆಯಲಾಗಿತ್ತು.

**ಸಭಾಪತಿಯವರು:–** ಮಾನ್ಯ ರಮೇಶ್ ಬಾಬುರವರೇ, ತಮ್ಮ ಮಾತನ್ನು ಪ್ರಾರಂಭಿಸಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅದೇ ರೀತಿ ಮನರೇಗಾ ಕಾಯ್ದೆ ಮತ್ತೆ ಜಾರಿಗೆ ಬರುತ್ತದೆ.

**ಸಭಾಪತಿಯವರು:– ಮತ್ತೇ ಏನೇ ಮಾತನಾಡಿದರೂ ಅದ್ಯಾವುದೂ ಕಡತಕ್ಕೆ ಹೋಗುವುದಿಲ್ಲ.**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಐವನ್ ಡಿ'ಸೋಜಾರವರು ರಾಜ್ಯಪಾಲರ ಭಾಷಣದ ಮೇಲೆ ಒಟ್ಟು 1 ಗಂಟೆ 40 ನಿಮಿಷ ಮಾತನಾಡಿದ್ದಾರೆ. ಮತ್ತೇ ಸಮಯ ಕೊಡಲು ಆಗುವುದಿಲ್ಲ. ಈ ರೀತಿ ಮಾಡಿದರೆ ಆಗುವುದಿಲ್ಲ. ಮಾತನ್ನು ಮುಗಿಸಿ ಎಂದ ಮೇಲೆ ಮುಗಿಸಬೇಕು.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾನು ಸಹ ಮಾನ್ಯ ಐವನ್ ಡಿ'ಸೋಜಾರವರಿಗೆ ಕುಳಿತುಕೊಳ್ಳಲು ಹೇಳಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಇನ್ನೂ ಸ್ವಲ್ಪ ಸಮಯ ಕೊಡದೇ ಇರುವ ಕಾರಣಕ್ಕಾಗಿ ನಾನು ಪ್ರತಿಭಟಿಸಿ ಸದನದ ಬಾವಿಗೆ ಬರುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಐವನ್ ಡಿ'ಸೋಜಾರವರು ಸದನದ ಬಾವಿಯೊಳಗೆ ಬಂದು ಧರಣಿ ನಿರತರಾದರು)**

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮನೆಗೆ ಹೋಗಿ. ಮಾನ್ಯ ಸಭಾನಾಯಕರೇ, ಮಾನ್ಯ ಐವನ್ ಡಿ'ಸೋಜಾರವರು ಒಟ್ಟು 1 ಗಂಟೆ 40 ನಿಮಿಷ ಮಾತನಾಡಿದ್ದು, ಮತ್ತೆ ಸಮಯ ಕೇಳುತ್ತಿದ್ದಾರೆ. ಮಾನ್ಯ ರಮೇಶ್ ಬಾಬುರವರೇ, ತಾವು ಮಾತನಾಡಿ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನಗೆ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ: 22.01.2026 ರಂದು ಘನತೆವೆತ್ತ ರಾಜ್ಯಪಾಲರು ಜಂಟಿ ಸದನವನ್ನುದ್ದೇಶಿಸಿ 50 ಪುಟಗಳ, 122 ಪ್ಯಾರಾಗಳ ಭಾಷಣವನ್ನು ಮಂಡಿಸಿದ್ದಾರೆ, ಅದನ್ನು ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಈ ಸದನದಲ್ಲಿ ಮಂಡನೆ ಮಾಡಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಐವನ್ ಡಿ'ಸೋಜಾರವರೇ, ಸದನದ ಬಾವಿಯಲ್ಲಿ ಧರಣಿ ನಿರತರಾಗುವುದು ಬೇಡ. ದಯವಿಟ್ಟು ಹೊರಗೆ ಬನ್ನಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಟ್ಟು 1 ಗಂಟೆ 40 ನಿಮಿಷ ಮಾತನಾಡಿದ್ದು, ಬೇರೆಯವರು ಮಾತನಾಡುವುದು ಬೇಡವೇ? ಈ ರೀತಿಯಾದರೆ ನಾನು ಆಡಳಿತ ಪಕ್ಷದ ಬೇರೆ ಸದಸ್ಯರು ಮಾತನಾಡುವ

ಸಮಯವನ್ನು ಕಡಿತಗೊಳಸಬೇಕಾಗುತ್ತದೆ. ೨೨೦ ನಿಮಿಷಗಳಲ್ಲಿ ೧ ಗಂಟೆ ೪೦ ನಿಮಿಷವನ್ನು ಕಡಿತಗೊಳಸಬೇಕಾಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಐವನ್ ಡಿ'ಸೋಜಾರವರೇ, ಸದನದ ಬಾವಿಯಿಂದ ಹೊರಗೆ ಬನ್ನಿ.

**(ಈ ಹಂತದಲ್ಲಿ ಮಾನ್ಯ ಐವನ್ ಡಿ'ಸೋಜಾರವರು ತಮ್ಮ ಸ್ಥಾನಕ್ಕೆ ಮರಳಿದರು.)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಗೌರವಾನ್ವಿತ ಸದಸ್ಯರಾದ ಮಾನ್ಯ ಐವನ್ ಡಿ'ಸೋಜಾರವರು ಪ್ರಸ್ತಾವ ಮಾಡಿರುವಂಥ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಅನುಮೋದನೆ ಸಲ್ಲಿಸುತ್ತೇನೆ. ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಈ ರಾಜ್ಯದ ಮೊದಲನೇ ರಾಜ್ಯಪಾಲರಾಗಿದ್ದಾರೆ. ಈಗಿನ ರಾಜ್ಯಪಾಲರು ಈ ರಾಜ್ಯದ 19ನೇ ರಾಜ್ಯಪಾಲರಾಗಿದ್ದಾರೆ. ಸರ್ಕಾರ ಅಧಿಕಾರಕ್ಕೆ ಬಂದ ಮೊದಲನೆ ಅಧಿವೇಶನದಲ್ಲಿ ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನ ನಡೆಸುವುದು ಇಡೀ ದೇಶದಲ್ಲಿಯೇ ನಡೆದುಕೊಂಡು ಬಂದಿರುವಂಥ ಸಂಪ್ರದಾಯವಾಗಿದೆ. ನಾವು ಅಳವಡಿಸಿಕೊಂಡಿರುವಂಥ ಸಂವಿಧಾನವೇನಿದೆ, ಅದರನ್ವಯ ಬಹುತೇಕ ನಡೆಯಬೇಕು. ನಮ್ಮ ಸಂವಿಧಾನಕ್ಕೆ ಪ್ರೇರಿತವಾಗಿರುವಂಥದು ಬ್ರಿಟಿಷ್ ಸಂವಿಧಾನವಾಗಿದೆ. ಅಂದರೆ ದೇಶದಲ್ಲಿರುವ ಅನೇಕ ಸಂಪ್ರದಾಯವನ್ನು ನಾವು ಇಲ್ಲಿ ಅಳವಡಿಸಿಕೊಂಡಿದ್ದೇವೆ. ಅದೇ ರೀತಿ ರಾಜ್ಯದಲ್ಲಿ ರಾಜ್ಯಪಾಲರು ಮತ್ತು ರಾಷ್ಟ್ರಮಟ್ಟದಲ್ಲಿ ರಾಷ್ಟ್ರಪತಿಯವರನ್ನು Executive Head ಎಂದು ಪರಿಗಣಿಸಿ, ಗೌರವ ಕೊಡುವಂಥ ಸಂಪ್ರದಾಯವನ್ನು ಮಾಡಿಕೊಂಡು ಬಂದಿದ್ದೇವೆ. ಅದಕ್ಕೆ ಪೂರಕವಾಗಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಕರ್ನಾಟಕ ಸರ್ಕಾರದ ಆಶಯಗಳೇನಿವೆ, ಧ್ಯೇಯೋದ್ದೇಶಗಳೇನಿವೆ ಅದನ್ನು ಘನತೆವೆತ್ತ ರಾಜ್ಯಪಾಲರು ಅವರ ಭಾಷಣದ ಮೂಲಕ ಮಂಡನೆ ಮಾಡಿದ್ದಾರೆ. ಇವತ್ತು ಕರ್ನಾಟಕದಲ್ಲಿ ಎಷ್ಟೆಷ್ಟು ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಗೊಂಡಿದೆ; ಯಾವ್ಯಾವ ಇಲಾಖೆಗಳಲ್ಲಿ ಎಂತಹ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ತಂದಿದ್ದಾರೆ; ಮುಂದಿನ ದಿನಗಳಲ್ಲಿ ಸರ್ಕಾರದ ಆಶಯಗಳೇನಿವೆ; ಇವತ್ತು ಗ್ಯಾರಂಟಿ ಯೋಜನೆಗಳ ಮೂಲಕ ಈ ರಾಜ್ಯದ ಜನಸಾಮಾನ್ಯರಿಗೆ ಶಕ್ತಿ ಬಂದಿದೆ; ರಾಜ್ಯದ ಎಷ್ಟು ಫಲಾನುಭವಿಗಳಿಗೆ ಇದರ ಪ್ರಯೋಜನಾ ಸಿಗುತ್ತಿದೆ ಮತ್ತು ಬೇರೆ ಬೇರೆ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳ ಮೂಲಕ ಕಾರ್ಯಕ್ರಮವನ್ನು ಸರ್ಕಾರ ಕೊಡುತ್ತಿದೆ; ಇವೆಲ್ಲವನ್ನೂ ರಾಜ್ಯಪಾಲರ ಭಾಷಣದ ೫೦ ಪುಟಗಳ ವರದಿಯಲ್ಲಿ ಮಂಡನೆ ಮಾಡಲಾಗಿದೆ. ಆ ಕಾರಣಕ್ಕಾಗಿ ಘನತೆವೆತ್ತ ರಾಜ್ಯಪಾಲರನ್ನು ಅಭಿನಂದಿಸುತ್ತೇನೆ. ಸದರಿ ವರದಿಯಲ್ಲಿ ಮೊದಲನೆ ಪ್ಯಾರಾದಿಂದ ಹನ್ನೊಂದನೇ

ಪ್ಯಾರಾದವರೆಗೂ ಮನರೇಗಾ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಘನತೆವೆತ್ತ ರಾಜ್ಯಪಾಲರ ರಾಜ್ಯ ಸರ್ಕಾರದ ಪರವಾಗಿ ಪ್ರಸ್ತಾಪ ಮಾಡಿದ್ದು, ಏನು ಯೋಜನೆ ಇದೆ, ಅದರ ಲಾಭ ಏನಾಗುತ್ತಿದೆ; ಅದನ್ನು ತೆಗೆದರೆ ಗ್ರಾಮೀಣ ಪ್ರದೇಶದ ಜನರು ವಿಶೇಷವಾಗಿ Job Card ಮೂಲಕ ಪಂಚಾಯಿತಿಯಲ್ಲಿ ಕೆಲಸ ಪಡೆದುಕೊಳ್ಳುತ್ತಿದ್ದು; ಆ ರೈತರಿಗೆ ತೊಂದರೆಯಾಗುತ್ತದೆ ಎಂಬ ಅಂಶವನ್ನು ಪ್ರತಿಪಾದಿಸಿದ್ದಾರೆ.

(ಮುಂದು)

**(74) 30.01.2026/12.10/ಎಸ್‌ಕೆ-ವಿಕೆ ಸಭಾಪತಿಯವರ ಉಪಸ್ಥಿತಿ**

**ಶ್ರೀ ರಮೇಶ್ ಬಾಬು (ಮುಂದು):-**

ಆ ಕಾರಣಕ್ಕೋಸ್ಕರ ವಿಶೇಷವಾಗಿ, ಗೌರವಾನ್ವಿತ ರಾಜ್ಯಪಾಲರಿಗೆ ನಾನು ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ಇವತ್ತು ಮಹಾತ್ಮ ಗಾಂಧೀಜಿಯವರು ಹುತಾತ್ಮರಾದಂತಹ ದಿನವಾಗಿದೆ. ಈ ಸಂದರ್ಭದಲ್ಲಿ ಅವರ ಹೆಸರಿನಲ್ಲಿರುವ ಒಂದು ಕಾರ್ಯಕ್ರಮವಿತ್ತು. ಆ ಕಾರ್ಯಕ್ರಮದ ಅನಿವಾರ್ಯತೆಯನ್ನು ಪ್ರತಿಪಾದನೆ ಮಾಡುವ ಮೂಲಕ ಗೌರವಾನ್ವಿತ ರಾಜ್ಯಪಾಲರು ಕೇಂದ್ರ ಸರ್ಕಾರಕ್ಕೆ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದ ಪರವಾಗಿ ಮತ್ತು ನಾನು ವೈಯಕ್ತಿಕವಾಗಿ ಮಾನ್ಯ ರಾಜ್ಯಪಾಲರಿಗೆ ಅಭಿನಂದನೆಯನ್ನು ಸಲ್ಲಿಸಬಯಸತ್ತೇನೆ. ಮನರೇಗಾ ಕಾರ್ಯಕ್ರಮದ ನಂತರ ವಿಶೇಷವಾಗಿ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಐದು ಗ್ಯಾರಂಟಿಗಳ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಗೃಹಜ್ಯೋತಿ ಒಂದೇ ಯೋಜನೆಯಲ್ಲಿ ಮತ್ತು ಇತರೆ ಗ್ಯಾರಂಟಿಗಳ ಮುಖಾಂತರ 1,16,706 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಬಹುತೇಕ ಕಾಂಗ್ರೆಸ್ ಸರ್ಕಾರ universal basic income ಒಂದು ತತ್ವವನ್ನು ಇಟ್ಟುಕೊಂಡು, ಈ ರಾಜ್ಯದ ಜನರಿಗೆ ಆರ್ಥಿಕವಾಗಿ ಶಕ್ತಿಯನ್ನು ತುಂಬಬೇಕು ಮತ್ತು ಕೊಳ್ಳುವಂತಹ ಶಕ್ತಿಯನ್ನು ಹೆಚ್ಚು ಮಾಡಬೇಕು. ಜನಸಾಮಾನ್ಯರು ಯಾರ ಮೇಲೆ ಪರಾವಲಂಬಿಯಾಗದೇ ಸ್ವಾಲಂಬನೆಯಿಂದ ಮತ್ತು ಸರ್ಕಾರದ ಕಾರ್ಯಕ್ರಮಗಳ ಮೂಲಕ ಗೌರವಯುತವಾದ ಜೀವನವನ್ನು ನಡೆಸಬೇಕು ಎಂದು ಕರ್ನಾಟಕದಲ್ಲಿರುವ ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ತಂದಿದೆ. ಇದರಲ್ಲಿ ಎಷ್ಟು ಫಲಾನುಭವಿಗಳಿದ್ದಾರೆ. ಎಷ್ಟು ಅನುದಾನ ವಾರ್ಷಿಕವಾಗಿ ವೆಚ್ಚವಾಗುತ್ತಿದೆ. ಯಾವ್ಯಾವ ಯೋಜನೆಗಳಿಂದ ಯಾವ್ಯಾವ ರೀತಿಯಲ್ಲಿ ಜನಸಾಮಾನ್ಯರಿಗೆ

ಅನುಕೂಲವಾಗಿದೆ ಎಂಬ ಅಂಕಿ-ಅಂಶಗಳ ಈ ವರದಿಯ ಮುಖಾಂತರ ರಾಜ್ಯಪಾಲರು ಪ್ರಸ್ತಾಪವನ್ನು ಮಾಡಿದ್ದಾರೆ.

ಬ್ಯಾಂಕ್ ಖಾತೆಗಳಿಗೆ ಸರ್ಕಾರದಿಂದ ನಗದು ವರ್ಗಾವಣೆಯಾಗುತ್ತಿತ್ತು. 2022ರಲ್ಲಿ ಇದ್ದಂತಹ ಶೇ.9.3 ರಷ್ಟಿದ್ದದ್ದು 2024 ರಲ್ಲಿ ಶೇಕಡಾ 72 ಕ್ಕೆ ಏರಿಕೆಯಾಗಿದೆ. ಮಧ್ಯವರ್ತಿಗಳ ಹಾವಳಿ ಇಲ್ಲದೇ ಜನಸಾಮಾನ್ಯರಿಗೆ ಈ ಯೋಜನೆಯ ಪ್ರಯೋಜನ ದೊರಕಬೇಕು. ಮಧ್ಯವರ್ತಿಗಳ ಕಮಿಷನ್ ಇಲ್ಲದೇ, ಜನಸಾಮಾನ್ಯರಿಗೆ ಸರ್ಕಾರದ ಯೋಜನೆಯನ್ನು ತಲುಪಬೇಕು ಎಂಬ ನಿಟ್ಟಿನಲ್ಲಿ ಇವತ್ತು ಕಾಂಗ್ರೆಸ್ ಸರ್ಕಾರ ಕೈಗೊಂಡಿರುವಂತಹ ಕಾರ್ಯಕ್ರಮದಲ್ಲಿ ನೇರವಾಗಿ ಶೇಕಡಾ 72.7 ರಷ್ಟು ಏರಿಕೆಯ ಸಾಧನೆಯನ್ನು ಈ ಯೋಜನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಮಾಡಿದೆ. ಅದೇ ರೀತಿ ಗೃಹಲಕ್ಷ್ಮಿ ಯೋಜನೆಯ ಮುಖಾಂತರ ಕೆಳ ಹಂತದಲ್ಲಿ ದುಡಿಮೆ ಮಾಡುವಂತಹ ಮಹಿಳೆಯರಿಗೆ ಪ್ರತಿ ತಿಂಗಳು ರೂ.2,000 ರಾಜ್ಯ ಸರ್ಕಾರ ಕೊಡುತ್ತಿದೆ. ಆ ಹಣ ಉಳಿತಾಯವಾಗುವುದರ ಮೂಲಕ ಅವರು ಆ ಹಣವನ್ನು ಮಕ್ಕಳ ವಿದ್ಯಾಭ್ಯಾಸ, ಜೀವನ ನಿರ್ವಹಣೆ, ಆರೋಗ್ಯಕ್ಕೆ ವಿನಿಯೋಗಿಸುವುದಕ್ಕೆ ಅವಕಾಶವಾಗಿದೆ. ಇದೊಂದು ವಿಶೇಷವಾದಂತಹ ಕಾರ್ಯಕ್ರಮವಾಗಿದೆ. ಇಡೀ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಮೊದಲ ಬಾರಿಗೆ ಜಾರಿಗೆ ತಂದಿರುವಂತಹದ್ದು. ಇತರೆ ರಾಜ್ಯಗಳು ಇದನ್ನು ಅನುಕರಣೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವಂತಹದ್ದು ಕರ್ನಾಟಕದ ಕಾಂಗ್ರೆಸ್ ಸರ್ಕಾರ. "ಹಸಿವು ಮುಕ್ತ ಕರ್ನಾಟಕ"ದ ಕನಸನ್ನು ಕಂಡಂತಹ ಸನ್ಮಾನ್ಯ ಸಿದ್ದರಾಮ್ಯನವರು ಕರ್ನಾಟಕದಲ್ಲಿ "ಅನ್ನಭಾಗ್ಯ" ಯೋಜನೆಯ ಮೂಲಕ ಬಡ ಜನರ ಹಸಿವನ್ನು ನೀಗಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಅದರ ಮುಂದುವರೆದ ಭಾಗವಾಗಿ ಪ್ರತಿ ಕುಟುಂಬಗಳಿಗೆ ಪ್ರತಿ ವ್ಯಕ್ತಿಗೆ 10 ಕೆ.ಜಿ. ಅಕ್ಕಿ ಅಥವಾ ಅವರಿಗೆ ಹಣದ ಮೂಲಕ ಶಕ್ತಿಯನ್ನು ತುಂಬುವಂತಹ ಕಾರ್ಯಕ್ರಮವನ್ನು ಈ ರಾಜ್ಯ ಸರ್ಕಾರ ಕೊಟ್ಟಿದೆ ಎಂಬ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ವಿಶೇಷವಾಗಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಗೃಹಲಕ್ಷ್ಮಿ ಯೋಜನೆಯಲ್ಲಿ "ಗೃಹಲಕ್ಷ್ಮಿ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ"ಯನ್ನು ಸ್ಥಾಪಿಸಲಾಗಿದೆ. ಇದರ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಅಮೂಲಗ್ರವಾದ ಬದಲಾವಣೆಯನ್ನು ಮಾಡಿ, ಈ ಗೃಹಲಕ್ಷ್ಮಿ ಯೋಜನೆ ಮತ್ತಷ್ಟು ಪ್ರಯೋಜನ ಹಾಗೂ ಫಲಕಾರಿಯಾಗಿ ಮಹಿಳೆಯರಿಗೆ ತಲುಪಬೇಕೆಂಬ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮವನ್ನು

ಕೈಗೊಂಡಿದೆ. ಕೃಷಿಗೆ ಸಂಬಂಧಪಟ್ಟಂತೆ, ಕೃಷಿ ಯಂತ್ರಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡುವುದರ ಮೂಲಕ 1.31 ಲಕ್ಷ ಫಲಾನುಭವಿ ರೈತರಿಗೆ ಈ ರಾಜ್ಯದಲ್ಲಿ ಇವತ್ತು ಅನುಕೂಲವಾಗುತ್ತಿದೆ. ಎಸ್.ಡಿ.ಎಂ.ಎಫ್., ಅಡಿಯಲ್ಲಿ ರೂ.235 ಕೋಟಿ ವೆಚ್ಚದ ಕಾಮಗಾರಿಗಳನ್ನು ಮಾಡಿದ್ದು, ರೈತರಿಗೆ ಅನುಕೂಲವಾಗುವಂತಹ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿದೆ. ರೂ.966.33 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆಯನ್ನು ರಾಜ್ಯ ಸರ್ಕಾರ ಕೊಟ್ಟಿದೆ. ತೋಟಗಾರಿಕೆ ಇಲಾಖೆಯ ಮೂಲಕ ರೈತರಿಗೆ ಪ್ರೋತ್ಸಾಹಧನವನ್ನು ಕೊಟ್ಟು, ಇವತ್ತು ಅವರಿಗೆ ಶಕ್ತಿಯನ್ನು ತುಂಬುವಂತಹ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿದೆ. ಏಷಿಯಾ ಖಂಡದಲ್ಲಿ ದೊಡ್ಡ ರೇಷ್ಮೆ ಮಾರುಕಟ್ಟೆಗಳಾದ ರಾಮನಗರ ಮತ್ತು ಶಿಡ್ಲಘಟ್ಟಗಳಲ್ಲಿ ರೂ.400 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಿರುವಂತಹದ್ದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪ್ರಧಾನ ಮಂತ್ರಿ "ಫಸಲ್ ಬಿಮಾ" ಯೋಜನೆಯ ಸಮರ್ಥ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯ ಕೃಷಿ ಇಲಾಖೆಗೆ ದ್ವಿತೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇಡೀ ದೇಶದಲ್ಲಿ ಕರ್ನಾಟಕ ಕೃಷಿ ಇಲಾಖೆ ಎರಡನೇ ಪ್ರಶಸ್ತಿಯನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡಿದೆ. ರಾಜ್ಯದಲ್ಲಿರುವಂತಹ ಕಾರ್ಯಕ್ರಮಗಳನ್ನು ಒಪ್ಪಿಕೊಂಡು ಕೃಷಿ ಇಲಾಖೆಗೆ ಪ್ರಶಸ್ತಿಯನ್ನು ಕೊಡುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ.

ಮಾನ್ಯ ಸಭಾಪತಿಯವರೇ, 2025-26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತರಿಗಾಗಿ ಸುಮಾರು 9,000ಕ್ಕೂ ಹೆಚ್ಚು ಬೋರ್‌ವೆಲ್‌ಗಳನ್ನು ಕರ್ನಾಟಕ ರಾಜ್ಯ ಸರ್ಕಾರ ಕೊಟ್ಟಿದೆ. ಅದೇ ರೀತಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಕ್ಕೆ ಸುಮಾರು 75,563 ಎಕರೆ ಜಮೀನನ್ನು ಒಂದೇ ಹಂತದಲ್ಲಿ ಸ್ವಾಧೀನಪಡಿಸಿಕೊಂಡು, ಈ ಯೋಜನೆಯನ್ನು ಜಾರಿ ಮಾಡಿ ಸಾವಿರಾರು ಜನ ರೈತರಿಗೆ ಅನುಕೂಲ ಮಾಡುವಂತಹ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಇವತ್ತು ಕಾಂಗ್ರೆಸ್ ಸರ್ಕಾರ ಮಾಡಿದೆ. ಸುಮಾರು 59,181 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ನಮ್ಮ ಸರ್ಕಾರ ಕೊಟ್ಟಿದೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಇನ್ನೂ ಮಾಡಿಲ್ಲ. ಮಾಡುವಂತಹ ಭರವಸೆಯನ್ನು ಕೊಟ್ಟಿದ್ದೀರಿ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು, ನಾನು yield ಆಗಿಲ್ಲ. ಅವರು ಮಾತನಾಡುವುದಕ್ಕೆ ಇನ್ನೂ ಅವಕಾಶವಿದೆ. ಮಾನ್ಯ ಸದಸ್ಯರಿಗೆ ಮಾತನಾಡಲು ಮಾನ್ಯ ಸಭಾಪತಿಯವರು ಅವಕಾಶ ಕೊಟ್ಟಾಗ ಅವರು ಮಾತನಾಡಲಿ. ಅದನ್ನು ಮಾಡಿದ್ದಾರೋ ಅಥವಾ ಮಾಡಿಲ್ಲ ಎನ್ನುವ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ.

**ಶ್ರೀ ಪಿ.ಹೆಚ್. ಪೂಜಾರ್:-** ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ.

**ಶ್ರೀ ರಮೇಶ್ ಬಾಬು:-** ನಾನು ಮಾನ್ಯ ಸದಸ್ಯರ ಅನುಮತಿಯನ್ನು ತೆಗೆದುಕೊಂಡು ವಿಷಯ ಹೇಳಬೇಕಾಗಿಲ್ಲ. ಕ್ಷಮೆ ಇರಲಿ. ಕಂದಾಯ ಇಲಾಖೆಯಲ್ಲಿ 30,662 ಗ್ರಾಮ ನಕಾಶೆ ಹಾಗೂ ಹಿಸ್ಸಾ ದಾಖಲೆಗಳಿಗೆ digitize ಮಾಡಿದ್ದಾರೆ. ಕಂದಾಯ ಇಲಾಖೆಯ ಬಗ್ಗೆ ನೋಡುವುದಾದರೆ, ಅಲ್ಲಿ ಸಹ "ಪೋಡಿ ಕಾರ್ಯಕ್ರಮ" ಇರಬಹುದು. ರೈತರಿಗೆ "ಪೌತಿ ಖಾತೆ" ಇರಬಹುದು. "ಹಿಸ್ಸಾ ಬದಲಾವಣೆ" ಇರಬಹುದು. ಈ ತರಹ ಅನೇಕ ಕಾರ್ಯಕ್ರಮಗಳನ್ನು ಕಂದಾಯ ಇಲಾಖೆಯಲ್ಲಿ ಮಾಡಿದ್ದೇವೆ. "ಪೋಡಿ ಮುಕ್ತ ಗ್ರಾಮ ಅಭಿಯಾನ"ದ ಮೂಲಕ 3,216 ಗ್ರಾಮಗಳಲ್ಲಿ ಅಳತೆ ಕಾರ್ಯವನ್ನು ಕಂದಾಯ ಇಲಾಖೆ ಪೂರ್ಣ ಮಾಡಿದೆ. ಅದೇ ರೀತಿ 1,11,111 ಹಕ್ಕುಪತ್ರಗಳನ್ನು ವಿತರಿಸಲಾಗಿದೆ. 3,07,225 ಅರ್ಜಿಗಳ ಆಧಾರದ ಮೇಲೆ "ಇ-ಪೌತಿ" ಖಾತೆ ಮೇಲೆ ಖಾತೆ ಬದಲಾವಣೆಗೆ ಕಂದಾಯ ಇಲಾಖೆಯಲ್ಲಿ ಕ್ರಮವನ್ನು ಕೈಗೊಂಡಿದ್ದಾರೆ.

ಅದೇ ರೀತಿ ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಸುಮಾರು 23,000 ಯಾತ್ರಾರ್ಥಿಗಳಿಗೆ ಸಹಾಯಧನ ನೀಡಲಾಗಿದೆ. ಬೆಂಗಳೂರಿನಲ್ಲಿ ರೂ.27 ಕೋಟಿ ವೆಚ್ಚದಲ್ಲಿ ಧಾರ್ಮಿಕ ಸೌಧ ನಿರ್ಮಾಣಕ್ಕೆ ಚಾಲನೆಯನ್ನು ಧಾರ್ಮಿಕ ದತ್ತಿ ಇಲಾಖೆಯ ಮಾನ್ಯ ಸಚಿವರು ಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ನೀತಿ ಏನಿದೆ, ಅದು ಕರ್ನಾಟಕ ಜನಸಾಮಾನ್ಯರ ಪರವಾಗಿದೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಾಮಾಜಿಕ ಭದ್ರತಾ ಮಾಸಿಕ ಪಿಂಚಣಿ ಯೋಜನೆಯಲ್ಲಿ 1,0835 ಕೋಟಿ ರೂ.ಗಳನ್ನು ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯ ಮೂಲಕ ಪಾವತಿ ಮಾಡಲಾಗಿದೆ. ಇದನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ತಿಳಿಸುವುದರ ಮುಖಾಂತರ ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪುವಂತಹ ಕೆಲಸವನ್ನು ಮಾಡಿದ್ದಾರೆ. ಇವತ್ತು ರೂ.193 ಕೋಟಿ ರೂಪಾಯಿಗಳ ವೆಚ್ಚದಲ್ಲಿ 6,000 ಸಾಮರ್ಥ್ಯದ ಬೃಹತ್

ಮಹಿಳಾ ವಸತಿ ನಿಲಯಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮಾಡಬೇಕು. ಅದರ ನಿರ್ಮಾಣ ಕಾರ್ಯಕ್ಕೆ ಇವತ್ತು ರಾಜ್ಯ ಸರ್ಕಾರ ಚಾಲನೆಯನ್ನು ಕೊಟ್ಟಿದೆ.

ಐ.ಟಿ–ಬಿ.ಟಿ ವಿಚಾರದ ಬಗ್ಗೆ ಕೆಲವೊಂದು ಅಂಶಗಳನ್ನು ಹೇಳಬೇಕಾಗುತ್ತದೆ. ಇಡೀ ದೇಶದಲ್ಲಿ Artificial Intelligence ಗೆ ಇವತ್ತು ಕರ್ನಾಟಕ ಒಂದು ಜನ್ಮಸ್ಥಳ. ಇಡೀ ದೇಶದಲ್ಲಿ Artificial Intelligence ಗೆ ಐಟಿ–ಬಿಟಿ ಮುಖಾಂತರ ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಐಟಿ–ಬಿಟಿ ಕಾರ್ಯದರ್ಶಿಯವರು ನಿನ್ನೆ ಮಾಧ್ಯಮಗಳಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ರಾಜ್ಯ ಸರ್ಕಾರದ ಐ.ಟಿ–ಬಿ.ಟಿ ಇಲಾಖೆಯವರು "ಬಿಟಿಎಸ್–2025"ರ ಸಮ್ಮೇಳನ ಮಾಡಿದರು. ಇದರಲ್ಲಿ ಸುಮಾರು 92,500 ಜನರು ಭಾಗಿಯಾಗಿದ್ದಾರೆ. ಈ ಸಮ್ಮೇಳನಕ್ಕೆ 57 ವಿವಿಧ ದೇಶಗಳು ಭಾಗವಹಿಸಿದ್ದಾರೆ ಎಂಬ ಬಗ್ಗೆ ಈ ಕರ್ನಾಟಕ ಹೆಮ್ಮೆಯ ವಿಚಾರವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ವಿಶೇಷವಾಗಿ, Space Technology, Artificial Intelligence, Bio–Technology, Deep Technology ಸೇರಿದಂತೆ, ಹಲವಾರು ಕ್ಷೇತ್ರಗಳಲ್ಲಿ ಹೂಡಿಕೆದಾರರು ರಾಜ್ಯ ಸರ್ಕಾರಕ್ಕೆ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಆ ಕಾರಣಕ್ಕೆ ಕರ್ನಾಟಕ ರಾಜ್ಯ ದೇಶದ ಇತರೆ ರಾಜ್ಯಗಳಿಗೆ ಆದರ್ಶ ಮಾದರಿ ರಾಜ್ಯವಾಗಿ ಇವತ್ತು ಮುಂದೆ ಹೋಗುತ್ತಿದೆ. ಆ ಕಾರಣಕ್ಕೋಸ್ಕರ ಐಟಿ–ಬಿಟಿ ಇಲಾಖೆಯ ಸಚಿವರಿಗೆ ಮತ್ತು ಕರ್ನಾಟಕ ಸರ್ಕಾರಕ್ಕೆ ನಾನು ತಮ್ಮ ಮೂಲಕ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ಜಾಗತಿಕ ತಂತ್ರಜ್ಞಾನ ಕೇಂದ್ರದ ಮುಖಾಂತರ 57 ದೇಶಗಳು ಭಾಗವಹಿಸುವುದರ ಜೊತೆಗೆ ಏಷಿಯಾದ ಅತಿ ದೊಡ್ಡ Sustainable Tech Summit ನ್ನು ಕರ್ನಾಟಕ ರಾಜ್ಯದ ಐಟಿ–ಬಿಟಿ ಇಲಾಖೆಯವರು ಮಾಡಿರುವಂತಹದ್ದು. ಜಾಗತಿಕ ವ್ಯಾಪಾರದ ಕೈಗಾರಿಕಾ ಸಹಕಾರ ಸಮ್ಮೇಳನ ಸಹ ಮಾಡುವುದರ ಮೂಲಕ ಅನೇಕ ಹೂಡಿಕೆಗಳಿಗೆ ಈ ಇಲಾಖೆ ಅನೇಕ ಅವಕಾಶಗಳನ್ನು ಕೊಟ್ಟಿದ್ದಾರೆ.

**(ಮುಂದು)**

(75)30.1.2026/12.20/ಎಂ.ಎಂ–ಬಿ.ಎನ್.ಎಸ್. (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಮೇಶ್‌ಬಾಬು (ಮುಂದು):–**

ಕರ್ನಾಟಕದಲ್ಲಿ ಸೈಬರ್ ಸುರಕ್ಷಾ ನೀತಿಯನ್ನು ದಿನಾಂಕ 1.8.2024ರಿಂದ ಜಾರಿಗೆ ತಂದು ಅಲ್ಲಿಯೂ ಸಹ ಅನೇಕ ಬದಲಾವಣೆಗಳನ್ನು ಐ.ಟಿ.–ಬಿ.ಟಿ. ಇಲಾಖೆ ಮಾಡಿದೆ. ವಿಶೇಷವಾಗಿ ಬೆಂಗಳೂರು ವಿಚಾರಕ್ಕೆ ಬಂದರೆ, ಇಲ್ಲಿ ಸಂಚಾರ ದಟ್ಟಣೆಯನ್ನು ತಡೆಯುವುದಕ್ಕೆ ವಿಶೇಷ ಕಾರ್ಯಕ್ರಮಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಸಚಿವರು ಕೈಗೊಂಡಿದ್ದಾರೆ. ಹಾಗಾಗಿ ಅವರು ಬೆಂಗಳೂರಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ಎಂಬ ಮಾತನ್ನು ಹೇಳುತ್ತಾ ಸುಮಾರು 1.7 ಲಕ್ಷ ಕೋಟಿ ರೂಪಾಯಿಗಳ ಕಾಮಗಾರಿಗಳು ಬೆಂಗಳೂರಿನಲ್ಲಿ ನಡೆಯುತ್ತಿದೆ. ಆ ಕಾರಣಕ್ಕೆ ಬೆಂಗಳೂರು ಉಸ್ತುವಾರಿಯನ್ನು ವಹಿಸಿರುವ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಅಭಿನಂದನೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶೇಷವಾಗಿ ಯೋಜನಾ ಇಲಾಖೆ ಮುಖಾಂತರ ಇಡೀ ರಾಜ್ಯದಲ್ಲಿ ಅನೇಕ ಮಂಡಳಿಗಳ ಮುಖಾಂತರ ಕೆಲಸ ಆಗುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ.ಕೆ.ಆರ್.ಡಿ.ಬಿ)ಗೆ ಕಾಂಗ್ರೆಸ್ ಸರ್ಕಾರ 5,000 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ಮಾನ್ಯ ರಾಜ್ಯಪಾಲರು ಉಲ್ಲೇಖ ಮಾಡಿದ್ದಾರೆ. ಆ ಮೂಲಕ ಅವರು ಒಂದು ಸಂದೇಶ ಕೊಟ್ಟಿದ್ದಾರೆ. ಅದಕ್ಕಾಗಿ ಮಾನ್ಯ ರಾಜ್ಯಪಾಲರಿಗೆ ನಾನು ಅಭಿನಂದನೆ ಹೆಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೆ, ತಾವು ಭಾಷಣ ಪ್ರಾರಂಭಿಸಿ 15 ನಿಮಿಷಗಳಾಯಿತು. ಇನ್ನೂ ಎಷ್ಟು ಸಮಯ ಬೇಕು ನಿಮಗೆ?

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೇ, ಇನ್ನು 5–6 ನಿಮಿಷಗಳು ಸಾಕು. ನಾನು ಹೆಚ್ಚಾಗಿ ಸಮಯ ತೆಗೆದುಕೊಳ್ಳುವುದಿಲ್ಲ. ಮುಗಿಸುತ್ತೇನೆ. ವಿಶೇಷವಾಗಿ ಮಾನ್ಯ ರಾಜ್ಯಪಾಲರು ಸರ್ಕಾರದ ಎಲ್ಲಾ ಇಲಾಖೆಗಳ ಒಂದೆರಡು ಇಲಾಖೆಯಲ್ಲ ಅದು ತೋಟಗಾರಿಕೆ ಇರಬಹುದು, ಕೃಷಿ ಇರಬಹುದು, ನೀರಾವರಿ ಇರಬಹುದು ಎಲ್ಲಾ ಇಲಾಖೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡನೆ ಮಾಡಿದ್ದಾರೆ. ಜೊತೆಗೆ ಸರ್ಕಾರದ ಉದ್ದೇಶವನ್ನು ತಿಳಿಸಿಕೊಟ್ಟಿದ್ದಾರೆ. ಇವತ್ತು ಕೃಷಿ, ತೋಟಗಾರಿಕೆ, ರೇಷ್ಮೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೃಹತ್ ಮತ್ತು ಮಧ್ಯಮ ನೀರಾವರಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಕಂದಾಯ ಇಲಾಖೆ, ಸಣ್ಣ ನೀರಾವರಿ, ಧಾರ್ಮಿಕ ದತ್ತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಗ್ರೇಟರ್ ಬೆಂಗಳೂರು ಅಥಾರಿಟಿ, ನಗರಾಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಅರಣ್ಯ ಇಲಾಖೆ, ಇಂಧನ ಇಲಾಖೆ, ಸಾರಿಗೆ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರ್ಥಿಕ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಸತಿ

ಇಲಾಖೆ, ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಗೃಹ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಕ್ರೀಡಾ ಮತ್ತು ಯುವಜನ ಇಲಾಖೆ, ಈ ರೀತಿಯಾಗಿ ಎಲ್ಲಾ ಇಲಾಖೆಗಳ ಇದುವರೆಗಿನ ಸಾಧನೆ ಇರಬಹುದು ಮತ್ತು ಮುಂದೆ vision document, ಉದ್ದೇಶಗಳನ್ನು ಏನು ಸರ್ಕಾರ ಇಟ್ಟುಕೊಂಡಿದೆ ಅದನ್ನು ಸಹ ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸುವ ಮೂಲಕ ಒಂದು ಮಾದರಿ ಭಾಷಣವನ್ನು ಮಾಡಿದ್ದಾರೆಂದು ಗೌರವಾನ್ವಿತ ರಾಜ್ಯಪಾಲರಿಗೆ ಅಭಿನಂದನೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ದಿವಸ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಒಂದು article ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು 16ನೇ ಹಣಕಾಸು ಆಯೋಗಕ್ಕೆ ಸಂಬಂಧಪಟ್ಟಂತೆ ಒಂದು ಲೇಖನವನ್ನು ಬರೆದಿದ್ದಾರೆ. ಕೇಂದ್ರದಿಂದ ನಮಗೆ ಏನೇನು ಹಣಕಾಸು ಸೌಲಭ್ಯಗಳು ದೊರಕಬೇಕಾಗಿದೆ, 15ನೇ ಹಣಕಾಸು ಆಯೋಗದಲ್ಲಿ ಕೊಟ್ಟಂತಹ ಶಿಫಾರಸ್ಸುಗಳು ಜಾರಿಯಾಗಿಲ್ಲ. 16ನೇ ಹಣಕಾಸು ಆಯೋಗದಲ್ಲಿ ಏನೇನು ನಿರೀಕ್ಷೆಗಳನ್ನಿಟ್ಟುಕೊಂಡಿದ್ದೇವೆ ಎನ್ನುವ ಒಂದು ವಿಸ್ತೃತವಾದ ಲೇಖನವನ್ನು ಸನ್ಮಾನ್ಯ ಸಿದ್ದರಾಮಯ್ಯನವರು 'ಪ್ರಜಾವಾಣಿ' ಪತ್ರಿಕೆಯಲ್ಲಿ ಬರೆದಿದ್ದಾರೆ. ಆ ನಿಟ್ಟಿನಲ್ಲಿ ಇವತ್ತು ಪಕ್ಷಾತೀತವಾಗಿ ರಾಜ್ಯದ ಅಭಿವೃದ್ಧಿಯ ಸಂಕಲ್ಪದೊಂದಿಗೆ, ನಾನು ಎಲ್ಲಾ ಬಿ.ಜೆ.ಪಿ. ಮಿತ್ರರಿಗೂ ವಿನಂತಿ ಮಾಡುತ್ತೇನೆ. ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ಹಾಕಬೇಕಾಗಿದೆ. ಏಕೆಂದರೆ, ಈ ರಾಜ್ಯದ ಜನ 1999ರಿಂದ ಇಲ್ಲಿಯವರೆಗೆ ನಿರಂತರವಾಗಿ ಅದಕ್ಕೆ ಕಾರಣವೇನೇ ಇರಬಹುದು. ಲೋಕಸಭೆಗೆ ದೊಡ್ಡ ಸಂಖ್ಯೆಯಲ್ಲಿ ಬಿ.ಜೆ.ಪಿ. ಪಕ್ಷದವರನ್ನು ಆಯ್ಕೆ ಮಾಡಿ ಕಳುಹಿಸುತ್ತಿದ್ದಾರೆ. ಅವರು ಈ ರಾಜ್ಯಕ್ಕೆ ನ್ಯಾಯವನ್ನು ಕೊಡಬೇಕಾಗಿದೆ. ರಾಜ್ಯದ ಅನುದಾನದ ವಿಚಾರ ಬಂದಾಗ ರಾಜ್ಯದ ಯೋಜನೆಗಳ ವಿಚಾರ ಬಂದಾಗ ಅವರು ರಾಜ್ಯದ ಪರವಾಗಿ ಧ್ವನಿಯನ್ನು ಎತ್ತಬೇಕಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಪ್ರಮುಖವಾಗಿ ಸುಮಾರು 20ಕ್ಕಿಂತ ಹೆಚ್ಚು ಯೋಜನೆಗಳು ಅಲ್ಲಿ ಪೆಂಡಿಂಗ್ ಇವೆ. ಕೈಗಾರಿಕೆ ಇರಬಹುದು, ಏರ್‌ಪೋರ್ಟ್ ಇರಬಹುದು, ಬೇರೆ ಅನುದಾನಗಳಿರಬಹುದು, ಭದ್ರಾ ಮೇಲ್ದಂಡೆ ಯೋಜನೆ ಇರಬಹುದು, ಬೆಂಗಳೂರು ವರ್ತುಲ ರೈಲ್ವೆ ಇರಬಹುದು, ಈ ರೀತಿ ಅನೇಕ ಯೋಜನೆಗಳಿಗೆ ಇವತ್ತು ಇನ್ನೂ ಸಹ ಅನುಮೋದನೆ ಸಿಕ್ಕಿಲ್ಲ. ನಿನ್ನೆ ದಿವಸ ಕೇಂದ್ರ ಸಚಿವರೊಬ್ಬರು ಲೋಕಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಸದ್ಯಕ್ಕೆ 2ನೇ ಏರ್‌ಪೋರ್ಟ್ ಅನ್ನು ಬೆಂಗಳೂರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹಾಗಾಗಿ ರಾಜ್ಯದ ಹಿತದೃಷ್ಟಿಯಿಂದ ಬೆಂಗಳೂರಿನಲ್ಲಿ ಎರಡನೇ ಏರ್‌ಪೋರ್ಟ್ ನಿರ್ಮಾಣ ಮಾಡುವ proposal ಏನಿದೆ ಅದನ್ನು ಕೊಡುವಂತಹ ಪ್ರಯತ್ನಕ್ಕೆ ಎಲ್ಲರೂ ಸಹ

ಒಕ್ಕೊರಲಿನ ಪ್ರಯತ್ನವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತು ರಾಜ್ಯಪಾಲರ ಭಾಷಣದ ವಿಚಾರವನ್ನು ತಾವು ಆಗಲೆ ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಾಕಷ್ಟು ಹೇಳಿದಿರಿ. ನಮ್ಮ ಸದನ ನಡೆದಿಲ್ಲ ಎನ್ನುವ ಕಾರಣಕ್ಕೆ ಇವತ್ತು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಒಂದು ದೊಡ್ಡ ವರದಿಯನ್ನು ಮಾಡಿದ್ದಾರೆ. ನಮ್ಮ ನಮ್ಮ ವ್ಯತ್ಯಾಸಗಳೇನೇ ಇರಲಿ, ರಾಜ್ಯಪಾಲರ ವಂದನಾ ನಿರ್ಣಯದ ಸಂದರ್ಭದಲ್ಲಿ ಸರ್ಕಾರ ಅವರಿಗೆ ಅಭಿನಂದನೆ ಹೇಳುವಂತಹದ್ದು ಮತ್ತು ವಿರೋಧಪಕ್ಷದವರು ಅವರಿಗೆ ಅವಕಾಶ ಸಿಕ್ಕಿದ ಸಂದರ್ಭದಲ್ಲಿ ನಮ್ಮ ವ್ಯತ್ಯಾಸಗಳಿದ್ದರೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ನಾವು ಒಂದು ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಆ ನಿಟ್ಟಿನಲ್ಲಿ ನಾನು ಮಾನ್ಯ ವಿರೋಧಪಕ್ಷದ ಸಹಕಾರವನ್ನು ಕೋರುತ್ತಾ, ಇದೇನೂ ಮೊದಲಲ್ಲ, ಹಿಂದೆಯೂ ಸಹ ಅನೇಕ ಸಂದರ್ಭಗಳಲ್ಲಿ ಇಲ್ಲಿ ರಾಜ್ಯಪಾಲರ ವಿಚಾರ ಚರ್ಚೆಯಾಗಿದೆ. ನಾನು ವಿಶೇಷವಾಗಿ 1956ರ ಮಾರ್ಚ್ ತಿಂಗಳಿನಲ್ಲಿ ಆದಂತಹದ್ದನ್ನು quote ಮಾಡುತ್ತೇನೆ. ಅವತ್ತು ಛೇರ್ಮನ್‌ರವರು ಹೀಗೆ ಹೇಳುತ್ತಾರೆ: *"The member cannot bring the Governor into the discussions in a personal sense. Suppose an Hon'ble Member says something complimentary to the Governor and another member opposite should say something disparaging, what would be the position?"* ಇದಕ್ಕೆ ಸಂಬಂಧಪಟ್ಟಂತೆ ಅವತ್ತು ಶ್ರೀಮತಿ ಲಕ್ಷ್ಮಮ್ಮ ಎಂಬ ಸದಸ್ಯರು ಆಡಳಿತ ಪಕ್ಷದ ಪರವಾಗಿ ಮಾತನಾಡುತ್ತಾರೆ. ಅದಾದ ನಂತರ ಮತ್ತೆ ಛೇರ್ಮನ್‌ರವರು, *"That disrespect, if any, was to the head of the State, not to the Maharaja or Jayachamarajendra Wadiyar."* ಎಂದು ಹೇಳುತ್ತಾರೆ. ನಾನು ಇದನ್ನು ಏತಕ್ಕೆ quote ಮಾಡುತ್ತಿದ್ದೇನೆಂದರೆ, ರಾಜ್ಯಪಾಲರ ಬಗ್ಗೆ ಚರ್ಚೆಯಾಗಿರುವುದು ಇದೇನೂ ಮೊದಲನೇ ಸಂದರ್ಭವಲ್ಲ. ಹಿಂದೆಯೂ ಸಹ ಚರ್ಚೆಗಳಾಗಿವೆ. ಆದರೆ ನಾವು ಗೌರವಾನ್ವಿತ ರಾಜ್ಯಪಾಲರಿಗೆ ಯಾವತ್ತು ಸಹಾ ಗೌರವವನ್ನು ಕೊಟ್ಟಿದ್ದೇವೆ, ನಮ್ಮ ಸರ್ಕಾರ ಇವತ್ತೂ ಸಹ ಗೌರವವನ್ನು ಕೊಡುತ್ತದೆ. ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಇವತ್ತು ಇರುವಂತಹ ರಾಜ್ಯಪಾಲರು ಸರ್ಕಾರದ ಜೊತೆ ಒಳ್ಳೆಯ ಬಾಂಧವ್ಯವನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ಎರಡನೆ ಮಾತಿಲ್ಲ. ಬೇರೆ ಬೇರೆ ಕಾರಣಕ್ಕೆ ಅವರ ನಿಲುವುಗಳನ್ನು ಬೇರೆ ರೀತಿ ವ್ಯಕ್ತಪಡಿಸಿರಬಹುದು. ಮೊನ್ನೆ ಆದಂತಹ ಗಣರಾಜ್ಯೋತ್ಸವದ ಸಂದರ್ಭದಲ್ಲಿಯೂ ಸಹ ಸರ್ಕಾರದ ಪರವಾಗಿ ಬಂದು ಅವರು ಭಾಷಣವನ್ನು ಓದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಒಳ್ಳೆಯ ಸಂಬಂಧವನ್ನಿಟ್ಟುಕೊಂಡಿದ್ದಾರೆ. ಕರ್ನಾಟಕದಲ್ಲಿ ಯಾವುದೇ ಸರ್ಕಾರ

ಇರಲಿ ಇಂತಹ ಸಂಬಂಧಗಳನ್ನು ನಿರೀಕ್ಷೆ ಮಾಡುತ್ತೇವೆ. ಇವತ್ತು Sarkaria Commission's report ಬಂದಂತಹ ಸಂದರ್ಭದಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ವಿರುದ್ಧ ದೊಡ್ಡ ಮಟ್ಟದ ಹೋರಾಟ ಮಾಡಿತು. ರಾಜ್ಯಪಾಲರಿಗೆ ಅಧಿಕಾರವಿರುವುದು ತಪ್ಪು ಇಂತಿಂಥಹ ಅಧಿಕಾರಗಳನ್ನು ತೆಗೆಯಬೇಕೆಂದು ಬಿ.ಜೆ.ಪಿ. ಪಕ್ಷವೇ ಮುಂಚೂಣಿಯಲ್ಲಿ ನಿಂತುಕೊಂಡು Sarkaria Commission's report ಅನ್ನು ಜಾರಿ ಮಾಡಬೇಕೆಂದು ಹೋರಾಟ ಮಾಡಿತ್ತು. ಇವತ್ತು ಬೇರೆ ಬೇರೆ ಕಾರಣಕ್ಕೆ 2014ರ ನಂತರ ರಾಜ್ಯಪಾಲರ ಭವನ ಅಥವಾ ರಾಜ್ಯಪಾಲರು ದುರುಪಯೋಗವಾಗುತ್ತಿದೆ ಎಂಬ ಆರೋಪ ಬಂದಿದೆ. ಅದನ್ನು ಸರಿಪಡಿಸಿಕೊಂಡು ನಾವು ಹೋಗಬೇಕಾಗಿದೆ. ಆ ನಿಟ್ಟಿನಲ್ಲಿ ಎಲ್ಲರೂ ಸಹ ಕೈ ಜೋಡಿಸಬೇಕೆಂದು ಹೇಳುತ್ತಾ, ವಿಶೇಷವಾಗಿ ನಾನು ಏನು ಸರ್ಕಾರದ ಪರವಾಗಿ ಭಾಷಣವನ್ನು ಮಂಡನೆ ಮಾಡಿದ್ದಾರೆ ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ ಅದನ್ನು ಅನುಮೋದನೆ ಮಾಡುತ್ತಾ ಏನು ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಪ್ರಸ್ತಾವ ಮಾಡಿದ್ದಾರೆ, ಅವರ ಸೂಚನೆಯನ್ನು ಅನುಮೋದಿಸಿ ನನ್ನ ಧನ್ಯವಾದಗಳನ್ನು ತಿಳಿಸುತ್ತೇನೆ, ನಮಸ್ಕಾರ.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೆ, ಮಾನ್ಯ ಭೋಜೇಗೌಡರು ಹೋದರೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಭೋಜೇಗೌಡರು ಬರುತ್ತಾರೆ.

**ಸಭಾಪತಿಯವರು:-** ಅವರು ಎಲ್ಲಿಗೋ ಹೊರಡುವವರಿದ್ದರು, ಒಂದೈದು ನಿಮಿಷ ಅವಕಾಶ ಕೊಡಬೇಕೆಂದು ಕೇಳಿದ್ದರು. ಈಗ ನೀವು ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ವಿಶೇಷ ಸದನವನ್ನು ಕರೆದು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಘನತೆವೆತ್ತ ರಾಜ್ಯಪಾಲರನ್ನು ಕರೆಸುವಂಥದ್ದು ಪದ್ಧತಿ. ಪದ್ಧತಿಯಂತೆ ಗೌರವಾನ್ವಿತ ರಾಜ್ಯಪಾಲರು ಕೂಡ ಬಂದು ಸರ್ಕಾರ ಕೊಟ್ಟ ವಿಷಯವನ್ನು ಮಂಡಿಸಿ ಹೋಗಿದ್ದಾರೆ. ಆದರೆ ದಿನಾಂಕ 22.1.2026ರಂದು ವಿಧಾನಮಂಡಲದ ಜಂಟಿ ಅಧಿವೇಶನ ಕರ್ನಾಟಕದ ಸಂಸದೀಯ ಇತಿಹಾಸದಲ್ಲಿ ಆದ ಒಂದು ಕಪ್ಪು ಚುಕ್ಕೆ ಎಂದು ನಾನು ಭಾವಿಸುತ್ತೇನೆ. ರಾಜ್ಯದ ಸಂವಿಧಾನಿಕ ಮುಖ್ಯಸ್ಥರಾದ ಘನತೆವೆತ್ತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡುವಂತಹ ಸಂದರ್ಭದಲ್ಲಿ ಅವರದ್ದೇ ಆದ ಇತಿಮಿತಿಗಳು ಅವರಿಗಿರುತ್ತದೆ. ಪದ್ಧತಿಯಂತೆ ರಾಜ್ಯಪಾಲರು ಸರ್ಕಾರ ಏನು ಟಿಪ್ಪಣಿಯನ್ನು ಬರೆದು ಕೊಟ್ಟಿರುತ್ತದೆ ಅದೇ ಭಾಷಣ, ಅದನ್ನೇ ಓದಬೇಕೆಂದು ಹೇಳುವಂತಹದ್ದು

ಕೂಡ ಪದ್ಧತಿಯೆ ಆಗಿದೆ. ಆದರೆ ಅವರು ಭಾಷಣ ಮಾಡುವುದಕ್ಕೆ ಬರುವಾಗ ಅವರನ್ನು ಯಾವ ರೀತಿ ಸ್ವೀಕಾರ ಮಾಡುತ್ತೇವೋ ಅವರು ಹೊರಡುವಾಗ ಕೂಡ ಅದೇ ರೀತಿಯ ಗೌರವ ಘನತೆಗಳನ್ನು ಅವರಿಗೆ ಅರ್ಪಿಸಿ ಕಳುಹಿಸಿಕೊಡುವಂತದ್ದು ಕೂಡ ಪದ್ಧತಿಯೆ. ಆದರೆ ನಡೆದಿದ್ದೇನು? ಮಾನ್ಯ ಘನತೆವೆತ್ತ ರಾಜ್ಯಪಾಲರು ಬರುವಾಗ ನಾವು ಯಾವರೀತಿ ಅವರನ್ನು ಗೌರವಿಸಿ ಸದನಕ್ಕೆ ಕರೆದುಕೊಂಡು ಬಂದೆವೋ, ಅವರು ರಾಷ್ಟ್ರಗೀತೆಗೆ ಗೌರವ ಕೊಟ್ಟಾಯಿತು. ತಾವು ಕೂಡ ಅವರ ಎಡಭಾಗದಲ್ಲಿ ಕುಳಿತಿದ್ದಿರಿ.

(ಮುಂದು)

(76) 30-01-2026 12-30 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ನಾರಾಯಣಸ್ವಾಮಿ (ಮುಂದು):-**

ಅದಾದ ನಂತರ ಅವರು ಸರ್ಕಾರದ ಪರವಾದ ಮಾತುಗಳನ್ನು ಆಡಿದರು. ನನ್ನ ಸರ್ಕಾರ ಈ ಸಾಮಾಜಿಕ, ಭೌತಿಕ ಅಭಿವೃದ್ಧಿಯ ವೇಗವನ್ನು ದ್ವಿಗುಣಗೊಳಿಸುವುದಕ್ಕೆ ಶ್ರಮಿಸುತ್ತದೆ ಎನ್ನುವಂತಹ ಮಾತುಗಳಿಂದ ಮುಕ್ತಾಯ ಮಾಡಿ 'ಜೈ ಹಿಂದ್, ಜೈ ಕರ್ನಾಟಕ' ಎಂದು ಹೇಳಿ ನಿರ್ಗಮಿಸಿದರು. ಅಲ್ಲಿಂದ ನಡೆದ ವಿಚಾರಗಳೇ ಬೇರೆ. ಘನತೆವೆತ್ತ ರಾಜ್ಯಪಾಲರು ಸಾಂವಿಧಾನಿಕವಾಗಿ ಭಾಷಣ ಮಾಡಿ ಮುಕ್ತಾಯಗೊಳಿಸಿದಾಗ ಅವರ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು, ಅವರನ್ನು ಅಡ್ಡಗಟ್ಟಲಾಯಿತು. ಹೊರಗಡೆ ನಡೆಯದಂತೆ ಅವರನ್ನು ತಡೆಯಲಾಯಿತು. ಅವರನ್ನು ಕೊನೆಯ ತನಕ ಗೌರವಿಸಿ ಹೊರಗಡೆ ಕಳುಹಿಸಬೇಕಾಗಿರುವುದು ಸರ್ಕಾರದ ಒಂದು ನಡೆಯಾಗಿದ್ದು, ಇದರಲ್ಲಿ ಸ್ವಲ್ಪ ವ್ಯತ್ಯಾಸಗಳು ಕಂಡುಬಂದವು. ಇದಕ್ಕೆ ಅವರ ವಿರುದ್ಧವಾಗಿ ಘೋಷಣೆ ಕೂಗಿ ಅಪಚಾರ ಮಾಡಿರುವುದನ್ನು ಯಾವುದೇ ಸದನ ಒಪ್ಪುವುದಕ್ಕೆ ಸಾಧ್ಯ ಇಲ್ಲ. ಸಂವಿಧಾನದ ಹುದ್ದೆಯಲ್ಲಿ ಇರುವಂತಹವರು, ಸಂವಿಧಾನದ ಘನತೆಯನ್ನು ಹೆಚ್ಚಿಸಲಿಕ್ಕೆ ಕುಳಿತಿರುವಂತಹವರಿಗೆ ನಾವು ಈ ರೀತಿ ಅಗೌರವ ತೋರಿಸಿದರೆ ಹೇಗೆ? ಇದು ವ್ಯಕ್ತಿಗೆ ಅಲ್ಲ, ಸಂವಿಧಾನಕ್ಕೆ ಅಗೌರವ ತೋರಿಸಿದ್ದಾರೆ ಎನ್ನುವುದು ನನ್ನ ಅನಿಸಿಕೆ ಎಂದು ನಾನು ಸ್ಪಷ್ಟಪಡಿಸುತ್ತೇನೆ. ಈ ರೀತಿಯ ಅನಾಹುತ ಸಂಭವಿಸಬಾರದಿತ್ತು. ಭಾರತ ಸಂವಿಧಾನದ ಅನುಚ್ಛೇದ 163, ಅನುಚ್ಛೇದ 175 ಮತ್ತು ಅನುಚ್ಛೇದ 176 ರ ಉಲ್ಲಂಘನೆಯಾಗಿದ್ದು, ಭಾರತ ಸಂವಿಧಾನದ ಅನುಚ್ಛೇದ 163 ಅಡಿ ಮಾನ್ಯ ರಾಜ್ಯಪಾಲರ ವಿವೇಚನಾಧಿಕಾರಕ್ಕೆ ಮನ್ನಣೆ ನೀಡಬೇಕಾಗಿತ್ತು. ಅಲ್ಲಿ ಒಂದು ಪ್ರಶ್ನೆ ಬರುತ್ತದೆ. ಸರ್ಕಾರ ಯಾವಾಗಲೂ ಕೂಡ ತನ್ನ achievements ಅನ್ನು ಭಾಷಣದಲ್ಲಿ ಹೇಳಸಬೇಕು. ಪಾಲಿಸಿ, ಪ್ರೋಗ್ರಾಂಗಳನ್ನು ಹೇಳಸಬೇಕು. ಮುಂದೆ ಮಾಡಬಹುದಾದ ಕಾರ್ಯಕ್ರಮಗಳನ್ನು ಕೂಡ ಹೇಳಸಬೇಕು. ಇದೇ ಪದ್ಧತಿ. ಆದರೆ, ಸಾಂವಿಧಾನಿಕ ಹುದ್ದೆಯಲ್ಲಿ

ಕುಳಿತಿರುವಂತಹ ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಕ ಮಾಡುವಂತಹವರು. ಅವರೇ head of the Constitution. ಅವರು ಒಂದು Act ಗೆ ಅಂಕಿತ ಹಾಕಿದ ಮೇಲೆ ರಾಜ್ಯಪಾಲರು ಅದನ್ನು ವಿರೋಧಿಸಿ ಭಾಷಣ ಮಾಡಿದರೆ ಸಂವಿಧಾನವನ್ನು ವಿರೋಧಿಸಿದಂತೆ. ರಾಷ್ಟ್ರಪತಿಗಳನ್ನು ವಿರೋಧಿಸಿದಂತೆ ಆಗುತ್ತದೆ. ಅದು ಕೂಡ ಸಂವಿಧಾನಕ್ಕೆ ಬಗೆಯುವಂತಹ ದ್ರೋಹ ಎಂದು ರಾಜ್ಯಪಾಲರಿಗೆ ಮನವರಿಕೆಯಾಗಿರುತ್ತದೆ. ಆ ಕಾರಣದಿಂದ ಸರ್ಕಾರವು policy, programmes, achievements and proposals ಅನ್ನು ಹೇಳಬಹುದೇ ಹೊರತು, ಅವರು ನಾವೆಲ್ಲಾ ಬರೆದು ಕೊಟ್ಟಿರುವುದನ್ನು ಓದಲೇಬೇಕೆನ್ನುವ ಷರತ್ತು ಇದೆಯಲ್ಲವೇ, that itself is wrong. ಈ ರೀತಿ ಒತ್ತಡವನ್ನು ಯಾವ ಸರ್ಕಾರವೂ ಹೇರುವುದಕ್ಕೆ ಸಾಧ್ಯ ಇಲ್ಲ. ಇದರ ಬಗ್ಗೆ ನ್ಯಾಯಾಲಯಗಳಲ್ಲಿಯೂ ಅನೇಕ ತೀರ್ಪುಗಳು ಬಂದಿವೆ. ಇದೇನು ಕಾನೂನುಬಾಹಿರ ಅಲ್ಲ. ಅಲ್ಲಿಯೂ ಕೂಡ ಇಂತಹ ವಿಷಯಗಳು ಇದ್ದರೆ, ಸರ್ಕಾರ ಬರೆದುಕೊಟ್ಟ ವಿಚಾರಗಳಲ್ಲಿ ಅಂತಹದ್ದೇನಾದರೂ ಇದ್ದರೆ ಅದನ್ನು `discretion to omit irrelevant matters' ಎಂದು ಹೇಳಿ ಕೊಲ್ಕತ್ತಾ ಹೈಕೋರ್ಟ್ ಕೂಡ ತೀರ್ಪನ್ನು ಕೊಟ್ಟಿದೆ. ಅದನ್ನು ಅವರು ಮಾಡಬಹುದು. ಅದಕ್ಕೆ ಮಾನ್ಯ ಗೌವರ್ನರ್‌ರವರು ಏನು ಮಾಡಿದರೆಂದರೆ, ಮೇಲೆ ಇರುವಂತಹ ಒಂದು ಪಂಕ್ತಿಯನ್ನು ಮತ್ತು ಹಲವು ವಿಚಾರಗಳನ್ನು ಹೇಳಿ 'ಜೈ ಹಿಂದ್, ಜೈ ಕರ್ನಾಟಕ' ಎಂದು ಹೇಳಿದ ಮೇಲೆ ಇಲ್ಲಿ ಗೊಂದಲ ಪ್ರಾರಂಭವಾಯಿತು. ಗೊಂದಲದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು. ಅವರು ಎರಡು ಸಾಲು ಓದಿದರೂ ಕೂಡ ಅದನ್ನು ನಾವು ಒಪ್ಪಿಕೊಳ್ಳಬೇಕು. ಪದ್ಧತಿ ಇರುವುದು ಹಾಗೆಯೇ. Read and accepted ಎಂದು ಹೇಳಿದರು. ತಾವು ಕೂಡ ಅದನ್ನು ಸ್ಪಷ್ಟಪಡಿಸಿದ್ದೀರಿ. ಆದರೆ, ಮಾನ್ಯ ಕಾನೂನು ಸಚಿವರು `ಅವರು ಓಡಿಬಿಟ್ಟರು' ಎಂದು ಹೇಳಿದರು. ಅದಾದ ಮೇಲೆ ವಿರೋಧ ಮಾಡಿದವರೆಲ್ಲರೂ ಕೂಡ ಕೆಲಕಾಲ ಆದ ಮೇಲೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಸದನದಲ್ಲಿಯೂ ಕೂಡ ಪ್ರಸ್ತಾಪ ಆಯಿತು. ಅದನ್ನು ವಿರೋಧ ಮಾಡಿದ್ದಾಯಿತು. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಿಂದನೆಯೇ ಅಥವಾ ವಂದನೆಯೇ ಎಂದು ನಾವು ಕೂಡ ಕೇಳಿದ್ದೇವೆ. ಇದಾದ ಮೇಲೆ ನಿಂದನೆಯನ್ನು ಕೈಬಿಟ್ಟು, ವಂದನೆಗೆ ಬರಬೇಕಾಯಿತು. ಈಗ ನಾನು ಆ ವಿಚಾರಗಳಿಗೆಲ್ಲಾ ಹೋಗುವುದಿಲ್ಲ. ಕೊನೆಯ ಪಕ್ಷ ಒಟ್ಟಾರೆಯಾಗಿ ನಾನು ಹೇಳುವುದೇನೆಂದರೆ, ನಡೆದ ಈ ಒಂದು ಘಟನೆಯು ನಮ್ಮ ಈ ಎರಡು ಸದನಗಳಿಗೆ ಕಪ್ಪು ಚುಕ್ಕೆ ಆಗುತ್ತದೆ. ಸರ್ಕಾರದ ಈ ಕ್ರಮವನ್ನು ನಾನು ಖಂಡಿಸುತ್ತೇನೆ. ಈ ವಿಚಾರಕ್ಕೆ ಬರುವುದಾದರೆ ವಿಶೇಷ ಸದನ ಕರೆದಿರುವಂತಹ ಕಾರಣವೇನೆಂದರೆ, ಇದರಲ್ಲಿ ಬಹಳ ವಿಷಯಗಳು ಇಲ್ಲ. ಪ್ರತಿ ವರ್ಷ achievements ಅನ್ನು ಯಾವ ರೀತಿ ಹೇಳುತ್ತೇವೆ, ಪಾಲಿಸಿ, ಪ್ರೋಗ್ರಾಂಗಳನ್ನು ಯಾವ ರೀತಿ ಹೇಳುತ್ತೇವೆ, ಮತ್ತೆ ಮುಂದೆ ಮಾಡಬಹುದಾದ ಕಾರ್ಯಕ್ರಮಗಳನ್ನು ಯಾವ ರೀತಿ ಮಾಡಬೇಕೆಂದು ಮಾನ್ಯ ರಾಜ್ಯಪಾಲರಿಂದ ಹೇಳಿಸುತ್ತೇವೆಯೋ, ಅದು ಇಲ್ಲಿ ಬಹಳ ಕಡಿಮೆ. ಏನೇನೂ ಇಲ್ಲ. ಈ ಅಧಿವೇಶನ

ಕರೆದ ಉದ್ದೇಶ ಏನಾಯಿತು ಎಂದರೆ, ಕೇವಲ MGNREGA (Mahatma Gandhi National Rural Employment Guarantee Act) ಎಂದು ಇತ್ತು. ಆದಾದ ಮೇಲೆ ಅದನ್ನು ತಿದ್ದಲಾಯಿತು. ಅದನ್ನು ಮತ್ತೆ Viksit Bharat–Guarantee for Rozgar and Ajeevika Mission (VB–G RAM G) ಎಂದು ತಂದುಬಿಟ್ಟಿದ್ದಾರೆ. ಇದನ್ನು ವಿರೋಧಿಸಬೇಕೆನ್ನುವುದು ಅಷ್ಟೇ ಇತ್ತು. ಬೇರೆನೂ ಇರಲಿಲ್ಲ. ಇದು ಸ್ಕೀಂ, ಸ್ಕೀಂ ಆಗಿ ಇರಬೇಕೇ ಹೊರತು ಸ್ಕ್ಯಾಮ್ ಆಗಬಾರದೆನ್ನುವುದು ನಮ್ಮ ಉದ್ದೇಶ. ಇಲ್ಲಿ ಸ್ಕ್ಯಾಮ್ ಬಹಳ ನಡೆಯುತ್ತಿತ್ತು. ಇವರು ಎಲ್ಲಿಂದ ಎಲ್ಲಿಗೆ ಹೋದರು? ಕೋಲಾರದ ಶ್ರೀನಿವಾಸಪುರದಲ್ಲಿ ಲೋಕಾಯುಕ್ತದವರು ಹೋಗಿ ಇದು ಸ್ಕೀಂ ಅಲ್ಲ, ಸ್ಕ್ಯಾಮ್ ಆಗಿದೆ ಎಂದು ಅವರೇ 24 ಕೇಸ್‌ಗಳನ್ನು ಹಿಡಿದು ಕೇಸ್ ಅನ್ನು ಹಾಕಿದ್ದಾರೆ. ಈ ರೀತಿ ಯಾದಗಿರಿಯಲ್ಲಿ ಆಯಿತು, ಗುಲ್ಬರ್ಗಾದಲ್ಲಿ ಆಯಿತು, ವಿಜಯಪುರದಲ್ಲಿ ಆಯಿತು. ಹಾಗೆಯೇ ಇದು ಸ್ಕೀಂ ಆಗಲಿಲ್ಲ, ಸ್ಕ್ಯಾಮ್ ಆಗುತ್ತಿತ್ತು. ಇದಕ್ಕೆ ಸರ್ಕಾರದ ಕಡೆಯಿಂದ ಒಂದು ಭದ್ರತೆ ಬೇಕಾಗಿತ್ತು. ಆ ಕಾರಣದಿಂದಾಗಿ ಇಲ್ಲಿ ಏನು ಆಗುತ್ತಿತ್ತು ಎಂದರೆ, ಮೆಷಿನ್‌ಗಳು ಕೆಲಸ ಮಾಡುತ್ತಿದ್ದವು. ಆದರೆ, ಜನರಿಗೆ ನಾವು 100 ದಿನಗಳ ಕೆಲಸ ಎಂದು ಆಶ್ವಾಸನೆ ಕೊಟ್ಟಿದ್ದೇವೆ. ಅವರಿಗೆ 100 ದಿನಗಳ ಕೆಲಸ ಎಂದು ನಾವು ಆಶ್ವಾಸನೆ ಕೊಟ್ಟು, ಮೆಷಿನ್‌ಗಳು ಕೆಲಸ ಮಾಡುತ್ತವೆ, ಆದರೆ, ಅಕೌಂಟ್‌ಗಳು ಮಾತ್ರ ಜನರೇಟ್ ಆಗುತ್ತಿದೆ, ಇಲ್ಲ ಎಂದೇನು ಇಲ್ಲ. ಬ್ಯಾಂಕ್ ಖಾತೆಗಳಿಗೆ ಹಣ ಹೋಗುತ್ತದೆ. ಅದು D.B.T. (Direct Benefit Transfer) ಮುಖಾಂತರವೇ ಹೋಗುತ್ತಿತ್ತು. ಆದರೆ, ಕೆಲಸ ಯಾರೋ ಮಾಡಿ, ಕಂಟ್ರಾಕ್ಟರ್ ಇವರ ಖಾತೆಗಳನ್ನು ತೆಗೆದುಕೊಂಡು, ಡೆಬಿಟ್ ಕಾರ್ಡ್‌ಗಳನ್ನು ತೆಗೆದುಕೊಂಡು ಹಣ ಅವರು ತೆಗೆದುಕೊಂಡು ಹೋಗುತ್ತಿದ್ದರು. ಇದು ಗೊತ್ತಾಗಿ ಇದು ಒಂದು ರಾಜ್ಯದ ಸಮಸ್ಯೆ ಅಲ್ಲ, ಇಡೀ ದೇಶದ ಸಮಸ್ಯೆ ಎಂದು ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಬೇಕಾಗಿತ್ತು ಎನ್ನುವಂತಹ ವಿಚಾರವನ್ನು ಮನಗಂಡು ಕೇಂದ್ರ ಸರ್ಕಾರ ಆ ಜನರಿಗೆ ಇನ್ನಷ್ಟು ಹೆಚ್ಚಿನ ಸವಲತ್ತುಗಳನ್ನು ಕೊಡಬೇಕು. ಮೊದಲು ನರೇಗಾ ಯೋಜನೆಯಲ್ಲಿ ಕೇವಲ 100 ದಿನಗಳ ಕೆಲಸ ಇತ್ತು. ಅದನ್ನು ಕೇಂದ್ರ ಸರ್ಕಾರ 125 ದಿನಗಳಿಗೆ ಏರಿಕೆ ಮಾಡಿದ್ದಾರೆ. ಇದರಲ್ಲಿ ಆಕ್ಷೇಪಣೆ ಏನಿದೆ? ಇನ್ನು ಮುಂದೆ ಅವರ ಖಾತೆಗಳಿಗೆ ಹಣ ಹೋಗಬೇಕು, ಅವರೇ ಕೆಲಸ ಮಾಡಬೇಕು. ಅದೇನೇ ಇದ್ದರೂ ಬಯೋಮೆಟ್ರಿಕ್‌ನಲ್ಲಿ ಅವರು thumb ಒತ್ತಬೇಕು. ಅವರು ಕೆಲಸ ಮಾಡಿದ್ದರೆ ಮಾತ್ರ ಅವರಿಗೆ ಹಣ ಹೋಗಬೇಕು. ಅದು ಕಡಿಮೆ ಮೊತ್ತ ಇತ್ತು. ಅದನ್ನು 370 ರೂಪಾಯಿಗಳಿಗೆ ಏರಿಕೆ ಮಾಡಿಸಿದರು. ಅದಾದ ನಂತರ ಅವರ ಖಾತೆಗಳಿಗೆ 7 ದಿನಗಳಲ್ಲಿ ಅಂದರೆ, ಒಂದೇ ವಾರದಲ್ಲಿ ಅವರಿಗೆ ಹಣ ಲಭಿಸಬೇಕು. ಆದರೆ, ಅವರಿಗೆ 3–4 ತಿಂಗಳಾದರೂ ಹಣ ಬರುತ್ತಿರಲಿಲ್ಲ.

(ಮುಂದು)

**(77) 30.01.2026 12.40 ಹೆಚ್‌ವಿ.ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈ ಕಾರಣಗಳನ್ನು ಇಟ್ಟುಕೊಂಡು ಕನಿಷ್ಠ 7 ದಿನಗಳಲ್ಲಿ ಅಥವಾ ಗರಿಷ್ಠ 14 ರಿಂದ 15 ದಿನಗಳಲ್ಲಿ ಅವರ ಖಾತೆಗೆ ಹಣ ಬರಲೇಬೇಕು. ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಹಿಂದೆ ಸರ್ಕಾರದ ಸೂಚನೆ, ಅಧಿಕಾರಿಗಳ ಯೋಚನೆ ನಂತರ ಯೋಜನೆಗಳಾಗುತ್ತಿತ್ತು. ಅದು ಯಾವ ರೀತಿ ಆಗುತ್ತಿತ್ತು ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಗ್ರಾಮಪಂಚಾಯಿತಿಗೆ ಸಂಪೂರ್ಣವಾದ ಅಧಿಕಾರವನ್ನು ಈ ಆಕ್ಟ್‌ನಲ್ಲಿ ನೀಡಿ, ಇನ್ನು ಮುಂದೆ ಗ್ರಾಮ ಪಂಚಾಯಿತಿಗಳೇ ಇದನ್ನು ಮಾಡಬೇಕೆಂದು ಸೂಚಿಸಿದೆ. ಇಷ್ಟೆಲ್ಲ ಅನುಕೂಲಕರ ಸಂಗತಿಗಳು ಇದ್ದರೂ ಸಹ ಈ ಕಾಯಿದೆಯನ್ನು ವಿರೋಧಿಸಬೇಕೆನ್ನುವ ಒಂದೇ ಒಂದು ಕಾರಣಕ್ಕಾಗಿ ಸರ್ಕಾರ ಜಂಟಿ ಅಧಿವೇಶನವನ್ನು ಕರೆದು ಈ ಸದನವನ್ನು ಸಹ ನಡೆಸುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಬಹಳ ಚೆನ್ನಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸಾರಿಗೆ ವ್ಯವಸ್ಥೆ ಎಲ್ಲಿ ಚೆನ್ನಾಗಿದೆ? ಬೆಳಗಾವಿ, ಕಲಬುರಗಿ ಮತ್ತು ಯಾದಗಿರಿ ಈ ಭಾಗಗಳಿಗೆ ಹೋಗಿ ಪರಿಶೀಲನೆ ಮಾಡಿದರೆ ಸಾರಿಗೆ ವ್ಯವಸ್ಥೆ ಹೇಗಿದೆ ಎನ್ನುವುದು ಗೊತ್ತಾಗುತ್ತದೆ. ಮನರೇಗಾ ಯೋಜನೆಯಡಿಯಲ್ಲಿ ಎಲ್ಲೆಲ್ಲಿ ವಂಚಿಸಲಾಗಿದೆ ಎನ್ನುವ ದಾಖಲೆಗಳನ್ನು ಇಲ್ಲಿಯವರೆಗೆ ನೀಡುವುದಕ್ಕೆ ಈ ಸರ್ಕಾರದಿಂದ ಸಾಧ್ಯವಾಗಿಲ್ಲ. ಕೂಲಿ ಕಾರ್ಮಿಕರು ಸಣ್ಣ ರೈತರು ಮಹಿಳೆಯರ ಉದ್ಯೋಗ ಮತ್ತು ನಿರುದ್ಯೋಗ ಭತ್ಯೆಯ ಹಕ್ಕನ್ನು ಕಸಿದುಕೊಂಡಿರುವುದನ್ನು ಏತಕ್ಕೋಸ್ಕರ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. 16ನೇ ಹಣಕಾಸು ಆಯೋಗದ ಸಭೆಗೆ ಹಾಜರಾಗಿದ್ದ ಕರ್ನಾಟಕ ರಾಜ್ಯದ ಪ್ರತಿನಿಧಿ ಯಾರು? ಯಾರು ಹಾಜರಾಗಬೇಕಾಗಿತ್ತು, ಆಗಿದ್ದೇನು? ಮಾಡಿದ್ದೇನು?

ಸನ್ಮಾನ್ಯ ಸಭಾಪತಿಯವರೇ, ಗ್ರಾಮೀಣ ಜನರ ಬದುಕನ್ನು ಗೌರವಿಸಿ ಅವರನ್ನು ಪ್ರೋತ್ಸಾಹಿಸುವ ಬದಲಿಗೆ; ಅವರ ಪ್ರೋತ್ಸಾಹಕ್ಕೆ ನಿಂತಿರುವ ಕೇಂದ್ರ ಸರ್ಕಾರದ ನೀತಿಯನ್ನು ಸ್ವಾಗತಿಸುವುದಕ್ಕೆ ಬದಲಾಗಿ ಇವರು ಅದನ್ನು ವಿರೋಧಿಸುತ್ತಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಈ ಯೋಜನೆಗಿಟ್ಟಿದ್ದ ಮಹಾತ್ಮಗಾಂಧಿಯವರ ಹೆಸರನ್ನು ತೆಗೆಯಲಾಗಿದೆ ಎನ್ನುವುದು ಇಲ್ಲಿರುವ ವಿಚಾರವಾಗಿದೆ. ಈ ಯೋಜನೆಯನ್ನು ಮೊಟ್ಟಮೊದಲಿಗೆ ಪ್ರಾರಂಭ

ಮಾಡಿದಂತಹ ಸಂದರ್ಭದಲ್ಲಿ ಮಹಾತ್ಮಗಾಂಧೀಜಿಯವರ ಹೆಸರಿಗೆ ಬದಲಾಗಿ ಮಾನ್ಯ ಜವಹರಲಾಲ್ ನೆಹರುರವರ ಹೆಸರನ್ನು ಇಡಲಾಗಿತ್ತು; ಆಗ ನರೇಗಾ ಎನ್ನುವ ಹೆಸರಿನಿಂದ ಇದನ್ನು ಕರೆಯಲಾಗುತ್ತಿತ್ತು. ನಂತರ ಕೂಲಿಗಾಗಿ ಕಾಳು ಎನ್ನುವ ಹೆಸರಿನಿಂದ ಕರೆಯಲಾಗುತ್ತಿತ್ತು. ಇದೆಲ್ಲ ಆದ ಮೇಲೆ ಸಹಜವಾಗಿಯೇ ಅವರು ಮಹಾತ್ಮಗಾಂಧಿಯವರ ಹೆಸರನ್ನು ಇಟ್ಟಿದ್ದರು. ಆ ಕಾಲದಿಂದ ನಡೆದುಕೊಂಡು ಬಂದಿರುವುದನ್ನು ನಾವು ಸಹ ಗೌರವಿಸುತ್ತಿದ್ದೇವೆ. ಸಾಂದರ್ಭಿಕವಾಗಿ ಯಾವುದೇ ಯೋಜನೆಗಳಿಗೆ ಇಟ್ಟಿರುವಂತಹ ಹೆಸರುಗಳು ಒಂದು ಸರ್ಕಾರದಿಂದ ಮತ್ತೊಂದು ಸರ್ಕಾರಕ್ಕೆ ಸಹಜವಾಗಿ ಬದಲಾಗುತ್ತಾ ಹೋಗುತ್ತವೆ. "ಈ ಯೋಜನೆಗೆ ನಾವಿಟ್ಟಿದ್ದ ಹೆಸರನ್ನು ತೆಗೆದುಬಿಟ್ಟಿದ್ದಾರೆ" ಎನ್ನುವ ಭಾವನೆ ಅವರಲ್ಲಿ ಇರಬಹುದು. ಆದರೆ, ಒಂದು ಪಕ್ಷಕ್ಕೆ ಸಂಬಂಧಪಟ್ಟ ನಾಯಕರುಗಳ ಹೆಸರುಗಳನ್ನು ಈ ದೇಶದಲ್ಲಿ ಎಷ್ಟೊಂದು ವಿಶ್ವವಿದ್ಯಾಲಯಗಳಿಗೆ, ಆಸ್ಪತ್ರೆಗಳಿಗೆ ಮತ್ತು ವಿಮಾನ ನಿಲ್ದಾಣಗಳಿಗೆ ಇಡಲಾಗಿದೆ. ಈ ರೀತಿ ನಾವು ಪಟ್ಟಿ ಮಾಡುತ್ತಾ ಹೋದರೆ, ಅವುಗಳ ಸಂಖ್ಯೆ ನೂರಲ್ಲ, ಸಾವಿರಗಟ್ಟಲೆ ಇವೆ.

ಪ್ರಸ್ತುತ ಆಡಳಿತ ಮಾಡುತ್ತಿರುವಂತಹ ಪಕ್ಷವಲ್ಲ ಸರ್ಕಾರ, 2047ನೇ ಇಸವಿಗೆ ಈ ದೇಶ ವಿಕಾಸ ಹೊಂದಿದ ದೇಶವಾಗುತ್ತದೆ, ಪ್ರಪಂಚದಲ್ಲಿ ನಾವೇ ಅಗ್ರ ಗಣ್ಯರು ಎನ್ನುವುದನ್ನು ತೋರಿಸುವ ಮಾರ್ಗದಲ್ಲಿ ಇವತ್ತು, ಕೇಂದ್ರ ಸರ್ಕಾರದ ನಡೆ ಇದೆ. ಈ ದೇಶದ ಪ್ರಧಾನ ಮಂತ್ರಿಗಳು ಈ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಯೋಜನೆಗೊಂದು ಹೆಸರನ್ನು ನೀಡುವಂತಹ ಕೆಲಸವಾಗಿದೆ. ಈಗ ಈ ಯೋಜನೆಯ ಹೆಸರು ವಿಕಸಿತ ಭಾರತ– ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್(ಗ್ರಾಮೀಣ) "ವಿಬಿ – ಜಿ ರಾಮ್ ಜಿ" (**VB–G RAM G) ಎಂದಾಗಿದೆ. ನರೇಗಾ ಮತ್ತು ಮನರೇಗಾ ಯೋಜನೆಗಳನ್ನು ಅದೇ ಹಿನ್ನೆಲೆಯಲ್ಲಿ ಹೆಸರಿಸಲಾಗಿದೆ.** ಇದನ್ನು ಉದ್ದೇಶಪೂರ್ವಕವಾಗಿ ಮಾಡಿಲ್ಲ, ಇದು ಉದ್ಭವ. ಇದು ಈ ಯೋಜನೆಯ ಮೊದಲ ಅಕ್ಷರಗಳನ್ನು ಜೋಡಿಸಿದಾಗ ಬರುವಂತಹ ಹೆಸರಾಗಿದೆ. ಇದನ್ನು ನೋಡಿ ಅವರಿಗೆ ಬೆಂಕಿ ಬಿದ್ದಂತೆ ಆದರೆ ಹೇಗೆ? ಇಲ್ಲಿ ಯಾರಿಗೂ ಅನ್ಯಾಯವಾಗಿಲ್ಲ. ಬದಲಿಗೆ ಎಲ್ಲ ವ್ಯವಸ್ಥೆಗಳನ್ನು ಮತ್ತಷ್ಟು ಗಟ್ಟಿಗೊಳಿಸಲಾಗಿದೆ. ಹಾಗಿದ್ದರೂ ಸಹ "ವಿಬಿ – ಜಿ ರಾಮ್ ಜಿ" ಎನ್ನುವ ಪದ ಬಂದ ಕಾರಣಕ್ಕಾಗಿ ಇಷ್ಟೊಂದು ಉದ್ವೇಗದಿಂದ ವಿಶೇಷ ಅಧಿವೇಶನ ಮಾತ್ರವಲ್ಲ ಮಹಾತ್ಮ ಗಾಂಧೀಜಿಯವರ ಹೆಸರನ್ನು ಇಟ್ಟುಕೊಂಡು ಹೆಸರಾಂತ ದಿನಪತ್ರಿಕೆಯಾದ "ವಿಜಯ ಕರ್ನಾಟಕ"ದ ಮುಖಪುಟದಲ್ಲಿ ಸಂಗಪ್ಪ ಎನ್ನುವ ವ್ಯಕ್ತಿ ಮಹಾತ್ಮಗಾಂಧೀಜಿಯವರನ್ನು ಕುರಿತು ಈ ಯೋಜನೆಗೆ ಸಂಬಂಧಪಟ್ಟಂತೆ "ಮಾಡಿರುವುದು ಸರಿಯೇ" ಎಂದು ಕೇಳುವಂತಹ ಸಂಭಾಷಣ ಚಿತ್ರವನ್ನು ಪ್ರಕಟಿಸಲಾಗಿತ್ತು.

ಸಂಗಪ್ಪನ ಬಗ್ಗೆ ಹೇಳಿ, ನೀವು ನುಂಗಪ್ಪಗಳು ಮಾಡಿರುವುದು ಸರಿಯೇ? ನುಂಗಪ್ಪಗಳು ಹೆಚ್ಚಾಗಬಾರದೆಂದು ಈ ಯೋಜನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ತರಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಹಾತ್ಮಾ ಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದರು. ಇವತ್ತಿಗೂ ಸಹ ನಾವು ಅವರ ಹೆಸರಿನಲ್ಲಿಯೇ ಗ್ರಾಮಗಳನ್ನು ಹೆಸರಿಸುತ್ತಿದ್ದೇವೆ, ಮಹಾತ್ಮಾಗಾಂಧೀಜಿಯವರ ಹೆಸರು ಎಲ್ಲಿಗೂ ಹೋಗುವುದಿಲ್ಲ. ಅವರಿಗೆ ರಾಮನ ಬಗ್ಗೆಯೂ ಗೌರವವಿತ್ತು. ಅವರ ಜೀವಿತಾವಧಿಯಲ್ಲಿ "ನಾನು ರಾಮ ರಾಜ್ಯ ಮಾಡುತ್ತೇನೆ.... ರಾಮ ರಾಜ್ಯ ಮಾಡುತ್ತೇನೆ" ಎಂದು ಹೇಳುತ್ತಿದ್ದರು. ಈಗ ಅವರ ರಾಮನ ಹೆಸರೇ ಈ ಯೋಜನೆಗೆ ಬಂದಿರುವುದರಿಂದ ಇದನ್ನು ಆಡಳಿತ ಪಕ್ಷದವರು ಒಪ್ಪಿಕೊಳ್ಳಬೇಕಾಗಿದೆ. ಆದರೆ, ಇವರು ಈ ರಾಮನನ್ನು ಏತಕ್ಕೋಸ್ಕರ ಒಪ್ಪಿಕೊಳ್ಳುತ್ತಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ಅದನ್ನು ವಿರೋಧ ಮಾಡುವುದು ಸರಿಯಲ್ಲವೆನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಜನರಿಗೆ ಅನ್ಯಾಯವಾಗಿದೆಯೆಂದು ಇವರು ಪದೇಪದೇ ಹೇಳುತ್ತಿದ್ದಾರೆ. ಹಿಂದೆ 100 ದಿನಗಳ ಕೆಲಸದ ಅವಧಿ ಇತ್ತು; ಈಗ ಅದನ್ನು 120 ದಿನಗಳಿಗೆ ಹೆಚ್ಚಿಸಲಾಗಿದೆ. ಇದು ಅನ್ಯಾಯವೇ? ಅನುಕೂಲವೇ? ಇದನ್ನು ಅವರು ಜನರಿಗೆ ತಿಳಿಸಬೇಕಾಗಿದೆ. ಸಂಗಪ್ಪನದ್ದನ್ನು ಮಾತ್ರ ತಿಳಿಸದೇ ನುಂಗಪ್ಪನದ್ದೂ ತಿಳಿಸಬೇಕಾಗುತ್ತದೆ. ಅವರ ಕೂಲಿಯ ದರವನ್ನು ಸಹ ಹೆಚ್ಚು ಮಾಡಲಾಗಿದೆ. "ನಮ್ಮ ಕಾಲದಲ್ಲಿ ಆಗಿಲ್ಲ, ನೀವಾದರೂ ಮಾಡಿದ್ದೀರಿ" ಎಂದು ಅವರು ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಇವರು ಗ್ರಾಮೀಣ ಪ್ರದೇಶದಲ್ಲಿ ಗ್ರಾಮಪಂಚಾಯಿತಿಗಳಿಗೆ ಇದ್ದ ಅಧಿಕಾರವನ್ನೇ ಕಿತ್ತುಕೊಳ್ಳಲಾಗಿದೆಯೆಂದು ಹೇಳುವುದರ ಮೂಲಕ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದು ತಪ್ಪು ಕಲ್ಪನೆ ಮತ್ತು ಇದೊಂದು ಜನರನ್ನು ದಾರಿ ತಪ್ಪಿಸುವಂತಹ ಸರ್ಕಾರದ ಕ್ರಮವಾಗಿದೆ. ಈ ರೀತಿ ಮಾಡುವುದರಿಂದ ಜನರನ್ನು ಸುಳ್ಳು ಹೇಳಿ ದಾರಿ ತಪ್ಪಿಸಿದಂತಾಗುತ್ತದೆ, ಅದು ಆಗಬಾರದು. ಹಿಂದೆ ಇದ್ದಂತಹ ಸ್ಕೀಂನಲ್ಲಿ ಯಾವುದೇ ಬದಲಾವಣೆಗಳಾಗಿಲ್ಲವೆಂದು ಇವರುಗಳು ಜನರಿಗೆ ಸತ್ಯವನ್ನೇ ಹೇಳಬೇಕಾಗುತ್ತದೆ. ಇದು scam ಆಗುತ್ತಿದ್ದನ್ನು ತಪ್ಪಿಸುವುದಕ್ಕೆ ಮತ್ತು ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ತೆಗೆದುಕೊಂಡಿರುವಂತಹ ಕ್ರಮವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಒಂದೆರಡು ಸಮಸ್ಯೆಗಳಲ್ಲ; ಬೇಕಾದಷ್ಟು ಸಮಸ್ಯೆಗಳಿವೆ. ಸಂವಿಧಾನಾತ್ಮಕವಾಗಿ ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾತನಾಡುವಂತಹ ಸಂದರ್ಭದಲ್ಲಿ ಸಹಜವಾಗಿ ಯಾವ ಸರ್ಕಾರ ಅಧಿಕಾರದಲ್ಲಿ ಇರುತ್ತದೆಯೋ ಅದು ಅವರ ಸರ್ಕಾರವಾಗಿರುತ್ತದೆ. ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದ ಕೊನೆಯಲ್ಲಿ "ಸಾಮಾಜಿಕ ಹಾಗೂ ಭೌತಿಕ ಅಭಿವೃದ್ಧಿಯ ವೇಗವನ್ನು ದ್ವಿಗುಣಗೊಳಿಸಲು ನನ್ನ ಸರ್ಕಾರ ಕಂಕಣಬದ್ಧವಾಗಿದೆ" ಎಂದು ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಬಯಸುವುದೇನೆಂದರೆ, ಇನ್ನೂ ಅನೇಕ ವಿಚಾರಗಳನ್ನು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಸಬಹುದಾಗಿತ್ತು. ಮೈಸೂರಿನ ಮೂಡಾದಲ್ಲಿ 14 ಸೈಟ್‌ಗಳನ್ನು ನುಂಗಿ ಮತ್ತೇ ವಾಪಸ್ಸು ನೀಡಿದ ನನ್ನ ಸರ್ಕಾರ; ಮಹರ್ಷಿ ವಾಲ್ಮಿಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂಪಾಯಿಗಳನ್ನು ನುಂಗಿದ ನನ್ನ ಸರ್ಕಾರ; SCSP/TSP., ಯೋಜನೆಗಳಿಗೆ ಮೀಸಲಿಟ್ಟ ಹಣದಲ್ಲಿ 39,000 ಕೋಟಿ ರೂಪಾಯಿಗಳನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿ ದಲಿತರಿಗೆ ಅನ್ಯಾಯ ಮಾಡಿದ ನನ್ನ ಸರ್ಕಾರ; ಕರ್ನಾಟಕದಲ್ಲಿ 2500ಕ್ಕಿಂತ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾದ ನನ್ನ ಸರ್ಕಾರ; ಒಳ ಮೀಸಲಾತಿಯನ್ನು ಜಾರಿ ಮಾಡಲಾಗದೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನ್ಯಾಯ ಕೊಡಲಾಗದ ನನ್ನ ಸರ್ಕಾರ ಎಂದು ಹೇಳಿಸಬಹುದಾಗಿತ್ತು.

(ಮುಂದುವರಿದಿದೆ)

(78) 30-1-2026 12.50 ಪಿಕೆ(ಡಿಎಸ್)ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮುಂದು):-**

ಎರಡು ವರ್ಷಗಳಿಂದಲೂ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಒಳ ಮೀಸಲಾತಿ ಇತ್ಯರ್ಥವಾಗಿಲ್ಲ. ಒಳ ಮೀಸಲಾತಿಯೂ ಜಾರಿಗೆ ಬರಲಿಲ್ಲ. ಇದಕ್ಕೆ ನ್ಯಾಯ ಸಿಗಲಿಲ್ಲ. ಬ್ಯಾಕಲಾಗ್ ಹುದ್ದೆ ಹಾಗೆಯೇ ಉಳಿದಿದೆ. ಈ ಹೊಸ ಕಾಯ್ದೆಯ ಕಾನೂನನ್ನು ಬ್ಯಾಕ್‌ಲಾಗ್ ಹುದ್ದೆಗೆ ಮಾಡುವುದಕ್ಕಾಗುವುದಿಲ್ಲ. ಬ್ಯಾಕ್‌ಲಾಗ್ ಹುದ್ದೆಯನ್ನು ಅದೇ ರೀತಿ ಭರ್ತಿ ಮಾಡಬೇಕು. ಅದನ್ನು ಭರ್ತಿ ಮಾಡುವುದಕ್ಕೆ ಬಿಡುತ್ತಿಲ್ಲ. ಅನೇಕ ಯುವಕರು ಇವತ್ತು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ, ಅವರು 40 ವಯಸ್ಸು ದಾಟಿಬಿಟ್ಟಿದ್ದಾರೆ. ಅವರಿಗೆ ಕೆಲಸ ಇಲ್ಲ. ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕಂಥ ಅನೇಕರನ್ನು ಕೆಲಸದಿಂದ ತೆಗೆದು

ಹಾಕುತ್ತಿದ್ದಾರೆ. 10 ವರ್ಷ, 15 ವರ್ಷ, 20 ವರ್ಷಗಳವರೆವಿಗೂ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿದವರು ಇದ್ದಾರೆ. ಅವರಿಗೆ ವಯೋಮಿತಿ ಮೀರಿ ಹೋಗಿದೆ. ಅವರನ್ನು ತೆಗೆದರೆ ಅವರ ಜೀವನದಲ್ಲಿ ಇನ್ನು ಕೆಲಸವಿಲ್ಲ. ಆ ಮನೆಯಲ್ಲಿ ಮಕ್ಕಳು ಕೈಗೆ ಬಂದಿರುವುದಿಲ್ಲ. ಆ ಕುಟುಂಬದ ಪರಿಸ್ಥಿತಿ ಏನು? ಇವತ್ತು ಶಿಕ್ಷಣದಲ್ಲಿ ಅತಿಥಿ ಶಿಕ್ಷಕರು, ಅದರ ಬಗ್ಗೆ ತಮಗೆ ಅತಿ ಹೆಚ್ಚು ಗೊತ್ತಿರುತ್ತದೆ. ಇತ್ತೀಚಿಗೆ 6,600 ಅತಿಥಿ ಉಪನ್ಯಾಸಕರನ್ನು ಈಗ ಸೇವೆಯಿಂದ ಹೊರಗಿಡಲಾಗಿದೆ. ಅವರು ಬಂದು ಕೇಳಿಕೊಳ್ಳುತ್ತಿದ್ದಾರೆ, ಕಣ್ಣೀರು ಇಡುತ್ತಿದ್ದಾರೆ. ಅವರ ಪರಿಸ್ಥಿತಿ ಹೇಗಿದೆ ಎಂದರೆ, "ಸರ್, ನಾವು ನಮ್ಮ ಮಕ್ಕಳನ್ನು ಓದಿಸುವುದಕ್ಕಾಗುವುದಿಲ್ಲ, ನಮಗೂ ಅಲ್ಪ ಸಂಬಳವನ್ನು ಕೊಡುತ್ತಿದ್ದರು, ಅದನ್ನು ನಾವು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆಂದರೆ ನಮ್ಮ ಮಕ್ಕಳಿಗೆ ಹೇಗೆ ಓದಿಸುವುದು, ಅವರಿಗೆ ಭವಿಷ್ಯವನ್ನು ಹೇಗೆ ರೂಪಿಸಿಕೊಡುವುದಕ್ಕಾಗುತ್ತದೆ" ಎಂದು ಅವರು ಕಣ್ಣೀರು ಹಾಕುತ್ತಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಇಂಥವುಗಳನ್ನೆಲ್ಲಾ ತೀರ್ಮಾನ ಮಾಡಬೇಕಾಗಿತ್ತು. ಈಗ ಅವರೆಲ್ಲಾ ಮನೆಗಳನ್ನು ಸೇರಿದ್ದಾರೆ. ಶೇಕಡ 50ಕ್ಕಿಂತ ಹೆಚ್ಚು ಮೀಸಲಾತಿಯನ್ನು ಮೀರಿ ನೀವು ಯಾವುದೇ ಹುದ್ದೆಗಳನ್ನು ಭರ್ತಿ ಮಾಡಬಾರದು ಎಂದು ನ್ಯಾಯಾಲಯದ ಆದೇಶವಿದೆ. ಈಗ ಇಲ್ಲಿ ಶೇಕಡ 56 ರಷ್ಟು ಮೀಸಲಾತಿ ಇದೆ. ಆ ಕಾರಣದಿಂದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಈ ಒಂದು ಕಾರಣದಿಂದಾಗಿ ಈಗೇನು ಭರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡು ವರ್ಷಗಳಿಂದ ನೇಮಕಾತಿಯನ್ನೇ ಮಾಡುತ್ತಿಲ್ಲ. ಜನರ ಪರಿಸ್ಥಿತಿ ಏನಾಗಬೇಕು? ಕೊನೆ ಪಕ್ಷ, ಆ ಶೇಕಡ 50 ರಷ್ಟಾದರೂ ಹುದ್ದೆಗಳನ್ನು ಭರ್ತಿ ಮಾಡಿ, ನಂತರ ಬರುವಂತಹದ್ದನ್ನು ಇದರಲ್ಲಿ ಮಾಡಬೇಕು. ಪರಿಶಿಷ್ಟ ಜಾತಿ ವರ್ಗಗಳಿಗೆ ಮೀಸಲಾತಿಯಲ್ಲಿ ಒಳ ಮೀಸಲಾತಿಯನ್ನು ಕೊಟ್ಟಿದ್ದಾರೆ. ನಾನು ಬೆಳಗಾವಿ ಅಧಿವೇಶನದಲ್ಲಿ ಒಂದು ಪ್ರಸ್ತಾಪವನ್ನು ಇಟ್ಟಿದ್ದೆ. ಏನಾಗಿದೆ ಎಂದರೆ, ಇವರು whole department ಅನ್ನು ಯೂನಿಟ್ ಆಗಿ ತೆಗೆದುಕೊಳ್ಳುವುದಿಲ್ಲ. ಒಂದೊಂದು ವಿಭಾಗವನ್ನು ತೆಗೆದುಕೊಂಡರೆ, ಧಾರವಾಡ ವಿಶ್ವವಿದ್ಯಾಲಯದಲ್ಲಿ ಒಂದು ಪ್ರಕರಣ ನಡೆದಿತ್ತು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಮಾಜ ಕಲ್ಯಾಣ ಸಚಿವರು ಇರಬೇಕಾದಾಗಲೇ ನಾನು ಹೇಳಿದೆ. 39 ಸ್ಥಾನಗಳನ್ನು announce ಮಾಡಿದ್ದರು. ಅದರಲ್ಲಿ 9 ಸ್ಥಾನಗಳು ಪರಿಶಿಷ್ಟ ಜಾತಿಗೆ ಬಂದಿತ್ತು. ಆ 9 ಸ್ಥಾನಗಳು ಗ್ರೂಪ್ 'ಎ' ಎಂದು ಇತ್ತು. ಅವು ಒಂದೇ ಸಮಯದಲ್ಲಿ ಬಂದಿತ್ತು. ಆ ಇಲಾಖೆಯನ್ನು ಬರೀ ಅಲ್ಲಿ ಯೂನಿಟ್ ಆಗಿ ತೆಗೆದುಕೊಂಡರೆ ಎಲ್ಲವೂ ಹಾಗೆಯೇ ಆಗುತ್ತದೆ. ಆಗ ನ್ಯಾಯ ಯಾರಿಗೆ ಸಿಗುತ್ತದೆ? ಆದ್ದರಿಂದ ಒಟ್ಟಾರೆಯಾಗಿ ಇಲಾಖೆಯನ್ನೇ ಯೂನಿಟ್ ಆಗಿ ತೆಗೆದುಕೊಂಡರೆ ಅವರಿಗೂ ಕೂಡ ಹಂಚಿಕೆಯಾಗುತ್ತದೆ. ಇಂಥವುಗಳು ಬಹಳಷ್ಟು ಇವೆ.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಯೀಲ್ಡ್ ಆದರೆ ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ತಾವು ಆಮೇಲೆ ಮಾತನಾಡಿ. ನನ್ನ flow ಹೋಗುತ್ತದೆ. ನನ್ನ ಗಂಟಲು ಸರಿಯಿಲ್ಲ. ನಾನು ತುಂಬಾ ಸಮಯ ಮಾತನಾಡುವುದಿಲ್ಲ. ತಾವು ಆಮೇಲೆ ಮಾತನಾಡಿ, ತೊಂದರೆ ಇಲ್ಲ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರು ಯೀಲ್ಡ್ ಆಗಿಲ್ಲ, ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೀಗೆ ಪರಿಸ್ಥಿತಿ ಹದಗೆಟ್ಟಿ ಹೋಗುತ್ತಿದೆ. ಸರ್ಕಾರ ಮಾಡಬೇಕಾಗಿರುವ ಇಂತಹ ಅನೇಕ ಕೆಲಸಗಳು ಬಾಕಿ ಉಳಿದಿವೆ. ಹೀಗಿದ್ದರೂ ಕೂಡ ನನ್ನ ಸರ್ಕಾರ ಇವೆಲ್ಲಾ ಮಾಡಿವೆ ಎಂದು ಮಾನ್ಯ ರಾಜ್ಯಪಾಲರ ಕೈಯಲ್ಲಿ ಹೇಳಸುತ್ತಾರೆ. ಈಗಾಗಲೇ ಕರ್ನಾಟಕ ಅಬಕಾರಿ ಇಲಾಖೆಯಲ್ಲಿ 6,000 ಕೋಟಿ ರೂಪಾಯಿಗಳನ್ನು ಸಚಿವರಿಗೆ ಕೊಟ್ಟಿದ್ದೇವೆ ಅಥವಾ ಸರ್ಕಾರಕ್ಕೆ ಕೊಟ್ಟಿದ್ದೇವೆ ಎಂದು ಅಪಾದನೆಗಳು ಬರುತ್ತಿವೆ. ಇದನ್ನು ಮಾಡಿದ್ದು ನನ್ನ ಸರ್ಕಾರ ಎಂದು ಬರೆದುಕೊಡಬೇಕಾಗಿತ್ತು. ಎಲ್ಲಾ ಶಾಲಾ–ಕಾಲೇಜುಗಳಲ್ಲಿ, ಹೋಟೆಲ್‌ಗಳಲ್ಲಿ, ಪಬ್‌ಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಡ್ರಗ್ಸ್, ಗಾಂಜಾ ಇವೆಲ್ಲಾ ಸಿಗುತ್ತಿವೆ. ಇವು ನನ್ನ ಸರ್ಕಾರದ ಕೊಡುಗೆ ಎಂದು ಹೇಳಸಬೇಕಾಗಿತ್ತು. ಆಮೇಲೆ ಓಲೈಕೆ ಮಾಡುವಂಥದ್ದು, ಈಗ ಆರ್.ಸಿ.ಬಿ. ಪಂದ್ಯಾವಳಿಯಲ್ಲಿ 11 ಜನರು ಕಾಲ್ತುಳಿತಕ್ಕೆ ಸಿಕ್ಕಿ ಸಾವುಗೀಡಾದರು, ಇದಕ್ಕೆ ಕಾರಣ ನನ್ನ ಸರ್ಕಾರ ಎಂದು ಹೇಳಸಬೇಕಾಗಿತ್ತು. ಸರ್ಕಾರಿ ನೌಕರರಿಗೆ ಹಾಗೂ ಸಿಬ್ಬಂದಿಗಳಿಗೆ ಸಂಬಳ ಕೊಡಲು ಆಗದ ನನ್ನ ಸರ್ಕಾರ ಎಂದು ಹೇಳಸಬೇಕಾಗಿತ್ತು. ಅನೇಕ ಸಿಬ್ಬಂದಿಗಳ ಸಂಬಳ ಕೊಡುವುದಕ್ಕಾಗಿಲ್ಲ. ಕರ್ನಾಟಕ ರಾಜ್ಯದ ಅಧಿಕಾರಿಗಳಿಗೆ ತೇಜೋವಧೆ ಮಾಡಿರುವಂಥದ್ದು. ತಪ್ಪು ಮಾಡಿಸಿಬಿಡುವುದು, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು. ತಪ್ಪು ಮಾಡುವವರು ನಾವು. 11 ಜನರು ಕಾಲ್ತುಳಿತಕ್ಕೆ ಒಳಗಾಗಿದ್ದಾಗ ವರದಿ ಬಂದಿರುವುದೇನೆಂದರೆ ಇದನ್ನು ಮಾಡಬಾರದಾಗಿತ್ತು ಎಂದು. ಸರ್ಕಾರ ಅವಕಾಶ ಕೊಟ್ಟ ಮೇಲೆ ಜವಾಬ್ದಾರಿ ಅಥವಾ ತಪ್ಪಾಗಿದ್ದನ್ನು ಸರ್ಕಾರ ಹೊತ್ತುಕೊಳ್ಳಬೇಕು. ಸರ್ಕಾರ ಪೋಲೀಸರ

ಮೇಲೆ ಹಾಕಿಬಿಡುತ್ತದೆ. ಈಗ ಯಾವುದಾದರೂ corruption charges ಬಂದರೆ ಅದನ್ನು ಮಾಡಿಸುವವರು ಯಾರು? ಮತ್ತೆ ಅವರನ್ನು ಶಿಕ್ಷಿಸುವುದು, ಅವರನ್ನು ಹೊರ ಹಾಕುವುದು, ಇದು ಯಾವ ನ್ಯಾಯ? ಈ ರೀತಿ ಅನೇಕ ವಿಚಾರಗಳನ್ನು ನಾನು ಪಟ್ಟಿ ಮಾಡಿ ಹೇಳಬಹುದು. ಆದರೆ ನನಗೆ ಅಷ್ಟು ಬೇಕಿಲ್ಲ. ಆದರೆ, ಇವತ್ತು ನಮ್ಮ ಕೈಯಲ್ಲಿ ಅಧಿಕಾರವಿದೆ ಎಂದು ದುರ್ಬಳಕೆ ಮಾಡುವಂಥದ್ದು ಸರಿಯಲ್ಲ. ಈಗ ರಾಜ್ಯಪಾಲರ ಅಧಿಕಾರವನ್ನು ನಾವು ಪ್ರಶ್ನಿಸುವಂಥದ್ದಲ್ಲ. ಈ ಸದನ ಮತ್ತು ನಾವು ಒಟ್ಟಿಗೆ ಹೋಗಬೇಕು. ಇದು ಸರ್ಕಾರವಾಗಿ ಕೆಲಸ ಮಾಡಬೇಕು. ಸದನದಿಂದ ಹೊರಗಡೆ ನಮ್ಮ ಪಕ್ಷಗಳು ಇರುತ್ತವೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಒಕ್ಕೂಟ ವ್ಯವಸ್ಥೆಯಲ್ಲಿ ಈಗ ನಾವು ಮಾಡುತ್ತಿರುವುದೇನು? ಇಲ್ಲಿ ಎಂತಹ ಪರಿಸ್ಥಿತಿ ಬಂದಿದೆ ಎಂದರೆ, ಸರ್ಕಾರ ಹಣವನ್ನು ಹುಂಡಿಯಿಂದ ತೆಗೆಯುವುದಿಲ್ಲ, ಅದು ತೆರಿಗೆಯ ರೂಪದಲ್ಲಿ ಜನರು ಕೊಡತಕ್ಕಂಥ ಶ್ರಮದ ಹಣ. ಅದನ್ನು ನಾವು ತೆಗೆದುಕೊಂಡು ಏನೇನು ಮಾಡುತ್ತಿದ್ದೇವೆ? ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ಆ ಹಣವನ್ನು ನಾವು ಬಳಸುತ್ತಿದ್ದೇವೆ. ಅವರೇನು ಪುಟಗಟ್ಟಲೇ ಜಾಹೀರಾತುಗಳಲ್ಲಿ ಪ್ರಕಟಣೆಗಳನ್ನು ಕೊಡುತ್ತಿದ್ದಾರೆ ಇದು ಯಾವ ಪಕ್ಷದ ಖಾತೆಯಿಂದಲೂ ಹಣ ಕೊಟ್ಟಿರುವುದಲ್ಲ. ಜನರ ಹಣದಿಂದ ಒಂದು ಆಡಳಿತ ಸರ್ಕಾರವನ್ನು, ಮತ್ತೊಂದು ಸರ್ಕಾರ ಕೇಂದ್ರ ಸರ್ಕಾರವನ್ನು ಮೂದಲಿಸುವಂತಹ, ಅಪಮಾನಗೊಳಿಸುವಂತಹ, ಅವರ ನಡೆಯನ್ನು ವಿರೋಧಿಸುವಂತಹ ಕೆಲಸವನ್ನು ಅವರು ಪಕ್ಷದಿಂದ ಮಾಡಿಕೊಳ್ಳಲಿ. ಅವರು ಸರ್ಕಾರದಿಂದ ಏಕೆ ಮಾಡುತ್ತಾರೆ? ಇದು ಯಾರ ಹಣ? ಇತ್ತೀಚೆಗೆ ನಾನು ನೋಡಿದ್ದೇನೆ, ಎರಡೂವರೆ ವರ್ಷಗಳಿಂದ ಪತ್ರಿಕೆಗಳಲ್ಲಿ ಜಾಹೀರಾತು ಕೊಡುವುದಕ್ಕೆ ಯಾವ್ಯಾವ ಕಾಲದಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆ ಪಟ್ಟಿ ಕೊಡಿ ಎಂದು ಕೇಳಿದೆ. ಪಟ್ಟಿ ಕೊಡುವುದಕ್ಕಾಗುವುದಿಲ್ಲ ಎಂದು ಬರೆದು ಕೊಟ್ಟಿದ್ದಾರೆ. ಕಡಿಮೆ ಮಾಹಿತಿ ಇದೆ, ಮಾಹಿತಿ ತಂದ ಮೇಲೆ ಆಮೇಲೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅಂದರೆ, ಅವರಿಗೆ ನೀವು ಹಣ ಕೊಟ್ಟಿಲ್ಲವೇ? ಹಣ ಕೊಡದೆ ಅವರು ಹೇಗೆ ಪ್ರಕಟಣೆ ಮಾಡುವುದಕ್ಕೆ ಸಾಧ್ಯವಿದೆ? ಇದೆಲ್ಲಾ ಮಾಡಿದ ಮೇಲೆ ಮಾಹಿತಿ ಇರಲೇಬೇಕು. ಆದರೆ ಮಾಹಿತಿ ಕೊಡಲಿಲ್ಲ. ನಾನು ಇತ್ತೀಚೆಗೆ ಗಮನಿಸಿದೆ, ಮೊಗಸಾಲೆಯಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ ವಿಶೇಷವಾದ ಪತ್ರಿಕೆಯನ್ನು ನಾನು ಇತ್ತೀಚೆಗೆ ನೋಡಿದೆ. ಆ ಪತ್ರಿಕೆಯ ಹೆಸರು 'ನ್ಯಾಷನಲ್ ಹೆರಾಲ್ಡ್.' ಕಳೆದ ತಿಂಗಳು ಸರ್ಕಾರ ಜಾಹೀರಾತು ಕೊಟ್ಟಿರುವುದರಲ್ಲಿ ಇಲ್ಲಿಗೆ ಸಂಬಂಧಪಡದಿರುವಂತಹ ಒಂದು ಪತ್ರಿಕೆಗೆ ಕೋಟ್ಯಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ ಎನ್ನುವ ಮಾಹಿತಿ ಬಂದಿತು. ಅಪಾದನೆ ಬಂದ ಮೇಲೆ ನಾನು ತಕ್ಷಣ ಇಲ್ಲಿಯ ಪತ್ರಿಕೆಯನ್ನು ನೋಡಿದೆ, ಕೆಲವು ಪತ್ರಿಕೆಗಳ ನನ್ನ ಸ್ನೇಹಿತರುಗಳನ್ನು ನಾನು ಕೇಳಿದೆ. ನಾವು ೬೦೦, ೭೦೦, ೮೦೦

ಪತ್ರಿಕೆಯನ್ನು ಪ್ರಿಂಟ್ ಮಾಡುತ್ತೇವೆ. ಎಲ್ಲೆಲ್ಲಿ ಬೇಕು ಅಲ್ಲಿ ಹಾಕುತ್ತೇವೆ ಎಂದು ಹೇಳಿದರು. ಅಂದರೆ, circulation ನಲ್ಲೇ ಇಲ್ಲದಿರುವಂತಹ ಒಂದು ಪತ್ರಿಕೆ ಕೋರ್ಟ್‌ನಲ್ಲಿ ದಾವೆ ಹೂಡಲಾಗಿ, ಅದರಲ್ಲಿ ಯಾರ್ಯಾರು ಅಪಾದಿತರಾಗಿ ಸಿಕ್ಕಿಬಿದ್ದಿದ್ದಾರೆ, ಕೋರ್ಟ್‌ಗಳಿಗೆ ಅಲೆಯುತ್ತಿರುವಂತಹ ಸಂದರ್ಭಗಳಲ್ಲಿ ಅದಕ್ಕೆ ಸರ್ಕಾರದ ಹಣವನ್ನು ಕೋಟಿ ಕೋಟಿ ರೂಪಾಯಿಗಳನ್ನು ಕೊಡುವುದು ಹೇಗೆ ಸಾಧ್ಯ? ಅದರಲ್ಲಿ ನಾನು ನೋಡಿದೆ. ಮೊನ್ನೆ ಮತ್ತೊಂದು ಸರ್ಕಾರದ ಜಾಹೀರಾತು ಇತ್ತು. ಅದು ಯಾವುದೆಂದರೆ ತೆಲಂಗಾಣ ರಾಜ್ಯದ್ದು. ಒಂದು ಪಕ್ಷಕ್ಕೆ ಮೂರು ಸರ್ಕಾರಗಳಿವೆ. ಈ ಮೂರು ಸರ್ಕಾರಗಳು ಒಂದು ಪಕ್ಷವನ್ನು ನಡೆಸುವುದಕ್ಕೆ ಅಧಿಕಾರದಲ್ಲಿದ್ದೇವೆ ಎಂದು ಜನರ ಹಣವನ್ನು ಪೋಲು ಮಾಡುವಂಥದ್ದು, ಜನರಿಗೆ ಅವಶ್ಯಕತೆಗಳನ್ನು ನೀಗಿಸಲಾರದೆ ಅದಕ್ಕೆ ಜಾಹೀರಾತನ್ನು ಕೊಟ್ಟು ಸರ್ಕಾರ ಹಣ ನುಂಗುವುದು ಸರಿ ಇದೆಯೇ? ಇಂಥವುಗಳನ್ನು ಮೊದಲು ಖಂಡಿಸಬೇಕು. ಇವುಗಳಿಗೆ ಪರಿಹಾರ ಆಗಬೇಕು. ಇಂಥವುಗಳನ್ನು ಸರ್ಕಾರ ಮಾಡದಿರುವುದು ಸರಿಯಲ್ಲ.

(ಮುಂದು)

(79) 30/01/2026 1:00 ಡಿಎಸ್(ಎಸ್‌ಪಿಆರ್)/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿ ಮತ್ತು ಬಿಟಿ ಸಚಿವರು):–** ಮಾನ್ಯ ಸಭಾಪತಿಯವರೆ, ನನ್ನದೊಂದು ಮನವಿ ಇದೆ.

**ಸಭಾಪತಿಯವರು:–** ಅವರು ಮಾತನಾಡಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಈಗ ನಾನು ಯೀಲ್ಡ್ ಆಗಿಲ್ಲ.

**ಸಭಾಪತಿಯವರು:–** ಒಂದು ನಿಮಿಷ ಅವರು ಹೇಳುವುದನ್ನು ಕೇಳಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ನಾನು ಅವಾಗಿನಿಂದಲೂ ಕೇಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಸರ್ಕಾರದ ಕ್ರಮವನ್ನು ವಿರೋಧಿಸುವುದು ನನ್ನ ಕರ್ತವ್ಯ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಯಾವ ನಿಯಮ ಉಲ್ಲಂಘನೆ ಆಗಿದೆ ಎಂದು ಹೇಳಲಿ. ಅರ್ಧ ಗಂಟೆಯಿಂದ ಕೇಳುತ್ತಿದ್ದೇವೆ. ... **(ಗೊಂದಲ)** ಯಾವ ನಿಯಮ ಉಲ್ಲಂಘನೆಯಾಗಿದೆ? ಇಂತಹ

ನಿಯಮ ಉಲ್ಲಂಘನೆಯಾಗಿದೆ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಈಗ ಉದಾಹರಣೆಗೆ ಹೇಳುವುದಾದರೆ..,

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಮಾಡಿದ ತಪ್ಪುಗಳನ್ನು ಹೇಳುವುದು ನನ್ನ ಕರ್ತವ್ಯ, I am not yielding.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಹಿಂದಿನ ಸರ್ಕಾರದಲ್ಲಿ ಅಮರ ಉಜ್ವಲ, ದೈನಿಕ್ ಭಾಸ್ಕರ ಪತ್ರಿಕೆಗಳಲ್ಲಿ ಮೋದಿಜಿಯವರಿಗೆ …

**Sri CHALAVADI T.NARAYANASWAMY:–** I am not yielding.

**ಸಭಾಪತಿಯವರು:–** ಅವರು ಯೀಲ್ಡ್ ಆಗಿಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಮೋದಿಜಿಯವರಿಗೆ ಧನ್ಯವಾದ ಹೇಳಿ ಕೊಟ್ಟಿದ್ದಾರೆ.

**ಸಭಾಪತಿಯವರು:–** ಅವರು ಯೀಲ್ಡ್ ಆಗಿಲ್ಲ. ಶ್ರೀ ಪ್ರಿಯಾಂಕ್ ಖರ್ಗೆರವರೇ ಅವರು ಹೇಳುವುದನ್ನು ನೀವು ಕೇಳಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಸುಳ್ಳು ಹೇಳುವುದಕ್ಕಾಗುತ್ತದೆಯೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇಲ್ಲಿ ನಾವು ಸುಳ್ಳು ಹೇಳುವುದಿಲ್ಲ. ಸುಳ್ಳು ಹೇಳುವವರಾಗಿದ್ದರೆ ನಾವು … **(ಗೊಂದಲ)**

**ಸಭಾಪತಿಯವರು:–** ಖರ್ಗೆಯವರೇ, ಅವರು ಹೇಳುವುದನ್ನು ಕೇಳಿ. ನೀವು ಕೇಳೋವುದಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, **(ಗೊಂದಲ)** ಎಂದು ಅವರು ಹೇಳಲಿ. ಸುಮ್ಮನೆ ಸುಳ್ಳು ಹೇಳಿ, ಮೋಸ ಮಾಡುವವರನ್ನು ನಾವು ರೆಸ್ಪಾಂಡ್ ಮಾಡುತ್ತಿರುವುದು. **(ಗೊಂದಲ)** ಆ ಸ್ಥಾನಕ್ಕೆ ಅವರು ಅಗೌರವ ತೋರುತ್ತಿದ್ದಾರೆ.

**ಸಭಾಪತಿಯವರು:–** ನೀವು ಉತ್ತರ ಹೇಳುವಾಗ ಹೇಳಿ.

**Sri CHALAVADI T.NARAYANASWAMY:–** I am not yielding.

**Sri PRIYANK KHARGE:–** No, no. I am talking to the Chair.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಇರುವುದು ಏನೆಂದರೆ,…

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಯಾವ ಕಾನೂನು ಉಲ್ಲಂಘನೆಯಾಗಿದೆ ಎಂದು ಅವರು ಹೇಳಲಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಈ ರೀತಿ ನನ್ನ ಸರ್ಕಾರ ಇಂತಿಂತಹ ಕೆಲಸಗಳನ್ನು ಮಾಡಿದೆ ಎಂದು ಅವರು ಹೇಳುತ್ತಾರಲ್ಲ;

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಅದಕ್ಕೆ ಉತ್ತರ ಕೊಡಬಹುದು. ಸುಮ್ಮನೆ ಹೀಗೆ ಸಂತೆಯಲ್ಲಿ ಭಾಷಣ ಮಾಡಿದಂತೆ ಮಾಡಿಕೊಂಡು ಹೋದರೆ...,

**ಸಭಾಪತಿಯವರು:–** ಉತ್ತರ ಹೇಳುವಾಗ ನೀವು ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರ ಪುಸ್ತಕದಲ್ಲಿ ಪ್ರಕಟಿಸಿ, ಹೇಳಿಸಬೇಕಾಗಿತ್ತು. ಅದನ್ನು ಬಿಟ್ಟು ಈ ಒಕ್ಕೂಟ ವ್ಯವಸ್ಥೆಯ ವಿರುದ್ಧವಾಗಿ ಅವರು ಬರೆದುಕೊಟ್ಟರೂ ಕೂಡ ಮಾನ್ಯ ರಾಜ್ಯಪಾಲರು ಅದನ್ನು ಓದಬೇಕು ಎಂದು ಇಲ್ಲ ಇದರಿಂದ ಅವರು ತಿರಸ್ಕರಿಸಿದರು. ಆದರೆ, ಅವರು ರಾಜ್ಯಪಾಲರಿಗೆ ಅಪಚಾರ ಮಾಡಿದ್ದನ್ನು ನಾನು ಖಂಡ ತುಂಡವಾಗಿ ಖಂಡಿಸಿ, ಈ ವಿಚಾರಗಳಲ್ಲಿ ಬಂದಿತಕ್ಕದ್ದನ್ನು ನಾನು ಏನೂ ಸಹ... ಅವರ ಕೈಯ್ಯಲ್ಲಿ ಸುಳ್ಳು ಹೇಳಿಸಲಿಕ್ಕೆ ಮಾಡಿದ್ದರೋ, ಅದಕ್ಕೆ ತಕ್ಕ ಶಾಸ್ತಿಯನ್ನು ಗೌರವಾನ್ವಿತ ರಾಜ್ಯಪಾಲರು ಮಾಡಿದ್ದಾರೆ ಎಂಬ ವಿಷಯವನ್ನು ಸದನದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ನಮಸ್ಕಾರ.

**ಸಭಾಪತಿಯವರು:–** ಮುಂದಿನದು ಶ್ರೀ ಸಿ.ಟಿ. ರವಿ ಅವರದ್ದು.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ಸ್ಪಷ್ಟೀಕರಣ. ಒಂದು ನಿಮಿಷ.

**ಸಭಾಪತಿಯವರು:–** ನಾನು ನಿಮಗೆ ಏನು ಹೇಳುತ್ತೇನೆ ಎಂದರೆ.., ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಸರ್ಕಾರಕ್ಕೆ ಉತ್ತರ ಹೇಳುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ಅವರು ಹೇಳಿದ್ದನ್ನು ನೀವು ನೋಟ್ ಮಾಡಿಕೊಳ್ಳಿ. ಅವರು ಏನು ಹೇಳುತ್ತಾರೆಯೋ, ಅದಕ್ಕೆ ಉತ್ತರ ಆಗ ಹೇಳಿ; ಈಗ ನಡು ನಡುವೆ ಬೇಡ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ,...

**ಸಭಾಪತಿಯವರು:–** ಈಗ ನೀವು ಉತ್ತರ ಹೇಳಿದರೆ...,

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಯಾವುದಕ್ಕೂ ಈಗ ನಾನು ಅವರಿಗೆ ಉತ್ತರ ಕೊಡುವುದಕ್ಕೆ ಹೋಗುತ್ತಿಲ್ಲ; ಅವರಿಗೆ ವಿಚಾರ ಗೊತ್ತಿದೆ. ಏಕೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ ಎಂದರೆ, ರಾಜ್ಯಪಾಲರು ಸರ್ಕಾರ ಕೊಟ್ಟ ಭಾಷಣವನ್ನು ಓದಲಿಲ್ಲ; ಏಕೆಂದರೆ, ರಾಷ್ಟ್ರಪತಿಗಳಿಗೆ ಅವಮಾನವಾಗುತ್ತದೆ ಎಂಬುದಾಗಿ ಇರುತ್ತದೆ. ಆದರೆ, as per law, ಅವರು ಹೇಳಿದಂತೆ, ಮೊದಲಿನ ಎರಡು ಸಾಲು ಹಾಗೂ ಕೊನೆಯ ಎರಡು ಸಾಲುಗಳನ್ನು ಹೇಳಿದ್ದಾರೆ. That means, it is deemed to be read and placed before the Legislative Assembly.

**ಸಭಾಪತಿಯವರು:–** ಇದನ್ನೆಲ್ಲಾ ಹೇಳಿದೀರಿ.

**Sri PRIYANK KHARGE:–** That means he concurred with the Government. ನಾವು ಏನು ಬರೆದಿದ್ದೇವೆ ಅದಕ್ಕೆ concurrence ಇದೆ. It is deemed to be read and placed.

**ಸಭಾಪತಿಯವರು:–** ಇದು ಸದನದಲ್ಲಿ ಆಗಿದೆ.

**Sri PRIYANK KHARGE:–** That means he has accepted that the Karnataka Government is correct.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಸಭಾನಾಯಕರು ಓದಿಲ್ಲ ಎಂದು ಹೇಳಿದರು. ಆಗ ಅವರು ಎಲ್ಲಿ ಇದ್ದರು.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಆದರೆ, ಅದನ್ನು accept ಮಾಡಿಲ್ಲ, ರಾಷ್ಟ್ರಪತಿಗಳಿಗೆ ಅವಮಾನವಾಗುತ್ತದೆ ಎಂಬುದಾಗಿ ಇವರು ಪದೇ ಪದೇ ಹೇಳುತ್ತಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಇದನ್ನು ಪದೇ ಪದೇ ಅಲ್ಲ ಬರುವಾಗಲೇ ಹೇಳಿದ್ದೇವೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಮಾತನಾಡಿಲ್ಲ ಎಂತಲ್ಲ; it is deemed to be read, placed and the facts are accepted ಎಂದರ್ಥ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–:–** ಮಾನ್ಯ ಸಭಾಪತಿಯವರೆ, ಶ್ರೀ ಪ್ರಿಯಾಂಕ್ ಖರ್ಗೆರವರಿಗೆ ಇಲ್ಲಿನ ಮಾಹಿತಿ ಇಲ್ಲ. ಇಲ್ಲಿ ಏನು ನಡೆಯಿತು ಎಂಬುದು ಅವರಿಗೆ ಗೊತ್ತಿಲ್ಲ. ನಾನು ಅವರ ಮಾತನ್ನು ವಿರೋಧಿಸಿಲ್ಲ. ಇಲ್ಲಿ ನಡೆದಿದ್ದು, ...

**ಸಭಾಪತಿಯವರು:–** ಇಲ್ಲಿ ಅದರ ಚರ್ಚೆ ಬೇಡ ಎಂದು ನಾನು ಹೇಳಿದರೂ ಮತ್ತೂ ಅದನ್ನೇ ಮಾಡುತ್ತೀರಲ್ಲ;

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರೇ ಅದನ್ನು ವಿರೋಧ ಮಾಡುತ್ತೇನೆ ಎಂದು ಹೇಳಿದ್ದರು. ಆ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಅದು ಬಿಟ್ಟು ಬೇರೆ ಏನೂ ಅಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ರಾಷ್ಟ್ರಪತಿಗಳಿಗೆ ಅವಮಾನವಾಗುತ್ತದೆ ಅದಕ್ಕೆ ಓದಲಿಲ್ಲ ಎಂದು ಅವರು ಹೇಳಿದರು. It is deemed to be read, placed and accepted.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಸಭಾನಾಯಕರು ಮಾತನಾಡಿದ್ದಕ್ಕೆ ಅವರು ವಿರೋಧ ಮಾಡಿದರು. **(ಗೊಂದಲ)** ಉಳಿದವನ್ನು ಸರಿ ಎಂದು ಹೇಳುತ್ತೀರಾ?

**(ಗೊಂದಲ)** ಕೇಂದ್ರ ಸರ್ಕಾರದ ವಿರುದ್ಧ ಇಷ್ಟು ಪಟ್ಟಿ ಇದೆ. ಮೋದಿಯವರ ನೇತೃತ್ವದಲ್ಲಿ ಏನೇನು ಜಾಹಿರಾತುಗಳನ್ನು ಕೊಡುತ್ತಿದ್ದಾರೆ ಅವೆಲ್ಲವೂ ಇದರಲ್ಲಿ ಇವೆ. **(ಗೊಂದಲ)** ಅವರು ಇಡೀ ರಾಷ್ಟ್ರಕ್ಕೆ ಮಾಡುತ್ತಿದ್ದೀರಿ **(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರ ಸ್ವತಂತ್ರರಿರುತ್ತಾರೆ. ಅದನ್ನು ಹೇಳುವುದಕ್ಕೆ **(ಗೊಂದಲ)** ನಾನು ಏನು ಹೇಳುತ್ತಿದ್ದೇನೆ ಎಂದರೆ,..

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೆ, ಇಡೀ ರಾಷ್ಟ್ರಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಅವರು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಏನು ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಬಾರದು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೆ, ಮಾತನಾಡಿದ ಸಂದರ್ಭದಲ್ಲಿ **(ಗೊಂದಲ)** ಅದರ ಬಗ್ಗೆಯೂ ಸಹಿತ ಮಾತನಾಡಬೇಕು. ಕೇಂದ್ರ ಸರ್ಕಾರವು ಯಾವ ರೀತಿಯಾಗಿ ಮಾಡುತ್ತಿದೆ ಎಂದರೆ,

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದ ವಿರುದ್ಧ ಮಾತನಾಡುವುದು ಇದ್ದರೆ, ನೀವು ಸ್ವತಂತ್ರರು ಇದ್ದೀರಿ. ನಿಮ್ಮನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ....,

**(ಗೊಂದಲ)**

**ಶ್ರೀ ಸುನೀಲ್‌ಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಈ ಜಾಹಿರಾತಿನ ಬಗ್ಗೆ ಹೇಳಿದ್ದು, ಇದರ ಬಗ್ಗೆ ಏನಾದರೂ ದಾಖಲೆ ಇದೆಯೇ? ಏಕೆಂದರೆ ಸದನಕ್ಕೆ ತಪ್ಪು ಮಾಹಿತಿ ಕೊಡುವುದು ಸರಿಯಲ್ಲ. ದಾಖಲೆಗಳೇನಾದರೂ ಇದ್ದರೆ, ಅವುಗಳನ್ನು....,

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ.

**ಶ್ರೀ ಸುನೀಲ್‌ಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೆ, ಜಾಹಿರಾತಿಗೆ ಸರ್ಕಾರದಿಂದ ದುಡ್ಡು ಕೊಟ್ಟಿದ್ದಾರೆ ಅದರಿಂದ ಕೊಟ್ಟಿದ್ದಾರೆ ಎಂದು ಹೇಳಿದರೆ, ...

ಶ್ರೀ **ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಉತ್ತರ ಕೊಡುವಾಗ ನಾನು ಅದನ್ನು ಕೊಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಸಭಾನಾಯಕರೇ, ಸರ್ಕಾರಕ್ಕೆ ಉತ್ತರ ಕೊಡುವಾಗ ಜವಾಬ್ದಾರಿ ಇರುತ್ತದೆ. ನೀವುಗಳು ಅದನ್ನು ಬರೆದುಕೊಳ್ಳಿ. ಹೀಗೆ ನಡು ನಡುವೆ ಮಾಡಿದರೆ ಹೇಗೆ ಸದನ ನಡೆಸಬೇಕು. ಮಂತ್ರಿಗಳಾದವರು ನೀವು ಅದನ್ನು ಏಕೆ ಹೇಳುತ್ತೀರಿ.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ:–** ಮಾನ್ಯ ಸಭಾಪತಿಯವರೇ, ನಾನು ಎರಡು ನಿಮಿಷಗಳ ಕಾಲ ಅನುಮತಿಯನ್ನು ಕೇಳಿದ್ದೇನೆ.

**ಸಭಾಪತಿಯವರು:–** ನೀವುಗಳು ಬರೆದುಕೊಂಡು, ನೋಟ್ ಮಾಡಿಕೊಂಡು, ಉತ್ತರ ಹೇಳುವಾಗ ಹೇಳಬೇಕು.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ನಾನು ಜಾಸ್ತಿ ಕ್ಲಾರಿಫೈ ಮಾಡುವುದಿಲ್ಲ.

**ಸಭಾಪತಿಯವರು:–** ಬೇಡವೆಂದು ನಾನು ಹೇಳುತ್ತಿದ್ದೇನೆ, ಸರ್ಕಾರ ಉತ್ತರ ಹೇಳುವಾಗ ಹೇಳಿದರೆ ಆಯಿತು. ಸರಿ ಆಯಿತು ಮಾತನಾಡಿ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು...

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ತಿರಸ್ಕಾರ ಮಾಡಿದ್ದಾರೆ ಎಂದು ಅವರು ಹೇಳುತ್ತಿದ್ದು, ಅದು ತಪ್ಪು.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಹೇಳಿದಂತಹ ವಿಷಯಗಳಲ್ಲಿ ಗಾಂಧಿಜಿಯವರ ಹೆಸರು ತೆಗೆದುಕೊಂಡು, ಗ್ರಾಮ ಗ್ರಾಮದಲ್ಲಿ ಗಾಂಧಿಜಿಯವರ ಹೆಸರು ಇದೆ ಎಂದು ಹೇಳಿದ್ದಕ್ಕೆ ಅವರು ಸ್ವಾಗತ ಮಾಡುತ್ತೇನೆ ಎಂದು ತಿಳಿಸಿದರು. ಗಾಂಧಿಜಿಯವರ ಹೆಸರನ್ನು ಹೇಗೆ ತೆಗೆದರು ಎನ್ನುವ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡಲಿಲ್ಲ. ಆದರೆ, ಅವರ ಹೆಸರು ಪ್ರತಿ ಗ್ರಾಮದಲ್ಲಿದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಸ್ವಾಗತ. ಏಕೆಂದರೆ, ಅವರು ಕಾಂಗ್ರೆಸ್‌ನಲ್ಲಿ ಬೆಳೆದು ಬಂದ ರೀತಿ, ನೀತಿ, ಇತ್ತೀಚೆಗೆ ಮಾತ್ರವೇ ಅವರು ಬಿ.ಜೆ.ಪಿ.ಗೆ ಹೋಗಿದ್ದಾರೆ. ಅದರಿಂದ ಅವರು ಅದನ್ನು ಮರೆಯುವುದಕ್ಕಾಗುವುದಿಲ್ಲ. ಕಾಂಗ್ರೆಸ್ ಆಗಲೀ ಗಾಂಧಿಜಿಯವರನ್ನು ಮರೆಯುವುದಕ್ಕಾಗುವುದಿಲ್ಲ. 73 ಮತ್ತು 74 ನೇ ಸಂವಿಧಾನ ತಿದ್ದುಪಡಿ...,

**ಸಭಾಪತಿಯವರು:–** ನೀವು ಉತ್ತರ ಹೇಳುವಾಗ ಅದನ್ನು ಹೇಳಿ. ಈಗ ಏಕೆ ಮಾತನಾಡುತ್ತೀರಿ? ನೀವು ಮಂತ್ರಿಗಳಿದ್ದೀರಿ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡು ವಿಷಯ ಇದೆ; ನೀವು ಎರಡು ನಿಮಿಷ ಅನುಮತಿಯನ್ನು ಕೊಡಬೇಕು.

**ಸಭಾಪತಿಯವರು:–** ನೀವು ಏತಕ್ಕೆ ಮಾತನಾಡುತ್ತೀರಿ?

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಸಂವಿಧಾನ ಬದ್ಧವಾಗಿ 73 ಮತ್ತು 74 ತಿದ್ದುಪಡಿಯನ್ನು ಜಾರಿ ಮಾಡಿದ ಮೇಲೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯಿತಿ, ನಗರ ಸಭೆ, ಪುರಸಭೆಗಳ

ಅಧಿಕಾರವನ್ನು ಈ ಕಾನೂನು ಮಾಡಿರುವುದರಲ್ಲಿ ತೆಗೆದುಕೊಂಡಿದ್ದಾರೆ. ಇದು ರಾಜಕೀಯವಾಗಿ ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದ್ದಾರೆ ಎಂದು ಹೇಳಬಹುದು. ಅಧಿಕಾರ ಸ್ವರಾಜ್ಯದಲ್ಲಿ ಸಂವಿಧಾನಬದ್ಧವಾಗಿ ಏನು ಪಂಚಾಯಿತಿ ಪ್ರತಿನಿಧಿಗಳಗೆ...., ಸ್ವರಾಜ್ಯ ಏನು ಹೇಳುತ್ತಾರೆ ಎಂದರೆ, ಗ್ರಾಮ ಸಭೆಗಳೇ ಅಧಿಕಾರವನ್ನು ಚಲಾಯಿಸಬೇಕು; ಅದನ್ನು ಇವರು ಮೊಟಕುಗೊಳಸಿ, ವಾಪಸ್ಸು ತೆಗೆದುಕೊಂಡಿದ್ದಾರೆ. ಒಳಮೀಸಲಾತಿ ವಿಷಯದಲ್ಲಿ....,

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾವು ಮಾತನಾಡಬೇಕು.

**ಸಭಾಪತಿಯವರು:–** ನೀವೂ ಮಾತನಾಡಿ; ಎಲ್ಲರೂ ಮಾತನಾಡಲಿ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿ ವಿಷಯದಲ್ಲಿ ಎಲ್ಲಾ ಅವಿರೋಧವಾಗಿ ಮಾತನಾಡಿ, ವಿಧೇಯಕವನ್ನು ಅನುಮೋದನೆಗೊಳಸಿದ್ದೀರಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಇದರ ಬಗ್ಗೆ ಇಲ್ಲಿ ಪ್ರೆಸೆಂಟೇಷನ್ ಮಾಡುತ್ತಾರೆ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿ ವಿಷಯದಲ್ಲಿ ಎರಡೂ ಸದನದಲ್ಲಿ ವಿಧೇಯಕವನ್ನು ಅನುಮೋದನೆಗೊಳಸಿದ್ದಾರೆ.

**ಸಭಾಪತಿಯವರು:–** ನಾನು ಹೇಳುವುದನ್ನು ನೀವು ತಿಳದುಕೊಳ್ಳಲಿಲ್ಲವೆಂದರೆ ಏನು ಮಾಡುವುದು? ನೀವು ಏತಕ್ಕೆ ಉತ್ತರವನ್ನು ಹೇಳುತ್ತೀರಿ? ಸರ್ಕಾರ ಉತ್ತರ ಹೇಳುವಾಗ ಹೇಳದರೆ ಆಯಿತು. ಮತ್ತೆ ನಡು ನಡುವೆ ನೀವು ಮಾತನಾಡುತ್ತೀರಿ; ನೀವು ಮಂತ್ರಿಗಳಾಗಿದ್ದೀರಿ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿಯನ್ನು ಎರಡೂ ಸದನದಲ್ಲಿ ಕೂಡ ಅನುಮೋದನೆಗೊಳಸಿದ್ದಾರೆ. **(ಗೊಂದಲ)** ಬೆಳಗಾವಿಯಲ್ಲಿ ತಾವೇ ಇದ್ದೀರಿ. ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ....,

**ಸಭಾಪತಿಯವರು:–** ಸಭಾನಾಯಕರೇ, ಇದು ಅನವಶ್ಯಕ. ಅವರು ಈಗ ಏತಕ್ಕೆ ಉತ್ತರ ಹೇಳುತ್ತಿದ್ದಾರೆ?

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಅವಿರೋಧವಾಗಿ ಮಾಡಿದರು ಎನ್ನುವ ತೀರ್ಮಾನವನ್ನು ಮಾನ್ಯ ರಾಜ್ಯಪಾಲರು ಇದನ್ನು ತಡೆಹಿಡಿದಿದ್ದಾರೆ. ಅವರು ಸ್ಪಷ್ಟೀಕರಣವನ್ನು ಕೇಳುತ್ತಿದ್ದು, ಅದನ್ನು ನೀಡಿದ್ದೇವೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಎಲ್ಲಾ ಪಕ್ಷಗಳು ಅವಿರೋಧವಾಗಿ ಇದರ ತೀರ್ಮಾನವನ್ನು ಕೊಟ್ಟಿದ್ದೇವೆ. ಅದನ್ನು ಜಾರಿ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಪದೋನ್ನತಿ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯವು ಒಂದು ತೀರ್ಮಾನವನ್ನು ....,

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳ. ಒಬ್ಬರಾದರೂ ನನ್ನ ಮಾತನ್ನು ಕೇಳದರೆ ನಾನು ಹೇಳಬೇಕಲ್ಲ?

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ..,

**ಸಭಾಪತಿಯವರು:–** ನೀವೂ ಎದ್ದು ನಿಂತು ಮಾತನಾಡಿ. ಅವರಿಗೆ ತಿಳಿಯಬೇಕು. ನಾನು ಬೇಡವೆಂದು ಹೇಳಿದರೂ ಅವರು ಮಾತನಾಡುತ್ತಾರೆ; ನಾನೇನು ಹೇಳಬೇಕು?

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ.

**ಸಭಾಪತಿಯವರು:–** ನೀವು ಯಾವುದಕ್ಕೆ ಉತ್ತರವನ್ನು ಹೇಳುತ್ತೀದ್ದೀರಿ? ಯಾವುದರ ಸಲುವಾಗಿ ನೀವು ಉತ್ತರವನ್ನು ಹೇಳುತ್ತೀದ್ದೀರಿ?

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ಸರ್ವೋಚ್ಚ ನ್ಯಾಯಾಲಯ...,

**ಸಭಾಪತಿಯವರು:–** ಏನ್ರೀ ನೀವು ಮಂತ್ರಿಗಳಾಗಿದ್ದು, ನಿಮಗೆ ತಿಳಿಯಬೇಕು.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೇ, ತೀರ್ಮಾನ ಕೊಟ್ಟಿದೆ. Most backwardness in advocacy represent ಮಾಡಬೇಕು ಎಂದಾಗ ಬ್ಯಾಕ್‌ಲಾಗ್ ಆಗಲೀ ಅಥವಾ ಪ್ರಮೋಷನ್ ಆಗಲೀ ಇದರ ಸರ್ವೋಚ್ಚ ನ್ಯಾಯಾಲಯವು ತೀರ್ಮಾನ ಕೊಟ್ಟಿದೆ. ಅದನ್ನು ಜಾರಿ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ವಿವರವಾಗಿ ಸಚಿವ ಸಂಪುಟದ ತೀರ್ಮಾನವನ್ನು **(ಗೊಂದಲ)** ಈ ವಿಷಯಗಳನ್ನು ತಾವು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜ್ಯಪಾಲರು ಇದನ್ನು ತಕ್ಷಣ ಜಾರಿ ಮಾಡಬೇಕು. ಅವಿರೋಧವಾಗಿ ತೀರ್ಮಾನವಾಗಿರುವ ಒಳ ಮೀಸಲಾತಿಯನ್ನು ಪೆಂಡಿಂಗ್ ಇಟ್ಟಿದ್ದಾರೆ. ತಮ್ಮ ಮುಖಾಂತರ ಅವರಿಗೆ ಮನವಿ ಮಾಡುತ್ತೇನೆ. ನಮಸ್ಕಾರ.

**ಸಭಾಪತಿಯವರು:–** ಶ್ರೀ ಪಿ.ಹೆಚ್.ಪೂಜಾರ್ ರವರೇ ಮಾತನಾಡಿ; ನಿಮ್ಮ ಹೆಸರನ್ನು ಇಲ್ಲಿ ಕೊಟ್ಟಿದ್ದಾರೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೆ, ನಾನು ಆಮೇಲೆ ಮಾತನಾಡುತ್ತೇನೆ.

**ಸಭಾಪತಿಯವರು:–** ನಿಮ್ಮ ಹೆಸರನ್ನು ಇಲ್ಲಿ ಕೊಟ್ಟಿದ್ದಾರೆ; ಹೀಗಾಗಿ ಕರೆದಿದ್ದೇನೆ. ನೀವು ಮಾತನಾಡಿ. ಮಾತನಾಡುವವರ ಪಟ್ಟಿಯನ್ನು ಕೊಟ್ಟಿದ್ದು, ಅದರಂತೆ, ನಾನು ಹೆಸರುಗಳನ್ನು ಕರೆಯುತ್ತಿದ್ದೇನೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೆ, ಶ್ರೀ ವೈ.ಎಂ.ಸತೀಶ್ ರವರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಆಯಿತು; ಶ್ರೀ ವೈ.ಎಂ.ಸತೀಶ್ ರವರೇ ನೀವು ಮಾತನಾಡಿ.

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ರಾಜ್ಯಪಾಲರ ಭಾಷಣವನ್ನು ಓದುವುದಕ್ಕೆ ಪ್ರಾರಂಭಿಸಿದೆನು. ಆದರೆ, ಕ್ರಮ ಸಂಖ್ಯೆ: 1 ರಲ್ಲಿಯೇ ನಾನು ನಿಂತುಬಿಟ್ಟೆ. ಇಲ್ಲಿ 'maintenance of law and order' ಎಂದು ತಿಳಿಸಿದ್ದಾರೆ. ನನಗೆ ಆಮೇಲೆ ತಾವು ವಿಶೇಷವಾದ ರಕ್ಷಣೆಯನ್ನು ನೀಡಬೇಕು. 1st Janauary ನಲ್ಲಿ ಏನಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಭಾಷಣದ ಮೊದಲ ಖಂಡಿಕೆಯ 7ನೇ ಸಾಲಿನಲ್ಲಿ 'maintenance of law and order' ಎಂಬುದಾಗಿ ಇದೆ. ಇದನ್ನು ದಾಟಿ ನಾನು ಓದಿಲ್ಲ. ಬಳ್ಳಾರಿಯಲ್ಲಿ ಆಗಿದ್ದ ಗಲಾಟೆ ಒಂದು ವಾಲ್ಮೀಕಿ ಪ್ರತಿಮೆ ಸ್ಥಾಪನೆಯ ಬಗ್ಗೆ ಗಲಾಟೆ ಆಯಿತು. ಬಳ್ಳಾರಿ ಶಾಸಕರ ನಡವಳಿಕೆ ಹೇಗೆ ಇತ್ತು ಎನ್ನುವುದನ್ನು ಎಲ್ಲರೂ

ಟಿ.ವಿ. ನೋಡಿದ್ದಾರೆ ಹಾಗೂ ದಿನಪತ್ರಿಕೆಗಳಲ್ಲಿ ಓದಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ನನ್ನದು ಎರಡ್ಮೂರು ಪ್ರಶ್ನೆಗಳಿವೆ. ಸರ್ಕಾರದ ಬಳಿ ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳ ಆದೇಶಗಳು ಸ್ಪಷ್ಟವಾಗಿ ಇವೆ. ಸರ್ಕಲ್ ಮಧ್ಯದಲ್ಲಿ ಪ್ರತಿಮೆ ಸ್ಥಾಪನೆ ಮಾಡಬಾರದು ಎಂಬುದಾಗಿದೆ.

(ಮುಂದು)

(೮೦) ೩೦.೧.೨೦೨೬ ೧.೧೦ ಎಸ್‌ಪಿಆರ್(ಪಿಕೆ):ಎಂಡಿ (ಸಭಾಪತಿಗಳ ಉಪಸ್ಥಿತಿ)

**ಶ್ರೀ ವೈ.ಎಂ.ಸತೀಶ್ (ಮುಂದುವರೆದಿದೆ)**

ಅಲ್ಲಿ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಯಾವ ಅಧಿಕಾರಿಗಳು ಅನುಮತಿ ಕೊಟ್ಟರು? Without any permission it is being installed. ಆ ಪ್ರತಿಮೆಗೆ ಅನುದಾನ ಎಲ್ಲಿಂದ ಬಂತು? ಶಾಸಕರು ತಮ್ಮ ಪಾಕೆಟ್‌ನಿಂದ ದುಡ್ಡು ಕೊಟ್ಟಿದ್ದಾರೆಯೇ? ಅಥವಾ K.L.L.A.D.S. (Karnataka Legislators Local Area Development Scheme) ಬಳಸಿಕೊಂಡು ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆಯೇ? ಈ ಒಂದು ಫಂಡ್ ಅನ್ನು ಪ್ರತಿಮೆ ನಿರ್ಮಾಣ ಮಾಡುವುದಕ್ಕೆ ಬಳಸಿಕೊಳ್ಳಲು ಸರ್ಕಾರದಲ್ಲಿ ನಿಯಮಗಳು ಇವೆಯೇ? ನನಗೆ ಗೊತ್ತಿರುವ ಮಟ್ಟಿಗೆ ಆ ರೀತಿ ಸರ್ಕಾರದ ನಿಯಮಗಳಿಲ್ಲ. ಅಂತಹ ನಿಯಮಗಳಿದ್ದರೆ ತಾವು ಹೇಳಬೇಕು. ನಿಯಮ ಇಲ್ಲದೇ ಇರುವಂಥದ್ದು, ಜಾಗ ಇಲ್ಲದೇ ಇರುವಂಥದ್ದಾಗಿದ್ದರೂ ಅಲ್ಲಿನ ಶಾಸಕರು ಪ್ರತಿಮೆಯನ್ನು ಸ್ಥಾಪನೆ ಮಾಡುತ್ತಾರೆ. ಅಲ್ಲಿ ಪ್ರತಿಮೆ ಸ್ಥಾಪನೆ ಮಾಡಿದ ಮೇಲೆ ನಾನು ಮಾತನಾಡುತ್ತಾ, ಈ ರೀತಿ ಪ್ರತಿಮೆಗಳನ್ನು ಸ್ಥಾಪನೆ ಮಾಡಬಾರದು ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಆದೇಶವಿದೆಯಲ್ಲವೇ ಎಂದು ಕೇಳಿದೆ. ಅದಕ್ಕೆ ಅವರು, ಆಯಿತು, ಹಾಗಾದರೆ ನೀವು ಕೋರ್ಟ್‌ಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಸ್ಟೇ ಆರ್ಡರ್ ತಂದು ಮಹರ್ಷಿ ವಾಲ್ಮೀಕಿಯವರಿಗೆ ಏಕೆ ಅವಮಾನ ಮಾಡಬೇಕು? ನನ್ನ ಪ್ರಶ್ನೆ ಇಷ್ಟೆ. ಮಾನ್ಯ ಸಭಾನಾಯಕರೇ, ದಯವಿಟ್ಟು ಕೇಳಬೇಕು. ನೀವು ನನಗೆ ರಕ್ಷಣೆ ಕೊಡಬೇಕು. ಎಂ.ಎಲ್.ಎ. ವಿರುದ್ಧ ಮಾತನಾಡಿದ್ದಾರೆ ಎಂದು ನಾನು ಅಲ್ಲಿ target ಆಗುತ್ತೇನೆ. ಬಳ್ಳಾರಿಯಲ್ಲಿ ನಮ್ಮ ಎಂ.ಎಲ್.ಎ. ವಿರುದ್ಧ ಮಾತನಾಡಿದರೆ ನಾವು target ಆಗುತ್ತೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):–** ಹಾಗಿದ್ದರೆ ನೀವು ಏಕೆ ಮಾತನಾಡುತ್ತೀರಿ?

**ಶ್ರೀ ವೈ.ಎಂ.ಸತೀಶ್:–** ಅಂದರೆ ಅಲ್ಲಿ ಗೂಂಡಾರಾಜ್ ನಡೆಯಲೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಅಲ್ಲಿ ನಡೆದಿರುವಂತಹ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರು, ನಾನು ಅಲ್ಲಿ target ಆಗುತ್ತೇನೆ; ನನಗೆ ರಕ್ಷಣೆ ಬೇಕು ಎಂದು ಹೇಳಿದರೆ, ನೀವು ಅವರ ಬಗ್ಗೆ ಏಕೆ ಮಾತನಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಅಂದರೆ, ಸತ್ಯವನ್ನು ಹೇಳಬಾರದೇ? ನಡೆದಿರುವಂತಹ ವಿಷಯವನ್ನು ಹೇಳುತ್ತಿದ್ದಾರೆ. ಎರಡು ಗುಂಪುಗಳ ನಡುವೆ ಜಗಳವಾಗಿ ತಮ್ಮ ಪಕ್ಷದ ಕಾರ್ಯಕರ್ತನನ್ನೇ ಕೊಂದು, ಅದನ್ನು ಬೇರೊಬ್ಬರ ಮೇಲೆ ಹಾಕುವುದಕ್ಕೆ ಹೋದರು. ಈ ರೀತಿ ಪರಿಸ್ಥಿತಿ ಇರುವಾಗ, ಇಂಥದ್ದನ್ನು ಹೇಳಬೇಕೋ ಬೇಡವೋ? ಅದರ ಬಗ್ಗೆ ನೀವೇಕೆ ಮಾತನಾಡುತ್ತಿದ್ದೀರಿ ಎಂದು ಕೇಳಿದರೆ, ಗೂಂಡಾಗಿರಿ ಮಾಡುವಂತಹ ಶಾಸಕರು ಹೇಗಾದರೂ ನಡೆದುಕೊಳ್ಳಲಿ ಎಂದು ಹೇಳಿದಂತಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಜನಾರ್ಧನ ರೆಡ್ಡಿಯವರು ತಮಗೆ ರಕ್ಷಣೆ ಬೇಕು ಎಂದು ಕೇಳಿದರೆ, ಅಮೆರಿಕದವರಿಂದ ರಕ್ಷಣೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇಲ್ಲಿಯ ಶಾಸಕರಿಗೆ ಅಮೆರಿಕದವರು ರಕ್ಷಣೆ ಕೊಡಬೇಕೇ? ಇಲ್ಲಿಯವರು ರಕ್ಷಣೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ.

**ಶ್ರೀ ವೈ.ಎಂ.ಸತೀಶ್:–** ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ಮೊದಲನೆಯ ಪ್ಯಾರದಲ್ಲಿ 7$^{th}$ line ನಲ್ಲಿ 'maintenance of law and order in Karnataka' ಎಂದಿದೆ. 'maintenance of law and order' ಎಂದರೆ ಏನು ಮಾಡಿದ್ದೀರಿ? ಬಳ್ಳಾರಿಯಲ್ಲಿ ಇರುವಂತಹ ಸಮಸ್ಯೆ ಬಗ್ಗೆ ನಿಮಗೆ ಗೊತ್ತಿದೆ. ಮುಂದುವರೆದು ಎರಡನೆಯ ಪುಟದಲ್ಲಿ 'policing and justice system' ಎಂದಿದೆ. ಅಲ್ಲಿ ಏನು 'policing and justice system' ನಡೆಯುತ್ತಿದೆ? ಜನವರಿ 1ನೇ ತಾರೀಖಿಗೆ ಒಬ್ಬರು ಎಸ್.ಪಿ.ಯವರು ಬಂದರು. ಅವರನ್ನು ನೀವು, ಈ reason ಗೆಂದು ವರ್ಗಾವಣೆ ಮಾಡಿದಿರಿ. ಆತ ಆಗತಾನೇ ಚಾರ್ಜ್ ತೆಗೆದುಕೊಂಡಿದ್ದರು. How can he be blamed? And he was removed from there. Secondly, there is an allegation that the DySP (Deputy Superintendent of Police) is involved in this. ಅದಕ್ಕೆ ಸರ್ಕಾರ ಎರಡು ದಿವಸಗಳ ಮುಂಚೆ ಇನ್ನೊಬ್ಬ DySP ಯವರನ್ನು ಅಲ್ಲಿಗೆ ವರ್ಗಾವಣೆ ಮಾಡಿದರು. He did not even take charge, the local politicians did not allow that DySP to take charge. He has been transferred to some other district.

ಅವರನ್ನು ಅರಿಸಿಕೆರೆ ಹತ್ತಿರ ಎಲ್ಲೋ ವರ್ಗಾವಣೆ ಮಾಡಿದ್ದಾರೆ. ಇದು policing and maintenance of law and order ಆಗಿದೆಯೇ? That means, ಸರ್ಕಾರ ಇಲ್ಲ supreme ಆಗಿದೆಯೇ ಅಥವಾ ಬಳ್ಳಾರಿಯ ಶಾಸಕರು supreme ಆಗಿದ್ದಾರೆಯೇ? ಬಳ್ಳಾರಿಯ ಶಾಸಕರು ಹೇಳಿದ ಹಾಗೆ ಸರ್ಕಾರ ಕೇಳುತ್ತಿದ್ದೆಯೇ? ಇಷ್ಟೊಂದು ಅನಾಹುತವಾಗಿದೆ, law and order problem, drugs problem, gambling problem ಗಳಿವೆ. ರಾಜ್ಯಪಾಲರ ಭಾಷಣದ ಮೊದಲ ಪ್ಯಾರದಲ್ಲಿ maintenance of law and order and good policing ಎಂದು ಬರೆಯುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ನಾನು ಇನ್ನು 2 ವಿಷಯಗಳಿಗೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ. "…unprecedented accomplishments….." ಎಂದು ಏನೇನೋ ಬರೆದಿದ್ದಾರೆ. ಇದರಲ್ಲಿ ನೀವು inclusive growth ಎನ್ನುವುದನ್ನು omit ಮಾಡಿದ್ದೀರಿ. Inclusive growth ಮಾಡುತ್ತಿಲ್ಲ ಎಂದು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ differently abled people ಇವರಿಗೆ ಏನಾದರೂ ಯೋಜನೆ ಘೋಷಣೆಯಾಗಿದೆಯೇ? ಪ್ಯಾರ 65ರಲ್ಲಿ, ಹೋದ ವರ್ಷ ಕಾರ್ಯಗತವಾಗಿದ್ದನ್ನೇ ಬರೆದಿದ್ದೀರಿ. ಹೊಸ ಯೋಜನೆಗಳೇನಾದರೂ ಮಾಡಿದ್ದೀರಾ? ಅಂದರೆ ನಿಮ್ಮದು inclusive growth ಇಲ್ಲ. ಇದು ಕೇವಲ ಮೇಲೆ ಮೇಲೆ growth ಅಷ್ಟೆ. ಇದರಲ್ಲಿ ಏನೇನು ಬರೆದಿದ್ದೀರೋ ಅದಕ್ಕೆ ನನ್ನ ಆಕ್ಷೇಪಣೆ ಇದೆ. Non–inclusive growth. Policing and justice system.. ನಾನು ನಿಮಗೆ ಒಂದು ಅಂಕಿ ಅಂಶವನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿ ಎಲ್ಲರೂ, ಕೋರ್ಟ್‌ಗೆ ಹೋದರೆ 10–20–50 ವರ್ಷಗಳಾಗುತ್ತವೆ, ಕೇಸ್‌ಗಳು ತೀರ್ಮಾನವಾಗುವುದಿಲ್ಲ ಎಂದು ಬೈಯುತ್ತೇವೆ; ನಮ್ಮ justice system and Judges ಗೆ ಟೀಕೆ ಮಾಡುತ್ತೇವೆ. ಆದರೆ, ದುರಾದೃಷ್ಟವಶಾತ್ ನಮ್ಮ ದೇಶದಲ್ಲಿ in more than 60 percent of the cases the Government is the litigant. ಈ 40% ಜನ ಏನು ಮಾಡುತ್ತಾರೆ? Government litigant ಆದರೆ, ಕೇವಲ dates, Public Prosecutor, Solicitor General, Advocate General ಇಲ್ಲ ಎಂದು ನೀವು ಕೇವಲ ದಿನಾಂಕಗಳನ್ನು ತೆಗೆದುಕೊಳ್ಳುತ್ತಿರುತ್ತೀರಿ. ಪರಿಸ್ಥಿತಿ ಹೀಗಿರುವಾಗ ಕೇಸ್‌ಗಳು ಹೇಗೆ ತೀರ್ಮಾನವಾಗುತ್ತವೆ? ಇದಕ್ಕೆ ನ್ಯಾಯಾಧೀಶರನ್ನು ಏಕೆ ದೂರುತ್ತೀರಿ? Why doesn't the Government stop litigating and govern? I am not speaking specifically about our state; it is a universal problem in this country. ನಾನು ಎರಡು ಇಲಾಖೆಗಳ ಕೆಲಸಕ್ಕೆ ಸಂಬಂಧಪಟ್ಟಂತೆ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. These Ministers are trying to do

commendable work. One is Revenue Department and other one is Labour Department. ಈಗ ಸದನದಲ್ಲಿ ಮಾನ್ಯ ಸಂತೋಷ್ ಲಾಡ್‌ರವರು ಇದ್ದಾರೆ ಎಂದು ಅವರನ್ನು ಹೊಗಳುತ್ತಿಲ್ಲ. ಅವರ ಜೊತೆ ನಾನು ಯಾವಾಗಲೂ ಜಗಳವಾಡುತ್ತಿರುತ್ತೇನೆ. ಇವೆರಡು ಇಲಾಖೆಗಳ ಕೆಲಸವನ್ನು ಮೆಚ್ಚಬೇಕು. Overall, while this address by the Governor showcases the achievements of this government, I cannot accept it on two grounds; policing and non–inclusiveness. ನೀವು ದಯವಿಟ್ಟು differently abled persons ನ್ನು human beings ಎಂದು consider ಮಾಡಿ ಅವರಿಗೆ ಸೌಲಭ್ಯಗಳನ್ನು ಕೊಡಿ. ಆದಷ್ಟು ಅವರ ಜೀವನಕ್ಕೆ ಸಹಾಯ ಮಾಡಿ. ಈಗ ನಾನು ಅಲ್ಲಿನ ಎಂ.ಎಲ್.ಎ.ಅವರ ಬಗ್ಗೆ ಸ್ವಲ್ಪ ಮಾತನಾಡಿದ್ದೇನೆ. ಇನ್ನೂ ಜಾಸ್ತಿ ಬೈಯಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ನನಗೆ additional security ಕೊಡುವುದಕ್ಕಾಗುತ್ತದೆಯೇ ಎಂದು ಮಾನ್ಯ ಸಭಾಪತಿಯವರನ್ನು ಕೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೆ, ಡಿಸೆಂಬರ್‌ನ ಅಧಿವೇಶನ ನಡೆಯುತ್ತಿದ್ದಾಗ ನಾನು ನನ್ನ ಪಿ.ಎ. ಅವರಿಗೆ, ಒಂದು draft ಮಾಡಿ, ಅದರಲ್ಲಿ, ನನಗೇನು P.S.O. (Personal Security Officer) ಕೊಟ್ಟಿದ್ದೀರೋ ಅದು ನನಗೆ ಬೇಡ, ನಾನು ಒಬ್ಬನೇ ಆರಾಮವಾಗಿ ಓಡಾಡುತ್ತೇನೆ ಎಂದು ಮಾನ್ಯ ಸಭಾಪತಿಯವರಿಗೆ ಪತ್ರ ಕೊಡುತ್ತೇನೆ ಎಂದು ಹೇಳಿದ್ದೆ. ಆದರೆ ಜನವರಿಯ ಘಟನೆ ನಡೆದ ಮೇಲೆ P.S.O. ಇರಲೇಬೇಕು ಎನಿಸುತ್ತಿದೆ. ಇಷ್ಟೇ ಅಲ್ಲದೇ, ಹೆಚ್ಚುವರಿ ಭದ್ರತೆಯನ್ನು ಸರ್ಕಾರ ಕೊಡುತ್ತದೆಯೇ ಎಂದು ಕೇಳಬಯಸುತ್ತೇನೆ. ನನಗೆ ಯಾವಾಗಲೂ ಒಬ್ಬನೇ ಓಡಾಡಿ ಅಭ್ಯಾಸವಾಗಿದೆ. ಈಗಲೂ ನನಗೆ ಯಾವ ಸೆಕ್ಯೂರಿಟಿ ಇಲ್ಲ. ಈಗ ನಾನು ಬಳ್ಳಾರಿಯಲ್ಲಿ ಅಡ್ಡಾಡಿದರೆ ಏನಾಗುತ್ತದೆಯೋ ಗೊತ್ತಿಲ್ಲ. ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

**ಸಭಾಪತಿಯವರು:–** ಒಟ್ಟು ೩೩ ಜನ ಮಾತನಾಡುವುದಕ್ಕೆ ಹೆಸರು ಕೊಟ್ಟಿದ್ದಾರೆ. 11 ಗಂಟೆಗಳ ಕಾಲಾವಕಾಶ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರೊಬ್ಬರನ್ನು ಬಿಟ್ಟು ಬೇರೆಯವರಿಗೆ 15 ನಿಮಿಷಕ್ಕಿಂತ ಹೆಚ್ಚು ಸಮಯ ಕೊಡುವುದಕ್ಕೆ ಆಗುವುದಿಲ್ಲ. ಮಾತನಾಡುವುದಕ್ಕೆ ಯಾರು ಹೆಸರು ಕೊಟ್ಟಿದ್ದಾರೋ ಅವರನ್ನು ಸೀನಿಯಾರಿಟಿವೈಸ್ ಕರೆಯುತ್ತೇನೆ. ನಿಮ್ಮ ಮುಖ್ಯ ಸಚೇತಕರುಗಳು ಏನು ಪಟ್ಟಿಯನ್ನು ಕೊಟ್ಟಿದ್ದಾರೋ ಆ ಪ್ರಕಾರ ನಾನು ಹೆಸರುಗಳನ್ನು ಕರೆಯುತ್ತೇನೆ.

(ಮುಂದು)

(81) 30-01-2026/1-20/bkp-ak

**ಶ್ರೀ ಶಿವಕುಮಾರ್.ಕೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಕರ್ನಾಟಕದ ರಾಜ್ಯಪಾಲರು ದಿನಾಂಕ 22-01-2026 ರಂದು ಗುರುವಾರ ಜಂಟಿ ಸದನವನ್ನು ಉದ್ದೇಶಿಸಿ ಮಂಡಿಸಿದ ಭಾಷಣವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಈ ಜಂಟಿ ಸದನವನ್ನು ಉದ್ದೇಶಿಸಿ ಮಾಡಿದಂತಹ ಭಾಷಣವನ್ನು ನೋಡಿದರೆ ನಾನು ಮೊದಲನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ಸಚಿವರನ್ನು ಹಾಗೂ ಸರ್ಕಾರಕ್ಕೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಬಹಳಷ್ಟು ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು, ಸರ್ಕಾರದ ಉದ್ದೇಶಗಳನ್ನು, ಸರ್ಕಾರ ಯಾವ ಒಂದು ದಿಕ್ಕಿನಲ್ಲಿ ಹೋಗಬೇಕೆನ್ನುವುದರ ಬಗ್ಗೆ ಒಂದು presentation ಅನ್ನು ಮಾಡಿದ್ದಾರೆ.

ಹಾಗಾಗಿ, ಕರ್ನಾಟಕ ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಏನಾದರೂ ಇನ್ನಷ್ಟು ಪ್ರಗತಿಪರವಾಗಿ ಮುಂದುವರಿಯಬೇಕಾದರೆ ಕೇಂದ್ರ ಸರ್ಕಾರದ ಸಹಕಾರ ಹೆಚ್ಚಿನ ರೀತಿಯಲ್ಲಿ ಸಿಗಬೇಕು. ಇವತ್ತು ಈ ದೇಶದಲ್ಲಿ ಏನು ಎರಡನೆಯ ಸ್ಥಾನದಲ್ಲಿ ಅಥವಾ ಮೂರನೆಯ ಸ್ಥಾನದಲ್ಲಿ ಒಂದು ಉತ್ತಮವಾದ ಸರ್ಕಾರ ನಮ್ಮ ರಾಜ್ಯ ನಡೆಸಿದೆ ಎಂದು ಏನು ಹೇಳುತ್ತಿದ್ದೇವೆ, ಅದನ್ನು ನಾವು ಮೊದಲನೆಯ ಸ್ಥಾನಕ್ಕೆ ತರುವುದರಲ್ಲಿ ಯಾವುದೇ ರೀತಿಯಲ್ಲಿ ಆಶ್ಚರ್ಯವಿಲ್ಲ. ಅದಕ್ಕೆ ಬೇಕಾಗಿರುವಂತಹ ಸಹಕಾರ ಎರಡು ಕಡೆಗಳಿಂದ ಆಗಬೇಕಾಗಿದೆ. ಇವತ್ತು ನಾವು ಫೆಡರಲ್ ಸಿಸ್ಟಮ್‌ನಲ್ಲಿ ಇರುವುದರಿಂದ ಕೇಂದ್ರ ಸರ್ಕಾರದ ಸಹಕಾರವೂ ಬೇಕು, ಮತ್ತು ಅದೇ ರೀತಿಯಲ್ಲಿ ರಾಜ್ಯ ಸರ್ಕಾರವು ಸಹ ಸ್ಪಂದಿಸಬೇಕಾದಂತಹ ಜವಾಬ್ದಾರಿ ಇದ್ದು, ಇದು ಎರಡೂ ಕಡೆಯೂ ಇರುತ್ತದೆ.

ಮಾನ್ಯ ಸಭಾಪತಿಯವರೆ, ಕಳೆದ 3-4 ದಿವಸಗಳಿಂದ ದಿನಾಂಕ 22ನೇ ತಾರೀಖಿನಂದು ಆದಂತಹ ಘಟನಾವಳಿಗಳ ಬಗ್ಗೆ ನಾನು ಮತ್ತೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಈಗಾಗಲೇ ತಾವು ಬಹಳಷ್ಟು ಶ್ರಮವಹಿಸಿ, ಎರಡೂ ಕಡೆಯವರಿಗೂ ಪರಿಸ್ಥಿತಿಯನ್ನು ಶಮನಗೊಳಿಸಿದ್ದು, ಇವತ್ತು ಸದನ ನಡೆಯುತ್ತಿರುವುದರಿಂದ ಮೊದಲನೆಯದಾಗಿ ತಮಗೆ ಅಭಿನಂದಿಸಲಿಕ್ಕೆ ನಾನು ಇಚ್ಛೆಪಡುತ್ತೇನೆ. ಏಕೆಂದರೆ, ಇವತ್ತು ಸದನ ಸುಗಮವಾಗಿ ನಡೆಯುವುದಕ್ಕೆ ತಾವುಗಳು ಕಾರಣಕರ್ತರಿದ್ದೀರಿ. ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನಿಯಾಗಿರುವಾಗ ಈ ದೇಶ ಕಂಡಂತಹ ಒಬ್ಬ ಉತ್ತಮವಾದ ರಾಷ್ಟ್ರಪತಿಯವರು ಎಂದರೆ ಅವರು ಶ್ರೀಮಾನ್.

ಕೆ.ಆರ್.ನಾರಾಯಣ್‌ರವರು. ಅವರಿಗೆ ಬರೆದುಕೊಟ್ಟಿದ್ದ ಭಾಷಣದ ಜೊತೆಗೆ ಎರಡೇ ಎರಡು ಮಾತನ್ನು ಹೇಳುತ್ತಾರೆ. "Whether the Constitution has failed or we have failed the Constitution" ಎಂದು ಹೇಳುತ್ತಾರೆ. ಅಂದು ಇಡೀ ದೇಶ ತಲ್ಲಣವಾಗಿ ಬಿಡುತ್ತದೆ. ರಾಷ್ಟ್ರಪತಿಗಳು ಈ ಎರಡು ವಾಕ್ಯಗಳ ಬಗ್ಗೆ editorials ಬರುತ್ತದೆ, discussions ಆಗುತ್ತದೆ, debates ಆಗುತ್ತದೆ. ಇಡೀ ದೇಶ ಈ ವಾಕ್ಯಗಳ ಬಗ್ಗೆ ಅವರು ಹೇಳಿರುವುದು ಸತ್ಯವೋ, ತಪ್ಪೋ ಎಂದು ಚರ್ಚೆ ಮಾಡುತ್ತದೆ. ಈ ವಿಚಾರ ಏತಕ್ಕೆ ಬರುತ್ತದೆ ಎಂದರೆ ಅಂದಿನ ಕೇಂದ್ರ ಸರ್ಕಾರ ಈ ಭಾರತದ ಸಂವಿಧಾನಕ್ಕೆ ೫೦ ವರ್ಷಗಳಾಗಿದೆ. ಅದನ್ನು ನಾವು ಪರಾಮರ್ಶೆ ಮಾಡಬೇಕು, ಹಾಗಾಗಿ, ನಾವು ಅದನ್ನು review ಮಾಡಬೇಕಾಗುತ್ತದೆ ಎಂದು ಹೇಳಿದಾಗ ಅದರ ಬಗ್ಗೆ ಇಡೀ ದೇಶದಲ್ಲಿ ವಿರೋಧವಾಗುತ್ತದೆ. ರಾಷ್ಟ್ರಪತಿಗಳು ಆ ಎರಡು ಮಾತುಗಳನ್ನು ಹೇಳಿರುತ್ತಾರೆ. ಆದರೆ, ಅದು ಆಗಿ ಒಂದು ತಿಂಗಳಿಗೆ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಬೇಕಾಗುತ್ತದೆ. ಅಂದಿನ ರಾಷ್ಟ್ರಪತಿಗಳಾದಂತಹ ಶ್ರೀಮಾನ್ ಕೆ.ಆರ್. ನಾರಾಯಣ್‌ರವರು ಎನ್.ಡಿ.ಎ. ಸರ್ಕಾರದ ಕ್ಯಾಬಿನೆಟ್ ಏನು ಕ್ಲಿಯರ್ ಮಾಡಿರುತ್ತದೆ. ಆ ಒಂದು ಪ್ರತಿಯನ್ನು ತೆಗೆದುಕೊಂಡು ನಾವು ಸರ್ಕಾರ ಸಂವಿಧಾನವನ್ನು ಪರಾಮರ್ಶೆ ಮಾಡುವುದಕ್ಕೆ ಒಂದು ಸಮಿತಿಯನ್ನು ರಚಿಸುತ್ತಿದ್ದೇವೆಂದು ಶ್ರೀಮಾನ್ ಕೆ.ಆರ್. ನಾರಾಯಣ್‌ರವರು ಹೇಳುತ್ತಾರೆ. ಅವರು ಅದನ್ನು skip ಮಾಡುವುದಿಲ್ಲ. Because, it was approved and decided by the then Cabinet headed by Mr. Atal Bihari Vajpayee. ನಾನು ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಇವತ್ತು ಪ್ರಾರಂಭ ಮಾಡಿದರು, ಒಂದು ನಿಮಿಷ, ಎರಡು ನಿಮಿಷ ಮಾತನಾಡಿದರು. ಜೈಹಿಂದ್, ಜೈ ಕರ್ನಾಟಕ ಎಂದು ಹೇಳಿ ಹೊರಟರು. ಆಕಸ್ಮಾತ್ ಏನಾದರೂ ಘನತೆವೆತ್ತ ರಾಜ್ಯಪಾಲರು ಬಹಳಷ್ಟು ಒಳ್ಳೊಳ್ಳೆಯ ಕಾರ್ಯಕ್ರಮಗಳು ಇತ್ತು. ಸರ್ಕಾರದ ಉದ್ದೇಶ ಚೆನ್ನಾಗಿ ಇತ್ತು. ಇದರ ಬಗ್ಗೆ ಅವರು ಮಾತನಾಡಿದ್ದರೆ. ಇನ್ನಷ್ಟು ಕರ್ನಾಟಕದ ಜನತೆಗೆ ಈ ಸರ್ಕಾರ ಏನು ಮಾಡುತ್ತಿದೆ ಎಂದು ಗೊತ್ತಾಗುತ್ತಿತ್ತು. He has every right to skip any paragraph. ಅದರ ಬಗ್ಗೆ ನಾನು ಏನೂ dispute ಮಾಡುವುದಿಲ್ಲ. ಆದರೆ, ಇವತ್ತು ಬಹಳಷ್ಟು ಕಾರ್ಯಕ್ರಮಗಳನ್ನು ಸರ್ಕಾರ ಕೊಡುತ್ತಿದೆ. ನಾನು ಸುಧೀರ್ಘವಾಗಿ ಏನು ನಮ್ಮ ಸ್ನೇಹಿತ ಸಹೋದ್ಯೋಗಿಗಳು ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ಅದನ್ನು ನಾನು ಪುನಃ ಹೇಳಲಿಕ್ಕೆ ಹೋಗುವುದಿಲ್ಲ. ಆದರೆ, ಬಹುಶಃ ಈ ದೇಶದಲ್ಲಿ ಏನಾದರೂ ಸಾಮಾಜಿಕ ನ್ಯಾಯವನ್ನು ಉತ್ತಮವಾಗಿ ಯಾವುದಾದರೂ ಸರ್ಕಾರ ಕೊಡುತ್ತಿದೆ ಎಂದರೆ ಜಮ್ಮು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೂ ನೋಡಿದರೂ ಸಹ ಅದು ಕರ್ನಾಟಕ ಸರ್ಕಾರ ಮಾತ್ರ ಎಂದು ಹೇಳಲಿಕ್ಕೆ

ಬಯಸುತ್ತೇನೆ. ಈ ಕರ್ನಾಟಕ ಸರ್ಕಾರದಲ್ಲಿ ಮಾತ್ರ ಸಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿರುವುದು ಎಂದು ಹೇಳಲಿಕ್ಕೆ ಇದನ್ನು ನಾನು ಸ್ಟ್ರಾಂಗ್ ಆಗಿ ಪ್ರತಿಪಾದನೆ ಮಾಡಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ನಾವು ಮಾಡಿದಂತಹ ಕಾರ್ಯಕ್ರಮಗಳು ಇರಬಹುದು, ಅವುಗಳ ಬಗ್ಗೆ ಯಾವ ಯಾವ ಕಾರ್ಯಕ್ರಮ ಯಾವ ರೀತಿಯಲ್ಲಿ impact ಮಾಡುತ್ತಿದೆ ಎಂದು ಈಗಾಗಲೇ ಹೇಳಿದ್ದಾರೆ. ಇಡೀ ದೇಶಕ್ಕೆ ಕರ್ನಾಟಕ ಒಂದು ಮಾದರಿಯಾಗಿದೆ. ಅದರ ಬಗ್ಗೆ ಯಾರಾದರೂ ತಮ್ಮ ಇಚ್ಛಾಶಕ್ತಿಯನ್ನು ತೋರಿಸಿದರಾ, ಇದುವರೆವಿಗೆ ಯಾವುದಾದರೂ ಸರ್ಕಾರ ಇದರ ಬಗ್ಗೆ ತೋರಿಸಿದೆಯೇ? ಇಡೀ ದೇಶದಲ್ಲಿ ಗೊಂದಲಗಳು ಇತ್ತು. Reservation in promotion ತಂದಂತಹ ಕೀರ್ತಿ ಕರ್ನಾಟಕ ಸರ್ಕಾರಕ್ಕೆ ಸೇರಬೇಕು. ಇವತ್ತು contract ನಲ್ಲಿ ಮೀಸಲಾತಿಯನ್ನು ತಂದಿರಬಹುದು, ಇಲ್ಲವೆಂದರೆ economic activity ನಲ್ಲಿ ಮೀಸಲಾತಿಯನ್ನು ತಂದಿರಬಹುದು. ನಮ್ಮ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದರು ಎಂದರೆ S.C.S.P./T.S.P. ಹಣವನ್ನು ಡೈವರ್ಟ್ ಮಾಡಿಬಿಟ್ಟಿದ್ದಾರೆ. ಸರ್ಕಾರ ಹೇಳುವಂತಹ ಈ ಕಾರ್ಯಕ್ರಮಗಳು failure ಆಗಿವೆ.

ಮಾನ್ಯ ಸಭಾಪತಿಯವರೆ, ಅವರ ಈ observation ಗೆ ನಾನು ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಈ ದೇಶದಲ್ಲಿ 17–18 ರಾಜ್ಯಗಳಲ್ಲಿ ಬಿ.ಜೆ.ಪಿ. ಆಡಳಿತ ಮಾಡುತ್ತಿದೆ. ಅಲ್ಲಿ ಈ ಕಾಯಿದೆಯನ್ನು ನೀವು ಏತಕ್ಕೆ ತರಲಿಲ್ಲವೆಂದು ನೀವುಗಳು ಯಾರು ಸಹ ಕೇಳಲಿಲ್ಲವೆನ್ನುವುದು ನನಗೆ ನೋವು ಆಗುತ್ತಿದೆ. ನಮ್ಮ ವಿರೋಧ ಪಕ್ಷದ ನಾಯಕರುಗಳಿಗೆ ಎಲ್ಲಾ ರೀತಿಯ ಅವಕಾಶಗಳಿವೆ. ಬಿ.ಜೆ.ಪಿ. ಕೋರ್ ಕಮಿಟಿಯಿಂದ ಹಿಡಿದು ಸರ್ಕಾರದಲ್ಲಿ ಎಲ್ಲಾ ಕಡೆ ಭಾಗವಹಿಸುವಂತಹ ಒಂದು ಅವಕಾಶ ಇದೆ. ಏತಕ್ಕೆ ಇದನ್ನು ಪ್ರತಿಪಾದನೆ ಮಾಡಿ ಇಡೀ ದೇಶದಲ್ಲಿ ಈ ಕಾಯಿದೆಯನ್ನು ತರಲಿಕ್ಕೆ ಇಚ್ಛೆಯನ್ನು ವ್ಯಕ್ತಪಡಿಸಲಿಲ್ಲ ಎನ್ನುವುದನ್ನು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು S.C.S.P./T.S.P. ನಲ್ಲಿ ಈ ವರ್ಷ 42 ಸಾವಿರ ಕೋಟಿಯಷ್ಟು ನಮಗೆ ಹಣವನ್ನು ಇಟ್ಟಿದ್ದಾರೆ. ಇದುವರೆಗೂ ಸುಮಾರು ಮೂರುವರೆ ಲಕ್ಷ ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ. ನಾವು ಈ ಮೂರುವರೆ ಲಕ್ಷ ಕೋಟಿ ರೂಪಾಯಿಗಳನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು ದಲಿತರನ್ನು economically liberate ಮಾಡಿದ್ದೇವೆಂದು ನಾನು ಇಲ್ಲಿ ವಾದ ಮಾಡಲಿಕ್ಕೆ ನಿಂತಿರುವುದಿಲ್ಲ. ಆದರೆ, ಯಾವ ದಲಿತರಿಗೆ ಕೇರಿಗಳಿಗೆ ಓಡಾಡಲಿಕ್ಕೆ ರಸ್ತೆ ಇರಲಿಲ್ಲ. Piped water ಯಾರಿಗೆ ಸಿಗುತ್ತಿರಲಿಲ್ಲ. ಕಚ್ಚಾ ಮನೆಗಳು ಯಾರಿಗೆ ಸಿಗುತ್ತಿರಲಿಲ್ಲ. ವಿದ್ಯಾರ್ಥಿ ವೇತನ ಯಾರಿಗೆ ಸಿಗುತ್ತಿರಲಿಲ್ಲ. ವಿದೇಶಕ್ಕೆ ವಿದ್ಯಾಭ್ಯಾಸ ಮಾಡಲು ಹೋಗಲಿಕ್ಕೆ ಯಾರಿಗೆ ಅವಕಾಶ ಸಿಗುತ್ತಿರಲಿಲ್ಲ, ಇದೆಲ್ಲವನ್ನು S.C.S.P./T.S.P. ಕಾರ್ಯಕ್ರಮದಲ್ಲಿ ಕೊಡಲಾಗಿದೆ.

ಇವತ್ತು S.C.S.P./T.S.P. ಕಾರ್ಯಕ್ರಮ ಬಂದಿರುವುದಕ್ಕೆ ನಾವೆಲ್ಲರೂ ಓಟ್ ಕೇಳಲಿಕ್ಕೆ ಬೀದಿಗಳಿಗೆ ಹೋಗುತ್ತಿದ್ದೇವೆ. ಮೊದಲು ನಾವು ಊರಿನ ಒಳಗಡೆ ಹೋಗುತ್ತಿರಲಿಲ್ಲ. ಹೊರಗಡೆ ನಿಂತುಕೊಂಡು ಓಟ್ ಕೊಡಿ ಎಂದು ಹೇಳಿ ಹೊರಟು ಹೋಗುತ್ತಿದ್ದರು. ಅಧಿಕಾರಿಗಳು ವಿಸಿಟ್ ಮಾಡುತ್ತಿರಲಿಲ್ಲ. Today, it is as clean as city corporation wards. ಇವತ್ತು ಯಾವುದೇ ಒಂದು ಕೇರಿಗಳಿಗೆ ಹೋದರೂ ಸಹ ಒಳ್ಳೆಯ ರಸ್ತೆಗಳು ಬಂದಿವೆ. ಮೂಲಭೂತ ಸೌಲಭ್ಯಗಳು ಅಭಿವೃದ್ಧಿಯಾಗಿವೆ. ಈ ರೀತಿಯದ್ದು economic activities ಹೆಚ್ಚಾಗಿದೆ. ಇವತ್ತು K.I.A.D.B. ನಲ್ಲಿ 100ಕ್ಕೆ 75% ರಷ್ಟು ಸಬ್ಸಿಡಿ ಮತ್ತು 25% ಹಣವನ್ನು ಕಟ್ಟಿದರೆ ನಮಗೆ K.I.A.D.B. ನಲ್ಲಿ ಅವಕಾಶಗಳನ್ನು ಕೊಡುತ್ತಿದ್ದಾರೆ. ಇದಕ್ಕೆ 75% ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ಇದನ್ನು ಏತಕ್ಕೆ ಬೇರೆ ಸರ್ಕಾರಗಳು ಮಾಡಲಿಲ್ಲವೆಂದು ಕೇಳಲಿಕ್ಕೆ ಬಯಸುತ್ತೇನೆ. ಬಹಳಷ್ಟು activities ಆಗಿದೆ. ಇವತ್ತು M.G.N.R.E.G. Scheme ಬಗ್ಗೆ ಹೇಳಿದರು. ನಾನು ನರೇಗಾ ಬಗ್ಗೆ ಮಾತನಾಡದಿದ್ದರೂ. ನರೇಗಾ ಬಗ್ಗೆ ನಾನು ಒಂದೆರಡು ನಿಮಿಷ ಮಾತನಾಡಿ ಮುಂದಿನ ವಿಷಯಗಳಿಗೆ ಹೋಗುತ್ತೇನೆ. ಏಕೆಂದರೆ, ನಾಡಿದ್ದು ಒಂದು academic presentation ಅನ್ನು ಒಂದು ಗಂಟೆ ಸಮಯ ಮಾಡಬೇಕೆಂದಿದ್ದೇನೆ. ಕೇಳುವವರೆಲ್ಲಾ ಸಂತೋಷವಾಗಿ ವಿರೋಧ ಮಾಡದೇ ಸೈಲೆಂಟ್ ಆಗಿ ಕೇಳಿದರೆ ಬಹಳ ಒಳ್ಳೆಯದು. ಏಕೆಂದರೆ, ನರೇಗಾ ಜಗತ್ತಿನಲ್ಲಿ ಏನು ಮಾಡಿದೆ, ಭಾರತದಲ್ಲಿ ಏನು ಮಾಡಿದೆ ಎನ್ನುವುದರ ಬಗ್ಗೆ ನಾನು ವಿಸ್ತಾರವಾಗಿ ಅಂದು ಮಾತನಾಡುತ್ತೇನೆ.

ಮಾನ್ಯ ಸಭಾಪತಿಯವರೆ, ಎಲ್ಲರೂ ನುಂಗಣ್ಣಗಳು ಇದ್ದಾರೆಂದು ಇವರು ಹೇಳಿದರು. ಅಲ್ಲಿ ಲೂಟಿಯಾಗಿಬಿಟ್ಟಿದೆ. ಇಲ್ಲಿ ದುರಪಯೋಗವಾಗಿದೆ. ರಸ್ತೆಯನ್ನು ಮಾಡಿಸಲಿಕ್ಕೆ ದುಡ್ಡು ಇರಲಿಲ್ಲ. ಜಲ್ಲಿ ಕಲ್ಲು ಹಾಕಲಿಕ್ಕೆ ದುಡ್ಡು ಇರಲಿಲ್ಲ. ಹೂಳು ಎತ್ತಲಿಕ್ಕೆ ದುಡ್ಡು ಇರಲಿಲ್ಲ. We have created works worth crores of rupees. ಲಕ್ಷಾಂತರ asset ಗಳನ್ನು ನಾವು create ಮಾಡಿದ್ದೇವೆ. ಇವತ್ತು ಮಾನ್ಯ ಶ್ರೀ ಚೆಲವರಾಯ ಸ್ವಾಮಿಯವರ ಊರಿಗೆ ಹೋದರೂ ಸಹ ಅಂತಹ ಒಂದು ಒಳ್ಳೆಯ ರಸ್ತೆ ಇರಲಿಲ್ಲ. ಏಕೆಂದರೆ, ನಮ್ಮ ಊರುಗಳಲ್ಲಿ ಯಾವ ರೀತಿಯಲ್ಲಿ ಇತ್ತು ಎನ್ನುವುದು ಗೊತ್ತಿದೆ. ಇವತ್ತು ಒಂದು ಕಾರ್ಯಕ್ರಮವಾಗಿದೆ ಎಂದು ಹೇಳಿ ಒಂದು ಅಪಾದನೆಯನ್ನು ಮಾಡಬಹುದು. ಗುಜರಾತಿನಲ್ಲಿ, ಮಧ್ಯಪ್ರದೇಶದಲ್ಲಿ, ಉತ್ತರ ಪ್ರದೇಶದಲ್ಲಿ, ಉತ್ತರಾಖಾಂಡಾದಲ್ಲಿ, ಹಿಮಾಚಲ ಪ್ರದೇಶದಲ್ಲಿ, ಅರುಣಾಚಲ ಪ್ರದೇಶದಲ್ಲಿ , ಆಸ್ಸಾಂನಲ್ಲಿ, ಗೋವಾದಲ್ಲಿ ಇಡೀ ದೇಶದಲ್ಲಿ ಇರುವಂತಹ ಕಾರ್ಯಕ್ರಮ ಇದಾಗಿದ್ದು, ಅಲ್ಲಿ ಯಾರು ನುಂಗದ ರೀತಿಯಲ್ಲಿ ಕಾರ್ಯಕ್ರಮ ನಡೆದಿಲ್ಲವೇ? ಇದು ಕರ್ನಾಟಕದಲ್ಲಿ ಮಾತ್ರವೇ ಇದು ಆಗಿದೆಯೇ? ನಿಮ್ಮ ಸರ್ಕಾರ 5 ವರ್ಷಗಳ ಕಾಲ

ಏನಿತ್ತು, ಅಗ ನೀವು ಏನು ಮಾಡುತ್ತಿದ್ದೀರಿ? ಇದರ ಬಗ್ಗೆ ಎಷ್ಟು ವಿಚಾರಣೆಗಳನ್ನು ಮಾಡಿದ್ದೀರಿ? ಎಷ್ಟು ಜನರನ್ನು ಜೈಲಿಗೆ ಹಾಕಿದ್ದೀರಿ? It is the responsibility of the House as well as the Government. It is not the responsibility of only the minister or the Government. ಇದು ಎಲ್ಲಾ ಸರ್ಕಾರಗಳ ಜವಾಬ್ದಾರಿ ಇದಾಗಿದೆ. ನೀವು ಏತಕ್ಕೆ ಮಾಡಲಿಲ್ಲ? S.C.S.P./T.S.P. ನಲ್ಲಿ ನರೇಗಾ ಕಾರ್ಯಕ್ರಮದಲ್ಲಿ ನಾನು ಮೊನ್ನೆ ದೆಹಲಿಗೆ ಹೋಗಿದ್ದೆ. ತಾವು ಅಲ್ಲಿಗೆ ನನ್ನನ್ನು ಅಲ್ಲಿಗೆ ಕಳುಹಿಸಿದ್ದಕ್ಕೆ ಧನ್ಯವಾದಗಳು.

**(ಮುಂದು.)**

**(82) 30.01.2026 01.30 ಎಸ್‌ವಿ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ. ಶಿವಕುಮಾರ್ (ಮುಂದು):-**

ಶೇ.40ರಷ್ಟು ಮಹಿಳೆಯರು MGNREG Scheme ನಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ದೇಶದಲ್ಲಿ ಶೇ.54ರಷ್ಟು ಜನರಿಗೆ ಕೆಲಸ ಸಿಕ್ಕಿದೆ. ನಿರಂತರವಾಗಿ ಶೇ.40, ಒಂದು ವರ್ಷ ಪೂರ್ಣವಾಗಿ scattered ನಾನು ಹೇಳುತ್ತಿರುವುದು, overall ಶೇ.55 ಮಹಿಳೆಯರಿಗೆ ಕೆಲಸ ಸಿಕ್ಕಿದೆ. ಆದರೆ ಈ ರೀತಿಯಾಗಿ ಒಂದು employment ಕಾರ್ಯಕ್ರಮ ಮಹಿಳೆಯರಿಗೆ employment create ಮಾಡುವುದಕ್ಕಾಯಿತೇ? ಎರಡು ಕೋಟಿ ಕೆಲಸ ಕೊಡುತ್ತೇನೆಂದು ಹೇಳಿದ್ದರು. ನಮ್ಮ ಊರುಗಳಲ್ಲಿ ಬುಡಬುಡಿಕೆಯವರು ಬರುತ್ತಾರೆ. ಬೆಳಗಿನ ಹೊತ್ತಿನಲ್ಲಿ ಮನೆಗಳ ಬಳಿ ಬಂದು ಒಳ್ಳೆ ಕಾಲ ಬರುತ್ತದೆ, ಒಳ್ಳೆ ಕಾಲ ಬರುತ್ತದೆ ಎಂದು ಹೇಳಿಕೊಂಡು ಹೋಗುತ್ತಿರುತ್ತಾರೆ. ಆ ಮಾತನ್ನು ನಮ್ಮ ತಾತ, ನಮ್ಮ ಅಪ್ಪ ಎಲ್ಲರೂ ಕೇಳಿದ್ದರು. ನನ್ನ ಕಾಲಕ್ಕೆ ಮಾನ್ಯ ಸಿದ್ಧರಾಮಯ್ಯನವರು ಸದ್ಯ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಿಟ್ಟಿದ್ದಾರೆ. ನನಗೆ ಸ್ವಲ್ಪ ಅವಕಾಶ ಸಿಕ್ಕಿದೆ. ಅಷ್ಟನ್ನು ಬಿಟ್ಟರೆ, ಇನ್ನೆಲ್ಲಿ ಒಳ್ಳೆಯ ಕಾಲ ಬರುತ್ತದೆ? 2 ಕೋಟಿ ಕೆಲಸ ಕೊಡುತ್ತೇವೆಂದು ಹೇಳಿ ಬ್ಯಾಕ್‌ಲಾಗ್ ತುಂಬಿಲ್ಲ ಎಂದು ಹೇಳಿದರು. ಹೌದು.. ನೀವೆಷ್ಟು ತುಂಬಿದ್ದೀರಿ. ನಿಮ್ಮ ಸರ್ಕಾರ ಎಷ್ಟು ತುಂಬಿದೆ? 56% ಮೀಸಲಾತಿಯನ್ನು ಏರಿಸಿದವರು ಯಾರು? ಮಾನ್ಯ ಸಿದ್ಧರಾಮಯ್ಯನವರು ಏರಿಸಿದ್ದಾರೆಯೇ? ಮಾನ್ಯ ಬಸವರಾಜ ಬೊಮ್ಮಾಯಿಯವರು ಏರಿಸಿದರು. ಯಾವುದೇ legislation ಮಾಡಲಿಲ್ಲ. ಹೊರಟು ಹೋದರು. ದಲಿತರನ್ನೆಲ್ಲಾ ಬಾವಿಗೆ ತಳ್ಳಿದವರು ಅವರು.

ಮಾನ್ಯ ಸಭಾಪತಿಯವರೇ, ದಯವಿಟ್ಟು ನನಗೆ ಸ್ವಲ್ಪ ಅವಕಾಶ ಕೊಡಿ. ನಮ್ಮ ಪಕ್ಷದವರೆಲ್ಲಾ ಸ್ವಲ್ಪ ಸಮಯವನ್ನು adjust ಮಾಡಿಕೊಳ್ಳುತ್ತಾರೆ. ನಮ್ಮ ಸ್ನೇಹಿತರೆಲ್ಲಾ ನನಗೆ ಪರವಾಗಿಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾನಾಯಕರನ್ನು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ನನಗೆ ಇನ್ನೊಂದು 10 ನಿಮಿಷ ಹೆಚ್ಚುವರಿಯಾಗಿ ಸಮಯ ಸಿಗಲಿ.

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್:-** ಮಾನ್ಯ ಸಭಾಪತಿಯವರೇ, ನನ್ನ ಸಮಯವನ್ನು ಅವರಿಗೆ ಕೊಡಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ನನಗೆ ಈ ರೀತಿಯ employment ಕೂಡ ಸಿಗಲಿಲ್ಲ. ಯಾಕೋ ನಮ್ಮ ಕಡೆಗೆ ವಿರೋಧ ಪಕ್ಷದವರ ಕಣ್ಣು ಬಿದ್ದಿದೆ. ಜಾಹೀರಾತು ಸಿಕ್ಕಾಪಟ್ಟೆ ಕೊಡುತ್ತಿದ್ದಾರೆಂದು ಹೇಳಿದರು. ಜಾಹೀರಾತು ಕೊಡದಿದ್ದರೆ ಪೇಪರ್‌ಗಳು ನಡೆಯುವುದಿಲ್ಲ. ಅದೇನು ಸಕ್ಕರೆ ಕಾರ್ಖಾನೆಯಲ್ಲ, ರುಬ್ಬಿಬಿಟ್ಟು ತೆಗೆದುಕೊಂಡು ಹೋಗುವುದಕ್ಕೆ. ಅಲ್ಲಿ ಎಷ್ಟು ಜನರಿಗೆ ಸಂಬಳ ಕೊಡಬೇಕೆಂಬುದು ಗೊತ್ತೇ? ದೊಡ್ಡ ದೊಡ್ಡ ರಾಜಕಾರಣಿಗಳು ಬಂದು ಪೇಪರ್ ಪ್ರಾರಂಭ ಮಾಡಿ ಏಕೆ ಮುಚ್ಚಿಕೊಂಡು ಹೋದರು? ಅವರಿಗೆ ನಡೆಸುವುದಕ್ಕೆ ಆಗಲಿಲ್ಲ. ಸಾವಿರಾರು ಜನ ಪತ್ರಕರ್ತರಿದ್ದಾರೆ. ಪತ್ರಕರ್ತರು ಜಾಹೀರಾತಿಗಾಗಿ ಸರ್ಕಾರವನ್ನು ಅವಲಂಬಿಸಬೇಕಾಗುತ್ತದೆ.

ಯಾವುದೋ ಒಂದು ಪತ್ರಿಕೆ ಪ್ರಿಂಟ್ ಆಗುತ್ತಿದೆ. ಆದರೆ ಅದರ circulation ಇಲ್ಲದಿರುವುದರಿಂದ ಜಾಹೀರಾತು ಕೊಡುತ್ತಾರೆಂದು ಹೇಳಿದರು. 'India Shining' campaign ನಾವು ಮಾಡಿದ್ದೇವೆಯೇ? ರೂ.4,000 ಕೋಟಿ ಖರ್ಚು ಮಾಡಿ 'India Shining' campaign ಎಂದು ಮಾಡಿ ultimate ಆಗಿ ಆಗಿದ್ದೇನು? ಅದರ result ಏನೂ ಆಗಲಿಲ್ಲ. ಬಂದಿದ್ದು ಯು.ಪಿ.ಎ. ಸರ್ಕಾರ. ಜಾಹೀರಾತಿನಿಂದ ಸರ್ಕಾರಗಳು ಬದಲಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಕಣ್ಣು ನಮ್ಮ ಪತ್ರಿಕೆಗಳ ಮೇಲೆ ಇಲ್ಲದೆ ಹೋಗಲಿ. ಪತ್ರಕರ್ತರ ಮೇಲೆ ಇಲ್ಲದೆ ಹೋಗಲಿ. ನಿಮ್ಮ ಸಹಾನುಭೂತಿ ಹೀಗೆಯೇ ಇರಲಿ. ಏಕೆಂದರೆ ನೀವು ಹೇಗೆ publicity ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಪತ್ರಿಕೆಗಳು ಉಳಿಯಬೇಕೆಂದರೆ ಸರ್ಕಾರ ಇನ್ನಷ್ಟು ಹೆಚ್ಚಿನ ಜಾಹೀರಾತನ್ನು ಕೊಡಬೇಕು. ಯಾರು ಯಾರಿಗೋ ಕೊಡುತ್ತಾರೆ. ನಮಗೆ ಕೊಡಲಿ. ನಮ್ಮ ಸರ್ಕಾರ ಇನ್ನಷ್ಟು ಜಾಹೀರಾತುಗಳನ್ನು ಕೊಡುತ್ತದೆ. ನಾನು ಮಾನ್ಯ

ಮುಖ್ಯಮಂತ್ರಿಗಳಲ್ಲಿ ನಿವೇದನೆ ಮಾಡುತ್ತಿದ್ದೇನೆ. ಇಲ್ಲಿ ಸಚಿವ ಸಂಪುಟದ ಮಾನ್ಯ ಸಚಿವರು ಇದ್ದಾರೆ, ಅವರಲ್ಲಿಯೂ ವಿನಂತಿ ಮಾಡುತ್ತಿದ್ದೇನೆ. ದಯಮಾಡಿ ನಮಗೆ ಇನ್ನಷ್ಟು ಜಾಹೀರಾತುಗಳನ್ನು ಕೊಡಿ.

ಮಾನ್ಯ ಸಭಾಪತಿಯವರೇ, ಪತ್ರಿಕೆಗಳು ಉಳಿಯಬೇಕು. ಪತ್ರಿಕಾ ಸ್ವಾತಂತ್ರ್ಯ ಉಳಿಯಬೇಕು. ಪತ್ರಿಕಾ ಸ್ವಾತಂತ್ರ್ಯವನ್ನು ದಮನ ಮಾಡಿ ಇವತ್ತು ಮಾತನಾಡುವುದಕ್ಕೆ ಅವಕಾಶ ಕೊಡದೆ ಮಾತನಾಡಿದರೆ Sedition case ಹಾಕಿ Freedom of Press ಎನ್ನುವುದಿಲ್ಲದೆ, Freedom of Liberty ಇಲ್ಲ, fraternity ಇಲ್ಲ, secularism ಇಲ್ಲ. Preamble ಏಕೆ ಬೇಕೆಂದು ಹೊರಟವರು ಜಾಹೀರಾತು ನೀತಿಯ ಬಗ್ಗೆ ಮಾತನಾಡಿದರೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಮೊನ್ನೆ farmers' suicide ಬಗ್ಗೆ ಮಾತನಾಡಿದರು. 230 ಜನ farmers ಸತ್ತು ಹೋಗಿದ್ದಾರೆಂದು ಹೇಳುತ್ತಾರೆ. ಮಹಾರಾಷ್ಟ್ರ ಸರ್ಕಾರದಲ್ಲಿ ಮೂರೇ ತಿಂಗಳಿಗೆ, subject to correction, it is very unfortunate that more than one thousand farmers have committed suicide. ಸಂಖ್ಯೆ ಆಚೀಚೆ ಆಗಬಹುದು. ಅದಕ್ಕೆ ನಾನು 'subject to correction' ಎಂದು ಹೇಳಿದ್ದೇನೆ. ಮಹಾರಾಷ್ಟ್ರ ಸರ್ಕಾರದಲ್ಲಿ ಅಷ್ಟೊಂದು farmers suicide ಆಗಿರುವುದನ್ನು ಬಿಟ್ಟರು. ಗ್ಯಾರಂಟಿ ಕಾರ್ಯಕ್ರಮಗಳು ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಅನ್ನಭಾಗ್ಯದಂಥ ಕಾರ್ಯಕ್ರಮಗಳನ್ನು ಕೊಟ್ಟ ಮೇಲೆ, ಗ್ಯಾರಂಟಿಗಳನ್ನು ಕೊಟ್ಟ ಮೇಲೆ suicide ಗಳು ಬಹಳ ಕಡಿಮೆಯಾಗುತ್ತಿವೆ.

ಮಾನ್ಯ ವಿರೋಧ ಪಕ್ಷದ ನಾಯಕರ ಜಮೀನು ಎಷ್ಟಿದೆಯೋ ಗೊತ್ತಿಲ್ಲ, ನಮ್ಮದಂತೂ ಸುಮಾರು ಜಮೀನಿದೆ. ಕೋಲಾರದಲ್ಲಿ ನಾವು ಹುರುಳಿ ಬೆಳೆಯುವುದಕ್ಕೆ ಆಗುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ವಂದಿಸುತ್ತಾ, ಮಾನ್ಯ ರಮೇಶ್ ಕುಮಾರ್ ಅವರನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಕೆ.ಸಿ.ವ್ಯಾಲಿ ಯೋಜನೆಯನ್ನು ತಂದು ಕೋಲಾರದಲ್ಲಿ ನೂರಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸಿದರು. ಈಗ 2ನೇ ಹಂತದಲ್ಲಿ 240 ಕೆರೆಗಳನ್ನು ತುಂಬಿಸುತ್ತಿದ್ದಾರೆ. 160 ಹೆಕ್ಟೇರ್‌ಗಳಲ್ಲಿ ಬಾಳೆ ಬೆಳೆಯನ್ನು ಬೆಳೆಯಲಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಬಿಟ್ಟು ಪ್ರಾಣಿಗಳು, ಪಕ್ಷಿಗಳು ಹೊರಟು ಹೋಗಿದ್ದವು. ಆ ಕಡೆ ಹೋದರೆ ಅನಂತಪುರ, ಈ ಕಡೆ ಬಂದರೆ ವೆಲ್ಲೂರು. ಎಲ್ಲಾ ಕಡೆಯೂ ಬಿಸಿಲು. ಇವತ್ತು ಎಲ್ಲಿ ನೋಡಿದರೂ ಹಸಿರು, ಎಲ್ಲಿ ನೋಡಿದರೂ ಬೆಳೆ. ಒಬ್ಬನೇ ಒಬ್ಬ ರೈತ ಸತ್ತಿಲ್ಲ. ಏಕೆ ಸತ್ತಿಲ್ಲವೆಂದರೆ ಹಾಲು, ರೇಷ್ಮೆ, horticulture crops,

ತರಕಾರಿ ಮುಂತಾದವುಗಳನ್ನು ಬೆಳೆದು ಇವತ್ತು ಒಂದು ಮಾದರಿಯಾಗಿದ್ದೇವೆ. ದೆಹಲಿಗೆ ಹೋದಾಗ ಕೆ.ಸಿ.ವ್ಯಾಲಿ ಯೋಜನೆಯ ಬಗ್ಗೆ ಒಂದು sewage water ಅನ್ನು ಉಪಯೋಗಿಸಿಕೊಂಡು ಒಂದು economy ಹೇಗೆ ಅಭಿವೃದ್ಧಿಗೊಳಿಸಬಹುದೆಂದು ಒಂದು ಪ್ರೆಸೆಂಟೇಷನ್ ಮಾಡಿದರು.

ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡುವುದೇನೆಂದರೆ ಮುಂದಿನ ಬಜೆಟ್‌ನಲ್ಲಿ ೩rd Phase Sewage Treatment Plant ಅನ್ನು ಮಾಡಿ clean water ಅನ್ನು ಎಲ್ಲಾ ಕೆರೆಗಳಿಗೂ ತುಂಬಿಸಿ ಕೊಡಬೇಕು. ವಿರೋಧ ಪಕ್ಷದವರು ಹೇಳಿದರು. ಎಸ್.ಟಿ.ಗಳಿಗೆ ಏನೂ ಮಾಡುತ್ತಿಲ್ಲ. Tribals ಗೆ ಏನೂ ಮಾಡುತ್ತಿಲ್ಲ. Rural development ಆಗುತ್ತಿಲ್ಲ ಎಂದು ಹೇಳಿದರು. ಮಲೆ ಮಹದೇಶ್ವರನ ಬೆಟ್ಟದಲ್ಲಿ ಸರ್ಕಾರ ಸಚಿವ ಸಂಪುಟ ಸಭೆಯನ್ನು ನಡೆಸಿ ರೂ.೩೯೦೦ ಕೋಟಿಗಳನ್ನು ಘೋಷಿಸಿತು. ಈ ರೀತಿಯ ಕೆಲಸವನ್ನು ಮಾಡಿರುವುದು ಎಲ್ಲಿಯಾದರೂ ಕೇಳಿದ್ದೀರಾ? ಹನೂರು ಭಾಗದಲ್ಲಿ ಮಾನ್ಯ ಮಹದೇವಪ್ಪನವರು ಒಂದು ವಿಶೇಷ ಸಭೆಯನ್ನು ಮಾಡಿದರು. ಹನೂರು, ಕೊಳ್ಳೇಗಾಲ, ಗುಂಡ್ಲುಪೇಟೆ ಎಲ್ಲಾ ಕಡೆಗೂ ನಾವು ನೀರು ತಂದುಕೊಡುತ್ತೇವೆ, ನೀವು ವ್ಯವಸಾಯ ಮಾಡಿ ಎಂದು ಹೇಳಿ ಇಡೀ ಕಬಿನಿ ನೀರನ್ನು ಹರಿಸಲಾಯಿತು. ಎಡಗೈಯಲ್ಲಿ ಬಿಸಾಕಿದರೆ ಬಲಗೈಯಲ್ಲಿ ಬೆಳೆ ಎತ್ತುವಂಥ ರೈತರಿರುವುದರಿಂದ ಸರ್ಕಾರವು ಬದ್ಧತೆಯಿಂದ ರೂ.೩,೯೦೦ ಕೋಟಿಗಳನ್ನು ಘೋಷಿಸಿದ್ದಾರೆ. ಮುಂದಿನ ಬಜೆಟ್‌ನಲ್ಲಿ ರೂ.೨,೦೦೦-೩,೦೦೦ ಕೋಟಿಗಳನ್ನು ಕೊಡುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅವರು irrigation ಬಗ್ಗೆ ಹೇಳಿದ್ದಾರೆ. ಇವತ್ತು ಬರಗಾಲ ಪೀಡಿತ ಪ್ರದೇಶವಾದ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಂಡಿದೆ.

ಮಾನ್ಯ ಸಭಾಪತಿಯವರೆ, emotional ಆಗಿ ಎತ್ತಿನಹೊಳೆ ಪ್ರಾಜೆಕ್ಟ್ ಪ್ರಾರಂಭ ಮಾಡಿದರು. ರೂ.14,೦೦೦ ಕೋಟಿ ಖರ್ಚು ಮಾಡಿದರು. ನೀರು ಅರಸೀಕೆರೆಯವರೆವಿಗೂ ಬರಲಿಲ್ಲ. ಮೇಕೆದಾಟು ಚಳುವಳಿಯ ರೀತಿಯಲ್ಲಿಯೇ ಕೃಷ್ಣಾ ನದಿ ನೀರನ್ನು ತರಬೇಕು. ತುಮಕೂರು, ಚಿಕ್ಕಬಳ್ಳಾಪುರ, ಕೋಲಾರಕ್ಕೆ ಕೃಷ್ಣೆಯ ನೀರನ್ನು ಹರಿಸಿ ಆ ಭಾಗದ ರೈತರೆಲ್ಲರಿಗೂ ಕುಡಿಯುವ ನೀರು ಸಿಗಬೇಕು. ನಮ್ಮ ಜನರಿಗೆ ಕುಡಿಯುವ ನೀರು ಸಿಕ್ಕಿದರೆ ಸಾಕು. ನಮಗೆ ಬೆಳೆ ಬೆಳೆಯುವುದಕ್ಕೆ ನೀರು ಸಿಕ್ಕಿದೆ.

ಹಿಂದೆ ನಮ್ಮ ತಾತ ಮೃತರಾದಾಗ ನಮ್ಮ ತಂದೆಯವರು ವಂಶವೃಕ್ಷಕ್ಕಾಗಿ ಅಲೆಯಬೇಕಿತ್ತು. ಗ್ರಾಮ ಲೆಕ್ಕಿಗರ ಹತ್ತಿರ ಹೋಗಬೇಕು. ಶ್ಯಾನುಭೋಗರಿಗೆ ಒಂದು ಸೋರೆಕಾಯಿ ಕೊಡಬೇಕು. ಒಂದು ತುಪ್ಪದ

ಬಾಟಲಿಯನ್ನು ಕೊಡಬೇಕು. ಏಕೆಂದರೆ ಖಾತೆಯನ್ನು ಬದಲಾಯಿಸಿಕೊಡುವುದಕ್ಕಾಗಿ, ನಮ್ಮ ವಂಶವೃಕ್ಷ ಕೊಡಿ, ಅದು ಕೊಡಿ, ಇದು ಕೊಡಿ ಎಂದು ಕೇಳಬೇಕಿತ್ತು. ಇಡೀ ದೇಶದಲ್ಲಿ ಉತ್ತಮವಾಗಿ ಯಾವುದಾದರೂ ಕಂದಾಯ ಇಲಾಖೆ ಕೆಲಸ ಮಾಡುತ್ತಿದೆಯೆಂದರೆ ಕರ್ನಾಟಕದ ಕಂದಾಯ ಇಲಾಖೆ ಮಾತ್ರ. ಯಾರೂ ಹೇಳುವ ಹಾಗಿಲ್ಲ, ಕೇಳುವ ಹಾಗಿಲ್ಲ. ಅವರು ಮೃತರಾದರೆ ಅವರ ಪೌತಿ ಖಾತೆ ಅವರ ಮಕ್ಕಳಿಗೆ transfer ಆಗುತ್ತದೆ. ಸರ್ಕಾರಿ ಜಮೀನುಗಳನ್ನು, ಕೆರೆಗಳನ್ನು protect ಮಾಡುತ್ತಿದ್ದೇವೆ. ಮಾನ್ಯ ಕೃಷ್ಣ ಬೈರೇಗೌಡರು ಇಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೃಷ್ಣ ಬೈರೇಗೌಡರು ಬಹಳ ಒಳ್ಳೆಯ ಕೆಲಸವನ್ನು ಮಾಡಿರುವುದರಿಂದ ರೈತರು ಕಛೇರಿಗಳಿಗೆ ಅಲೆಯುವುದು ನಿಂತಿದೆ.

ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿಯವರು ಯಾವುದಾದರೊಂದು ತಾಲ್ಲೂಕು ಕಛೇರಿಗೆ ಹೋಗಿದ್ದಾರೆಯೇ? ಅವರ ಸರ್ಕಾರವಿದ್ದಾಗ ರೈತರಿಂದ ತುಂಬಿ ತುಳುಕುತ್ತಿತ್ತು. ಯಾವ ಮರದ ಕೆಳಗೆ ನೋಡಿದರೂ ಒಂದು ಅರ್ಜಿ ಹಿಡಿದುಕೊಂಡು ಕುಳಿತಿದ್ದರು.

**ಸಭಾಪತಿಯವರು:-** ಮಾನ್ಯ ಶ್ರೀಮತಿ ಉಮಾಶ್ರೀ.... ಅವರಿಲ್ಲ, ಮಾನ್ಯ ಎಂ. ನಾಗರಾಜ್ ಅವರೇ, ನೀವು ಮಾತನಾಡಿ.

**ಶ್ರೀ ಕೆ.ಶಿವಕುಮಾರ್:-** ಇವತ್ತು ಯಾರಾದರೂ ಹೋಗುತ್ತಿದ್ದಾರೆಯೇ? ಮಾನ್ಯ ನಾಗರಾಜು ಅವರೇ, ಒಂದು ನಿಮಿಷ.. ಕೊನೆಯದಾಗಿ ಐ.ಟಿ/ಬಿ.ಟಿ. ಎಲ್ಲವೂ ಸೇರಿದರೆ highest investment. A.I. ಬಗ್ಗೆ ಮಾನ್ಯ ರಮೇಶ್ ಬಾಬು ಅವರು ಹೇಳಿದರು.

**ಸಭಾಪತಿಯವರು:-** ಮಾನ್ಯ ಶಿವಕುಮಾರ್ ಅವರೆ, ನಿಮ್ಮ ಸಮಯ ಮುಗಿದಿದೆ. ನಾನು ಹೇಳುತ್ತಿದ್ದೇನೆ. ನಿಮಗೆ ತಿಳಿಯುವುದಿಲ್ಲವೇ? ನಾನು ನಿಮಗೆ ಮಾತನಾಡಲಿಕ್ಕೆ ಅನುಮತಿಯನ್ನೇ ಕೊಟ್ಟಿಲ್ಲ. ಏಕೆ ಮಾತನಾಡುತ್ತಿದ್ದೀರಿ?

**(ಮುಂದು)**

**(83) 30.01.2026 01.40 ಕೆಜಿ:ಆರ್‌ಎನ್** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಶ್ರೀ ಕೆ.ಶಿವಕುಮಾರ್‌ರವರೇ, ಇಲ್ಲ. ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಇಲ್ಲಿ Government of India ದವರು ಒಂದು ವರದಿ ಕೊಟ್ಟಿದ್ದಾರೆ.

**ಸಭಾಪತಿಯವರು:-** ಶ್ರೀ ಕೆ.ಶಿವಕುಮಾರ್‌ರವರೇ, ತಮಗೆ ಅನುಮತಿ ಕೊಟ್ಟಿಲ್ಲ. ತಾವು ಏಕೆ ಮಾತನಾಡುತ್ತೀರಿ?

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

**ಸಭಾಪತಿಯವರು:-** ಶ್ರೀ ಕೆ.ಶಿವಕುಮಾರ್‌ರವರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಶಿವಕುಮಾರ್‌ರವರು ಮಾತನಾಡಿದ್ದನ್ನು ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ತಾವು ಮಾತನಾಡುವಂತಿಲ್ಲ. ತಮಗೆ ಮಾತನಾಡುವುದಕ್ಕೆ 5 ನಿಮಿಷಗಳು ಹೆಚ್ಚಿಗೆ ಕೊಟ್ಟಿದ್ದೇನೆ. ಇನ್ನೂ 34 ಜನರು ಮಾತನಾಡುವವರು ಇದ್ದಾರೆ. ಈಗ ಟೈಮ್ ಇಲ್ಲ. ಇದು ಸರಿಯಲ್ಲ. ತಾವು ಹೊಸಬರೆಂದು ಎಂದು 5 ನಿಮಿಷಗಳ ಕಾಲ ಹೆಚ್ಚಿಗೆ ಕೊಟ್ಟಿದ್ದೇನೆ. ತಮ್ಮ ಅವಧಿ ಮುಗಿದಿದೆ. ಈಗ ಶ್ರೀ ಎಂ. ನಾಗರಾಜುರವರೇ, ತಾವು ಮಾತನಾಡಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕೆ ತಮಗೆ ಧನವ್ಯವಾದಗಳು.

**ಸಭಾಪತಿಯವರು:-** ತಾವು ಕುಳಿತುಕೊಳ್ಳಿ. ಶ್ರೀ ಎಂ.ನಾಗರಾಜುರವರೇ, ತಾವು ಮಾತನಾಡಿ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮೊದಲನೆಯದಾಗಿ. ಮಾನ್ಯ ಘನತೆವೆತ್ತ ರಾಜ್ಯಪಾಲರು ದಿನಾಂಕ 22-01-2026 ರಂದು ಮಾಡಿದ ಜಂಟಿ ಅಧಿವೇಶನದ ಭಾಷಣಕ್ಕೆ ಬೆಂಬಲವನ್ನು ವ್ಯಕ್ತ ಪಡಿಸುತ್ತೇನೆ. ಈಗಾಗಲೇ ಮೂಲತಃವಾಗಿ ಬಹಳಷ್ಟು ನಾಯಕರು ಮಾತನಾಡಿದ್ದಾರೆ. ನಾವೆಲ್ಲರೂ ಸೇರಿ ವಿಧಾನಸಭೆಯಲ್ಲಿ ಮಾನ್ಯ ರಾಜ್ಯಪಾಲರನ್ನು ಸ್ವಾಗತ ಮಾಡಿದ್ದೇವೆ. Mike is not working.

**ಸಭಾಪತಿಯವರು:-** Mike ಏನಾಗಿದೆ ನೋಡಿ.

**(ಗೊಂದಲ)**

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಯಾವುದೇ Mike ಕೆಲಸ ಮಾಡುತ್ತಿಲ್ಲ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರೇ, ತಮ್ಮ ತಂದೆಯವರು ಇದ್ದಾಗ, ನಾವು ಅವರಿಂದ ಚೆನ್ನಾಗಿ ಕಲಿತ್ತಿದ್ದೇವೆ. ಈಗ ತಾವು ಏನು ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಯಾವುದೇ Mike ಕೆಲಸ ಮಾಡುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:–** ಅವರು ಮಾತನಾಡುವುದು ತಮಗೆ ಕೇಳುತ್ತಿದೆಯೇ? **(ಗೊಂದಲ)** ಇಲ್ಲ, ಈಗ ಸದನವನ್ನು ೩.೦೦ ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ ೦1 ಗಂಟೆ 42 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ ೦೩.೦೦ ಗಂಟೆಗೆ ಸೇರಲು ನಿಶ್ಚಯಿಸಿತು)**

**(84) 30.01.2026/3.30/ಎಸ್‌ಕೆ-ಕೆಎಸ್ ಸಭಾಪತಿಯವರ ಉಪಸ್ಥಿತಿ**

**(ಸದನವು ಭೋಜನಕ್ಕಾಗಿ ಮಧ್ಯಾಹ್ನ 01 ಗಂಟೆ 42 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3 ಗಂಟೆ 32 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)**

**ಸಭಾಪತಿಯವರು:-** ಮಾನ್ಯ ಎಂ. ನಾಗರಾಜುರವರೇ, ತಾವು ಮಾತನಾಡಿ. ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದಕ್ಕೆ ಮಾನ್ಯ ಸದಸ್ಯರೆಲ್ಲರಿಗೂ ಹದಿನೈದು ನಿಮಿಷಗಳ ಸಮಯಾವಕಾಶವನ್ನು ನೀಡಲಾಗಿದೆ. ನಾನು bell ಮಾಡಿದಾಗ warning ಕೊಟ್ಟಾಗ ಮಾತನ್ನು ಮುಗಿಸಬೇಕು.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾವೆಲ್ಲರೂ ಇಲ್ಲಿ ಸೇರಿರುವಂತಹ ಶುಭ ಘಳಿಗೆ ಎಂದರೆ ನಮ್ಮ ನೆಚ್ಚಿನ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಅವರಿಗೆ ಗೌರವವನ್ನು ಸಲ್ಲಿಸಿ ಮತ್ತು ವಂದನಾ ನಿರ್ಣಯವನ್ನು ಸಲ್ಲಿಸುವುದಕ್ಕೆ. ಘನತೆವೆತ್ತ ರಾಜ್ಯಪಾಲರ ಬಗ್ಗೆ ನನಗೆ ಮತ್ತು ನಮ್ಮ ಪಕ್ಷದ ಎಲ್ಲಾ ಸದಸ್ಯರಿಗೆ ಅತ್ಯಂತ ಗೌರವ. ಅವರಿಗೆ ಕೊಡುವಂತಹ ಗೌರವದಲ್ಲಿ ಕಿಂಚಿತ್ತು ಧಕ್ಕೆ ಇಲ್ಲ ಎನ್ನುವ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ದಿನಾಂಕ 22.01.2026ರಂದು ರಾಜ್ಯಪಾಲರು ಭಾಷಣ ಮಾಡುವಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ತನ್ನ ಕಾರ್ಯ ವೈಖರಿಯನ್ನು ಯಾವ ರೀತಿ ಮಾಡುತ್ತಿದೆ? ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಯಾವ ವರ್ಗದ ಜನರಿಗೆ ಯಾವ ಕಾರ್ಯಕ್ರಮವನ್ನು ನೀಡಬೇಕು? ಸಮತೋಲನವಾದ ಕರ್ನಾಟಕವನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕು? ಇದು ನಡೆದ ಬಂದ ದಾರಿಯ ಬಗ್ಗೆ ವಿಶ್ಲೇಷಣೆ ಮಾಡಲು ಒಂದು ಜಂಟಿ ಅಧಿವೇಶನದಲ್ಲಿ ಈ ಒಂದು ಭಾಷಣವನ್ನು ರಾಜ್ಯಪಾಲರಿಂದ ಮಾಡಿಸುವಂತಹದ್ದು ಒಂದು ವಾಡಿಕೆಯಾಗಿದೆ ಮತ್ತು ಅದು ಕರ್ತವ್ಯ ಎಂದು ಕೂಡ ನಾನು ಭಾವಿಸಿದ್ದೇನೆ. ರಾಜ್ಯ ಸರ್ಕಾರಗಳು ಸಂವಿಧಾನದ ಆಶಯಗಳ ಅಡಿಯಲ್ಲಿ ಕೆಲಸ ಮಾಡಬೇಕಾದರೆ, Governor of a State is the custodian of the Constitution ಎನ್ನುವುದು ಎಲ್ಲರಿಗೂ ತಿಳಿದಿರುವಂತಹ ವಿಚಾರ. ಅವೊತ್ತಿನ ದಿವಸ ರಾಜ್ಯಪಾಲರು ಬಂದು ಕರ್ನಾಟಕ ರಾಜ್ಯ ಸರ್ಕಾರದ ಕ್ಯಾಬಿನೆಟ್ headed by Hon'ble Chief Minister ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅವರು ತಯಾರು ಮಾಡಿದ್ದಂತಹ ಭಾಷಣವನ್ನು

ಸಂವಿಧಾನಬದ್ಧವಾಗಿ ಅವರಿಗೆ ಕೊಡಲಾಗಿರುತ್ತದೆ. ಅವರು ಬಂದಾಗ ನಾವೆಲ್ಲರೂ ಸ್ವಾಗತಿಸಿ, ಅದನ್ನು ಓದುತ್ತಾರೆ ಎಂದು ನಾವೆಲ್ಲರೂ ಕೂಡ ಬಹಳ ಆಸೆಯಿಂದ ಕಾದಿದ್ದೇವು. ಇವತ್ತಿನ ದಿವಸ ಆ ವಿಚಾರವನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ರಾಜ್ಯಪಾಲರ ನಡೆ ಬಗ್ಗೆ ಪ್ರಶ್ನೆ ಮಾಡುವಂತಹ ದೊಡ್ಡ ವ್ಯಕ್ತಿ ನಾನಲ್ಲ. ಆದರೆ ಸಂವಿಧಾನದ ಆಶಯಗಳನ್ನು ಈಡೇರಿಸಬೇಕಾಗಿರುವುದು ಎಲ್ಲರ ಕರ್ತವ್ಯ ಎಂಬ ಬಗ್ಗೆ ನಾನು ನಂಬಿಕೆಯನ್ನು ಇಟ್ಟುಕೊಂಡಿರುವಂತಹವನು. ರಾಜ್ಯಪಾಲರು ಇರಬಹುದು. ರಾಷ್ಟ್ರಪತಿ ಇರಬಹುದು. ಸಭಾಪತಿಯವರು ಇರಬಹುದು ಅಥವಾ ನಾವಿರಬಹುದು ಹಾಗೂ ನಾಗರೀಕರು ಇರಬಹುದು. ಈ ದೇಶದಲ್ಲಿ ಎಲ್ಲರಿಗಿಂತ ದೊಡ್ಡದು ಯಾವುದಾದರೂ ಇದ್ದರೆ ಅದು ಸಂವಿಧಾನವನ್ನು ಒಪ್ಪಿಕೊಂಡಿರುವಂತಹ ವಾಸ್ತವಾಂಶ ವಿಚಾರವನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನನಗೆ ಬಹಳ ದೊಡ್ಡ ನಿರಾಸೆಯಾಗಿದ್ದು ಯಾವುದೆಂದರೆ, ಅವೊತ್ತು ರಾಜ್ಯಪಾಲರು ವಿಧಾನಸಭೆಗೆ ಬಂದು ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಭಾಷಣ ಮಾಡುತ್ತಾರೆ. ವಿಚಾರಧಾರೆಗಳನ್ನು ಮಂಡಿಸುತ್ತಾರೆ. ನಾವು ಮೊದಲನೇ ಬಾರಿ ಶಾಸಕರಾಗಿ ಬಂದಂತಹವರು. ನಾವೆಲ್ಲರೂ ಕೇಳಿ ತಿಳಿದುಕೊಳ್ಳಬೇಕು ಎಂದು ಅಲ್ಲಿಗೆ ಬಂದಿದ್ದೇವು. ರಾಜ್ಯಪಾಲರು ತಕ್ಷಣ ಬಂದು, ಅವರೇ ತಯಾರು ಮಾಡಿಕೊಂಡು ಬಂದಂತಹ ಎರಡು ಸಾಲುಗಳನ್ನು ಓದಿ, ಕೊನೆಗೆ ಜೈ ಹಿಂದ್, ಜೈ ಕರ್ನಾಟಕ ಎಂದು ಹೇಳಿ, ಅಲ್ಲಿಂದ ಹೊರಟು ಹೋದಾಗ ನಮಗೆ ನಿರಾಸೆಯಾಗಿರುವುದು ಸತ್ಯ ಎಂಬ ಮಾತನ್ನು ಹೇಳುತ್ತೇನೆ. ನಾನು ಅದನ್ನು ಖಂಡಿಸಲು ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಆ ಸಂದರ್ಭದಲ್ಲಿ ರಾಜ್ಯ ಸರ್ಕಾರ ತಯಾರು ಮಾಡಿದ ಭಾಷಣದಲ್ಲಿ ಯಾವುದೇ ವಿಚಾರ ಇರಬಹುದು. ಜನಪರ ಆಡಳಿತ ವಿಚಾರ ಇರಬಹುದು. ರಾಜ್ಯ ಸರ್ಕಾರದ ದೃಷ್ಟಿಕೋನ ಇರಬಹುದು. ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಸಮಗ್ರ ಪ್ರಗತಿಯ ದಿಕ್ಕನ್ನು ಅವರ ಬಾಯಿಯಲ್ಲಿ ಕೇಳಬೇಕೆಂದು ನಾವು ಆಸೆಯಿಂದ ಬಂದಿದ್ದೇವು. ಆಗ ನಾವು ನಿರಾಸೆಗೆ ಒಳಗಾಗಿದ್ದೇವು. ಅವೊತ್ತಿನ ದಿವಸ ಆದಂತಹ ಘಟನೆಗಳ ಬಗ್ಗೆ ನಾನು ಮತ್ತೊಮ್ಮೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತ್ರ ಸತ್ಯ ಸಂವಿಧಾನದ ಆಶಯಗಳ ಅಡಿಯಲ್ಲಿ, Under Article 176 of the Constitution... I feel it is and from my knowledge, whatever I know, because I am not a legal expert. But I know very well that, according to Article 176 of the Indian Constitution, it is mandatory for the Governor to read the speech made by the Cabinet or the respective Government ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಓದದೇ ಹೋದರೆ ಏನಾಗುತ್ತದೆ

ಎಂದರೆ ನಾವು ಮೊದಲನೇ ಬಾರಿ ಶಾಸಕರಿಗೆ ನಾವು ಎಲ್ಲಿ ಏನು ಕಲಿಯುತ್ತಿದ್ದೇವೆ ಎನ್ನುವ ಬಗ್ಗೆ ಯೋಚನೆ ಮಾಡಿ ನೋಡಿದಾಗ, ಎಲ್ಲೋ ಒಂದು ಕಡೆ ಕಾನೂನು ರಚನೆ ಮಾಡುವ ಜಾಗದಲ್ಲಿ ಕಾನೂನುಗಳೇ ಉಲ್ಲಂಘನೆ ಮಾಡಿದಾಗ ಬಹಳ ನೋವಾಗುತ್ತದೆ ಮತ್ತು ನಿರಾಸೆಭಾವನೆಗಳಿಂದ ನಾನು ಮಾನ್ಯ ಸಭಾಪತಿಯವರ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವೊತ್ತಿನ ದಿವಸ ಆಗಿರುವ ವಿಚಾರದ ಬಗ್ಗೆ ನಮಗೆಲ್ಲರಿಗೂ ನಿರಾಸೆಯಾಯಿತು. ಮುಂದಿನ ದಿನಗಳಲ್ಲಿ ಈ ರೀತಿಯಾಗಬಾರದು ಎಂಬ ಆಶಯದೊಂದಿಗೆ ನಾನು ಈ ವಂದನಾ ನಿರ್ಣಯವನ್ನು ಮಾಡುತ್ತಿದ್ದೇನೆ. ಅವೊತ್ತಿನ ದಿನ ಪೀಠದಲ್ಲಿ

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, Read and record ಆಗಿದೆ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಸಭಾಪತಿಯವರು:–** ಒಂದು ನಿಮಿಷ. ಅದರ ಅರ್ಥ ರಾಜ್ಯಪಾಲರು ಎಲ್ಲವನ್ನು ಓದಿದ್ದಾರೆ ಎನ್ನುವ ಅರ್ಥ

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅವರು ಓದಿದಾ ಮೇಲೆ, ಅವರು ಓದದೇ ಹೋಗಿದ್ದು ಸರಿಯಲ್ಲ ಎನ್ನುವುದು ಕೂಡ ಖಂಡನೀಯ.

**ಸಭಾಪತಿಯವರು:–** ಅದು ಅವರ ಅಭಿಪ್ರಾಯ. ತಾವು ಏತಕ್ಕೆ ಹೇಳುತ್ತೀರಾ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅವರು ಅದನ್ನು ವಿರೋಧಿಸಿದಂತೆಯೇ ಆಗುತ್ತದೆ.

**ಸಭಾಪತಿಯವರು:–** ಅದು ಅವರ ಅಭಿಪ್ರಾಯ. ನಾವು ಏನೂ ಮಾಡೋಣ. ಈ ರೀತಿಯೇ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸದಸ್ಯರು ವಿರೋಧ ಪಡಿಸದೇ ಅದನ್ನು ಸ್ವಾಗತ ಮಾಡಿದರು. ಆಗಿರುವಂತಹ ಘಟನೆಗಳು ತಾವು ಯಾವ ರೀತಿಯಾಗಿ ಹೇಳಿದರೋ, ಅದೇ ರೀತಿ ಅವರು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅದು ಇರಲಿ ಬಿಡಿ.

**ಶ್ರೀ ಎನ್.ಎಸ್. ಬೋಸರಾಜು:–** ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ತಾವು ಘಟನೆಗಳನ್ನು ವಿವರಣೆ ಮಾಡಿದಿರಿ. ಅದೇ ರೀತಿಯಾಗಿ ಸದಸ್ಯರು ವಿವರಣೆಯನ್ನು ಕೊಡುತ್ತಿದ್ದಾರೆ.

**ಶ್ರೀ ಎಂ. ನಾಗರಾಜು:–** ನಾವು ಅದನ್ನು ಸ್ವಾಗತ ಮಾಡಿದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, Read and record ಆದ ಮೇಲೆ ಮತ್ತೆ ಅದನ್ನೇ ಹೇಳಿದರೆ ಏನು ಅರ್ಥ?

**ಶ್ರೀ ಎನ್.ಎಸ್. ಬೋಸರಾಜು:–** ಆಯಿತು ಎಂದು ನಾವು ಹೇಳಿದ್ದೇವೆಯಲ್ಲ. ಅದಕ್ಕಾಗಿ ನಾವು ಸ್ವಾಗತ ಮಾಡುತ್ತಿದ್ದೇವೆ. ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಮಾಡುತ್ತಿದ್ದೇವೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಮಾನ್ಯ ಸದಸ್ಯರ ಹೇಳಬೇಕಾದಂತಹ ಸಂದರ್ಭದಲ್ಲಿ, ತಮ್ಮದೇ ಆದಂತಹ ನಿರಾಸೆಯಾಗಿರುವ ವಿಷಯಗಳನ್ನು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಇದನ್ನು ಏತಕ್ಕೆ ಮಾತನಾಡುತ್ತೀರಿ ಬಿಡಿ.

**ಶ್ರೀ ಎನ್.ಎಸ್. ಬೋಸರಾಜು:–** ತಾವು ಯಾವ ರೀತಿಯಾಗಿ ಹೇಳಿದರೋ, ಅದೇ ರೀತಿಯಾಗಿ ಅವರು ವ್ಯಕ್ತಪಡಿಸುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಿಮಗೂ ಹೇಳುವ ಚಟ ಜಾಸ್ತಿ ಶುರುವಾಯಿತು.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಅವರು ಹೇಳಿದರು.

**ಸಭಾಪತಿಯವರು:–** ನಾನು ಹೇಳಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಹೇಳಿದ್ದನ್ನು ತಿರಸ್ಕಾರ ಮಾಡಿದರು ಎಂದು ವಿರೋಧ ಪಕ್ಷದರು ಹೇಳಿದರು. ರಾಜ್ಯಪಾಲರಿಗೆ ಅವಮಾನ ಆಗಿಲ್ಲ ಎಂದು ಹೇಳಿದರು. ಈಗ recorded ಎಂದು ಹೇಳುತ್ತಿದ್ದಾರೆ. That

means he is accepting. The Governor has been accepted. ಅಂದರೆ ಮಾನ್ಯ ವಿರೋಧ ಪಕ್ಷದವರ ಭಾಷಣ ಸುಳ್ಳಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನಾನು ಎಲ್ಲಿ ಸುಳ್ಳು ಹೇಳಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ತಾವು ಹೇಳಿದಿರಿ ರಾಜ್ಯಪಾಲರಿಗೆ ಅವಮಾನ ಆಗುತ್ತೆ. ಅದಕ್ಕೆ ಅವರು ತಿರಸ್ಕಾರ ಮಾಡಿದರು. ರಾಜ್ಯಪಾಲರು ಭಾಷಣದ ಮೊದಲ ಎರಡು ಲೈನ್ ಹಾಗೂ ಭಾಷಣದ ಕೊನೆಯ ಲೈನ್ ಅನ್ನು ಓದಿದರು. Read and recorded ಎಂದು ನಾನು ಆಗಲೇ ಹೇಳಿದೆ. You (Opposition Leader) are contradicting yourself by contradicting him. ಅದನ್ನು ಹೇಳುತ್ತಿರುವುದಾದರೆ, the Governor has accepted that the Government of India has done injustice to Government of Karnataka.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಯಾವುದೇ ಕಾರಣಕ್ಕೂ ಕೂಡ ರಾಜ್ಯಪಾಲರ ನಡೆಯನ್ನು ಪ್ರಶ್ನೆ ಮಾಡುತ್ತಿಲ್ಲ. ನನಗೆ ನಿರಾಸೆಯಾಯಿತು ಎಂದು ನನ್ನ ಅಳಲನ್ನು ಪೀಠದ ಮುಂದೆ ಹೇಳುತ್ತಿದ್ದೇನೆ. ನಾನು ಒಬ್ಬ ಸಂವಿಧಾನದ ಬಗ್ಗೆ ನಂಬಿಕೆಯನ್ನಿಟ್ಟುಕೊಂಡು ಬಂದಿರುವಂತಹವನು. ನಾನು ಪೀಠದ ಮುಂದೆ ಹೇಳುವುದೇನೆಂದರೆ, ಮೊದಲೇ ಬಾರಿ ನಾನು ಶಾಸಕರಾಗಿ ಈ ಸಂವಿಧಾನದ ಆಶಯಗಳನ್ನು ಈಡೇರಿಸುವ ಜಾಗದಲ್ಲಿಯೇ ಸಂವಿಧಾನ ಉಲ್ಲಂಘನೆಯಾಗಿದೆ ಎಂಬ ಬಗ್ಗೆ ನಾನು ಪ್ರಶ್ನೆಯನ್ನು ಮಾಡಿಕೊಂಡು, ಮಾನ್ಯ ಸಭಾಪತಿಯವರ ಹತ್ತಿರ ಹೇಳುತ್ತಿದ್ದೇನೆ. ರಾಜ್ಯಪಾಲರನ್ನು ಯಾವುದೇ ಟೀಕೆ ಟಿಪ್ಪಣಿ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಇದೊಂದು ಒಂದು ಕಡೆಯಾದರೆ, ಇವತ್ತಿನ ದಿವಸ ಮಾನ್ಯ ರಾಜ್ಯಪಾಲರು ಮಂಡಿಸಿದಂತಹ ಭಾಷಣದ ಪುಸ್ತಕವನ್ನು ನೋಡಿದಾಗ, ಹಲವಾರು ವಿಚಾರಗಳು ನನಗೆ ಸಂತೋಷ ತಂದಿರುವ ವಿಚಾರಗಳಿವೆ. ಕರ್ನಾಟಕ ವಿಧಾನಮಂಡಲದಲ್ಲಿ ರಾಜ್ಯಪಾಲರ ಮಂಡಿಸಿದ ವಿಚಾರಧಾರೆಗಳು ನಾನು ಈ ಭಾಷಣವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಬಡವರಿಗೆ ಮತ್ತು ದುರ್ಬಲವರ್ಗದವರಿಗೆ ಸಮಾಜದ ಮುಖ್ಯವಾಹಿನಿಗೆ ಎಲ್ಲರನ್ನು ಸಮಾನವಾಗಿ ತರಲು ಮತ್ತು ನಡೆದುಕೊಳ್ಳಲು ರಾಜ್ಯದಲ್ಲಿ ಐದು ಮಹತ್ವಾಕಾಂಕ್ಷೆಯ ಗ್ಯಾರಂಟಿಗಳಾದ "ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಮತ್ತು ಯುವನಿಧಿ" ಕಾರ್ಯಕ್ರಮಗಳನ್ನು ನೀಡಿದೆ. ಇಡೀ ಸಮಾಜಕ್ಕೆ ಒಂದು ಸಮಾಜಮುಖಿ ಕಾರ್ಯಕ್ರಮ ಕೊಟ್ಟಿರುವಂತಹದ್ದು ಯಾವುದಾದರೂ ರಾಜ್ಯವಿದ್ದರೆ, ಅದು ಮೊದಲ ಕರ್ನಾಟಕ ರಾಜ್ಯ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಹಿಳೆಯರನ್ನು

ಸಬಲೀಕರಣಗೊಳಿಸುವ ಯೋಜನೆಗೆ ಪ್ರತಿ ವರ್ಷ 52,000 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಯುವಕರಿಗೆ ಆಶಾದಾಯಕವಾಗಿರುವಂತಹ ಮತ್ತು ಬಡವರನ್ನು ಮಧ್ಯಮ ಮಟ್ಟಕ್ಕೆ ಕರೆದುಕೊಳ್ಳುವಂತಹದ್ದಾಗಲಿ. Poverty alleviation ಗೋಸ್ಕರ ತಂದಿರುವಂತಹ ಕಾರ್ಯಕ್ರಮವನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ.

ಮುಂದು)

(85) 30.01.2026 3.40 ಟಿಸಿಹೆಚ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):-**

ಅದರ ಜೊತೆಗೆ ಹೇಳುವುದಾದರೆ ಇಡೀ ಭಾರತ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಯಾವುದಾದರೂ ರಾಜ್ಯ 'Universal Basic Income' ಎನ್ನತಕ್ಕಂಥ concept ಅನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ಕೂಡ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬೇಕು ಎನ್ನುವ ರೀತಿಯಲ್ಲಿ ಈ 5 ಕಾರ್ಯಕ್ರಮಗಳನ್ನು ಕೊಟ್ಟಿದ್ದಾರಲ್ಲಾ, ಆ ಕಾರ್ಯಕ್ರಮಕ್ಕೆ ನಾವೆಲ್ಲರೂ ಕೂಡ ಇಡೀ ರಾಜ್ಯದಿಂದ ಮೆಚ್ಚಿಗೆಯನ್ನು ವ್ಯಕ್ತಿಪಡಿಸಬೇಕು. ಕೇವಲ ಕರ್ನಾಟಕ ರಾಜ್ಯದಲ್ಲಿ ಅಲ್ಲದೇ ಬೇರೆ ರಾಜ್ಯಗಳಲ್ಲಿ ಬೇರೆಯವರು ಕೂಡ ಇದನ್ನೇ ಅಳವಡಿಸಿಕೊಂಡಿರುವುದನ್ನು ನೋಡಿದಾಗ, ಎಲ್ಲೋ ಒಂದುಕಡೆ ಸಮತೋಲನದ ಸಮಾಜವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿರತಕ್ಕಂಥ ನಮ್ಮ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅವರ ನೇತೃತ್ವದಲ್ಲಿರತಕ್ಕಂಥ Cabinet ಬಹಳ ಉತ್ತಮವಾಗಿರತಕ್ಕಂಥ ಕೆಲಸಗಳನ್ನು ಮಾಡಿರುವುದನ್ನು ಈ ಭಾಷಣದ ಮೂಲಕ ಹೇಳಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಅದೇರೀತಿ ರಾಜ್ಯದಲ್ಲಿ ಜಾರಿಗೆ ತಂದಿರತಕ್ಕಂಥ ಪಂಚ ಗ್ಯಾರಂಟಿ ಯೋಜನೆಗಳಿಂದ ಸರಿಸುಮಾರು 1.25 ಕೋಟಿಗಿಂತಲೂ ಅಧಿಕ ಕುಟುಂಬಗಳು ಬಡತನದ ರೇಖೆಯಿಂದ ಹೊರಬಂದು ಮಧ್ಯಮ ವರ್ಗದ ಸ್ಥಿತಿಗೆ ತಂದಿರುವುದು ವಾಸ್ತವಾಂಶ ಕೂಡ. ಈ ಪಂಚ ಗ್ಯಾರಂಟಿ ಯೋಜನೆಗೆ ರಾಜ್ಯ ಸರ್ಕಾರ ಇದುವರೆಗೂ ಸುಮಾರು ರೂ.1,16,706 ಕೋಟಿಗಳನ್ನು ಖರ್ಚು ಮಾಡಿದೆ. ಖಂಡಿತವಾಗಿಯು ಕೂಡ ಜನಗಳಿಂದಲೇ ಬಂದಿರತಕ್ಕಂಥ ದುಡ್ಡನ್ನು ಮತ್ತೆ ಜನಗಳಿಗೆ ಖರ್ಚು ಮಾಡಿರತಕ್ಕಂಥ ಒಂದು ಆಶಾದಾಯಕ ಕೆಲಸ. ಇಂತಹ ಕೆಲಸಗಳಿಗೆ ನಾವು ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯವಾಗಬೇಕು ಎಂದು ನಾನು ಭಾವಿಸಿದ್ದೇನೆ. ಇದರಿಂದ poverty alleviation ಗೆ ಉತ್ತಮವಾದ ಭದ್ರಬುನಾದಿಯನ್ನು ಕರ್ನಾಟಕ ರಾಜ್ಯ ಹಾಕಿದೆ ಎಂದು

ನಾನು ಭಾವಿಸಿದ್ದೇನೆ. ಈ ರೀತಿಯ ಪ್ರಗತಿಪರವಾದಂತಹ ವೈಜ್ಞಾನಿಕವಾಗಿರತಕ್ಕಂಥ, ವೈಚಾರಿಕತೆಯಿಂದ ಕೂಡಿರುವ ಕಾರ್ಯಕ್ರಮಗಳಿಂದ ರಾಜ್ಯದಲ್ಲಿ ಸುಮಾರು 5 ಕೋಟಿಗಿಂತಲೂ ಹೆಚ್ಚು ಜನರು ಮಧ್ಯಮ ವರ್ಗಕ್ಕೆ ಏರಿರುವುದು ಜಾಗತಿಕ ದಾಖಲೆಯ ವಿಚಾರ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದನ್ನು ಸನ್ಮಾನ್ಯ ರಾಜ್ಯಪಾಲರು ಬಣ್ಣಿಸಿರುವುದು ಸಮಂಜಸವಾಗಿದೆ ಎನ್ನತಕ್ಕಂಥ ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಾಗಾಗಿ, ಇಂತಹ ಉತ್ತಮವಾದ ಕಾರ್ಯಕ್ರಮಗಳನ್ನು ನೀಡಿದ ರಾಜ್ಯ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ರಾಜ್ಯದ ಸಚಿವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಳೆದ ಹಲವಾರು ವರ್ಷಗಳಿಂದ ಜನರು (ಕನ್ನಡಿಗರು) ಆರ್ಥಿಕ ಅಸಮಾನತೆಯಿಂದ ಬಸವಳಿದ ಜನರಿಗೆ ಸರ್ಕಾರದ ಗ್ಯಾರಂಟಿ ಯೋಜನೆಗಳು ಒಂದಷ್ಟು ನೆಮ್ಮದಿಯನ್ನು ತಂದಿರುವುದು ಕೂಡ ಸತ್ಯಾಂಶ ಎನ್ನತಕ್ಕಂಥ ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅದೇರೀತಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡತಕ್ಕಂಥದ್ದರಲ್ಲೂ ಕೂಡ ನಮ್ಮ ರಾಜ್ಯವು ಮುಂಚೂಣಿಯಲ್ಲಿರುವುದು ಸತ್ಯ ಎಂಬ ಮಾತನ್ನು ಹೇಳುತ್ತೇನೆ. 2022ರಲ್ಲಿ ನಗದು ವರ್ಗಾವಣೆ ನಡೆಯುತ್ತಿದ್ದು ಅದು ಶೇ.9.3ರಷ್ಟಿತ್ತು. 2024ರಲ್ಲಿ ಅದು ಶೇ.72.7 ಕ್ಕೆ ಏರಿಕೆಯಾಗಿರುವುದು ಕೂಡ ಆ ಒಂದು ಪ್ರಗತಿಪರವಾದ ಯೋಜನೆಗೆ ಸಾಕ್ಷಿಯಾಗಿದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅನ್ನಭಾಗ್ಯ ಯೋಜನೆಗೆ ಅವರು ವಾರ್ಷಿಕವಾಗಿ ರೂ.6,420 ಕೋಟಿಗಳನ್ನು ಕೊಟ್ಟಿರತಕ್ಕಂಥ ವಿಚಾರಗಳನ್ನು ನೋಡಿದಾಗ, ಖಂಡಿತವಾಗಿಯು ಕೂಡ ಸನ್ಮಾನ್ಯ ಸಿದ್ದರಾಮಯ್ಯನವರು 2013ರಲ್ಲಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಹಸಿವು ಮುಕ್ತವಾಗಿ ನರಳಬಾರದು ಎಂದು 'ಹಸಿವು ಮುಕ್ತ ಕರ್ನಾಟಕ'ವನ್ನು ಮಾಡಬೇಕೆಂದು ಅರ್ಧ ಗಂಟೆಯಲ್ಲಿ ಕೊಟ್ಟಂತಹ ಕಾರ್ಯಕ್ರಮವನ್ನು ಮತ್ತೆ ಎರಡನೇ ಬಾರಿಗೆ ಮುಖ್ಯಮಂತ್ರಿಯಾದಾಗ ಈ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗಿರುತ್ತಾರೆ. ಕೇಂದ್ರ ಸರ್ಕಾರದಿಂದ ಒಬ್ಬರಿಗೆ 5 ಕೆ.ಜಿ ಅಕ್ಕಿ ಬಂದಿದ್ದು, ರಾಜ್ಯ ಸರ್ಕಾರ ಕೂಡ ಇನ್ನು 5 ಕೆ.ಜಿ ಅಕ್ಕಿ ಹಾಕಿ ಒಟ್ಟು 10 ಕೆ.ಜಿ ಅಕ್ಕಿಯನ್ನು ಕೊಟ್ಟಿರತಕ್ಕಂಥ ಕೆಲಸವನ್ನು ಮಾಡಿರತಕ್ಕಂಥದ್ದು. ಆಹಾರ-ಧಾನ್ಯಗಳನ್ನು ಕೊಡತಕ್ಕಂಥದ್ದನ್ನು ವಿರೋಧ ಪಕ್ಷಗಳು ಸ್ವಾಗತಿಸುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಅದರ ಬಗ್ಗೆಯೂ ಟೀಕೆ-ಟಿಪ್ಪಣಿಗಳನ್ನು ಮಾಡಿದಾಗ ಎಲ್ಲೋ ಒಂದು ಕಡೆ ನಮ್ಮ ಮನಸ್ಸಿಗೆ ಬೇಜಾರಾಯಿತು ಎನ್ನುವ ವಿಚಾರವನ್ನು ಹೇಳುತ್ತೇನೆ. ಏಕೆಂದರೆ ಬಡವರಿಗೆ ಏನಾದರು ಕೊಟ್ಟಾಗ ಅದನ್ನು ನಾವು ಸ್ವಾಗತ ಮಾಡಲೇಬೇಕಾಗುತ್ತದೆಯೇ ಹೊರತು, ಅದರಲ್ಲಿ ಕೊಂಕು ಮಾತುಗಳನ್ನು ಆಡತಕ್ಕಂಥದ್ದು ಸರಿಯಲ್ಲ ಎಂದು ನಾನು ಭಾವಿಸಿದ್ದೇನೆ. ಅದೇರೀತಿ ಗೃಹಲಕ್ಷ್ಮಿ ಯೋಜನೆಗೆ ಪ್ರತಿ ವರ್ಷ ಸುಮಾರು

ರೂ.28,600 ಕೋಟಿಗಳನ್ನು ಖರ್ಚು ಮಾಡಿ ಒಂದು ಮನೆಯಲ್ಲಿ ಒಬ್ಬರು ಯಜಮಾನಿಯನ್ನು ಸಬಲೀಕರಣ ಮಾಡುವುದು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳತಕ್ಕಂಥದ್ದು ಖಂಡಿತವಾಗಿಯು ಕೂಡ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಲು ಮಾಡಿರತಕ್ಕಂಥ ಒಂದು ಯೋಜನೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ಸಭಾಪತಿಯವರೇ, ನನಗೆ ಇನ್ನು 10 ನಿಮಿಷ ಅವಕಾಶ ಕೊಟ್ಟರೆ ನಾನು slow ಆಗಿ ಮಾತನಾಡುತ್ತೇನೆ. ಗೃಹ ಜ್ಯೋತಿ ಯೋಜನೆಯಲ್ಲಿ ವಾರ್ಷಿಕವಾಗಿ ರೂ.10,100 ಕೋಟಿಗಳನ್ನು ಖರ್ಚು ಮಾಡುತ್ತಿರತಕ್ಕಂಥದ್ದು. . .

**ಸಭಾಪತಿಯವರು:–** ಮಾನ್ಯ ನಾಗರಾಜುರವರೇ, 4 ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಈ ಮಧ್ಯೆ ಬೇರೆಯವರೆಲ್ಲಾ discussion ಮಾಡಿದರು. ವಿರೋಧ ಪಕ್ಷದ ನಾಯಕರು ನನ್ನ time ಅನ್ನು ತೆಗೆದುಕೊಂಡಿದ್ದಾರೆ.

**ಸಭಾಪತಿಯವರು:–** ಹೌದಾ!

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಅವರು ನನ್ನ time ತೆಗೆದುಕೊಂಡುಬಿಟ್ಟಿದ್ದಾರೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಒಂದು ನಿಮಿಷ ತೆಗೆದುಕೊಂಡಿದ್ದಾರೆ. ನಾನು ಅದನ್ನೆಲ್ಲಾ ಬರೆದುಕೊಂಡಿರುತ್ತೇನೆ. ಆಯಿತು ನೀವು ಮಾತನಾಡಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಹಾಗಾಗಿ, ಗೃಹಜ್ಯೋತಿ ಯೋಜನೆ ಇರಬಹುದು, ಶಕ್ತಿ ಯೋಜನೆ ಇರಬಹುದು ಮತ್ತು ಯುವನಿಧಿ ಯೋಜನೆ ಇರಬಹುದು, ಎಲ್ಲದರಲ್ಲೂ ಕೂಡ ಸಾವಿರಾರು ಕೋಟಿಗಳನ್ನು ಖರ್ಚು ಮಾಡಿರತಕ್ಕಂಥ ಈ ಒಂದು ಸರ್ಕಾರಕ್ಕೆ ಖಂಡಿತವಾಗಿಯು ಕೂಡ ಈ ವಿಚಾರಗಳನ್ನು ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ.

ಮಂಡ್ಯ, ಧಾರವಾಡ, ದಾವಣಗೆರೆ, ಶಿವಮೊಗ್ಗ, ಮೈಸೂರು ಮತ್ತು ಬಾಗಲಕೋಟೆಯಲ್ಲಿ ತೋಟಗಾರಿಕೆ ಕಿಸಾನ್ ಮಾಲ್‌ಗಳನ್ನು ಸ್ಥಾಪನೆ ಮಾಡಿ ಅದಕ್ಕೆ ಸುಮಾರು 14,000 ಮೆಟ್ರಿಕ್ ಟನ್ ಸಾಮರ್ಥ್ಯದ 6 ಶೀತಲ ಘಟಕಗಳನ್ನು ನಿರ್ಮಿಸಲಾಗುತ್ತಿದೆ ಎನ್ನತಕ್ಕಂಥ ವಿಚಾರ ಕೂಡ ರೈತರಿಗೆ ಒಂದು ಶುಭ ಸಂದೇಶವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ರೈತರಿಗೆ ಕ್ಷೀರಧಾರೆ ಯೋಜನೆಯಡಿಯಲ್ಲಿ ರೂ. 4,130 ಕೋಟಿಗಳ ಪ್ರೋತ್ಸಾಹ ಧನವನ್ನು ಕೊಟ್ಟಿರತಕ್ಕಂಥದ್ದು ಕೂಡ ನಾವು ಖಂಡಿತವಾಗಿಯು ಶ್ಲಾಘಿಸಬೇಕಾದಂತಹ ವಿಚಾರಗಳು. ನಾನು ಒಬ್ಬ ಪಶುಪಾಲಕ ವರ್ಗದಿಂದ ಬಂದಿರತಕ್ಕಂಥವನು. ಜಾನುವಾರುಗಳ ಆರೋಗ್ಯ ರಕ್ಷಣೆಗೆ ಸರ್ಕಾರ ವಿಶೇಷ ಒತ್ತು

ಕೊಟ್ಟು ಸುಮಾರು ರೂ.379.63 ಕೋಟಿಗಳನ್ನು ಈ ಸಾಲಿನಲ್ಲಿ 182.71 ಲಕ್ಷ ದನಗಳಿಗೆ ಲಸಿಕೆ ಹಾಕುವ ಮೂಲಕ ದೇಶದಲ್ಲೇ ಪ್ರಥಮ ಸ್ಥಾನದಲ್ಲಿರತಕ್ಕಂಥದ್ದನ್ನು ನಾನು ಶ್ಲಾಘಿಸುತ್ತೇನೆ. ಅದೇರೀತಿ ರೇಷ್ಮೆ ಇರಬಹುದು, ಪಶುಪಾಲನೆ ಇರಬಹುದು ಅಥವಾ ಇನ್ಯಾವುದೇ programmes ಇದ್ದರೂ ಕೂಡ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯ ವಿಚಾರಗಳಿರಬಹುದು ಅದು ಯಾವುದೇ ಇದ್ದರೂ ಕೂಡ ಅದನ್ನು ಯಾವುದೇ ರಾಜಕೀಯ ದೃಷ್ಟಿಕೋನದಲ್ಲಿ ನೋಡಬಾರದು. ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು ಎಲ್ಲಾ ಯೋಜನೆಗಳನ್ನು ಕೂಡ ರೈತರ ಪರವಾಗಿ ಮತ್ತು ಬಡವರ ಪರವಾಗಿ ಅನುಷ್ಠಾನಗೊಳಿಸುವ ಕೆಲಸ ಮಾಡಿರುವುದಕ್ಕೆ ಖಂಡಿತವಾಗಿಯು ಕೂಡ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬೆಂಗಳೂರಿನ ಜೊತೆಗೆ 'Beyond Bengaluru' ಎನ್ನತಕ್ಕಂಥ ಕಾರ್ಯಕ್ರಮಗಳನ್ನಿಟ್ಟುಕೊಂಡು technology ಇರಬಹುದು, ಸ್ಮಾರ್ಟ್‌ಸಿಟಿಗಳನ್ನು ಮಾಡತಕ್ಕಂಥ ವಿಚಾರಗಳಿರಬಹುದು ಅಥವಾ ನಗರಗಳ ಜೊತೆಗೆ ಹಳ್ಳಿಗಳನ್ನು ಕೂಡ ಅಭಿವೃದ್ಧಿಪಡಿಸಬೇಕಾಗುತ್ತದೆ ಮತ್ತು ಅಲ್ಲಿನ ರಸ್ತೆಗಳನ್ನು, ಆಸ್ಪತ್ರೆಗಳನ್ನು ಮತ್ತು ಶಾಲೆಗಳನ್ನು ಅಭಿವೃದ್ಧಿಗೊಳಿಸುವುದರಲ್ಲೂ ಕೂಡ ನಮ್ಮ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತಮವಾದ ಕೆಲಸ ಮಾಡಿರುವುದಕ್ಕೆ ನಾವೆಲ್ಲರೂ ಕೂಡ ಅದನ್ನು ಶ್ಲಾಘಿಸತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಾಗೆಯೇ ಪ್ರಮುಖವಾಗಿ ಚರ್ಚೆಯಾಗಿರತಕ್ಕಂಥ ವಿಚಾರಗಳನ್ನು ನೋಡಿದಾಗ ಎಲ್ಲೋ ಒಂದುಕಡೆ M.G.N.R.E.G.A. (Mahatma Gandhi National Rural Employment Guarantee Act) ವಿಚಾರ ಬಂದಾಗ ಅದನ್ನು ಕಿತ್ತೊಗೆದು ಈಗ VB Gram–G (Viksit Bharat–Guarantee for Rozgar and Ajeevika Mission (Gramin) ಎಂಬ ಕಾರ್ಯಕ್ರಮವನ್ನು ತಂದಿರತಕ್ಕಂಥ ವಿಚಾರಗಳನ್ನು ನೋಡಿದಾಗ, ಈ ವಿಚಾರದಲ್ಲಿ ಬಹಳ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಈ ಯೋಜನೆಯಡಿಯಲ್ಲಿ ಹಳ್ಳಿಗಾಡಿನ ಸಾಕಷ್ಟು ಜನರು ಇದರಲ್ಲಿ ಕೆಲಸ ಮಾಡತ್ತಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಇಂತಹ ಒಂದು ಕಾರ್ಯಕ್ರಮವನ್ನು 2005ರಲ್ಲಿ ಶ್ರೀಮತಿ ಸೋನಿಯಾ ಗಾಂಧಿಯವರ ನೇತೃತ್ವದಲ್ಲಿ ಸನ್ಮಾನ್ಯ ಮನಮೋಹನ್ ಸಿಂಗ್ ರವರು ಪ್ರಧಾನ ಮಂತ್ರಿಯಾಗಿದ್ದಾಗ ಈ ಒಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಸನ್ಮಾನ್ಯ ರಾಷ್ಟ್ರಪತಿಗಳಿಂದ ಸಹಿ ಮಾಡಿಸಿ ಅವೊತ್ತು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದನ್ನು ನಾವೆಲ್ಲರೂ ಕೂಡ ಕಂಡಿದ್ದೇವೆ. ಅದರಲ್ಲೂ ಗ್ರಾಮೀಣ ಅಭಿವೃದ್ಧಿಗೋಸ್ಕರ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ರೈತರು ಮತ್ತು ಮಧ್ಯಮ ವರ್ಗದ ಬಡವರಿಗೆ ಉದ್ಯೋಗ ನೀಡುವ ಕಾರಣಕ್ಕೋಸ್ಕರ ಈ ಒಂದು ಅತ್ಯುತ್ತಮವಾದ

ಕಾರ್ಯಕ್ರಮವನ್ನು ಕೊಟ್ಟಿರತಕ್ಕಂಥದ್ದು. ಮತ್ತೆ ಅವರು ನಗರ ಪ್ರದೇಶಗಳಿಗೆ ವಲಸೆ ಹೋಗಬಾರದು ಎನ್ನುವ ಕಾರಣಕ್ಕೋಸ್ಕರ ಈ ಒಂದು ಕಾರ್ಯಕ್ರಮವನ್ನು ಕೊಟ್ಟಿರುವುದನ್ನು ನಾವೆಲ್ಲರೂ ಕೂಡ ಸ್ವಾಗತ ಮಾಡಿದ್ದೇವೆ. ಅದರಲ್ಲಿಯೂ ಗ್ಯಾರಂಟಿ ಇತ್ತು. ಆ ಗ್ಯಾರಂಟಿಯಲ್ಲಿ ಅವರಿಗೆ ಶೇ.100 ಕೆಲಸ ಕೊಡತಕ್ಕಂಥ ಕೆಲಸವನ್ನು ಮನ್ರೇಗಾದಲ್ಲಿ ಮಾಡಬೇಕಾಗಿತ್ತು. ಯಾರೇ ಬಂದು ಕೆಲಸ ಕೇಳಿದರೆ ಅವರಿಗೆ ಕೆಲಸ ಕೊಡಬೇಕಾಗಿರುವುದು ಕಾನೂನಿನಲ್ಲಿ ಅಡಕವಾಗಿತ್ತು. ಇದು 'Right to Work' ಎನ್ನುವ ವಿಚಾರದಲ್ಲಿ ಬರುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅದೇರೀತಿ ಈಗ 100 ದಿನಗಳಿಂದ 125 ದಿನಗಳವರೆಗೆ ಹೆಚ್ಚಿಗೆ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅದು ಕೇವಲ ತೋರಿಕೆಗೆ ಎನ್ನುವ ವಿಚಾರಗಳನ್ನು ಹೇಳುತ್ತೇನೆ. ಕಾರಣ ಇಷ್ಟೇ, ಏನೆಂದರೆ ಅದು ಕಾಗದದಲ್ಲಿ ಇರುತ್ತದೆಯೇ ಹೊರತು, ವಾಸ್ತವಾಂಶಗಳಲ್ಲಿ 50 ದಿನಗಳಿಂದ 60 ದಿನಗಳು ಮಾತ್ರ average ಆಗಿ ಕೆಲಸ ಮಾಡಬೇಕಾದರೆ 125 ದಿನಗಳು ಎಂದು announce ಮಾಡಿರತಕ್ಕಂಥದ್ದು politically motivated ಎನ್ನುವ ವಿಚಾರಗಳನ್ನು ಹೇಳುತ್ತೇನೆ. ಇದು demand-driven ಆಯಿತು. Right to Work ಎನ್ನತಕ್ಕಂಥದ್ದು ಅದು ಕಾನೂನುಬದ್ಧವಾಗಿ ಕೊಡಬೇಕಾಗಿರತಕ್ಕಂಥ ಹಕ್ಕಾಗಿತ್ತು. ಅದು de-centralized ಆಗಿತ್ತು. ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಆ ಹಕ್ಕನ್ನು ಇಟ್ಟುಕೊಂಡು, ಕೆಲಸಗಳನ್ನು ಕೊಟ್ಟುಕೊಂಡು ಗ್ರಾಮಗಳನ್ನು ಅಭಿವೃದ್ಧಿಪಡಿಸಿ, ಅವರು ಜನರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡತಕ್ಕಂಥ ಕೆಲಸಗಳನ್ನು ಮಾಡಿದ್ದರು. ಆದರೆ ಈಗ ಬಂದಿರತಕ್ಕಂತಹ ಹೊಸ ಕಾಯ್ದೆಯಲ್ಲಿ ಅದನ್ನು centralize ಮಾಡಿಕೊಂಡಿದ್ದಾರೆ. ಅವರು plan ಮಾಡಿಕೊಟ್ಟಂತಹ ಕಾರ್ಯಕ್ರಮಗಳನ್ನು selected villages ಗಳಲ್ಲಿ ಕೆಲಸ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರುವುದು, it is not the right way ಎನ್ನುವ ವಿಚಾರಗಳನ್ನು ಹೇಳುತ್ತೇವೆ. ಆದರೆ ನಾವು ಕೊಟ್ಟಂತಹ ಮನ್ರೇಗಾ ಕಾರ್ಯಕ್ರಮದಲ್ಲಿ 365 ದಿನಗಳಲ್ಲಿ ಯಾವತ್ತು ಬೇಕಾದರೂ ಕೂಡ ಒಬ್ಬ ನಾಗರೀಕ ಅಥವಾ unskilled labour ಹೋಗಿ ಆ ಕೆಲಸ ಕೇಳುವುದಕ್ಕೆ ಅವರಿಗೆ ಅಧಿಕಾರ ಇತ್ತು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆದರೆ 60 ದಿನ ಅದಕ್ಕೆ pause ಕೊಡತಕ್ಕಂಥ ಕೆಲಸವನ್ನು ಮಾಡಿರುವುದು ಕೂಡ ಎಲ್ಲೋ ಒಂದುಕಡೆ ಗ್ರಾಮೀಣಾಭಿವೃದ್ಧಿಗೆ ಸ್ವಲ್ಪ ಕಷ್ಟವಾಗುತ್ತದೆ ಎನ್ನುವ ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಎಲ್ಲಾ ಕಾರಣಗಳಿಂದಾಗಿ ವಿಶೇಷವಾಗಿ ಆ ಮನ್ರೇಗಾ ಕಾರ್ಯಕ್ರಮ, ಅದು ನಮ್ಮ 'Father of the Nation'. ಮಹಾತ್ಮನ ಹೆಸರಿನಲ್ಲಿಟ್ಟಿರತಕ್ಕಂಥ ಈ ಹೆಸರನ್ನು ಬದಲಾವಣೆ ಮಾಡಿದ್ದು ಏಕೆ ಎನ್ನತಕ್ಕಂಥ ಪ್ರಶ್ನೆಯನ್ನು ಮಾನ್ಯ ಸಭಾಪತಿಯವರೇ, ನಾನು ತಮ್ಮ ಮುಂದೆ ಈ ಸದನದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಏಕೆಂದರೆ, ಮಹಾತ್ಮ ಗಾಂಧೀಜಿಯವರು ಕೇವಲ ನಮ್ಮ ದೇಶಕ್ಕೆ ಮಾತ್ರ ಆದರ್ಶ ಅಲ್ಲ. ಕೇವಲ 140 ಕೋಟಿ ಜನರಿಗೆ ಮಾತ್ರ ಆದರ್ಶ ಆಗಿರುವುದಿಲ್ಲ. ಇಡೀ ಪ್ರಪಂಚಕ್ಕೆ ಆದರ್ಶವಾಗಿರತಕ್ಕಂಥ ಒಂದು ಶಾಂತಿ ಧೂತನಾಗಿರತಕ್ಕಂಥವರು. ಇಂಗ್ಲೆಂಡ್‌ನ ಲಂಡನ್‌ನಲ್ಲಿರತಕ್ಕಂಥ ಪಾರ್ಲಿಮೆಂಟ್ ಮುಂದೆಯೂ ಕೂಡ ನಮ್ಮ ಮಹಾತ್ಮ ಗಾಂಧೀಜಿಯವರ ಪ್ರತಿಮೆಯನ್ನಿಟ್ಟು ಅವರಿಗೆ ನಮನ ಸಲ್ಲಿಸತಕ್ಕಂಥ ಕೆಲಸ ಆಗುತ್ತಿದೆ. ಒಂದು ವಿಶ್ವ ಕಂಡಂತಹ ಅಗ್ರಮಾನ್ಯ ನಾಯಕರಿಗೆ, ನಾವು ಅವರಿಗೆ ಅವಮಾನ ಮಾಡಿ ಅವರ ಹೆಸರನ್ನು ಕಿತ್ತೊಗೆಯತಕ್ಕಂಥದ್ದು ನಿಜವಾಗಲೂ ಕೂಡ ಖಂಡನೀಯ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಆ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆ. ಒಂದುಕಡೆ ಮಹಾತ್ಮ ಗಾಂಧೀಜಿಯವರ ಕೊಲೆ ಆಗಿದ್ದನ್ನು ನಾವೆಲ್ಲರೂ ಕೂಡ ಖಂಡಿಸಿದ್ದೇವೆ. ಅದೇರೀತಿ ಇನ್ನೊಂದು ಬಾರಿ ಅವರ ಹೆಸರಿಗೂ ಕೂಡ ಕಳಂಕ ತಂದಿದ್ದಾರೆ. ಅವರನ್ನು ಇನ್ನೊಂದು ಬಾರಿ ಹತ್ಯೆ ಮಾಡುವ ರೀತಿಯಲ್ಲಿ ಅವರ ಹೆಸರನ್ನು ತೆಗೆದುಹಾಕುವ ಕೆಲಸವನ್ನು ಮಾಡಿರತಕ್ಕಂಥದ್ದು ಕೂಡ ಯಾರೂ ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಕೆಲವೇ ನಿಮಿಷಗಳಲ್ಲಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಹಾಗಾಗಿ ಒಂದುಕಡೆ ಸಂವಿಧಾನ ಉಲ್ಲಂಘನೆಗಳಾಗುತ್ತಿದೆ. ಇನ್ನೊಂದು ಕಡೆ ಕರ್ನಾಟಕ ರಾಜ್ಯದಲ್ಲಿ ನಾವೆಷ್ಟು tax ಕಟ್ಟುತ್ತಿದ್ದೇವೆಂದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರವೇ. ನಾವು ರೂ.100 ಗಳು tax ಕೊಟ್ಟಾಗ, ನಮ್ಮ ರಾಜ್ಯಕ್ಕೆ ವಾಪಸ್ಸು ಬರುತ್ತಿರುವುದು ಕೇವಲ ರೂ.13 ರಿಂದ 14 ರೂಪಾಯಿ ಮಾತ್ರ ಬರುತ್ತಿದೆ. ನಿಜವಾಗಲೂ ಕೂಡ ನಾವು ಅದನ್ನು ಪ್ರಶ್ನೆ ಮಾಡಬೇಕಾಗಿರತಕ್ಕಂಥ ವಿಚಾರಗಳಾಗಿವೆ ಎಂದು ಹೇಳುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳನ್ನು ನೋಡಿದಾಗ ಮತ್ತು ಕೇಂದ್ರ ಸರ್ಕಾರದಲ್ಲಿ ಏನಾದರೂ ಕೂಡ ಒಳ್ಳೆಯ ಬೆಳವಣಿಗೆಗಳು ಕಾಣುತ್ತಿದ್ದರೆ, it is only because of the development in the State of Karnataka ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇವೆ. ಪ್ರಗತಿಪರವಾಗಿರತಕ್ಕಂಥದ್ದು... 'Karnataka is an engine for the financial growth in the Country'ಎಂದು ಹೇಳುವುದನ್ನು ನಾವು ಮರೆಯಬಾರದು ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇವೆ. ನಾವು ಜಿ.ಎಸ್.ಟಿ. ಕಟ್ಟುವುದರಲ್ಲಿ second position ನಲ್ಲಿ ಇದ್ದರೂ ಕೂಡ ನಾವು ನಮ್ಮ G.S.T Contribution ಮಾಡುತ್ತಿರುವುದನ್ನು ನೋಡಿದಾಗ, compared to our percentage of population. ನಾವು population ಗಿಂತ ಹೆಚ್ಚು ಜಿ.ಎಸ್.ಟಿ ಕಟ್ಟುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

**(ಮುಂದು)**

(86)30.1.2026/3.50/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ. ನಾಗರಾಜು (ಮುಂದು):-**

ಈ ಎಲ್ಲಾ ಕಾರಣಗಳಿಂದಾಗಿ ನಾನು ಹೇಳುವುದೇನೆಂದರೆ, ಎಲ್ಲೋ ಒಂದು ಕಡೆ ಕರ್ನಾಟಕ ರಾಜ್ಯಕ್ಕೆ ತೀವ್ರವಾದ ಅನ್ಯಾಯವಾಗುತ್ತಿರುವಂತಹ ಸಂದರ್ಭದಲ್ಲಿ, ನಮಗೆ ಕೇಂದ್ರದಿಂದ ಬರಬೇಕಾದಂತಹ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗುವಂತಹದ್ದನ್ನು ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ. ಅನುದಾನಗಳು ಕೊರತೆಯಾಗುತ್ತಿರುವುದನ್ನು ಕೂಡ ಸಹಿಸುವುದಕ್ಕೆ ಸಾದ್ಯವಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. 14ನೇ ಹಣಕಾಸು ಆಯೋಗದಲ್ಲಿ ನಮಗೆ ತೆರಿಗೆ ಹಂಚಿಕೆ ಶೇ. 4.71 ಇತ್ತು. ಅದನ್ನು 15ನೇ ಹಣಕಾಸು ಆಯೋಗದಲ್ಲಿ ಶೇ. 3.6ಗೆ ಇಳಿಸಿರುವಂತಹದ್ದನ್ನು ನೋಡಿದಾಗ ಎಲ್ಲೋ ಒಂದು ಕಡೆ ನಮಗೆ 40,000 ಕೋಟಿ ರೂಪಾಯಿಗಳ ಅನ್ಯಾಯವಾಗುತ್ತಿರುವುದನ್ನು ನಾವು ಖಂಡಿತವಾಗಿಯೂ ಪ್ರಶ್ನೆ ಮಾಡಬೇಕಾಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಆಯಿತು ಮುಗಿಸಿ. ಈಗಾಗಲೇ 20 ನಿಮಿಷಗಳಾಯಿತು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ.

**ಸಭಾಪತಿಯವರು:-** ಒಂದು ನಿಮಿಷ ಮಾತನಾಡಿ.

**ಶ್ರೀ ಎಂ. ನಾಗರಾಜು:-** ಅದೇ ರೀತಿ ಚುನಾವಣೆ ಸಮಯದಲ್ಲಿ 'ರಾಷ್ಟ್ರೀಯ ಯೋಜನೆ' ಎಂದು ಘೋಷಣೆ ಮಾಡಿದರು. ಭದ್ರಾ ಮೇಲ್ದಂಡೆ ಯೋಜನೆಯ ವಿಚಾರಗಳನ್ನು ಹೇಳಿದರು. ಬೆಂಗಳೂರನ್ನು ಗಮನದಲ್ಲಿಟ್ಟುಕೊಂಡು Pheripheral Righ Road ಬಗ್ಗೆ, ಕೆರೆಗಳ ಬಗ್ಗೆ ಮಾತನಾಡಿದರು. ಎಲ್ಲಾ ವಿಚಾರಗಳನ್ನು ಆಲೋಚನೆ ಮಾಡಿ ನೋಡಿದಾಗ ಸುಮಾರು 11,495 ಕೋಟಿ ರೂಪಾಯಿಗಳನ್ನು ಅವರು ಬಜೆಟ್‌ನಲ್ಲಿ ಘೋಷಣೆ ಮಾಡಿದರೂ ನಮಗೆ ಕೊಡಲಿಲ್ಲ, Finance Commission recommend ಮಾಡಿದರೂ ನಮಗೆ ಕೊಡಲಿಲ್ಲ ಎಂದಾಗ ಎಲ್ಲೋ ಒಂದು ಕಡೆ ಕರ್ನಾಟಕದ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಹೊಂದಿದ್ದಾರೆ ಎನ್ನುವುದನ್ನು ಯಾವ ಕನ್ನಡಿಗರು ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಬಜೆಟ್‌ನಲ್ಲಿ ನಮಗೆ ಸುಮಾರು 79,770 ಕೋಟಿ ರೂಪಾಯಿಗಳಷ್ಟು

ಕೊರತೆಯಾಗಿದೆ. ಹಾಗಾಗಿ ಎಲ್ಲಾ ವಿಚಾರಗಳನ್ನೂ ನೋಡಿದಾಗ ಕರ್ನಾಟಕ ರಾಜ್ಯದ ಪರಿಸ್ಥಿತಿ ಹೇಗಿದೆ ಎಂದು ನೋಡಿದಾಗ ಕೇಂದ್ರ ಸರ್ಕಾರದ ಯೋಜನೆಗಳನ್ನು ತೆಗೆದುಕೊಳ್ಳೋಣ. ಕರ್ನಾಟಕದಲ್ಲಿ ಒಟ್ಟು ಪಿಂಚಣಿದಾರರು ೮೩ ಲಕ್ಷಕ್ಕೂ ಹೆಚ್ಚು ಜನರು ಇರುವಂತಹ ವಿಚಾರದಲ್ಲಿ; ಕೇಂದ್ರದಿಂದ ಕೇವಲ 14 ಲಕ್ಷ ರೂಪಾಯಿಗಳು ಮಾತ್ರ ಬರುತ್ತಿದೆ. ಉಳಿದಂತಹ ೬೮ ಲಕ್ಷ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಕೊಡುತ್ತಿದೆ.

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್ . . .

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ಮುಗಿಸುತ್ತೇನೆ. ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಆಯಿತು.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೆ, ಒಟ್ಟಾರೆ ಹೇಳಬೇಕೆಂದರೆ ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರ ಮತ್ತು ಸನ್ಮಾನ್ಯ ಡಿ.ಕೆ. ಶಿವಕುಮಾರ್‌ರವರ ನೇತೃತ್ವದಲ್ಲಿ ಇರುವಂತಹ ಸರ್ಕಾರವು ಸಾಮಾಜಿಕ ಪರಿಕಲ್ಪನೆಯೊಂದಿಗೆ ಎಲ್ಲರನ್ನೂ ಒಳಗೊಂಡಂತಹ ಯಾವುದೇ ಜಾತಿ ಧರ್ಮದ ಆಧಾರದ ಮೇಲೆ ಯಾವುದೇ ಕಾರ್ಯಕ್ರಮವನ್ನು ಕೊಡದೇ ಎಲ್ಲರನ್ನೂ ಒಳಗೊಂಡಂತಹ 6½ ಕೋಟಿ ಕನ್ನಡಿಗರ ಅಭಿವೃದ್ಧಿಗೋಸ್ಕರ ಸಮತೋಲನಯುತ ಕಲ್ಯಾಣ ಕರ್ನಾಟಕ ಇರಬಹುದು, ಕಿತ್ತೂರು ಕರ್ನಾಟಕ ಇರಬಹುದು, ಬೆಂಗಳೂರು ಆಗಬಹುದು ಅಥವಾ ಮಧ್ಯ ಕರ್ನಾಟಕ ಆಗಬಹುದು ಎಲ್ಲರನ್ನೂ ಒಟ್ಟಾಗಿ ಒಗ್ಗಟ್ಟಾಗಿ ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡುತ್ತಿದ್ದಾರೆ. ಅಭಿವೃದ್ಧಿ ಮಾಡತಕ್ಕಂಥದ್ದನ್ನು ವಿರೋಧಪಕ್ಷಗಳು ಬೆಂಬಲಿಸಬೇಕು ಎಂಬ ಮಾತನ್ನು ಹೇಳುವುದರ ಜೊತೆಗೆ ಈ ಭಾಷಣವನ್ನು ಅವರು ಕೂಡ ಸ್ವೀಕರಿಸಬೇಕು. ರಾಷ್ಟ್ರಪತಿಗೆ ನಾವೂ ಗೌರವ ಕೊಡುತ್ತೇವೆ, ನೀವೂ ಗೌರವ ಕೊಡಿ. ಆದರೆ ಸಂವಿಧಾನ ಉಲ್ಲಂಘನೆಯಾಗಬಾರದು ಎನ್ನುವ ವಿಚಾರಗಳನ್ನು ಹೇಳುತ್ತೇನೆ. ರಾಜ್ಯಪಾಲರನ್ನು ಯಾವುದೇ ಸರ್ಕಾರದ ಏಜೆಂಟ್‌ಗಳನ್ನಾಗಿ ನಾವು ನೋಡಬಾರದು. ಅವರು ಸಂವಿಧಾನದ ಮುಖ್ಯಸ್ಥರಾಗಿ ಕೆಲಸ ಮಾಡಬೇಕಾದರೆ ಅವರಿಗೂ ಗೌರವ ಕೊಡೋಣ, ಸಭಾಪೀಠಕ್ಕೂ ಗೌರವ ಕೊಡೋಣ.

**ಸಭಾಪತಿಯವರು:–** ಮಾನ್ಯ ಪ್ರತಾಪ್‌ಸಿಂಹ ನಾಯಕರ್‌ರವರೆ, ಪ್ರಾರಂಭಿಸಿ.

**ಶ್ರೀ ಎಂ. ನಾಗರಾಜು:–** ನನಗೆ ಇನ್ನೊಂದೆರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಇನ್ನೂ ಬಹಳ ಸಂತೋಷವಾಗುತ್ತಿತ್ತು. ಅದಕ್ಕೋಸ್ಕರ ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಆಯಿತು, ಸಾಕು, ಮಾನ್ಯ ಪ್ರತಾಪ್‌ಸಿಂಹ ನಾಯಕರ್‌ರವರೆ, ಪ್ರಾರಂಭಿಸಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ವಿಚಾರ. ವಿಕೇಂದ್ರೀಕರಣದ ಮೇಲೆ ಯಾರಾದರೂ ನಂಬಿಕೆಯನ್ನು ಇಟ್ಟುಕೊಂಡಿದ್ದರೆ ಅದು ಕರ್ನಾಟಕ ರಾಜ್ಯ ಎಂದು ಹೇಳುತ್ತೇನೆ. ಸಂವಿಧಾನದ ಮೇಲೆ ನಂಬಿಕೆ ಇಟ್ಟುಕೊಂಡಿದ್ದರೆ ಅದು ಕರ್ನಾಟಕ ರಾಜ್ಯ ಎಂದು ಹೇಳುತ್ತೇನೆ. ಡಾ:ಬಿ.ಆರ್. ಅಂಬೇಡ್ಕರ್‌ರವರ ಮೇಲೆ ಯಾರಾದರೂ ನಂಬಿಕೆಯನ್ನು ಇಟ್ಟುಕೊಂಡಿದ್ದರೆ ಅದು ಕರ್ನಾಟಕ ರಾಜ್ಯ

**ಸಭಾಪತಿಯವರು:–** ಆಯಿತು, ಪ್ರತಾಪ್‌ಸಿಂಹ ನಾಯಕರ್‌ರವರೆ, ಪ್ರಾರಂಭಿಸಿ.

**ಶ್ರೀ ಎಂ. ನಾಗರಾಜು:–** ಬಸವಣ್ಣನವರ ಮೇಲೆ ಯಾರಾದರೂ ನಂಬಿಕೆಯನ್ನು ಇಟ್ಟುಕೊಂಡಿದ್ದರೆ ಅದು ಕರ್ನಾಟಕ ರಾಜ್ಯ ಎಂದು ಹೇಳುತ್ತೇವೆ. ಆ ಕಾರಣಕ್ಕೋಸ್ಕರ ಹೇಳುವುದೇನೆಂದರೆ ನಾವೆಲ್ಲರೂ ಕೂಡ ಸಂವಿಧಾನದ ಆಶಯಗಳಿಗನುಗುಣವಾಗಿ ಕೆಲಸ ಮಾಡೋಣ. ಕೇಂದ್ರ ಸರ್ಕಾರದಿಂದ ಬರುತ್ತಿರುವಂತಹ . . .

**ಸಭಾಪತಿಯವರು:–** ಮಾನ್ಯ ನಾಗರಾಜುರವರೆ, ಸಾಕು ಬಿಡಿ. ಮಾನ್ಯ ಸಭಾನಾಯಕರೇ, ನೀವಾದರೂ ಹೇಳಿ. ನಾನು ಆವಾಗಿನಿಂದಲೂ ಹೇಳುತ್ತಿದ್ದೇನೆ. ಸಾಕು ಬಿಡೋ ಮಾರಾಯ.

**ಶ್ರೀ ಎಂ. ನಾಗರಾಜು:–** ಹಣಕಾಸಿನ ಕೊರತೆಯಿಂದಾಗಿ ಆಗುತ್ತಿರುವ ನಷ್ಟಕ್ಕೆ ಯಾರು ಜವಾಬ್ದಾರಿ ಎಂಬ ಮಾತನ್ನು ಕೇಳುತ್ತಾ, ಈ ಅತ್ಯುತ್ತಮವಾದ ಭಾಷಣವನ್ನು ರಾಜ್ಯಪಾಲರವರಿಗೆ ರಾಜ್ಯ ಸರ್ಕಾರ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಾಗೂ ಈ ವಂದನಾ ನಿರ್ಣಯಕ್ಕೆ ನಾನು ಬೆಂಬಲವನ್ನು ಸೂಚಿಸುತ್ತೇನೆ ಎಂದು ಹೇಳುತ್ತಾ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಂತಹ ತಮಗೆ ಧನ್ಯವಾದಗಳು.

**Mr. CHAIRMAN:–** Very good. 7 ನಿಮಿಷ ಹೆಚ್ಚಾಗಿ ಮಾತನಾಡಿದ್ದೀರಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೆ, ಅದು ನಿಮ್ಮ ಆಶೀರ್ವಾದ.

**ಸಭಾಪತಿಯವರು:–** ನೀವು ಹೊರಗಡೆ ಹೋಗಿ ಬೇರೆ ಹೇಳುತ್ತೀರಿ, ಇಲ್ಲಿ ಬೇರೆ ಹೇಳುತ್ತೀರಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೆ, ಇಲ್ಲಿಯೂ ಸತ್ಯವನ್ನು ಹೇಳಲೆ?

**ಸಭಾಪತಿಯವರು:–** ಹೇಳಿ.

**ಶ್ರೀ ಎಂ. ನಾಗರಾಜು:–** ಅದಕ್ಕೆ ಸಮಯ ಕೊಡುವುದು ಬೇಡ.

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ನಾಗರಾಜುರವರಿಗೆ ಮಾಡಿದ ಆಶೀರ್ವಾದವನ್ನು ನನಗೂ ಮಾಡಿ ಎಂದು ಹೇಳಿ ಪ್ರಾರ್ಥನೆ ಮಾಡುತ್ತಾ ಒಂದರ್ಥದಲ್ಲಿ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಈ ಘನತೆವೆತ್ತ ಸದನದ ಸದಸ್ಯನಾಗಿ ನನಗೆ ಮಾತನಾಡಲು ಸಿಗುವುದು ಇದು ಕೊನೆಯ ಅವಕಾಶವೆಂದು ನಾನು ತಿಳಿದುಕೊಳ್ಳುತ್ತೇನೆ. ಆ ದೃಷ್ಟಿಯಲ್ಲಿ ನಿಮಗೆ ಮತ್ತೊಮ್ಮೆ ಧನ್ಯವಾದಗಳನ್ನು ಹೇಳುತ್ತಾ ಕಳೆದ ಮೂರು ದಿನಗಳಿಂದ ನಮ್ಮೆಲ್ಲಾ ಚರ್ಚೆಗಳು ಜಂಟಿ ಅಧಿವೇಶನದಲ್ಲಿ ನಡೆದ ರಾಜ್ಯಪಾಲರ ಭಾಷಣದ ಬಗ್ಗೆಯೇ ಹೆಚ್ಚು ಕೇಂದ್ರೀಕೃತವಾಗಿರುವುದರಿಂದ ನಾನೊಬ್ಬ ನ್ಯಾಯವಾದಿಯಾಗಿಯೂ ಕೂಡ ಇದರ ಕ್ರಮಬದ್ಧತೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲರೂ ಏನು ಮಾತನಾಡುತ್ತಿದ್ದಾರೆ ಅದಕ್ಕೆ ತಾವು ಸಹ ಸ್ಪಷ್ಟೀಕರಣ ಕೊಟ್ಟಿರಿ. ಆದರೆ ಇದೇನು ಇವತ್ತು ಮೊದಲ ಸಲ ಆದದ್ದು ಎಂದು ಹೇಳುವ ರೀತಿಯಲ್ಲಿ ಸಾರ್ವಜನಿಕವಾಗಿ ಬಹಳ ಚರ್ಚೆಯಾಯಿತು. ರಾಜ್ಯಪಾಲರು ಸಂವಿಧಾನ ವಿರೋಧಿ ನಡೆಯನ್ನು ನಡೆದರು ಎಂದು ಹೇಳುವಂತಹದ್ದರವರೆಗೂ ಆಪಾದನೆಗಳನ್ನು ಮಾಡಿದರು. ಆದರೆ ಇದನ್ನು 1965ನೇ ಇಸವಿಯಲ್ಲಿ ಪಶ್ಚಿಮ ಬಂಗಾಳದಲ್ಲಿ, *'The Governor failed to deliver her address to the Legislature on 8th February 1965."* ಎಂದು ಹೇಳುವುದರ ಬಗ್ಗೆ ಆಗಿನ ಕಲ್ಕತ್ತ ಹೈಕೋರ್ಟ್ ಹೇಳಿದ್ದು,

> *"The procedural failure should not be over emphasised because by laying a copy of the Governor's address on the table, the object of the address was substantially served."*

ಅವರು ಯಾವುದನ್ನು ಅಲ್ಲಿ table ಮಾಡಿದ್ದರು ಅಲ್ಲಿಗೆ ಸಂವಿಧಾನಬದ್ಧವಾಗಿ ಅವರು ಏನು ಕರ್ತವ್ಯವನ್ನು ನಿರ್ವಹಿಸಬೇಕೋ ಅದನ್ನು ಅವರು ನಿರ್ವಹಿಸಿದ್ದರು ಎಂದು ಹೇಳುವಂತದ್ದನ್ನು ಅದು ಸೂಚನೆ ಮಾಡುತ್ತದೆ ಎಂದು ಹೇಳುವಂತಹದ್ದು ಒಂದೇ ಕೋರ್ಟಲ್ಲ, ಸಾಕಷ್ಟು ಕೋರ್ಟುಗಳು ಈ ಮಾತನ್ನು ಹೇಳಿದೆ. ಅದೇ ರೀತಿ 1969ನೇ

ಇಸವಿಯಲ್ಲಿ ಪುನಃ ಇದರ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾದಾಗಲೂ ಕೂಡ ಗೃಹ ಸಚಿವರು ಲೋಕಸಭೆಯಲ್ಲಿ ಇದರ ಸಾಂವಿಧಾನಿಕ ಬದ್ಧತೆ ಮತ್ತು relevance ಬಗ್ಗೆ ಚರ್ಚೆಯಾಗಿದೆ. *"The Minister of Home Affairs stated that, the address of the Head of the State is a public declaration of policy that the Government wants to follow in the coming year. The address is supposed to look to the future and to the present. But the two paras try to interpret the history."* ಅಲ್ಲಿ ಬೇರೆ ವಿಚಾರಗಳನ್ನು ರಾಜ್ಯಪಾಲರಿಂದ ಹೇಳಿಸುವುದಕ್ಕೆ ಪ್ರಯತ್ನ ಪಟ್ಟಾಗ ಅದು ಸರಿಯಲ್ಲ ಎಂದು ಲೋಕಸಭೆಯಲ್ಲಿ ಅಗಿನ ಗೃಹ ಸಚಿವರು ಹೇಳಿದರು. ಆಗಿನ ಗೃಹ ಸಚಿವರ ಬಗ್ಗೆ ಪುನಃ ವಿವರಿಸಿ ಹೇಳಬೇಕಾಗಿಲ್ಲ. 77 ವರ್ಷದ ಸಾಂವಿಧಾನಿಕ ಇತಿಹಾಸದಲ್ಲಿ ಮುಕ್ಕಾಲು ಭಾಗ ಈಗ ಯಾರು ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ ಅವರೇ ರಾಜ್ಯಪಾಲರ ಅಧಿಕಾರವನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅವರೇ ಹೇಳಿರುವಂಥದ್ದು ಇನ್ನೊಂದು ದಿನಾಂಕ ೦6-1-2011ರಲ್ಲಿ ಆಗಿನ ರಾಜ್ಯಪಾಲರಾದ ಶ್ರೀ ಹೆಚ್.ಆರ್. ಭಾರದ್ವಾಜರು ಉಭಯ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ His Excellency the Governor, ಅವರು ಏನು ಹೇಳಿದರೆಂದರೆ, ಇದನ್ನೆಲ್ಲಾ address ಮಾಡುವಂತದ್ದನ್ನೆಲ್ಲಾ ಮಾಡಿ *"I wish you all a very happy…"* ಮಾಮೂಲು ಮಾತುಗಳನ್ನು ಹೇಳುತ್ತಾ, ನಮ್ಮ ರಾಜ್ಯದ ಈಗಿನ ಮಾನ್ಯ ಮುಖ್ಯಮಂತ್ರಿಗಳು ಆಗ ವಿರೋಧಪಕ್ಷದ ನಾಯಕರಾಗಿದ್ದರು. ಅವರು ಆಗ ಹೇಳಿರುವಂತದ್ದು, ಮಾನ್ಯ ರಾಜ್ಯಪಾಲರೆ, ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ ಎಂದು ಹೇಳಿ ಸರ್ಕಾರದ ಮೇಲೆ ಆರೋಪಗಳನ್ನು ಮಾಡಿ ಈ ಭಾಷಣವನ್ನು ನೀವು ಮಾಡಬಾರದು ಎಂದು ಹೇಳಿದಾಗ *"Then I will place it on the table."* ಎಂದು ಆ ದಿನವೂ ಇದನ್ನು ಮಾಡಿದ್ದಾರೆ. ಹಲವು ಬಾರಿ ಇದು ಆಗಿರುವಂತಹ ಸಂಗತಿಯಾದ ಕಾರಣ ರಾಜ್ಯಪಾಲರ ನಡೆಯನ್ನು ಇವತ್ತು ಸಾರ್ವಜನಿಕವಾಗಿ ಅಥವಾ ಅ ಸ್ಥಾನದ ಘನತೆಗೆ, ಗೌರವಕ್ಕೆ ತೊಂದರೆ ಬರುವಂತಹ ರೀತಿಯಲ್ಲಿ ಮಾತನಾಡುವಂಥದ್ದನ್ನು ಸಂವಿಧಾನದ ಬಗ್ಗೆ ಬಹಳಷ್ಟು ಮಾತನಾಡುವಂತವರು ಇದನ್ನು ಮಾತನಾಡುವಂಥದ್ದು ಅವರಿಗೆ ಶೋಭೆ ತರುವುದಿಲ್ಲ ಎಂದು ಹೇಳುತ್ತೇನೆ. ಈ ಅಧಿವೇಶನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಬೆಳಗಾವಿಯಲ್ಲಿ ಅಧಿವೇಶನ ನಡೆದಾಗ ಒಂದೆರಡು ದಿವಸ ಹೆಚ್ಚಿಗೆ ಮಾಡಿ ಎಂದು ನಾವು ಒತ್ತಾಯ ಮಾಡಿದೆವು. ವರ್ಷಕ್ಕೆ ಒಮ್ಮೆ ಬೆಳಗಾವಿಯಲ್ಲಿ ಅಧಿವೇಶನ ಆಗುವಂಥದ್ದು. ಅದರಲ್ಲಿಯೂ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆನ್ನುವ ದೃಷ್ಟಿಯಲ್ಲಿ ಅಲ್ಲಿ ಆಗಿರುವಂತಹದ್ದು. ವಿಶೇಷ ಕಾರಣಗಳಗೋಸ್ಕರ ಎರಡು ದಿವಸ

ಅಧಿವೇಶನ ನಡೆಯಲಿಲ್ಲ ಎಂದು ಹೇಳುವ ಕಾರಣಕ್ಕೆ ಉಚಿತವಾಗಿ ನಮ್ಮ ಕೆಳಮನೆ ಮತ್ತು ಮೇಲ್ಮನೆಯ ಪ್ರತಿಪಕ್ಷದ ನಾಯಕರು ಅರ್ಜಿ ಕೊಟ್ಟರು ಕೂಡ ಅಲ್ಲಿ extend ಮಾಡಲಿಲ್ಲ.

(ಮುಂದು)

(87) 30-01-2026 4-00 KH/MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):-**

ಆ ದಿನದ ಪತ್ರಿಕೆಗಳೇನಾದರೂ ನೋಡಿದರೆ ಇಡೀ ಅಧಿವೇಶನ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳ ಸ್ಥಾನ ಬದಲಾವಣೆಯ ಬಗ್ಗೆ ವಿಶೇಷವಾದಂತಹ ಚರ್ಚೆಯಾಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಬದಲಾಗುತ್ತಾರೋ, ಇಲ್ಲವೋ ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ಚರ್ಚೆಯಾಗುತ್ತಿತ್ತೆ ಹೊರತು ಬಹಳ ವಿಶೇಷವಾಗಿ ಉತ್ತರ ಕರ್ನಾಟಕದ ಬಗ್ಗೆ ಏನು ಚರ್ಚೆಯಾಗಬೇಕಾಗಿತ್ತು. ಅದಕ್ಕೆ ಅವಕಾಶಗಳು ಕಡಿಮೆಯಾಯಿತು. ಇದು ಎಲ್ಲಿಯವರೆಗೆ ಎಂದರೆ, ಅಧಿವೇಶನದ ಮೊದಲು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಈ ಎಲ್ಲಾ ಸಮಸ್ಯೆಗಳು ಸರಿಯಾಯಿತು ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಸ್ಥಾನದ ಗುದ್ದಾಟದ ಕಾರಣವನ್ನು ಸರಿ ಮಾಡುವುದಕ್ಕೆ ಬಾಡು ಕೋಳಿಯ ಊಟದ ಬಗ್ಗೆ ಬಂದಿತ್ತು. ಗುದ್ದಾಟ ಇವರೊಳಗೆ, ಸತ್ತದ್ದು ಮಾತ್ರ ಕೋಳಿ. ಇದು ಅಲ್ಲಿ ಆಗಿರುವಂತಹ ವಿಚಾರ. ಇವತ್ತು ಇಲ್ಲಿ ಅಧಿವೇಶನವನ್ನು ಬಹಳ ತುರ್ತಾಗಿ ಕರೆದಿರುವಂತಹ ಉದ್ದೇಶ ಏನೇಂದರೆ, ನನ್ನ ಭಾವನೆಯಲ್ಲಿ ಕಳೆದ 3 ವರ್ಷಗಳ ಹಿಂದೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಅಧಿವೇಶನ ಆದ ನಂತರ 2 ದಿನ ಬಿಟ್ಟು ಶುಕ್ರವಾರದ ದಿವಸ ಬಜೆಟ್ ಅಧಿವೇಶನ ಇರುವಂತಹದ್ದು. ಬಜೆಟ್ ಮೇಲಿನ ಚರ್ಚೆ ಇವೆರಡನ್ನು ಕಳೆದ 3 ವರ್ಷಗಳಿಂದ ಒಟ್ಟಿಗೆ ಮಾಡಿಕೊಂಡು ಬರುತ್ತಿದ್ದರು. ಈ ಬಾರಿ ವಿಶೇಷವಾಗಿ ಅಧಿವೇಶನವನ್ನು ಕರೆದಿದ್ದಾರೆ. ಇವರ ಮುಖ್ಯ ಉದ್ದೇಶ ಇರುವುದೇನೆಂದರೆ, 'ವಿಬಿ-ಜಿ ರಾಮ್ ಜಿ' ಯವರ ಬಗ್ಗೆ ಚರ್ಚೆಯಾಗಬೇಕು. ಸಂವಿಧಾನಿಕವಾಗಿ ರಾಜ್ಯಪಾಲರಿಂದ ಈ ಜಂಟಿ ಅಧಿವೇಶನಕ್ಕೆ ಭಾಷಣ ಮಾಡಿಸದೇ ಉಳಿದದ್ದನ್ನು ಚರ್ಚೆ ಮಾಡುವುದಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶ ಇಲ್ಲ. ಅವಕಾಶ ಇಲ್ಲ ಎಂದರೆ, ಇವರು ನೇರವಾಗಿ ಇದನ್ನೇ ಕರೆಯುತ್ತಿದ್ದರು. ಈ ತಂತ್ರಗಾರಿಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಇದ್ದಷ್ಟು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಇಲ್ಲ. ಅವರು ದೆಹಲಿಗೆ ಹೋಗಿ, ಅಲ್ಲಿ ಕುಳಿತು ಮುಖ್ಯಮಂತ್ರಿಗಳ ಸ್ಥಾನಕ್ಕೆ ಏನೇ ಪ್ರಯತ್ನ ಮಾಡಿದರೂ ಕೂಡ ಅಲ್ಲಿ ಏನು ನಡೆಯಲಿಲ್ಲ ಎನ್ನುವ ಕಾರಣಕ್ಕೆ ಹಿಂದಿರುಗಿ ಬಂದಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಕಲ್ಲಿನಲ್ಲಿ ಮೂರು ಹಕ್ಕಿಯನ್ನು ಒಡೆದಿದ್ದಾರೆ. ಮೊದಲನೆಯದು, ಇವತ್ತು ಮಾನ್ಯ ಮುಖ್ಯಮಂತ್ರಿಗಳ ಸ್ಥಾನ ಬದಲಾವಣೆಯ ಚರ್ಚೆ ಬದಿಗೆ ಸರಿದಿದೆ. ಎರಡನೆಯದು, ರಾಜ್ಯದಲ್ಲಿ ಬೇರೆ ಬೇರೆ

ಸಮಸ್ಯೆಗಳು, ಅದು ಭ್ರಷ್ಟಾಚಾರ ಇರಬಹುದು, ಕಾನೂನಿನ ವೈಫಲ್ಯ ಇರಬಹುದು, ಅಭಿವೃದ್ಧಿಯ ಸ್ಥಗಿತ ಇರಬಹುದು. ಈ ಎಲ್ಲಾ ಚರ್ಚೆಗಳಿಂದ ಮುಕ್ತವಾಗುವುದಕ್ಕೆ 'ರೋಗಿ ಬಯಸಿದ್ದು ಹಾಲು, ವೈದ್ಯ ನೀಡಿದ್ದು ಹಾಲು' ಎನ್ನುವ ಬಗ್ಗೆ ಮೇಲಗಡೆಯಿಂದ ಹೇಳಿದರು. 'ವಿಬಿ–ಜಿ ರಾಮ್ ಜಿ' ಯ ಬಗ್ಗೆ ಅದು ಸರಿ ಅಲ್ಲ. ಅದನ್ನು ತಾವು ವಿತ್‌ಡ್ರಾ ಮಾಡಬೇಕೆಂದು ಹೋರಾಟ ಮಾಡಿ, ಅದಕ್ಕೋಸ್ಕರ ಒಂದು ಅಧಿವೇಶನವನ್ನು ಕರೆಯಿರಿ ಎಂದು ಹೇಳಿದಾಗ ಇವರಿಗೆ ಒಂದು ಅವಕಾಶ ಸಿಕ್ಕಿತು. ಮಾನ್ಯ ಉಪ ಮುಖ್ಯಮಂತ್ರಿಗಳು ಪಕ್ಕ ಕಾಂಗ್ರೆಸಿಗ. ಅವರು ಮೇಲಗಡೆಯಿಂದ ಏನು ಬರುತ್ತದೆ, ಅದನ್ನು ಅನುಷ್ಠಾನಕ್ಕೆ ತರುವಂತಹ ಪ್ರಾಮಾಣಿಕ ವ್ಯಕ್ತಿ. ಅವರಿಗೆ ಈ ತಂತ್ರಗಾರಿಕೆ ಎಲ್ಲಾ ಗೊತ್ತಿಲ್ಲ. ಬರೆದಿಡಿ, ಈ ಅಧಿವೇಶನದ ನಂತರ, ಈ ಬಜೆಟ್ ಮುಗಿಯುವವರೆಗೂ, ಅದರ ನಂತರವೂ ಕೂಡ ಮಾನ್ಯ ಮುಖ್ಯಮಂತ್ರಿ ಸ್ಥಾನ ಬದಲಾವಣೆಯ ಬಗ್ಗೆ ಬಿಟ್ಟು, ಬೇರೊಂದು ಹೊಸ ವಿಷಯವನ್ನು ತಂದು ಜನರ ಗಮನವನ್ನು ಬೇರೆ ಕಡೆಗೆ ಸೆಳೆಯುವಂತಹ ಪ್ರಯತ್ನವಾಗುತ್ತದೆ. 'ವಿಬಿ–ಜಿ ರಾಮ್ ಜಿ' ಯ ಬಗ್ಗೆ plus points, ಮತ್ತು ಸಕಾರತ್ಮಕ ಸಂಗತಿಗಳ ಬಗ್ಗೆ ನಾವು ಇದರ ನಂತರದಲ್ಲಿ . . .

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ಇನ್ನು 4 ನಿಮಿಷ . . .

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ೩೦ ನಿಮಿಷಗಳ ಕಾಲಾವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ.

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ಇಲ್ಲ. ನಾನೇನು ಹೇಳಲಿಲ್ಲ. ತಾವು ಹೇಳಿಕೊಂಡಿರುವುದು.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಹಾಗಾದರೆ ನಾನು ಮಾತನಾಡುತ್ತಾ ಹೋಗಬಹುದೇ?

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ಇನ್ನು 4 ನಿಮಿಷ ಇದೆ. ಮಾತನಾಡಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಎರಡು ದಿನ ಚರ್ಚೆ ಆಗಬೇಕು. ನಾವು ಚರ್ಚೆಗೆ ತಯಾರಿದ್ದೇವೆ. ಇವರ ಯಾವುದೇ ಅಪಪ್ರಚಾರಗಳಿದ್ದರೂ ಕೂಡ ಆ ಅಪಪ್ರಚಾರಕ್ಕೆ ಉತ್ತರ ಕೊಡುವುದಕ್ಕೆ ಅದರ ಸಾಧು–ಸಂಗತಿಗಳ ಬಗ್ಗೆ ಸಾಕಷ್ಟು ವಿವರಣೆಗಳು ನಮ್ಮಲ್ಲಿ ಇದೆ. 'ವಿಬಿ–ಜಿ ರಾಮ್ ಜಿ' ಮತ್ತು 'ಮನರೇಗಾ' ರನ್ನು replace ಮಾಡಬೇಕಾಗಿತ್ತು ಎನ್ನುವ ಬಗ್ಗೆ ವಿವರಣೆಯನ್ನು ನಾವು ಆ ದಿವಸ ಚರ್ಚೆ ಮಾಡುತ್ತೇವೆ. ಆದರೆ, ಇವರ ಪ್ರಯತ್ನ ಹೇಗೆ ಎಂದರೆ, ಇದಕ್ಕೆ ಒಂದು ಕಥೆ ಹೇಳುತ್ತೇನೆ. ಒಬ್ಬ street

light ನ ಕೆಳಗೆ ಏನೋ ಹುಡುಕುತ್ತಿದ್ದನಂತೆ, ಹೋಗಿ ಏನು ಹುಡುಕುತ್ತೀಯಾ ಎಂದು ಕೇಳಿದಾಗ ಒಂದು ವಸ್ತು ಕಳೆದು ಹೋಗಿದೆ. ಅದನ್ನು ಹುಡುಕುತ್ತಿದ್ದೇನೆ ಎಂದು ಹೇಳಿದ. ಎಲ್ಲಿ ಕಳೆದು ಹೋಗಿದೆ, ಏನು ಕಳೆದು ಹೋಗಿದೆ ಎಂದು ಕೇಳಿದಾಗ ಆ ವಸ್ತು ನನ್ನ ಮನೆಯಲ್ಲಿ ಕಳೆದು ಹೋಗಿದೆ. ನಾನು ಇಲ್ಲಿ ಹುಡುಕುತ್ತಿದ್ದೇನೆ ಎಂದು ಹೇಳಿದ. ಇದು ಆ ರೀತಿಯಂತಾಗಿದೆ. ಕೇಂದ್ರ ಸರ್ಕಾರ ಬಿಲ್ಲು ಪಾಸ್ ಮಾಡಿದ್ದು, ಇವರಿಗೆ ಇಲ್ಲಿ ಸ್ವಲ್ಪ ಬೆಳಕುಂಟು ಎಂದು ಹೇಳಿದರೆ, ಇವರ ರಾಜ್ಯದಲ್ಲಿ ಇವರ ಅಧಿಕಾರ ಇದೆ. ಅಷ್ಟು ಕಾರಣಕ್ಕೋಸ್ಕರ ಮಾತ್ರ ಇಲ್ಲಿ ಚರ್ಚೆ ಮಾಡುತ್ತಿದ್ದಾರೆಯೇ ಹೊರತು ಬೇರೆ ಉದ್ದೇಶ ಏನು ಇಲ್ಲ. ಎಲ್ಲಿ ಹುಡುಕ ಬೇಕೋ ಅಲ್ಲಿ ಹುಡುಕಲಿಲ್ಲ. ಅಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ಇವರ ವಿಪಕ್ಷ ನಾಯಕರಾದ ಅಗ್ರ ನೇತಾರರೇ ವಿದೇಶ ಪ್ರವಾಸದಲ್ಲಿದ್ದರು. ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ಚರ್ಚೆಯಾಗುವಾಗ ಅವರು ಇರಲೇ ಇಲ್ಲ. ಇವರು ಸುಳ್ಳು ಸುದ್ದಿಗಳನ್ನು ಕೊಟ್ಟರು. ಕಾಂಗ್ರೆಸಿನ ಮನಸ್ಸಿನಲ್ಲಿ ಏನಿದೆ ಎಂದರೆ, ಇವರು ಪ್ರಥಮ ಬಾರಿಗೆ ಸತತವಾಗಿ ಕೇಂದ್ರದಲ್ಲಿ 3ನೇ ಬಾರಿಗೆ ಅಧಿಕಾರದಿಂದ ಹೊರಗೆ ಇದ್ದಾರೆ. ಅಧಿಕಾರದಿಂದ ಹೊರಗಿದ್ದು ಇವರಿಗೆ ಅಭ್ಯಾಸವೇ ಇಲ್ಲ. ಮನಸ್ಸಿನಲ್ಲಿ ಹೇಗೆ ಎಂದರೆ, ನಾವು ಹುಟ್ಟಿದ್ದೆ ಅಧಿಕಾರಕ್ಕೋಸ್ಕರ, ನಾವೇ ಸ್ವತಂತ್ರ ತಂದು ಕೊಟ್ಟವರು, ನಾವೇ ಸಂವಿಧಾನ ಮಾಡಿದವರು. ಮಹಾತ್ಮ ಗಾಂಧಿಜೀಯವರು ಸ್ವತಂತ್ರ ಸಿಕ್ಕಿದ ಕೂಡಲೇ ಕಾಂಗ್ರೆಸ್ ಒಂದು ಚಳುವಳಿ. ಅದನ್ನು ಯಾವ ಕಾರ್ಯಕ್ಕೋಸ್ಕರ ಮಾಡಿದ್ದೆವೋ, ಅದರ ಜವಾಬ್ದಾರಿ ಮುಗಿಯಿತು. ಅದನ್ನು ವಿಸರ್ಜನೆ ಮಾಡಿ ಎಂದು ಆಗಲೇ ಹೇಳಿದ್ದರೂ ಕೂಡ ಇವತ್ತಿನವರೆಗೆ ಮಹಾತ್ಮ ಗಾಂಧಿಜೀಯವರ ಹೆಸರು, ಕಾಂಗ್ರೆಸಿನ ಹೆಸರನ್ನು ಹೇಳಿಕೊಂಡು ದಿನ ದೂಡುತ್ತಿದ್ದಾರೆಯೇ ಹೊರತು ಮಹಾತ್ಮ ಗಾಂಧಿಯವರ ವಿಚಾರವಾಗಲಿ, ಸಂವಿಧಾನದ ವಿಚಾರವಾಗಲಿ, ಇವರಿಗೆ ಅದರ ಭದ್ರತೆ ಖಂಡಿತವಾಗಿಯೂ ಇಲ್ಲ. ಇವತ್ತಿಗೂ ನಾವು Landlord ಎಂದು ತಿಳಿದುಕೊಂಡಿದ್ದಾರೆ. ಈಗ land ಇಲ್ಲ. ಆದರೆ, ಇವರ ಮನಸ್ಸಿನಲ್ಲಿ ಮಾತ್ರ ತಾವು Lord ಗಳು ಎಂದು ಹೇಳುವಂತಹ ಭಾವನೆಗಳು ಮಾತ್ರ ಇದೆ. ಇವತ್ತು ಜನ ಸರ್ಕಾರದ ಕಾರ್ಯಕ್ರಮವನ್ನು ನೋಡಿ ಆಯ್ಕೆ ಮಾಡುತ್ತಿದ್ದಾರೆ. ಇವತ್ತು ಒಂದು model ಜನರ ಎದುರು ಬಂದಿದೆ. ಯು.ಪಿ.ಎ., ಮತ್ತು ಎನ್.ಡಿ.ಎ., ಸರ್ಕಾರದ ಸಾಧನೆಗಳನ್ನು ಮತ್ತು ಕೆಲಸಗಳನ್ನು ಕರ್ನಾಟಕದಲ್ಲಿ ಸುಳ್ಳು ಹೇಳಿ ತುಲನೆ ಮಾಡುತ್ತಿದ್ದಾರೆ. ಈಗ ಭ್ರಷ್ಟಾಚಾರದ ದೃಷ್ಟಿಯಲ್ಲಿ ಅಬಕಾರಿ ಇಲಾಖೆಯ ಪ್ರಕರಣ ಏನಿದೆ ಎಂದರೆ, ಅದರ ಅಧ್ಯಕ್ಷರೇ 6,000 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆಗಿದೆ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಅದೆಲ್ಲಾವನ್ನೂ ಮುಚ್ಚಿಟ್ಟಿದ್ದಾರೆ. ಒಮ್ಮೆ ಆಲೋಚನೆ ಮಾಡಿದರೆ ಮನರೇಗಾ ಬಂದು ಈಗಾಗಲೇ 20 ವರ್ಷಗಳಾಯಿತು. ಮೊದಲ 10 ವರ್ಷಗಳಲ್ಲಿ ಮಾನ್ಯ ಮನಮೋಹನ್ ಸಿಂಗ್ ರವರ ಸರ್ಕಾರ ಇದ್ದಾಗ 2 ಲಕ್ಷ ಕೋಟಿ ರೂಪಾಯಿಗಳನ್ನು ಮನರೇಗಾ ಯೋಜನೆಗೆ ಖರ್ಚು ಮಾಡಲಾಗಿದೆ. ಆದರೆ, ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಬಂದ ನಂತರ ಕಳೆದ 10 ವರ್ಷಗಳಲ್ಲಿ

ಅದೇ ಯೋಜನೆಗೆ ೮ ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮನರೇಗಾ ಯೋಜನೆಯಲ್ಲಿ ಜನರಿಗೆ ಕೆಲಸ ಕೊಡುವುದರ ಬಗ್ಗೆ ನಮ್ಮದೇನೂ ಅಭ್ಯಂತರಗಳು ಇರಲಿಲ್ಲ. ಆದರೆ, ಇವತ್ತು ಅದೊಂದು ಭ್ರಷ್ಟಾಚಾರದ ಕೂಪವಾಗಿದೆ. 10 ಲಕ್ಷ ಕೋಟಿ ರೂಪಾಯಿಗಳು ಖರ್ಚಾದಂತಹ ಸಾರ್ವಜನಿಕರ ಹಣದಲ್ಲಿ ತಾವು ಎಷ್ಟರಮಟ್ಟಿಗೆ ದೇಶದ ಉದ್ದಗಲ್ಲಕ್ಕೂ ಆಸ್ತಿಗಳನ್ನು ನಿರ್ಮಾಣ ಮಾಡಿದ್ದೀರಿ. ಇದರ ಬಗ್ಗೆ ದೊಡ್ಡ ರೀತಿಯಲ್ಲಿ ಚರ್ಚೆ ಆಗಬೇಕಾಗಿದೆ. ನಾವು ಆ ಚರ್ಚೆಗೆ ಸಿದ್ಧ. ಇವತ್ತು ಬದಲಾವಣೆ ಮಾಡಿರುವಂತಹದ್ದರ ಬಗ್ಗೆ ಒಮ್ಮೆ ಆಲೋಚನೆ ಮಾಡಿದರೆ ೨೦೦೫ನೇ ಇಸವಿಯಲ್ಲಿ ಈ ಯೋಜನೆಯನ್ನು ತಂದಾಗ ಮಾನ್ಯ ಮಹಾತ್ಮ ಗಾಂಧಿಯವರ ಹೆಸರು ಇರಲಿಲ್ಲ. ೨೦೦೯ನೇ ಇಸವಿಯಲ್ಲಿ ಚುನಾವಣೆ ಹತ್ತಿರ ಬಂದಾಗ ಕಾಂಗ್ರೆಸ್‌ನವರಿಗೆ ಮಾನ್ಯ ಮಹಾತ್ಮ ಗಾಂಧಿಜೀಯವರ ಹೆಸರು ನೆನಪಿಗೆ ಬರುತ್ತದೆ. ನಮ್ಮ ಮೇಲೆ ಆರೋಪ ಮಾಡುತ್ತಾರೆ. ಇದರ ಬಗ್ಗೆ ಆಲೋಚನೆ ಮಾಡಿ. ಭಾರತೀಯ ಜನತಾ ಪಾರ್ಟಿಯ ಸಂವಿಧಾನದಲ್ಲಿ ಪಂಚನಿಷ್ಠೆಯಲ್ಲಿ ನಮ್ಮ ಎಲ್ಲಾ ಕಾರ್ಯಕ್ರಮಗಳು ಗಾಂಧಿ ಪ್ರಣಿತ ಸಮಾಜವಾದದ ಮೇಲೆ ಎಲ್ಲಾ ಕಾರ್ಯಕ್ರಮಗಳು, ಕೇಂದ್ರ ಸರ್ಕಾರದ ಒಂದೊಂದು ಯೋಜನೆಯನ್ನು ಅನುಷ್ಠಾನಕ್ಕೆ ಬಂದಿರುವುದನ್ನು ಏನಾದರೂ ನೋಡಿದರೆ, ಇವತ್ತು ಸಮಗ್ರವಾಗಿ ಎಷ್ಟೆಷ್ಟು ಕೋಟಿ ರೂಪಾಯಿಗಳ ಲೆಕ್ಕದಲ್ಲಿ ಮನೆಗಳು, ಕುಡಿಯುವ ನೀರು ಏನೆಲ್ಲಾ ಯೋಜನೆಗಳು ಇವೆ. ಈ ಕಾರಣಕ್ಕೆ ಬಿ.ಜೆ.ಪಿ.,ಪಕ್ಷವನ್ನು ಗೆಲ್ಲಿಸಿದಂತಹ ರಾಜ್ಯಗಳಲ್ಲಿ ಮತ್ತೆ ಮತ್ತೆ ಬಿ.ಜೆ.ಪಿ., ಪಕ್ಷವನ್ನು ಗೆಲ್ಲಿಸುತ್ತಿದ್ದಾರೆ. ಮತ್ತೆ ಮತ್ತೆ ಕೇಂದ್ರದಲ್ಲಿ ಭಾರತೀಯ ಜನತಾ ಪಾರ್ಟಿಯನ್ನು ಅಧಿಕಾರಕ್ಕೆ ತರುತ್ತಿದ್ದಾರೆ.

(ಮುಂದು)

**(೮೮) ೩೦.೦1.೨೦೨೬ 4.1೦ ಹೆಚ್‌ವಿ.ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಕಾರ್ಯಕ್ರಮದ ಆಧಾರದ ಮೇಲೆ ಜನರು ಕೇಂದ್ರದಲ್ಲಿ ಇರುವಂತಹ ನಮ್ಮ ಸರ್ಕಾರವನ್ನು ಮೆಚ್ಚಿದ್ದಾರೆ ಮತ್ತು ಮಾನ್ಯ ನರೇಂದ್ರ ಮೋದಿಯವರನ್ನು ಒಪ್ಪಿದ್ದಾರೆ. ಯಾವುದೇ ಆರೋಪಗಳು ಇದ್ದರೂ ಸಹ ಕರ್ನಾಟಕ ರಾಜ್ಯದಲ್ಲಿ ೨೦೨೮ನೇ ಇಸವಿಯ ಹೊತ್ತಿಗೆ ಪುನಃ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುತ್ತದೆ, ಜನರು ಅದಕ್ಕಾಗಿ ಸಿದ್ಧರಾಗಿದ್ದಾರೆ. ಇವರ ಬಗ್ಗೆ ಜನರು ರೋಸಿ ಹೋಗಿದ್ದಾರೆ. ಆ ಹಿನ್ನೆಲೆಯಲ್ಲಿ......

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ತಾವು ಯಾಕೆ ಈ ರೀತಿ ಆಗಿದ್ದೀರಿ? ತಾವು ಮಾತನಾಡಿರುವುದು ಸಾಕು ಕುಳಿತುಕೊಳ್ಳಿ. ಮಾನ್ಯ ಎಸ್.ವ್ಹಿ.ಸಂಕನೂರ್‌ರವರೇ, ತಾವು ಮಾತನಾಡಿ.

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್:–** ಸನ್ಮಾನ್ಯ ಸಭಾಪತಿಯವರೇ, ತಾವು ಬೆಲ್ ಹೊಡೆದ ಮೇಲೂ ಮಾತನಾಡುವಂತಹ ಸಂಪ್ರದಾಯವಿದೆ. ಆ ಸಂಪ್ರದಾಯಕ್ಕೆ ಚ್ಯುತಿ ಬರಬಾರದೆಂದು ನಾನು ಸಹ ಮಾತನಾಡುತ್ತಿದ್ದೇನೆ. ಇಲ್ಲದಿದ್ದರೆ ತಾವು ಹೇಳಿದ ಕೂಡಲೇ ಕುಳಿತುಕೊಳ್ಳುವಂತಹ ವ್ಯಕ್ತಿ ನಾನು. ನನಗೆ ಮಾತನಾಡಲು ಇದೊಂದು ಕೊನೆಯ ಅವಕಾಶವಾಗಿದೆ.

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ತಮಗೆ ಮಾತನಾಡಲು 5 ನಿಮಿಷ ಹೆಚ್ಚಿಗೆ ಕೊಟ್ಟಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರ ಶಾಸಕರ ಅವಧಿ ಮುಗಿಯುತ್ತಿದೆ, ಅವರಿಗೆ ಮಾತನಾಡಲು ಅವಕಾಶವನ್ನು ನೀಡಿ.

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:–** ಸನ್ಮಾನ್ಯ ಸಭಾಪತಿಯವರೇ, ನನ್ನ ಶಾಸಕ ಅವಧಿ ಮುಗಿಯುತ್ತಾ ಬಂದಿದೆ. ಆದ್ದರಿಂದ ನನಗೆ ಒಂದೆರಡು ಮಾತು ಹೆಚ್ಚಿಗೆ ಆಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿ ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಕಳೆದ 10–11 ವರ್ಷಗಳಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ನರೇಂದ್ರ ಮೋದಿಯವರ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸುಮಾರು 25 ಕೋಟಿ ಜನ ಬಡತನದ ರೇಖೆಯಿಂದ ಮೇಲೆ ಬಂದಿದ್ದಾರೆ ಎನ್ನುವುದಾದರೆ, ಇದು ಎಂತಹ ಸಾಧನೆ ಎನ್ನುವುದನ್ನು ತಾವೇ ಊಹಿಸಬಹುದಾಗಿದೆ. ಕಳೆದ 10 ವರ್ಷಗಳಲ್ಲಿ ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಸುಮಾರು 32 ಲಕ್ಷ ಹೊಸ ಮನೆಗಳನ್ನು ಮತ್ತು ಬಡವರಿಗಾಗಿ ಸುಮಾರು 4 ಕೋಟಿ ಮನೆಗಳನ್ನು ಕಟ್ಟಿಕೊಟ್ಟಿದೆ. ಸುಮಾರು 12.5 ಕೋಟಿ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದೆ. ಸುಮಾರು 10 ಕೋಟಿ ಮನೆಗಳಿಗೆ ಎಲ್.ಪಿ.ಜಿ., ಸಂಪರ್ಕವನ್ನು ಕಲ್ಪಿಸಿಕೊಟ್ಟಿದೆ. ಕೇಂದ್ರ ಸರ್ಕಾರ ಸುಮಾರು 6.52 ಲಕ್ಷ ಕೋಟಿ ರೂಪಾಯಿಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಹಾಕಿದೆ.

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ನಾನು ಬೆಲ್ ಮಾಡುತ್ತಿರುವುದು ನಿಮಗೆ ಕೇಳುತ್ತಿಲ್ಲವೇ? ಮಾತನಾಡಿರುವುದು ಸಾಕು ಕುಳಿತುಕೊಳ್ಳಿ. ತಮಗೆ 10 ನಿಮಿಷ ಹೆಚ್ಚಿಗೆ ಕೊಟ್ಟಿದ್ದೇನೆ. ತಾವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಎಸ್.ವ್ಹಿ.ಸಂಕನೂರ್‌ರವರೇ, ತಾವು ಮಾತನಾಡಿ.

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:–** ಧನ್ಯವಾದಗಳು ಮಾನ್ಯ ಸಭಾಪತಿಗಳೇ.

**ಸಭಾಪತಿಯವರು:–** ಎಲ್ಲ ಸದಸ್ಯರಿಗೂ 15 ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ನೀಡಲಾಗುತ್ತದೆ. 15 ನಿಮಿಷಗಳ ನಂತರ ಬೆಲ್ ಮಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನನ್ನ ಕೆಲವೊಂದು ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತಿದ್ದೇನೆ. ರಾಜ್ಯಪಾಲರು ದಯಪಾಲಿಸಿರುವ ಭಾಷಣದ ಪ್ರತಿಯ ಮೊದಲನೆಯ 6 ಪುಟಗಳಲ್ಲಿ ಕೇಂದ್ರ ಸರ್ಕಾರವನ್ನು ಮತ್ತು "ವಿಕಸಿತ್ ಭಾರತ್– ಜಿ ರಾಮ್ ಜಿ" ಕಾಯಿದೆಯನ್ನು ಟೀಕಿಸುವಂತಹ ಕೆಲಸವಾಗಿದೆ. ಈ ರೀತಿ ಒಕ್ಕೂಟ ವ್ಯವಸ್ಥೆಯಲ್ಲಿ ಟೀಕಿಸುವುದು ಸರಿಯಲ್ಲವೆನ್ನುವುದು ನನ್ನ ವೈಯಕ್ತಿಕ ಅನಿಸಿಕೆಯಾಗಿದೆ. ಇದರ ಜೊತೆಗೆ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿ ಹೊರಡುವಂತಹ ಸಂದರ್ಭದಲ್ಲಿ ಯಾವ ರೀತಿ ಅವರಿಗೆ ಅವಮಾನವಾಗಿತ್ತು ಎನ್ನುವುದನ್ನು ನಾವು ವಿರೋಧ ಪಕ್ಷದವರಾಗಿ ಈಗಾಗಲೇ ಅದನ್ನು ಖಂಡಿಸಿದ್ದೇವೆ. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಒಂದು ಮಾತು ಹೇಳುವುದಕ್ಕೆ ಬಯಸುತ್ತಿದ್ದೇನೆ. ಕೇಂದ್ರ ಸರ್ಕಾರದ ಮೇಲ್ಮನೆ ಮತ್ತು ಕೆಳ ಮನೆಗಳೆರಡರಲ್ಲಿ ಈ ವಿಧೇಯಕವನ್ನು ಮಂಡನೆ ಮಾಡಿ, ಅದಕ್ಕೆ ಅನುಮೋದನೆಯನ್ನು ಪಡೆದುಕೊಂಡು ಕಾನೂನು ಆದ ನಂತರ ಒಕ್ಕೂಟ ವ್ಯವಸ್ಥೆಯಲ್ಲಿ ಅದನ್ನು ವಿರೋಧಿಸುವುದು ಅಥವಾ ಖಂಡಿಸುವುದು ಸೂಕ್ತವಲ್ಲ. ನಮ್ಮ ಆಡಳಿತ ಪಕ್ಷದ ಮಂತ್ರಿಗಳು ಮತ್ತು ಶಾಸಕರು ಇದರ ಬಗ್ಗೆ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿರುವ ಕಾಂಗ್ರೆಸ್ ಪಕ್ಷ ಒಂದು ಕಾನೂನು ಮಾಡಿದರೆ, ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿರುವ ಯಾವುದೋ ಒಂದು ಗ್ರಾಮ ಪಂಚಾಯಿತಿಯಲ್ಲಿ ಅಥವಾ ಪಟ್ಟಣ

ಪಂಚಾಯಿತಿಯಲ್ಲಿ ಆ ಕಾನೂನನ್ನು ಮಂಡಿಸುವುದಕ್ಕೆ ವಿರೋಧ ಮಾಡಿ ಠರಾವು ಮಾಡಿದರೆ ಇವರಿಗೆ ಏನನಿಸುತ್ತದೆ ಎನ್ನುವುದನ್ನು ಅವರು ತಮ್ಮ ಹೃದಯವನ್ನು ಮುಟ್ಟಿಕೊಂಡು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಈ ಸರ್ಕಾರ ಮಾಡಿದಂತಹ ಕಾನೂನನ್ನು ಗ್ರಾಮ ಪಂಚಾಯಿತಿಯವರು ಅಥವಾ ಪಟ್ಟಣ ಪಂಚಾಯಿತಿಯವರು ವಿರೋಧ ಮಾಡಿದರೆ ಇವರ ಮನಸ್ಸಿಗೆ ಎಷ್ಟು ನೋವಾಗುತ್ತದೆ ಎನ್ನುವುದನ್ನು ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಒಕ್ಕೂಟ ವ್ಯವಸ್ಥೆಯೊಳಗೆ ಕೇಂದ್ರ ಸರ್ಕಾರ ಅನುಮೋದಿಸಿರುವಂತಹ ಕಾನೂನನ್ನು ವಿರೋಧಿಸಿ ನಿರ್ಣಯ ಮಾಡುವುದಕ್ಕೆ ಈ ಅಧಿವೇಶನ ಕರೆದಿರುವುದು ಸೂಕ್ತವಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಎರಡನೆಯದಾಗಿ ಮತ್ತು ಬಹಳ ಮುಖ್ಯವಾಗಿ ನಾನು ಹೇಳಲು ಬಯಸುವುದೇನೆಂದರೆ, ಸ್ವಾಮಿ ವಿವೇಕಾನಂದರು, "Youth is hope, youth is future" ಎಂದು ಹೇಳಿದ್ದಾರೆ. ಈ ದೇಶದ ಯುವಕರೇ ನಮ್ಮ ಆಶಾಕಿರಣವಾಗಿದ್ದಾರೆ. ಈ ದೇಶದ ಭವಿಷ್ಯ ಯುವಕರ ಕೈಯಲ್ಲಿದೆ. ಈ ಸರ್ಕಾರ ಬರೆದು ಕೊಟ್ಟಿರುವ ಸುಮಾರು 46 ಪುಟಗಳ ಭಾಷಣವನ್ನು ಘನತೆವೆತ್ತ ರಾಜ್ಯಪಾಲರು ಓದಿದ್ದಾರೆ. ಈ 46 ಪುಟಗಳ ಭಾಷಣದಲ್ಲಿ ಒಂದೇ ಒಂದು ಕಂಡಿಕೆಯಲ್ಲಿಯೂ ಈ ರಾಜ್ಯದ ಯುವಕರ ಸಮಸ್ಯೆಯ ಬಗ್ಗೆ ಮತ್ತು ಅದನ್ನು ಪರಿಹರಿಸುವ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಕಳೆದ ಬೆಳಗಾವಿ ಅಧಿವೇಶನದಲ್ಲಿ "ನಮ್ಮ ರಾಜ್ಯದಲ್ಲಿ ಎಷ್ಟು ಇಲಾಖೆಗಳಿವೆ; ಈ ಇಲಾಖೆಗಳಲ್ಲಿ ಎಷ್ಟು ಹುದ್ದೆಗಳು ನಿವೃತ್ತಿಯಿಂದ ಖಾಲಿಯಾಗಿವೆ; ಈ ಆರ್ಥಿಕ ವರ್ಷದಲ್ಲಿ ಎಷ್ಟು ಹುದ್ದೆಗಳನ್ನು ತುಂಬಲಾಗುತ್ತದೆ?" ಎನ್ನುವ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿದ್ದೆ. ಅವರು ಕೊಟ್ಟಿರುವ ಉತ್ತರದ ಪ್ರತಿ ನನ್ನ ಬಳಿ ಇದೆ. ಅವರು ಕೊಟ್ಟಿರುವಂತಹ ಉತ್ತರದಲ್ಲಿ 43 ಇಲಾಖೆಗಳಲ್ಲಿ ಒಟ್ಟು 2,84,880 ಹುದ್ದೆಗಳು ಖಾಲಿ ಇವೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ನೇಮಕ ಮಾಡಲಾಗುತ್ತದೆ ಎನ್ನುವುದರ ಬಗ್ಗೆ ಈ ಭಾಷಣದಲ್ಲಿ ಎಲ್ಲಿಯೂ ಉಲ್ಲೇಖ ಮಾಡಿಲ್ಲ. ಇದು ಅತ್ಯಂತ ನೋವಿನ ಮತ್ತು ವಿಷಾದಕರ ಸಂಗತಿ ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಒಟ್ಟು 43 ಇಲಾಖೆಗಳಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಸುಮಾರು 79,694 ಶಿಕ್ಷಕರ ಹುದ್ದೆಗಳು ಬಾಕಿ ಇವೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ 13,599

ಹುದ್ದೆಗಳು ಖಾಲಿ ಇವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ 37,572 ಹುದ್ದೆಗಳು ಖಾಲಿ ಇವೆ. ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆನ್ನುವ ಗುರಿಯನ್ನು ನಾವು ಹೊಂದಿರುವಾಗ ಇಷ್ಟೊಂದು ಸಂಖ್ಯೆಯಲ್ಲಿ ಶಿಕ್ಷಕರ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಹೇಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕೆ ಮತ್ತು ಉತ್ತಮ ಫಲಿತಾಂಶವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದು ಬಹಳ ವಿಷಾದಕರ ಸಂಗತಿಯಾಗಿದೆ. ಶಾಲಾ ಶಿಕ್ಷಣ ಸಚಿವರಾಗಿರುವ ಮಾನ್ಯ ಮಧು ಬಂಗಾರಪ್ಪನವರು ಎಲ್ಲಿಗೆ ಹೋದರು 15,000 ಅಥವಾ 20,000 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತದೆಂದು ಹೇಳುತ್ತಿರುತ್ತಾರೆ. ಆದರೆ, ಈ ಭಾಷಣದಲ್ಲಿ ಎಲ್ಲಿಯೂ ಸಹ ಅದರ ಉಲ್ಲೇಖವಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಎಲ್ಲವನ್ನು ಸೇರಿಸಿದರೆ ಸುಮಾರು 36 ವಿಶ್ವವಿದ್ಯಾಲಯಗಳಿವೆ. ಈ 36 ವಿಶ್ವವಿದ್ಯಾಲಯಗಳಲ್ಲಿ 14,677 ಉಪನ್ಯಾಸಕರುಗಳ ಹುದ್ದೆಗಳು ಖಾಲಿ ಇವೆ. ಇದರ ಬಗ್ಗೆಯೂ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಇವತ್ತು ಡಿಗ್ರಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಸಂಪೂರ್ಣವಾಗಿ ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿವೆ. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯ ಕೆಲಸಗಳು ಸ್ಥಗಿತಗೊಂಡಿವೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಸುಮಾರು 100 ನಿಗಮ ಮಂಡಳಿಗಳಿವೆ. ಈ 100 ನಿಗಮ ಮಂಡಳಿಗಳಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ತಮಗೂ ಗೊತ್ತಿರುವಂತೆ ಧಾರವಾಡ ಜಿಲ್ಲೆಯಲ್ಲಿ ಪದವೀಧರ ಯುವಕರು ಎರಡು ದಿನಗಳ ಕಾಲ ಉಗ್ರ ಪ್ರತಿಭಟನೆಯನ್ನು ಮಾಡಿದ್ದರು. ಅದೇ ರೀತಿ ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡುವಂತೆ ಪ್ರತಿಭಟನೆಗಳನ್ನು ಮಾಡಿದ್ದರು. ಬೆಳಗಾವಿಯಲ್ಲಿ ಅಧಿವೇಶನ ನಡೆದಂತಹ ಸಂದರ್ಭದಲ್ಲಿ ದೈಹಿಕ ಶಿಕ್ಷಕರು "ವಿಷ ಕುಡಿಯುತ್ತೇವೆ" ಎಂದು ಧರಣಿ ಕುಳಿತಿದ್ದರು. ಕಳೆದ 14 ವರ್ಷಗಳಿಂದ ಶಿಕ್ಷಣ ಇಲಾಖೆಯಲ್ಲಿ ದೈಹಿಕ ಶಿಕ್ಷಕರನ್ನು ನೇಮಕ ಮಾಡಿಕೊಂಡಿಲ್ಲ. ಇದರ ಬಗ್ಗೆ ಮತ್ತು ಯುವಕರ ಸಮಸ್ಯೆಗಳ ಬಗ್ಗೆ ಸ್ಪಂದಿಸಿ ಅವರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, 2023ನೇ ಇಸವಿಯಲ್ಲಿ ನಡೆದಂತಹ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಹೊರಡಿಸಿದ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯ ಮೊದಲನೆಯ ಪುಟದಲ್ಲಿ, "To fill up approved vacancies in all government departments within one year" ಎಂದು ಹೇಳಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳು ಕಳೆದರೂ 2,84,000 ಹುದ್ದೆಗಳು ಖಾಲಿ ಇವೆ. ಇವರ ಎರಡೂವರೆ ವರ್ಷಗಳ ಆಡಳಿತಾವಧಿಯಲ್ಲಿ ಒಂದೇ ಒಂದು ನೇಮಕಾತಿ ಮಾಡಿಲ್ಲ. ಎಲ್ಲ ವೇದಿಕೆಗಳಲ್ಲಿ "ನುಡಿದಂತೆ ನಡೆಯುವ ಸರ್ಕಾರ ನಮ್ಮದು" ಎಂದು ಹೇಳಿಕೊಳ್ಳುತ್ತಾರೆ. ಭರವಸೆ ಕೊಟ್ಟಿರುವ ರೀತಿಯಲ್ಲಿ ಇವರುಗಳು ನಡೆದುಕೊಂಡಿಲ್ಲ. ಅವರ ಪ್ರಣಾಳಿಕೆಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷದೊಳಗಾಗಿ ಎಲ್ಲ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದೆಂದು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ.

(ಮುಂದುವರಿದಿದೆ)

(89) 30.1.2026 4.20 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ(ಮುಂದುವರೆದಿದೆ)**

ಇಷ್ಟೆಲ್ಲಾ ನೀವು ಭರವಸೆ ಕೊಟ್ಟಮೇಲೆ, ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ, ಏನೂ ಆಗಿಲ್ಲ. ನಿಮ್ಮ ಪ್ರಣಾಳಿಕೆಯಲ್ಲಿ, Education Department ಗೆ ಸಂಬಂಧಿಸಿದಂತೆ, "To fill up all the vacancies of teachers and staff in government and aided schools and colleges within one year" ಎಂದು ಹೇಳಿದ್ದೀರಿ. ಈಗ ಎರಡೂವರೆ ವರ್ಷವಾಗಿದೆ. ಒಬ್ಬ ಶಿಕ್ಷಕನ ನೇಮಕಾತಿ ಆಗಿದೆಯೇ? ಶಿಕ್ಷಣ ಇಲಾಖೆಯಲ್ಲಿ, ಇತರೆ 43 ಇಲಾಖೆಗಳಲ್ಲಿ ನೇಮಕಾತಿಗಳಾಗಿಲ್ಲ. ಇದು ಅತ್ಯಂತ ನೋವಿನ ಸಂಗತಿ. ಯುವಕರ ಬಗ್ಗೆ ಸರ್ಕಾರಕ್ಕೆ ಎಳ್ಳಷ್ಟು ಕಾಳಜಿ ಇಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ವಿಶೇಷವಾಗಿ, ಗದಗದಲ್ಲಿ, ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಸ್ಥಾಪನೆಯಾಗಿ 14–15 ವರ್ಷವಾಗಿದೆ. ನನಗೆ ಹೇಳುವುದಕ್ಕೆ ನಾಚಿಕೆ ಆಗುತ್ತದೆ; ನೋವು ಕೂಡ ಆಗುತ್ತದೆ. ಕುಲಪತಿಯ ಒಂದು ಹುದ್ದೆ ಬಿಟ್ಟು ಬೇರೆ ಯಾವುದೇ ಒಂದು ಹುದ್ದೆಗೆ ಖಾಯಂ ನೇಮಕಾತಿ ಆಗಿಲ್ಲ. ಏತಕ್ಕೋಸ್ಕರ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುತ್ತೀರಿ? ಗದಗದಲ್ಲಿ ಪಶುವೈದ್ಯಕೀಯ ಕಾಲೇಜು ಇದೆ. ಇದರಲ್ಲೂ ಕೂಡ ಒಂದು ಹುದ್ದೆಯನ್ನೂ

ಸಹ ತುಂಬಿಲ್ಲ. ರಾಜ್ಯದ ಕಾನೂನು ವಿಶ್ವವಿದ್ಯಾಲಯವನ್ನು ಧಾರವಾಡಕ್ಕೆ ತಂದಿರಿ, ನವನಗರಕ್ಕೆ ತಂದಿರಿ. ಅಲ್ಲಿಯೂ ೮೨% ಹುದ್ದೆಗಳನ್ನು ತುಂಬಿಲ್ಲ. ಏಕೆ ಈ ರೀತಿ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುತ್ತೀರಿ? ಇದು ಒಳ್ಳೆಯದೇ? ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ಅಕ್ಷರ ಕೂಡ ಇಲ್ಲ. ಈ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ, ರಾಜ್ಯದ ಆರ್ಥಿಕ ಸ್ಥಿತಿ ಚೆನ್ನಾಗಿದೆ ಎಂದು ಹೇಳುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಇರಬಹುದು, ಮಂಗಳೂರು ವಿಶ್ವವಿದ್ಯಾಲಯ ಇರಬಹುದು, ಇನ್ನೂ ಬೇರೆ ಬೇರೆ ವಿಶ್ವವಿದ್ಯಾಲಯಗಳ ಸಿಬ್ಬಂದಿ ತಮ್ಮ ಪಿಂಚಣಿಗಾಗಿ ಹೋರಾಟ ಮಾಡುವ ಸ್ಥಿತಿ ಇದೆ. ಈ ಕುರಿತು ನಾವು ಸದನದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ನಿಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೆ ನೀವು ಪಿಂಚಣಿ ಕೊಡುವುದಕ್ಕೆ ಆಗುವುದಿಲ್ಲವೇ? ಇತ್ತೀಚಿಗೆ ಪ್ರೌಢ ಶಾಲೆ ಮತ್ತು ಪಿ.ಯು. ಕಾಲೇಜುಗಳ ಕೆಲವು ಸಿಬ್ಬಂದಿ/ಶಿಕ್ಷಕರು ನಿವೃತ್ತಿಯಾಗಿ ೩ ವರ್ಷಗಳಾಯಿತು. ಈ ಅವಧಿಯ ಗಳಿಕೆ ರಜೆ ನಗದೀಕರಣವನ್ನು ಕೇಳುತ್ತಿದ್ದಾರೆ. ನಿವೃತ್ತಿಯಾಗಿ ೩ ವರ್ಷಗಳಾದರೂ ಗಳಿಕೆ ರಜೆ ನಗದೀಕರಣ ಇನ್ನೂ ಕೊಟ್ಟಿಲ್ಲ. ನಿಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೆ ಅವರಿಗೆ ಏಕೆ ತೊಂದರೆ ಕೊಡುತ್ತೀದ್ದೀರಿ? ನಿಮ್ಮ ಪ್ರಣಾಳಿಕೆಯಲ್ಲಿ, ಸಂದರ್ಭದಲ್ಲಿ "Giving due weightage to the contractual and guest faculties by bringing suitable amendments to the recruitment rules" ಎಂದು ಹೇಳಿದ್ದೀರಿ. ಇದು ಬಹಳ ಮುಖ್ಯವಾದುದು. ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ವಿಶ್ವವಿದ್ಯಾಲಯ ಇರಬಹುದು ಅಥವಾ ಪ್ರಾಥಮಿಕ-ಪ್ರೌಢ ಶಾಲೆಗಳಲ್ಲಿ ಬಹಳಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇತ್ತೀಚೆಗೆ ಸರ್ಕಾರ ೫೦೦೦ ಹುದ್ದೆಗಳನ್ನು ತುಂಬುತ್ತೇವೆ ಎಂದು ಪತ್ರಿಕೆಯಲ್ಲಿ ಜಾಹೀರಾತು ಹಾಕಿದೆ. ಆರ್ಥಿಕ ಇಲಾಖೆ ಇದಕ್ಕೆ ಸಮ್ಮತಿ ಕೊಟ್ಟಿದೆ. ಮಾನ್ಯ ಪ್ರಿಯಾಂಕ್ ಖರ್ಗೆಯವರು ಇಲ್ಲಿ ಕುಳಿತಿದ್ದಾರೆ. ನಮ್ಮ ಗದಗ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವ್ಯಾಪ್ತಿಯಲ್ಲಿ ನೇಮಕಾತಿಗಳಾಗಬೇಕು. ನಾನು ಹಲವಾರು ಬಾರಿ ಪ್ರಶ್ನೆ ಮಾಡಿದಾಗ ನೀವು ಭರವಸೆ ಕೊಟ್ಟಿದ್ದೀರಿ. ಯಾರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೋ ಅವರಿಗೆ weightage ಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ. ಮುಂದಿನ ದಿನಮಾನಗಳಲ್ಲಿ ನೇಮಕಾತಿ ಮಾಡುವ ಸಂದರ್ಭದಲ್ಲಿ ಡಿಗ್ರಿ ಕಾಲೇಜುಗಳಲ್ಲಿರುವ guest lecturers ಇರಬಹುದು, ಪ್ರೈಮರಿ ಶಾಲೆಗಳಲ್ಲಿ, ಪದವಿಪೂರ್ವ ಕಾಲೇಜುಗಳಲ್ಲಿ ಅಥವಾ ಡಿಗ್ರಿ ಕಾಲೇಜುಗಳಲ್ಲಿ ಇರಬಹುದು, ವಿಶ್ವವಿದ್ಯಾಲಯ ಇರಬಹುದು, ಅಲ್ಲಿ ಯಾರು ಸೇವೆ ಮಾಡುತ್ತಿದ್ದಾರೋ ಅಂತಹ ಹುದ್ದೆಗಳನ್ನು ಪರ್ಮನೆಂಟ್ ಆಗಿ ತುಂಬಿಕೊಳ್ಳಬೇಕಾದರೆ ಅವರಿಗೆ weightage, age relaxation ಕೊಡುವ ಕೆಲಸವನ್ನು ತಾವು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಬೆಳಗಾವಿ

ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪ್ರಶ್ನೆ ಕೇಳಿದಾಗ ಅವರು, 24,300 ಹುದ್ದೆಗಳನ್ನು ತುಂಬುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಗಳೆ, ಪದವೀಧರ ಯುವಕರು ಜಿಗುಪ್ಸೆಗೊಂಡಿದ್ದಾರೆ, ಹೋರಾಟ ಮಾಡುತ್ತಿದ್ದಾರೆ, ಬೇಸತ್ತಿದ್ದಾರೆ. 24,300 ಹುದ್ದೆಗಳನ್ನು ತುಂಬುವ ನಿಟ್ಟಿನಲ್ಲಿ ಆರ್ಥಿಕ ಇಲಾಖೆಯವರು ಅನುಮತಿ ಕೊಟ್ಟಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಇದ್ದಾಗ 50% ಇದ್ದ ಮೀಸಲಾತಿಯನ್ನು 56% ಮಾಡಿತ್ತು. ಒಂದಲ್ಲ ಒಂದು ಕಾರಣಕ್ಕೆ ಅಂದರೆ, ಎಸ್.ಸಿ./ಎಸ್.ಟಿ. ಒಳಮೀಸಲಾತಿ ಸಂಬಂಧ ಆ ವಿಷಯ ಕೋರ್ಟ್‌ನಲ್ಲಿತ್ತು ಮತ್ತು ಕೋರ್ಟ್ ಈಗ ಒಂದು ನಿರ್ಣಯ ಕೊಟ್ಟಿದೆ. ನೇಮಕಾತಿ ಮಾಡುವ ಸಂದರ್ಭದಲ್ಲಿ, 100 ಹುದ್ದೆಗಳನ್ನು ತುಂಬುವುದಿದ್ದರೆ ಅದರಲ್ಲಿ 6% ಎಸ್.ಸಿ./ಎಸ್.ಟಿ. ಹುದ್ದೆಗಳನ್ನು ತೆಗೆದಿಟ್ಟು, ಉಳಿದ ಹುದ್ದೆಗಳನ್ನು ರೋಸ್ಟರ್ ಪ್ರಕಾರ ನೇಮಕಾತಿ ಮಾಡಿದರೆ ಅದಕ್ಕೆ ಒಪ್ಪಿಗೆ ಕೊಡುತ್ತೇವೆ ಎಂದು ಹೇಳಿದೆ. ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸದನದಲ್ಲಿ ಇದ್ದಾರೆ. ಯುವಕರು ಬಹಳ ಬೇಸತ್ತಿದ್ದಾರೆ. ನಾವು ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿದ್ದೇವೆ. ತಾವು ಇಂತಹ ವಿಷಯಗಳನ್ನು ಎಲ್ಲಿಯವರೆಗೆ ಕೋರ್ಟ್‌ನ ಮೇಲೆ ಬಿಡುತ್ತೀರಿ? ಕೋರ್ಟ್‌ನಲ್ಲಿ 6% ಮೀಸಲಾತಿ ಬಗ್ಗೆ, ಎಸ್.ಸಿ/ಎಸ್.ಟಿ. ಒಳಮೀಸಲಾತಿ ಬಗ್ಗೆ ಪ್ರಕರಣಗಳಿವೆ. ಈ ಎರಡೂ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಳ್ಳಿ. 6% ಹುದ್ದೆಗಳನ್ನು ತೆಗೆದಿಟ್ಟು, ಮಿಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಡುತ್ತೇವೆ ಎಂದು ಕೋರ್ಟ್ ಹೇಳಿದೆ. ಆ ರೀತಿ ಕೋರ್ಟ್‌ಗೆ ನೀವು ಅಫಿಡವಿಟ್ ಕೊಡಿ. ಕನಿಷ್ಠ ನೇಮಕಾತಿ ಪ್ರಾರಂಭ ಮಾಡುವುದಕ್ಕೆ ಅವಕಾಶ ಆಗುತ್ತದೆ. ಈ ಒಂದು ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ 22ರಲ್ಲಿ "ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಲ್ಲಿ 24 x 7 ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ" ಎಂದು ಹೇಳಿದ್ದಾರೆ. ನಮ್ಮ ಗದಗದಲ್ಲೂ ಕೂಡ 15 ವರ್ಷಗಳಿಂದ 24 x 7 ನೀರು ಕೊಡುತ್ತೇವೆಂದು ಕೆಲಸ ನಡೆಯುತ್ತಿದೆ. 24 x 7 ಅಂದರೆ, ದಿನಾಗಲೂ ನೀರು ನೀಡಬೇಕು. ನಮಗೆ 20 ದಿನಕ್ಕೊಮ್ಮೆ ನೀರು ಬರುತ್ತದೆ. ನಾನು ಸದನದಲ್ಲಿ ಹಲವಾರು ಸಲ ಈ ಕುರಿತು ಪ್ರಶ್ನೆ ಮಾಡಿದ್ದೇನೆ. ಕನಿಷ್ಠ 6-7 ದಿನಗಳಿಗೊಮ್ಮೆಯಾದರೂ ನೀರು ಕೊಡುವ ಕೆಲಸ ಮಾಡಿ. ಸಂಬಂಧಪಟ್ಟ ಸಚಿವರು ಗದಗಿಗೆ ಬರಬೇಕು, ಅದನ್ನು ನೋಡಬೇಕು, ಇರುವಂತಹ ತೊಂದರೆಯನ್ನು ಸರಿಪಡಿಸಬೇಕು. ಅದು ಆಗುತ್ತಿಲ್ಲ. ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿಯಲ್ಲಿ 24 x 7 ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ರಾಜ್ಯಪಾಲರ ಮೂಲಕ ಹೇಳಿಸುತ್ತೀರಿ.

ಗದಗದಲ್ಲಿ ಏನು ಪರಿಸ್ಥಿತಿ ಇದೆ, ಅದೇರೀತಿ ಈ ಯೋಜನೆ ಆಗಬಾರದು. ಪುಟ ಸಂಖ್ಯೆ 37ರಲ್ಲಿ, "ದ್ವಿಭಾಷಾ ಮಾಧ್ಯಮ, ಕಂಪ್ಯೂಟರ್ ಮತ್ತು ವೃತ್ತಿ ಶಿಕ್ಷಣ ನೀಡಲು ಕ್ರಮವಹಿಸಲಾಗುತ್ತಿದೆ" ಎಂದು ಹೇಳಿದ್ದಾರೆ. ಬಹಳ ಸಂತೋಷ. ಕನ್ನಡ ಮಾಧ್ಯಮದ ಜೊತೆ ಆಂಗ್ಲ ಮಾಧ್ಯಮವನ್ನು 9,522 ಶಾಲೆಗಳಲ್ಲಿ ಪ್ರಾರಂಭಿಸಲಾಗಿದೆ ಎಂದು ಹೇಳಿದ್ದೀರಿ. ಬಹಳ ಸಂತೋಷ. ಪ್ರಾಥಮಿಕ ಶಾಲೆಗಳ ವಸ್ತುಸ್ಥಿತಿ ಏನಿದೆ ಎಂದರೆ, ಇಂತಹ ಸಾವಿರಾರು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕೇವಲ 10 ಇದೆ. ಅದೇರೀತಿ ಈ ಸಂಖ್ಯೆ 20 ಕ್ಕಿಂತಲೂ ಕಡಿಮೆ ಇರುವ ಉದಾಹರಣೆಗಳೂ ಕೂಡ ಇವೆ. 30 ಸಂಖ್ಯೆಗಿಂತ ಕಡಿಮೆ ಇರುವ ವಿದ್ಯಾರ್ಥಿಗಳನ್ನು ಹೊಂದಿರುವ ಸಾವಿರಾರು ಶಾಲೆಗಳು ಇವೆ. ಇದು ಒಂದು ಭಾಗ. ನೀವು ಆಂಗ್ಲ ಮಾಧ್ಯಮವನ್ನು ಪ್ರಾರಂಭ ಮಾಡಬಾರದು ಎಂದು ಹೇಳುವುದಿಲ್ಲ. ಈಗ ಎಲ್ಲಾ ತಂದೆ-ತಾಯಿಗಳು ತಮ್ಮ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಕಲಿಯಬೇಕು ಎಂದು ಬಯಸುತ್ತಾರೆ. ನೀವು ಕನ್ನಡ ಮಾಧ್ಯಮದ ಜೊತೆ ಆಂಗ್ಲ ಮಾಧ್ಯಮವನ್ನು ಪ್ರಾರಂಭ ಮಾಡುತ್ತೀರಿ. ಆದರೆ, ಇಂಗ್ಲಿಷ್ ಕಲಿಸುವ ಶಿಕ್ಷಕರನ್ನು ನೇಮಕ ಮಾಡಬೇಕು. ಕನ್ನಡ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರನ್ನೂ ಸಹ ನೀವು ನೇಮಿಸಿಲ್ಲ. ಮಕ್ಕಳ ಪರಿಸ್ಥಿತಿ ಏನಾಗಿದೆ ಎಂದರೆ, ಅವರಿಗೆ ಕನ್ನಡವೂ ಬರುವುದಿಲ್ಲ, ಇಂಗ್ಲಿಷ್ ಕೂಡ ಬರುವುದಿಲ್ಲ. ಇದು ಶಿಕ್ಷಣದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಈ ಕುರಿತು ಗಂಭೀರ ವಿಚಾರ ಮಾಡಬೇಕು.

ಪುಟ ಸಂಖ್ಯೆ 40ರಲ್ಲಿ, ಕ್ಯಾನ್ಸರ್ ಟ್ರೀಟ್‌ಮೆಂಟ್‌ಗೆ ಸಂಬಂಧಿಸಿದಂತೆ "ಮೈಸೂರು ಹಾಗೂ ತುಮಕೂರುಗಳಲ್ಲಿ ಪೆರಿಫೆರಲ್ ಕ್ಯಾನ್ಸರ್ ಸೆಂಟರ್‌ಗಳನ್ನು ಉದ್ಘಾಟಿಸಲಾಗಿದೆ" ಎಂದು ಹೇಳಿದ್ದೀರಿ. ಮತ್ತೆ ಬೀದರ್, ರಾಯಚೂರಿನಲ್ಲಿ ಕ್ಯಾನ್ಸರ್ ಸೆಂಟರ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಮೋದನೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆ ನನ್ನ ಕ್ಷೇತ್ರವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಶಾಸಕರು ಅನೇಕ ಸಲ ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ, ಕುಮಟದಲ್ಲಿ ಒಂದು Multispecialty Hospital ಕೊಡಿ ಎಂದು ಸರ್ಕಾರಕ್ಕೆ ಕೇಳಿಕೊಂಡಿದ್ದಾರೆ. ನೀವು ಇವತ್ತು ರಾಜ್ಯಪಾಲರಿಂದ ಬೀದರ್ ಮತ್ತು ರಾಯಚೂರಿನಲ್ಲಿ ಕ್ಯಾನ್ಸರ್ ಸೆಂಟರ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಮೋದನೆ ಕೊಡುತ್ತೇವೆ ಎಂದು ಹೇಳಿಸಿದ್ದೀರಿ. ಉತ್ತರ ಕನ್ನಡದ ಕುಮಟದಲ್ಲಿ Multispecialty Hospital ಯನ್ನು ಮಂಜೂರು ಮಾಡಿದ್ದೇವೆ ಎಂದು ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಘೋಷಣೆ ಮಾಡಬೇಕು. ಇಷ್ಟು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಧನ್ಯವಾದಗಳನ್ನು ಅರ್ಪಿಸುತ್ತೇನೆ. (ಮುಂದು)

(೯೦) ೩೦-೧-೨೦೨೬ ೪.೩೦ ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ ೨೨-೦೧-೨೦೨೬ ರಂದು ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ನಮ್ಮ ಸರ್ಕಾರ ಮಾಡಿರುವಂತಹ ಕೆಲಸ-ಕಾರ್ಯಗಳನ್ನು ಮಂಡಿಸಿ ಸರ್ಕಾರಕ್ಕೆ ಕೊಟ್ಟಿರುವಂತಹ ಶ್ಲಾಘನೆಯನ್ನು ಕೃತಜ್ಞತಾ ಪೂರ್ವಕವಾಗಿ ನಾನು ಕೂಡ ಅವರನ್ನು ಅಭಿನಂದಿಸುತ್ತೇನೆ. ನಮ್ಮ ಸರ್ಕಾರದ ಯೋಜನೆಗಳು, ನಮ್ಮ ಸರ್ಕಾರಕ್ಕೆ ಜನರ ಬಗ್ಗೆ ಇರುವಂತಹ ಕಳಕಳ, ತುತ್ತತುದಿಯಲ್ಲಿರುವಂತಹ ಬಡವನ ಬಗ್ಗೆ ಇರುವಂತಹ ಕಾಳಜಿ, ಇವೆಲ್ಲಾ ನಮ್ಮ ಸರ್ಕಾರದ ಕಾರ್ಯಕ್ರಮದಲ್ಲಿ ಎತ್ತಿಹಿಡಿದಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಸಭಾ ಪೀಠವನ್ನು ಅಲಂಕರಿಸಿದರು)**

ಅದು ಜನರಿಗೂ ಕೂಡ ಗೊತ್ತಿದೆ. ಅದು ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿರಬಹುದು, ಬಡವರು ಇವತ್ತು ಬಹಳ ಮರ್ಯಾದೆಯಿಂದ ಜೀವನ ಸಾಗಿಸುವುದಕ್ಕೆ ನಮ್ಮ ಸರ್ಕಾರ ಹಾದಿಯನ್ನು ಹಾಕಿಕೊಟ್ಟಿದೆ. ನಮ್ಮ ಗ್ಯಾರಂಟಿ ಯೋಜನೆ ಇರಬಹುದು ಅಥವಾ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಕೊಟ್ಟಿರುವಂತಹ ಹಲವಾರು ಯೋಜನೆಗಳು, ಶುದ್ಧ ಕುಡಿಯುವ ನೀರು ಇರಬಹುದು. ಕಾರ್ಮಿಕ ಇಲಾಖೆಯಿಂದ ರೂಪಿಸಿರುವಂತಹ ಸಂಘಟಿತ, ಅಸಂಘಟಿತ ಕಾರ್ಮಿಕರಿಗೆ ಹಲವಾರು ಯೋಜನೆಗಳನ್ನು ಸರ್ಕಾರ ಕೊಟ್ಟಿದೆ. ಸರ್ಕಾರದ ಕಾರ್ಯಕ್ರಮ, ಸರ್ಕಾರ ಹಾಕಿಕೊಟ್ಟಿರುವಂತಹ ಯೋಜನೆಗಳ ಬಗ್ಗೆ ಹೇಳುತ್ತಿದ್ದರೆ ನಿಮಿಷಗಳಲ್ಲ, ಗಂಟೆಗಳಲ್ಲ, ನಾವು ಒಂದು ತಿಂಗಳು ಮಾತನಾಡಿದರೂ ಕಡಿಮೆಯಾಗುತ್ತದೆ. ಈಗಾಗಲೇ ಜನರು ಅದಕ್ಕೆ ಹಿಂದೆಯೂ ಉತ್ತರ ಕೊಟ್ಟಿದ್ದಾರೆ, ಮುಂದೆಯೂ ಉತ್ತರ ಕೊಡುತ್ತಾರೆಂದು ನಾನು ಭಾವಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷೆ ಕೂಡ ಆಗಿದ್ದೆ. ಗ್ರಾಮ ಪಂಚಾಯಿತಿಯಲ್ಲಿ ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನಮ್ಮ ಕರ್ನಾಟಕ ರಾಜ್ಯ ಇಡೀ ದೇಶದಲ್ಲಿ ಮಾದರಿಯ ರಾಜ್ಯ ಎಂದು ಕೂಡ ಹೇಳುತ್ತಾರೆ. ಇಡೀ ದೇಶದಲ್ಲಿ ಸಿ.ಇ.ಟಿ. ಏನಾದರೂ ಬಂದಿದೆ ಎಂದರೆ, ಅದು ನಮ್ಮ ರಾಜ್ಯದಲ್ಲಿ, ನಮ್ಮ ಕಾಂಗ್ರೆಸ್ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದ ಶ್ರೀಯುತ ವೀರಪ್ಪ ಮೊಯ್ಲಿಯವರ ಸೃಷ್ಟಿಕೃತ ಸಿ.ಇ.ಟಿ. ಯಿಂದ ಇವತ್ತು ಬಡವರ ಮಕ್ಕಳು ಪ್ರೊಫೇಷನಲ್ ಕಾಲೇಜುಗಳಿಗೆ, ಇಂಜಿನಿಯರ್‌ಗಳು, ಡಾಕ್ಟರ್‌ಗಳು, ಹೀಗೆ ಅವರಿಗೆ ಇಚ್ಛೆ ಬಂದ ಹಾಗೆ ಯಾವ ಕೋರ್ಸ್‌ಗಳನ್ನು ತೆಗೆದುಕೊಳ್ಳಬೇಕು ಅದನ್ನು ಕೊಡಿಸಿ

ಸರ್ಕಾರದಿಂದ ಉಚಿತವಾಗಿ ಶುಲ್ಕವನ್ನು ಭರಿಸುವ ಕಾರ್ಯಕ್ರಮ ಏನಾದರೂ ಇದೆ ಎಂದರೆ ಅದು ಕರ್ನಾಟಕ ರಾಜ್ಯದಲ್ಲಿ ಇವತ್ತು ಇರುವಂತಹ ಮಾನ್ಯ ಸಿದ್ಧರಾಮಯ್ಯನವರ ಹಾಗೂ ಮಾನ್ಯ ಡಿ.ಕೆ.ಶಿವಕುಮಾರ್‌ರವರ ಸರ್ಕಾರದಲ್ಲಿ. ಮನುಷ್ಯನಿಗೆ ಯಾವಾಗ ಶಿಕ್ಷಣ ಇರುವುದಿಲ್ಲವೋ ಅವನು ಮನುಷ್ಯನಾಗಿ ಬದುಕುವುದಕ್ಕೆ ಸಾಧ್ಯವಿಲ್ಲ. ಉತ್ತಮವಾದ ಜೀವನ ಸಾಗಿಸಬೇಕು, ಏನು ಇಲ್ಲದಿದ್ದರೆ ಎಲ್ಲಾ ದಾನಕ್ಕಿಂತ ಶ್ರೇಷ್ಠವಾದ ದಾನ ಶಿಕ್ಷಣ ದಾನ ಎಂದು ಹೇಳುತ್ತಾರೆ. ಅದು ಅನ್ನದಾನಕ್ಕಿಂತ ಮಹತ್ವದ್ದಾಗಿದೆ. ಏಕೆಂದರೆ, ಶಿಕ್ಷಣ ಪಡೆದುಕೊಂಡರೆ ಇಡೀ ಪ್ರಪಂಚದಲ್ಲಿ ಎಲ್ಲಿ ಬೇಕಾದರೂ ಬದುಕುವುದಕ್ಕೆ ದಾರಿಯಾಗುತ್ತದೆ. ಆ ಒಂದು ತಂತ್ರಗಾರಿಕೆಯನ್ನು ನಮ್ಮ ರಾಜ್ಯದ ಸರ್ಕಾರ ಹತ್ತು ಹಲವಾರು ಕಾರ್ಯಕ್ರಮಗಳನ್ನು ಶೋಷಿತ ವರ್ಗಗಳಿಗೆ ಸೇರಿರುವಂತಹ ಎಲ್ಲಾ ಜನಾಂಗದವರಿಗೆ ಹಾಕಿಕೊಂಡಿದೆ. ನಾವು ಜಾತಿ ಹೆಸರು ಹಿಡಿದು ಹೇಳುವುದಿಲ್ಲ. ಎಲ್ಲಾ ಜಾತಿಯಲ್ಲಿರುವಂತಹ ಬಡ ಮಕ್ಕಳಿಗೆ ಇವತ್ತು ಶಿಕ್ಷಣದ ಮೂಲಕ ಒಳ್ಳೆಯ ಜೀವನ ಕೊಡುವುದಕ್ಕೆ ಹಾದಿ ಮಾಡಿಕೊಟ್ಟಿರುವುದು ನಮ್ಮ ಕರ್ನಾಟಕ ಸರ್ಕಾರ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈಗಾಗಲೇ ಮೊದಲನೇ ಪುಟದ ಸಾಲು ಮತ್ತು ಕೊನೆಯ ಪುಟದ ಸಾಲುಗಳನ್ನು ಓದಿರುವುದರಲ್ಲಿ ನಾನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿರುವುದೇನೆಂದರೆ, ಇಡೀ ಪುಸ್ತಕವನ್ನು ಪ್ರಸೆಂಟ್ ಮಾಡಿ ಅವರು ಒಪ್ಪಿಕೊಂಡಿದ್ದಾರೆ. ನಾನು ನಿಜಕ್ಕೂ ರಾಜ್ಯಪಾಲರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿರುವ ಶೈಕ್ಷಣಿಕ ಯೋಜನೆಗಳಿಂದ ಯಾವ ರೀತಿ ಶೈಕ್ಷಣಿಕ ಬೆಳವಣಿಗೆಗೆ ದಾರಿಯಾಗಿದ್ದಾರೆ ಎಂದು ತಿಳಿದುಕೊಳ್ಳುವುದಕ್ಕೆ ಬೇರೆ ಬೇರೆ ರಾಜ್ಯದವರು ತಮ್ಮ ರಾಜ್ಯದಿಂದ ಎಕ್ಸ್‌ಪರ್ಟ್ ಟೀಮ್ ಅನ್ನು ಕಳುಹಿಸಿ ಈ ತರಹದ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಇಲಾಖೆಯಿಂದ ಕಳೆದ ಸಾಲಿನಲ್ಲಿ ಬಡ ಮಕ್ಕಳಿಗೆ 8 ಲಕ್ಷ ರೂಪಾಯಿಗಳವರೆಗೂ ವಾರ್ಷಿಕ ಆದಾಯವಿದ್ದರೆ ಅವರು ಮ್ಯಾನೇಜ್‌ಮೆಂಟ್ ಸೀಟ್ ತೆಗೆದುಕೊಂಡರೂ ಕೂಡ ಅವರಿಗೆ ಸರ್ಕಾರ ನೂರಕ್ಕೆ ನೂರು ಹಣ ಕೊಡುವ ಏನಾದರೂ ಯೋಜನೆ ಇದೆ ಎಂದರೆ ಅದು ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವ ಹೊಂದಿರುವ ಸರ್ಕಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಜನಾಂಗಗಳಲ್ಲಿ ಅದು ಎಸ್.ಸಿ, ಎಸ್.ಟಿ. ಇರಲಿ, ಮೈನಾರಿಟಿ ಇರಲಿ, ಎಲ್ಲಾ ಜನಾಂಗಕ್ಕೆ ಇವತ್ತು ಶಿಕ್ಷಣವೇ ಅಸ್ತ್ರವಾಗಿದೆ. ಶಿಕ್ಷಣವಿದ್ದರೆ ಬದುಕಬಹುದು ಎಂದು ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಇದು ನಮ್ಮ ಬಹಳ ದೊಡ್ಡ ಕಾರ್ಯಕ್ರಮ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಮತ್ತೊಂದು ಮಹತ್ವವಾದ ಕಾರ್ಯಕ್ರಮವೆಂದರೆ, ಕಾರ್ಮಿಕ ಇಲಾಖೆಯಲ್ಲಿ ಬಹಳ ವಿವರವಾಗಿ ಇಡೀ ಸಮಾಜದಲ್ಲಿರುವಂತಹ ಎಲ್ಲಾ ವರ್ಗದ ಕಾರ್ಮಿಕರು ಅದು ಆಟೋ ಚಾಲಕರಿಂದ ಹಮಾಲಿಯವರೆಗೂ ಹಿಡಿದು ಮನೆಯಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳಿಗೂ ಕೂಡ ಸಂಘಟಿತ, ಅಸಂಘಟಿತ ವರ್ಗಕ್ಕೆ ಸೇರಿ ಹತ್ತು ಹಲವಾರು ಯೋಜನೆಗಳನ್ನು ಕೊಟ್ಟು ಅವರಿಗೆ 8 ಲಕ್ಷ ರೂಪಾಯಿಗಳವರೆಗೆ ಆರ್ಥಿಕ ಸಹಾಯವನ್ನು ಕೊಡಲಾಗುತ್ತಿದೆ. ಅವರ ಮಕ್ಕಳಿಗೆ ಶಿಕ್ಷಣ, ಮದುವೆ, ಕೊನೆತನಕ ಅವರಿಗೆ ಸಹಾಯ ಹಸ್ತ ನೀಡುವಂತಹ ಯಾವುದಾದರೂ ಸರ್ಕಾರವಿದ್ದರೆ ಅದು ನಮ್ಮ ಸರ್ಕಾರ. ಕರ್ನಾಟಕ ರಾಜ್ಯದಲ್ಲಿ ಈ ರೀತಿ ಮಾಡಿರುವ ಬಗ್ಗೆ ಬೇರೆ ಬೇರೆ ರಾಜ್ಯದವರು ಶ್ಲಾಘನೆಯನ್ನು ಮಾಡುತ್ತಿದ್ದಾರೆ. ಕಾರ್ಮಿಕ ಇಲಾಖೆಯಿಂದ ನಮ್ಮ ಹೆಣ್ಣು ಮಕ್ಕಳಿಗೆ ಹಿಂದಿನ ವರ್ಷದಲ್ಲಿ ಮೊನ್ನೆ ತಾನೇ ಯಾರು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ತಿಂಗಳಿಗೆ ಒಂದು ದಿನ ರಜೆ ಕೊಡುವ ಘೋಷಣೆಯನ್ನು ಮಾಡಿದ್ದಾರೆ. ಅದೊಂದು ಮಹತ್ವದ ಕಾರ್ಯಕ್ರಮವಾಗಿದೆ. ಹೆಣ್ಣುಮಕ್ಕಳ ಸಂಕಟವನ್ನು ಅರ್ಥ ಮಾಡಿಕೊಂಡಿರುವ ಸರ್ಕಾರ ಎಂದರೆ ನಮ್ಮ ಕರ್ನಾಟಕ ರಾಜ್ಯದ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ಸರ್ಕಾರ ಪಂಚ ಗ್ಯಾರಂಟಿಯನ್ನು ತಂದಿದೆ. ಪಂಚ ಗ್ಯಾರಂಟಿಯನ್ನು ತರುವ ಹಿನ್ನೆಲೆ ಕೇವಲ ನಾವು ಅವರಿಗೆ ಹಣ ತೋರಿಸಿ ಮತ ಪಡೆದುಕೊಳ್ಳುವುದಕ್ಕೆ ತಂದಿರುವಂತಹ ಯೋಜನೆ ಅಲ್ಲ. ಆಗ ಕರೋನಾ ಬಂದು ಇಡೀ ಸಮಾಜದಲ್ಲಿ ಆರ್ಥಿಕವಾಗಿ ತತ್ತರಿಸಿ ಹೋಗಿರುವಂತಹ ಬಡಬಗ್ಗರಿಗೆ ಅವರ ಆರ್ಥಿಕ ಸಂಕಷ್ಟಕ್ಕೆ ನಾವು ದಾರಿ ದೀಪ ಆಗಬೇಕೆಂದು ಗೃಹಲಕ್ಷ್ಮಿ ಯೋಜನೆಯನ್ನು ತಂದಿರುವಂಥದ್ದು ನಮ್ಮ ಸರ್ಕಾರ. ಐದು ಗ್ಯಾರಂಟಿಗಳನ್ನು ಅವರ ಆರ್ಥಿಕ ಸ್ಥಿತಿ ಏನು ಕೆಳಮಟ್ಟಕ್ಕೆ ಹೋಗಿತ್ತು ಅದನ್ನು ಮೇಲಕ್ಕೆ ಎತ್ತಿ ಅವರು ಒಳ್ಳೆಯ ಜೀವನ ಸಾಗಿಸಲಿ ಎಂದು ತಂದಿರುವಂಥದ್ದು. ಅದಕ್ಕೆ ರಾಜಕೀಯ ಬಣ್ಣ ಕೊಟ್ಟು ಬೇರೆ ಬೇರೆ ರೀತಿಯಲ್ಲಿ ಉಲ್ಲೇಖ ಮಾಡುತ್ತಿದ್ದಾರೆ. ಅದನ್ನು ನಾನು ಪ್ರಸ್ತಾಪ ಮಾಡುವುಕ್ಕೆ ಹೋಗುವುದಿಲ್ಲ. ಪಂಚ ಗ್ಯಾರಂಟಿಯಿಂದ ಇವತ್ತು ಹೆಣ್ಣುಮಕ್ಕಳು ಸಾಮಾಜಿಕವಾಗಿ, ಆರ್ಥಿಕವಾಗಿ ಬಹಳಷ್ಟು ಸಬಲೀಕರಣವಾಗಿದ್ದಾರೆ. ತಾವು ಕೂಡ ಇದನ್ನು ವೀಕ್ಷಣೆಯನ್ನು ಮಾಡಿದ್ದೀರಿ. ಇವತ್ತು ಹೆಣ್ಣುಮಕ್ಕಳು ಶಕ್ತಿ ಯೋಜನೆ ಮೂಲಕ ಬಸ್‌ನಲ್ಲಿ ಎಲ್ಲಿ ಹೋಗುತ್ತಿದ್ದಾರೆ ಎಂದರೆ ಮೊಟ್ಟ ಮೊದಲಿಗೆ ದೇವರದರ್ಶನ ಮಾಡಬೇಕೆಂದು ಹೋಗುತ್ತಿದ್ದಾರೆ. ಮಜ಼ರ್ ಗಳಿಗೆ ಹೋಗುತ್ತಿದ್ದಾರೆ. ಅವರು ಏಕೆ ಹೋಗುತ್ತಿದ್ದಾರೆ ಎಂದರೆ ತಮ್ಮ ಆತ್ಮಕ್ಕೆ ಶಾಂತಿ ಸಿಗಬೇಕೆನ್ನುವ ಉದ್ದೇಶದಿಂದ ಹೋಗುತ್ತಿದ್ದಾರೆ.

ಬಡವರು ದೂರದ ದೇವಸ್ಥಾನಗಳಿಗೆ ಹೋಗಬೇಕ್ನನುವ ಕನಸು ಇತ್ತು. ಈ ಶಕ್ತಿ ಯೋಜನೆ ಮೂಲಕ ಅವರ ಕನಸನ್ನು ನೆನಸು ಮಾಡಿದ್ದಾರೆ. ಇಡೀ ರಾಜ್ಯದಲ್ಲಿರುವಂತಹ ಎಲ್ಲಾ ದೇವಸ್ಥಾನಗಳನ್ನು ವೀಕ್ಷಣೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದೆ ಎಂದರೆ ಪಂಚ ಗ್ಯಾರಂಟಿ ಮೂಲಕ ಈ ಶಕ್ತಿ ಯೋಜನೆಯನ್ನು ಕೊಟ್ಟಿರುವಂಥದ್ದು. ನಮ್ಮ ಸರ್ಕಾರದ ಪರವಾಗಿ ಅವರು ಧರ್ಮಸ್ಥಳದಲ್ಲಿ ಪೂಜೆಯನ್ನು ಮಾಡಿಸಿ, ಹರಕೆಯನ್ನು ಕೂಡ ಮಾಡಿಕೊಂಡು ಬರುತ್ತಿದ್ದಾರೆ. ತಾವು ಕೂಡ ಅದೇ ಜಿಲ್ಲೆಯವರಾಗಿರುವುದರಿಂದ ತಮಗೂ ಕೂಡ ಗೊತ್ತಿದೆ. ಇಂತಹ ಹತ್ತು ಹಲವಾರು ಯೋಜನೆಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ, ಪ್ರತಿಯೊಂದು ಕ್ಷೇತ್ರದಲ್ಲೂ ಹಾಸ್ಟಲ್‌ಗಳಲ್ಲಿ, ರೆಸಿಡೆನ್ಸಿಯಲ್ ಸ್ಕೂಲ್‌ಗಳಲ್ಲಿ ಪ್ರತಿಯೊಂದು ಮಗುವಿಗೆ ಶುಲ್ಕದಲ್ಲಿ ರಿಯಾಯಿತಿ, ವಿದ್ಯಾರ್ಥಿವೇತನವನ್ನು ಕೊಟ್ಟು ನೂರಕ್ಕೆ ನೂರರಷ್ಟು ಸಹಾಯವನ್ನು ಮಾಡುತ್ತಿದೆ. ಕೈಗಾರಿಕೋದ್ಯಮಗಳನ್ನು ಪ್ರಾರಂಭಮಾಡಬೇಕೆಂದರೆ ಅವರಿಗೂ ಕೂಡ ಸರ್ಕಾರದಿಂದ ನೂರಕ್ಕೆ ನೂರರಷ್ಟು ಹಣ ಸಹಾಯವನ್ನು ಮಾಡುತ್ತಿದೆ. ಈ ವರ್ಗಗಳಿಗೆ ಮಾಡಿರುವ ಕಾರ್ಯಕ್ರಮಗಳನ್ನು ಬೇರೆ ಬೇರೆ ರಾಜ್ಯದವರು ಶ್ಲಾಘನೆಯನ್ನು ಮಾಡುತ್ತಿದ್ದಾರೆ. ಯುವಕರಿಗೆ ನಾವು ಉದ್ಯೋಗವನ್ನು ಕಲ್ಪಿಸುತ್ತಿದ್ದೇವೆ. ಉದ್ಯೋಗ ಸಿಗುವವರೆಗೂ ಅವರ ತಂದೆ-ತಾಯಿ ಪೋಷಕರುಗಳಿಗೆ ಹೊರೆಯಾಗಬಾರದು ಎಂದು 'ಯುವ ನಿಧಿ' ಯೋಜನೆಯನ್ನು ಸರ್ಕಾರ ತಂದಿದೆ. ಎರಡು ವರ್ಷಗಳ ಅವಧಿಯವರೆಗೆ ಪದವೀಧರರಿಗೆ ಮಾಸಿಕ ೩,೦೦೦ ರೂಪಾಯಿಗಳು ಮತ್ತು ಡಿಪ್ಲೋಮಾ ಮಾಡಿದವರಿಗೆ ೧,೫೦೦ ರೂಪಾಯಿಗಳ ಆರ್ಥಿಕ ಸಹಾಯವನ್ನು ಸರ್ಕಾರ ಮಾಡುತ್ತಿದೆ. ತಂದೆ-ತಾಯಿ ಪೋಷಕರಿಗೆ ಹೊರೆಯಾಗಬಾರದು, ಅವರು ವಿದ್ಯಾಭ್ಯಾಸವಾದರೂ ಮುಂದುವರೆಸಬಹುದು, ತರಬೇತಿಯನ್ನು ತೆಗೆದುಕೊಳ್ಳಬಹುದು ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಿಕೊಳ್ಳಬಹುದು ಎಂದು ಯುವ ನಿಧಿ ಯೋಜನೆಯನ್ನು ತಂದಿದ್ದಾರೆ. ಅದರ ಜೊತೆಗೆ ಯುವಕರಿಗೆ ಕೌಶಲ್ಯ ವೃತ್ತಿ ತರಬೇತಿಯನ್ನು ಕೊಟ್ಟು ಅವರನ್ನು ಸಬಲೀಕರಣವನ್ನಾಗಿ ಮಾಡುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ತೆಗೆದುಕೊಂಡು ಬಹಳಷ್ಟು ಯುವಕರು ಇವತ್ತು ಉದ್ಯಮಿಗಳಾಗಿದ್ದಾರೆ. ಇಡೀ ದೇಶದಲ್ಲಿಯೇ ಇಲ್ಲದಿರುವಂತಹ ಒಂದು ಮಹತ್ವವಾದ ದೊಡ್ಡ ಕೈಗಾರಿಕಾ ಮೇಳವನ್ನು, ನಮ್ಮ ರಾಜ್ಯದಲ್ಲಿ 'ಇನ್ವೆಸ್ಟ್ ಕರ್ನಾಟಕ' ಎಂದು ಮಾಡಿದ್ದಾರೆ.

(ಮುಂದು)

**(91) 30/01/2026 4:40 ಎಸ್‌ಪಿಆರ್/ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀಮತಿ ಬಲ್ಕೀಸ್ ಬಾನು (ಮುಂದು):-**

ಇಡೀ ರಾಜ್ಯದ ಯುವಕರು, ಹೆಣ್ಣುಮಕ್ಕಳು ಯಾರು ಪದವೀಧರರು ಇದ್ದಾರೆಯೋ, ಅವರುಗಳೆಲ್ಲಾ ಅಲ್ಲಿಗೆ ಬಂದು ನೋಂದಾಯಿಸಿ ಕೆಲಸವನ್ನು ಪಡೆದುಕೊಂಡಿದ್ದಾರೆ. ಇದು ಕೇವಲ ನಮ್ಮ ದೇಶದಲ್ಲ ಹೊರ ದೇಶಗಳಿಂದಲೂ ಕೂಡ ಜನ ಇವತ್ತಿನ ದಿವಸ ನಮ್ಮ ರಾಜ್ಯಕ್ಕೆ "Industrial Hub" ಎನ್ನುವ ಹೆಸರನ್ನು ಕೊಡುತ್ತಿದ್ದಾರೆ. Karnataka has become an Education Hub and Industrial Hub. ಇದರಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಬಹಳ ದೊಡ್ಡ ಹೆಸರು ಬಂದಿದೆ. ಈ ಹಿರಿಮೆಯು ನಮ್ಮ ಸರ್ಕಾರಕ್ಕೆ ಸಲ್ಲಬೇಕಾಗಿದೆ. ನಮ್ಮ ಸರ್ಕಾರದ ಈ ಯೋಜನೆಗಳಲ್ಲಿ ಒಂದೇ ಒಂದು ಉದ್ದೇಶ ಏನೆಂದರೆ, ಮಹಾತ್ಮಾ ಗಾಂಧೀ, ಬಾಬಾ ಸಾಹೇಬ್ ಅಂಬೇಡ್ಕರ್ ಇವರುಗಳು ಸ್ವತಂತ್ರ ಚಳುವಳಿಗಳನ್ನು ಮಾಡಿ, ಒಂದು ಕೋಲನ್ನು ಹಿಡಿದುಕೊಂಡು ಬರೇ ಪಂಚೆ ಮತ್ತು ಟವಲಿನ ಮೂಲಕ ಇಡೀ ದೇಶದ ಯುವಕರಿಗೆ, ಮಹಿಳೆಯರಿಗೆ ಎಲ್ಲಾ ಜಾತ್ಯಾತೀತ ಜನರನ್ನು ಕರೆದುಕೊಂಡು ಹೋಗಿ, ಬ್ರಿಟಿಷರನ್ನು ಹೊರಗೋಡಿಸಿ, ನಮಗೆ ಸ್ವತಂತ್ರವನ್ನು ದೊರಕಿಸಿ ಕೊಟ್ಟ ಮೇಲೆ, ಅವರಿಗೆ ಒಂದೇ ಒಂದು ಕನಸು ಇತ್ತು. ಅದು ಏನೆಂದರೆ, ನಮ್ಮ ಎಲ್ಲಾ ಗ್ರಾಮಗಳು 'ಸ್ವರಾಜ ಗ್ರಾಮ'ವಾಗಬೇಕು, ಗ್ರಾಮ ಅಭಿವೃದ್ಧಿಯಾಗಬೇಕು ಎಂಬುದಾಗಿತ್ತು. ಗ್ರಾಮಗಳು ಎಲ್ಲಿಯತನಕ ಅಭಿವೃದ್ಧಿಯಾಗುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ದೇಶ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವೇ ಇಲ್ಲ ಎಂಬ ಕನಸನ್ನು ಮಹಾತ್ಮಾ ಗಾಂಧಿಯವರು ಕಂಡಿದ್ದರು. ಹೀಗಾಗಿ ಮನ್‌ಮೋಹನ್ ಸಿಂಗ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ ಮನ್‌ರೇಗಾ (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ) ಎಂಬ ಕಾರ್ಯಕ್ರಮವನ್ನು ತೆಗೆದುಕೊಂಡು ಬಂದರು. ಅಕ್ಟೋಬರ್ 2, 1959ನೇ ಇಸವಿಯಲ್ಲಿ ರಾಜಸ್ಥಾನ ರಾಜ್ಯದ ನಾಗೌರ್ ಜಿಲ್ಲೆಯಲ್ಲಿ ಮೊಟ್ಟ ಮೊದಲನೆಯದಾಗಿ ಗ್ರಾಮ ಪಂಚಾಯಿತಿಯನ್ನು ಜವಾಹರ್‌ಲಾಲ್ ನೆಹರುರವರು ಪ್ರಾರಂಭಿಸಿದರು. ಗ್ರಾಮ, ಗ್ರಾಮೀಣಾಭಿವೃದ್ಧಿಗೆ ಮಹತ್ವ ಕೊಡಬೇಕು; ಅಲ್ಲಿ ಅಭಿವೃದ್ಧಿಯಾಗಬೇಕು ಎನ್ನುವ ಕನಸನ್ನು...., ನೆಹರು ರವರು ಹಾಕಿದ ಈ ಕಾರ್ಯಕ್ರಮವನ್ನು ತದನಂತರದಲ್ಲಿ ಆಂಧ್ರಪ್ರದೇಶದಲ್ಲಿಯೂ ಜಾರಿಗೊಳಿಸಲಾಯಿತು. ನಂತರದಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿ ಗ್ರಾಮ ಪಂಚಾಯಿತಿಯ decentralized setup ಅನ್ನು ಪ್ರಾರಂಭಿಸಲಾಯಿತು. ಇದನ್ನೆಲ್ಲಾ ನೋಡಿದ, ದಿವಂಗತ ರಾಜೀವ್ ಗಾಂಧಿವರು...., ತಮಗೂ ಗೊತ್ತಿದೆ ಏಕೆಂದರೆ ತಾವೂ ಕೂಡ ಅದೇ ಹಾದಿಯಲ್ಲಿ ಬಂದಿರುವವರಾಗಿದ್ದೀರಿ. ಸಂವಿಧಾನಕ್ಕೆ 73 ನೇ ತಿದ್ದುಪಡಿಯನ್ನು ಮಾಡಿ ಇಡೀ ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದರು. Three-tier System ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಹೆಣ್ಣುಮಕ್ಕಳಿಗೆ ಶೇಕಡಾ 50 ರಷ್ಟು ಮೀಸಲಾತಿಯನ್ನು ತಂದರು. ಕೇವಲ ಸ್ಥಾನಗೋಸ್ಕರ ಅಲ್ಲ; ಆಡಳಿತ ಮಾಡುವುದಕ್ಕೂ ಸಹ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಕ್ಕೂ ಮೀಸಲಾತಿ ಎನ್ನುವುದು ಏನಾದರೂ ಬಂದಿದೆ ಅಂದರೆ ಅದು ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ದಿವಂಗತ ರಾಜೀವ್

ಗಾಂಧಿಯವರು ಇಡೀ ದೇಶಕ್ಕೆ ನೀಡಿದ ಬಹಳ ದೊಡ್ಡ ಕೊಡುಗೆಯಾಗಿದೆ. ಇದು ಕೇವಲ ಅಧಿಕಾರ ಒಂದೇ ಅಲ್ಲ; ಬದಲಾಗಿ ಆರ್ಥಿಕ ಅಧಿಕಾರವನ್ನೂ ಸಹ ಕೊಟ್ಟರು. ತಮ್ಮ ಗ್ರಾಮಕ್ಕೆ ಬೇಕಾದ ಯೋಜನೆಗಳನ್ನು ಮಾಡುವ ಶಕ್ತಿಯನ್ನೂ ಗ್ರಾಮ ಪಂಚಾಯಿತಿಗಳಿಗೆ ನೀಡಿದರು. ತಮ್ಮ ಊರಿನಲ್ಲಿ ಏನೇನು ಕೆಲಸಗಳು ಆಗಬೇಕು ಎಂದು ಹೇಳುವ ಒಂದು ವಿಚಾರಧಾರೆಯನ್ನು ಅವರೇ ತೀರ್ಮಾನಗೊಳಿಸಬೇಕು ಎಂಬುದಾಗಿದೆ. ಇವತ್ತಿನ ದಿವಸ ಶಾಸಕರೂ ಸಹ ಆ ಗ್ರಾಮಸಭೆಯಲ್ಲಿ ಹೋಗಿ ಕುಳಿತುಕೊಂಡು ಅಲ್ಲಿ ಎಲ್ಲಾ ಜನರ ಮುಂದೆ ಅವರ ಊರಿಗೆ ಏನು ಆಗಬೇಕು ಹಾಗೂ ಏನಾದರೂ ಕೆಲಸಗಳನ್ನು ಮಾಡಬೇಕೆಂದು ಹೇಳಿದರೆ, ಅಂತಹ ಮಹತ್ವವನ್ನು ಆ ಗ್ರಾಮಸಭೆಗಳಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನೀಡಿದ್ದಾರೆ. ಇದರಿಂದಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಯಾವುದೇ ಇರಬಹುದು, ಇವುಗಳ ಎಲ್ಲಾ ಇಲಾಖೆಗಳ ಯೋಜನೆಗಳು ಏನಾದರೂ ಅನುಮೋದನೆಗೊಳ್ಳಬೇಕು ಎಂದು ಹೇಳಿದರೆ, ಅದು ಗ್ರಾಮ ಪಂಚಾಯಿತಿಗಳಿಗೆ ಹೋಗಬೇಕು. ಅಲ್ಲಿನ ಗ್ರಾಮಸಭೆಗಳಲ್ಲಿ ಇವುಗಳ ಬಗ್ಗೆ ತೀರ್ಮಾನಗಳನ್ನು ಮಾಡಬೇಕು. ಇಂತಹ ಮಹತ್ವದ ಯೋಜನೆಯನ್ನು ಏಕೆ ಜಾರಿಗೊಳಿಸಿದರು ಎಂದರೆ, "ದಿಲ್ಲಿ" ಯಲ್ಲಿಯೇ ಸರ್ಕಾರ, ಅಧಿಕಾರಗಳು ಇರಬಾರದು; ಇವುಗಳು ಗ್ರಾಮಗಳಿಗೆ ಹೋಗಬೇಕು ಎನ್ನುವ ಉದ್ದೇಶದಿಂದ ಆ ಯೋಜನೆಗಳನ್ನು ಜಾರಿಗೆ ತಂದರು. ಆ ಯೋಜನೆಗೆ ಮಹತ್ವದ ಹೆಸರಾದ ಮನ್‌ರೇಗಾವನ್ನು ತಂದಿರುವ ಮನ್‌ಮೋಹನ್ ಸಿಂಗ್ ರವರನ್ನೂ ಸಹ ಇವತ್ತಿನ ದಿವಸ ನಾವು ಜ್ಞಾಪಿಸಿಕೊಳ್ಳಬೇಕು. ಇವತ್ತಿನ ದಿವಸ ಮನ್‌ರೇಗಾ ಯೋಜನೆಯಿಂದಾಗಿ..., ನಮ್ಮ ಊರು ಹಾಗೂ ಹಳ್ಳಿಗಳು ಹೇಗೆ ಇದ್ದವು? ರಾಜ್ಯಕ್ಕೆ ಅಷ್ಟು ಹಣಕಾಸಿನ ಬಲ ಇರಲಿಲ್ಲ ಎಂದು ಹೇಳಿ, ಎಲ್ಲರೂ ಸೇರಿ ಗ್ರಾಮ ಪಂಚಾಯಿತಿಗಳನ್ನು ಇನ್ನಷ್ಟು ಗಟ್ಟಿಗೊಳಿಸಿದರೆ, ಈ ದೇಶದ ಪ್ರಗತಿಯಾಗುತ್ತದೆ. ಅಲ್ಲಿರುವ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವಂತಾಗುತ್ತದೆ. ಯೋಜನೆಗಳನ್ನು ಅವರೇ ರೂಪಿಸಿಕೊಳ್ಳಬಹುದು. ಎಲ್ಲಾ ರೀತಿಯಲ್ಲಿ ಬೆಳವಣಿಗೆ ಆಗಬಹುದು ಎಂದು ಹೇಳಿ..., ಮನ್‌ರೇಗಾ ಯೋಜನೆಯ ಮೂಲಕ ಅವರುಗಳೇ ಶಾಲೆ, ರಸ್ತೆ, ಕೆರೆಗಳ ಅವಶ್ಯಕತೆ ಇದೆಯೋ, ತೋಟಗಾರಿಕೆ, ಕೃಷಿ ಇಲಾಖೆಗಳಲ್ಲಿ ಕೆಲಸ ಮಾಡಬೇಕೇ ಆಯಾ ಪಂಚಾಯಿತಿಗಳಲ್ಲಿ ತೀರ್ಮಾನ ಮಾಡುತ್ತಾರೆ. ಆದರೆ, ಜಿಲ್ಲಾ ಪಂಚಾಯಿತಿಯ ಅಧ್ಯಕ್ಷನಾಗಿ ಬಹಳ ದುಃಖದ ಸಂಗತಿ ಏನೆಂದರೆ, ಆ ಹೆಸರನ್ನು ಅಂದರೆ ಮಹಾತ್ಮಾ ಗಾಂಧಿಯವರ ಹೆಸರನ್ನು ಮಾತ್ರವೇ ಬದಲಾವಣೆ ಮಾಡಿದ್ದಲ್ಲ. ಇವತ್ತಿನ ದಿವಸ ಆ ಹೆಸರನ್ನು ವಿಬಿ–ಜಿ ರಾಮ್ ಜಿ (Viksit Bharat–Guarantee for Rozgar and Ajeevika Mission (Gramin)) ಎಂಬುದಾಗಿ ಬದಲಾಯಿಸಿದ್ದಾರೆ. ಇದರಲ್ಲಿ ಶೇಕಡಾ 40 ರಷ್ಟು ಹಣವನ್ನು ರಾಜ್ಯ ಸರ್ಕಾರದವರು ಕೊಡಬೇಕು ಹಾಗೂ ಇನ್ನುಳಿದ ಶೇಕಡಾ 60 ರಷ್ಟು ಹಣವನ್ನು ಮಾತ್ರವೇ ಕೇಂದ್ರ ಸರ್ಕಾರದವರು ಕೊಡುತ್ತಾರೆ. ಒಂದು ಕಡೆ ಯೋಜನೆಯ ಮಾಡುವ ಶಕ್ತಿಯನ್ನೂ ಸಹ ತೆಗೆದುಕೊಂಡಿದ್ದಾರೆ. ಗ್ರಾಮಗಳಿಗೆ ಏನೇನು ಬೇಕು ಎನ್ನುವುದನ್ನು ಕೇಂದ್ರದಿಂದಲೇ ಹೇಳುತ್ತಾರೆ. ಅವರು ಡ್ರೋನ್ ಮೂಲಕ ಯಾವ ಯಾವ ಗ್ರಾಮ ಪಂಚಾಯಿತಿಗಳಿಗೆ ಎಲ್ಲಿ ಆಯ್ಕೆ ಮಾಡಬೇಕು ಎನ್ನುವುದನ್ನು ಅವರೇ ನಿರ್ಧಾರ ಮಾಡುತ್ತಾರೆ. ಆ ಗ್ರಾಮ

ಪಂಚಾಯಿತಿಯಲ್ಲಿರುವ 15-20 ಜನ ತಮ್ಮ ತಮ್ಮ ವಾರ್ಡ್ / ಹಳ್ಳಿಗಳಲ್ಲಿ "box-den and pit" ಬೇಕೇ ಅಥವಾ ಯಾವ ಕಡೆಗಳಲ್ಲಿ ಗುಂಡಿಗಳನ್ನು ಮುಚ್ಚಬೇಕು ಯಾವುದಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಮಾಡಬೇಕು ಎನ್ನುವ ಶಕ್ತಿಯನ್ನು ಇವತ್ತಿನ ದಿವಸ ಕಿತ್ತುಕೊಂಡು ಕೇಂದ್ರ ಸರ್ಕಾರವು ತಮ್ಮಲ್ಲಿ ಇಟ್ಟುಕೊಂಡಿದೆ. ಡ್ರೋನ್ ಮೂಲಕ ಯೋಜನೆಯನ್ನು ಮಾಡುವ ಕೇಂದ್ರೀಕೃತ ಅಧಿಕಾರವನ್ನು..., ಇವತ್ತಿನ ದಿವಸ ಗ್ರಾಮ ಪಂಚಾಯಿತಿಗಳ ಅಧಿಕಾರವನ್ನು ಮೊಟಕುಗೊಳಿಸಿ, ಅದನ್ನು ಅವರೇ ಇಟ್ಟುಕೊಂಡಿದ್ದಾರೆ. ದುಃಖದ ಸಂಗತಿ ಏನೆಂದರೆ, ಶೇಕಡಾ 53 ರಷ್ಟು ಮಹಿಳೆಯ ಕಾರ್ಮಿಕರಿದ್ದರು. ಇವರೇ ಹೋಗಿ ಸ್ವಂತ ಅವರ ಭೂಮಿ, ಜಮೀನುಗಳಲ್ಲಿ ಕೆಲಸಗಳನ್ನು ಮಾಡುತ್ತಾರೆ. ಇವರ ಬಳಿ ಸಣ್ಣ ಸಣ್ಣ ಜಮೀನು ಅಂದರೆ ಅರ್ಧ ಎಕರೆಯಷ್ಟು ಭೂಮಿ ಇದ್ದು, ಇವರುಗಳು ತೋಟಗಾರಿಕೆ ಇಲಾಖೆಯಿಂದ ಯೋಜನೆಯ ಮೂಲಕ ತೋಟವನ್ನು ಮಾಡಿರತಕ್ಕವರು. ನಮ್ಮ ದೇಶದ ಆರ್ಥಿಕತೆ ಏನಾದರೂ ಹೆಚ್ಚು ಆಗಿದೆ ಎಂದರೆ, ಇದು ಕೇವಲ ಮನ್‌ರೇಗಾ ಇಂದ ಮಾತ್ರವೇ ಆಗಿದೆ ಹೊರತು; ಬೇರೆ ಯಾವುದರಿಂದಲೂ ಅಲ್ಲ. ಹಳ್ಳಿಗಳ ಪ್ರಗತಿಯಿಂದಾಗಿ ಈ ದೇಶದ ಪ್ರಗತಿಯಾಗಿದೆ. ಎಲ್ಲಿಯತನಕ ಹಳ್ಳಿಗಳ ಪ್ರಗತಿಯಾಗುವುದಿಲ್ಲವೋ, ಎಲ್ಲಿಯತನಕ ಹಳ್ಳಿಗಳಲ್ಲಿ ಆರ್ಥಿಕ ಸುಧಾರಣೆಯಾಗುವುದಿಲ್ಲವೋ, ಅಲ್ಲಿಯವರೆಗೆ ಈ ದೇಶದ ಸುಧಾರಣೆಯಾಗುವುದಕ್ಕೆ ಆಗುವುದಿಲ್ಲ. ಹೀಗಾಗಿ ನಾನು ಒತ್ತಾಯ ಮಾಡುವುದು ಏನೆಂದರೆ, ಹೊಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಹಿಂಪಡೆದುಕೊಳ್ಳಬೇಕು. ಈ ಯೋಜನೆಯು ಬೆನ್ನಿಗೆ ಚೂರಿ ಹಾಕುವ ಹಾಗೆ ಇದೆ. ಇದು ಯುವಕರನ್ನು ನಿರುದ್ಯೋಗಿಗಳನ್ನಾಗಿ ಮಾಡುವ ಹಾಗೆ ಇದೆ. ಮಹಿಳೆಯರು ಹಾಗೂ ಬಹಳಷ್ಟು ಜನರು ಯೋಚನೆ ಮಾಡುತ್ತಿದ್ದಾರೆ. ಗ್ರಾಮ ಪಂಚಾಯಿತಿಗಳಲ್ಲಿ ಜಾಬ್ ಕಾರ್ಡ್‌ಗಳನ್ನು ಹೊಂದಿರುವವರು ಇವತ್ತಿನ ದಿವಸ ಬೀದಿಗೆ ಇಳಿಯುತ್ತಾರೆ. ಹೀಗಾಗಿ ಕೇಂದ್ರ ಸರ್ಕಾರವು ಈ ಕಾರ್ಯಕ್ರಮವನ್ನು ಹಿಂಪಡೆಯಬೇಕು. ಕೇಂದ್ರವು ಹತ್ತು ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಿದೆ; ಆದರೆ, ಗ್ರಾಮ ಪಂಚಾಯಿತಿಗಳನ್ನು ಗಟ್ಟಿಗೊಳಿಸಿ. ಯೋಜನೆ ಮಾಡುವ ಶಕ್ತಿಯನ್ನು ಅವರಿಗೆ ನೀಡಬೇಕು. ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ ಅನುದಾನಗಳು ಬಂದಿಲ್ಲ. ಇನ್ನೂ ಶೇಕಡ 40 ರಷ್ಟು ಅನುದಾನವನ್ನು ರಾಜ್ಯ ಸರ್ಕಾರಗಳಿಗೆ ಕೊಡಬೇಕು ಎಂದರೆ ಹೇಳಿದರೆ, ಇದು ಎಲ್ಲಿಂದ ಸಾಧ್ಯ? ಏಕೆಂದರೆ, ತಮಗೆ ಬರಬೇಕಾಗಿರುವ ತೆರಿಗೆ ಸಂಗ್ರಹಣೆಯ ಹಣವೇ ನಮಗೆ ಬಂದಿಲ್ಲ.

ಕುಡಿಯುವ ನೀರಿಗಾಗಿ ಜಲ್ ಜೀವನ್ ಮಿಷನ್ ಎಂಬ ಕೇಂದ್ರ ಸರ್ಕಾರದ ಬಹಳ ದೊಡ್ಡ ಯೋಜನೆ ಇದೆ. ಜಂಟಿಯಾಗಿ 34-35, 60 ಹಳ್ಳಿಗಳನ್ನು ಸೇರಿ ಒಂದೊಂದು ಯೋಜನೆ ಇದೆ. ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎರಡೂ ಸೇರಿವೆ. ಎಲ್ಲಿಯತನಕ ರಾಜ್ಯ ಸರ್ಕಾರವು ತನ್ನ ಆಯವ್ಯಯದಲ್ಲಿ ಪ್ರಾವಿಷನ್ ಅನ್ನು ಮಾಡುವುದಿಲ್ಲವೋ, ಅಲ್ಲಿಯವರೆಗೆ ಕೇಂದ್ರ ಸರ್ಕಾರವು ಅದನ್ನು ಮಂಜೂರು ಮಾಡುವುದಿಲ್ಲ. ನಮ್ಮ ಸರ್ಕಾರವು ಆಗಲೇ ತನ್ನ ಆಯವ್ಯಯದಲ್ಲಿ ಪ್ರಾವಿಷನ್ ಮಾಡಿದೆ. ಕೇಂದ್ರ ಸರ್ಕಾರದಿಂದ ಬರಬೇಕಾಗಿರತಕ್ಕ 2025-26 ನೇ ಸಾಲಿನ ಜಲ್ ಜೀವನ್ ಮಿಷನ್ ಎಂಬ ಕುಡಿಯುವ ನೀರಿನ ಯೋಜನೆಯಡಿ ಒಂದು ನಯಾ

ಪೈಸೆ ಇಲ್ಲಿಯವರೆಗೂ ಬಂದಿಲ್ಲ. ಇದು ಎಲ್ಲಿಯ ನ್ಯಾಯ? ನಮ್ಮ ರಾಜ್ಯ ಸರ್ಕಾರಕ್ಕೆ ಎಲ್ಲಿಂದ ನ್ಯಾಯ ದೊರೆಯುತ್ತದೆ? ಒಂದು ಕಡೆ ತೆರಿಗೆ ಸಂಗ್ರಹಣೆಯ ರಾಜ್ಯದ ಪಾಲು ನಮಗೆ ವಾಪಸ್ಸು ಬರುತ್ತಿಲ್ಲ. ನಾವು ನಮ್ಮ ಯೋಜನೆಗಳನ್ನು ರೂಪಿಸಿಕೊಳ್ಳೋಣವೆಂದರೆ, ಒಂದು ಕಡೆ ಕುಡಿಯುವ ನೀರಿನ ಯೋಜನೆಯನ್ನು ಕೊಡುತ್ತಿಲ್ಲ; ಮತ್ತೊಂದು ಕಡೆ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನ ನಿಲ್ಲಿಸಿದ್ದಾರೆ. ವಿಶೇಷವಾಗಿ ಹೇಳಬೇಕೆಂದರೆ, ಅಲ್ಪಸಂಖ್ಯಾತರ ಮಕ್ಕಳಿಗೆ ಒಂದನೇ ತರಗತಿಯಿಂದ ಪಿ.ಯು.ಸಿ. ತನಕ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿತ್ತು. ಅದನ್ನು 10-15 ವರ್ಷಗಳಿಂದ ಸ್ಥಗಿತಗೊಳಿಸಿದ್ದಾರೆ. ಶೈಕ್ಷಣಿಕವಾಗಿ, ಆರ್ಥಿಕವಾಗಿಯೂ ಸಹ ನಮಗೆ ಕಡಿವಾಣವನ್ನು ಹಾಕಲಾಗುತ್ತಿದೆ. ಜನರಿಗೆ ಕುಡಿಯುವ ನೀರು ಒದಗಿಸಲು ಸಮಯಕ್ಕೆ ಸರಿಯಾಗಿ ದುಡ್ಡು ಕೊಡುತ್ತಿಲ್ಲ. ಹೀಗಾದರೆ, ಯೋಜನೆಗಳು ಸರಿಯಾದ ಸಮಯಕ್ಕೆ ಹೇಗೆ ಪೂರ್ಣವಾಗಬೇಕು? ನಾವು ಜನರಿಗೆ ಹೇಗೆ ನೀರನ್ನು ಕೊಡಬೇಕು. ಜನರಿಗೆ ನೀರನ್ನು ಕೊಡದಿದ್ದರೆ, ಅವರು ಹೇಗೆ ಬದುಕಬೇಕು? ಈ ರೀತಿಯ ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ. ಆದರೂ ಸಹ, ನಮ್ಮ ಸರ್ಕಾರ ರೈತರ ಪರವಾಗಿ ಇದೆ. ರೈತರು ಮಳೆಯಿಂದಾಗಿ ತತ್ತರಿಸಿ ಹೋಗಿದ್ದಾರೆ ಎಂದರೆ, ಸಹಾಯಹಸ್ತವಾಗಿ ಅವರಿಗೆ ಪ್ರವಾಹ ಹಾನಿ ವಿಚಾರದಲ್ಲಿ ಹಲವಾರು ಯೋಜನೆಗಳನ್ನು ಕೊಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವಂತೆ, ಇಡೀ ದೇಶದಲ್ಲಿಯೇ ನಮ್ಮ ರಾಜ್ಯ ಕಬ್ಬು ಬೆಳೆಯಲ್ಲಿ ಮೂರನೆಯ ಸ್ಥಾನವನ್ನು ಪಡೆದುಕೊಂಡಿದೆ. ಹಾವೇರಿ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಬಹಳ ದೊಡ್ಡ ಹೋರಾಟವನ್ನು ಮಾಡುತ್ತಿದ್ದರು. ಅವರ ಸಹಾಯಕ್ಕೆ ಯಾರು ಬಂದರು? ಶ್ರೀ ಸಿದ್ದರಾಮಯ್ಯ ಮತ್ತು ಅವರ ನೇತೃತ್ವದ ಸರ್ಕಾರವು ಅವರ ನೆರವಿಗೆ ಬಂದಿತು. ಕಬ್ಬು ಬೆಳೆಗಾರರಿಗೆ 2,೮೦೦ ರೂಪಾಯಿಗಳಷ್ಟು ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರೆ, ಅದನ್ನು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳಬಹುದು. ನಮ್ಮ ಸರ್ಕಾರ ಅವರ ಬೆಂಬಲಕ್ಕೆ ಬಂದಿತು. ಇದನ್ನೆಲ್ಲಾ ಆಲೋಚನೆ ಮಾಡಬೇಕು. ನಾನು ಹೇಳುವ ಮಾತಿಗೆ ತಮ್ಮ ಸಹಮತಿ ಇದೆ ಎಂದು ನಾನು ವ್ಯಕ್ತಿಪಡಿಸುತ್ತೇನೆ. ತೆಂಗು ಬೆಳೆಗಾರರಿಗೂ ಸಹ ಕೇಂದ್ರ ಸರ್ಕಾರದಿಂದ ಯಾವುದೇ ತರಹ ಸಹಾಯಹಸ್ತವಿಲ್ಲ. ಆದರೂ ಸಹ ನಮ್ಮ ಸರ್ಕಾರ ಯಾವುದೇ ತರಹದ ಆಪಾದನೆಯನ್ನು ಮಾಡುತ್ತಿಲ್ಲ. ನಮ್ಮಲ್ಲಿರುವ ಹಣಕಾಸಿನ ಸ್ಥಿತಿಯನ್ನು ನೋಡಿಕೊಂಡು ಅವರಿಗೂ ಸಹ ಬೆಂಬಲ ಬೆಲೆಯನ್ನು ನೀಡುತ್ತಿದ್ದೇವೆ. ಎಲ್ಲಾ ರೀತಿಯ ಕೃಷಿ ಕಾರ್ಮಿಕರಿಗೆ, ರೈತರಿಗೆ ಸಹಾಯಹಸ್ತವನ್ನು ತೋರಿಸುತ್ತಿದ್ದಾರೆ. ಸರಿಯಾದ ಸಮಯಕ್ಕೆ ಬೀಜವನ್ನು ನೀಡುತ್ತಿಲ್ಲ ಎಂಬುದಾಗಿಯೂ ಸಹ ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರವು ದರವನ್ನು ಯಾರು ನಿಗದಿಪಡಿಸಬೇಕು. ಇವತ್ತಿನ ದಿವಸ ಎಲ್ಲಾ ರೀತಿಯ ಬೆಲೆಗಳು ಗಗನಕ್ಕೆ ತಲುಪುತ್ತಿವೆ. ನಿನ್ನೆಯ ದಿನ ನಾನು ಪತ್ರಿಕೆಯೊಂದರಲ್ಲಿ ನೋಡಿದೆ. ಅದರಲ್ಲಿ "ಚಾಂದಿ ಕಾ ಭಾವ್ ಆಸ್‌ಮಾನ್ ಛೂ ರಹಾ ಹೈ" ಎಂಬುದಾಗಿ ವರದಿಯಾಗಿತ್ತು. ಹೀಗಾದರೆ ಯಾರೂ ಬಡವ-ಬಗ್ಗರು ಅದನ್ನು ಖರೀದಿ ಮಾಡುವ ಹಾಗೇ ಇಲ್ಲ? ಇವತ್ತಿನ ದಿವಸ ಗೌರವಾನ್ವಿತ ಸದಸ್ಯರೊಬ್ಬರು ಸಿಲಿಂಡರ್‌ನ ಬಗ್ಗೆ ಹೇಳುತ್ತಿದ್ದರು. ಸಿಲಿಂಡರ್ ಬೆಲೆ ಎಷ್ಟು ಆಗಿದೆ?

(ಮುಂದು)

(92)30-01-2026 4-50/**bkp-vk**

**ಶ್ರೀಮತಿ ಬಲ್ಕೀಸ್ ಬಾನು(ಮುಂದು.)**

ಹೆಣ್ಣುಮಕ್ಕಳು, ನಮ್ಮ ಪಂಚ ಗ್ಯಾರಂಟಿಯಿಂದ ಇವತ್ತು ಯಾವುದೇ ರೀತಿಯಲ್ಲಿ ಅವರುಗಳು ಬೀದಿಗಿಳದಿಲ್ಲ. ಪಂಚ ಗ್ಯಾರಂಟಿ ಇಲ್ಲದಿದ್ದರೆ, ಎಲ್ಲರೂ ಬೀದಿಗಿಳದು ಹೋರಾಟ ಮಾಡುತ್ತಿದ್ದರು. ಬಹಳ ಸಂಪಾಗಿ ಇವತ್ತು ಒಬ್ಬ ಹೆಣ್ಣು ಮಗಳು ತಿಂಗಳಗೆ ತನ್ನ ಆದಾಯದಲ್ಲಿ 3,000, 5000 ರೂಪಾಯಿಗಳನ್ನು ಪಂಚ ಗ್ಯಾರಂಟಿಯಿಂದ ಆಸುತ್ತಿದ್ದಾಳೆ. ಸಂಕಟದಲ್ಲಿ ತಮ್ಮ ಗಂಡಸರಿಗೆ, ತಮ್ಮ ಕುಟುಂಬಕ್ಕೆ ಹಸ್ತದಾಯಕವಾಗಿದ್ದಾರೆಂದರೆ ನಮ್ಮ ರಾಜ್ಯದಲ್ಲಿ ಶುರು ಮಾಡಿರುವಂತಹ ಪಂಚ ಗ್ಯಾರಂಟಿಯಿಂದ ಎಂದು ಹೇಳಲಕ್ಕೆ ಬಯಸುತ್ತೇನೆ. . ಇಡೀ ದೇಶಕ್ಕೆ ಮಾದರಿಯಾಗಿ ಬೇರೆ ಬೇರೆ ರಾಜ್ಯಗಳು ಸಹ ಮತ್ತು ಬಿ.ಜೆ.ಪಿ. ಆಡಳಿತ ಇರುವಂತಹ ರಾಜ್ಯಗಳು ಸಹ ನಾವು ಮಾಡಿರುವಂತಹ ಯೋಜನೆಗಳನ್ನು ಅಳವಡಿಸಿಕೊಂಡಿದ್ದಾರೆ. ಈ ಒಂದು ಯೋಜನೆಗೆ ಅಂತರ ರಾಷ್ಟ್ರೀಯ ಮಟ್ಟದಲ್ಲೂ ಕೂಡ ಶ್ಲಾಘನೆಯನ್ನು ಮಾಡುತ್ತಿದ್ದಾರೆ. ನಮ್ಮ ಸರ್ಕಾರದ ಒಂದೇ ಒಂದು ಉದ್ದೇಶ ಏನೆಂದರೆ, ಎಲ್ಲರೂ ಸಮವಾಗಿ ಸಮಪಾಲು, ಸಮಬಾಳು ಎನ್ನುವ ರೀತಿಯಲ್ಲಿ ಬಾಳಬೇಕು. ಜಾತ್ಯಾತೀತವಾಗಿ ಬಾಳಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಅದನ್ನು ಅವಲಂಬಿಸಿ ನಮ್ಮ ಸರ್ಕಾರ ರೂಪಿಸಿರುವಂತಹ ಬಜೆಟ್‌ನಲ್ಲಿ ಮನರೇಗಾವನ್ನು ಹಿಂತೆಗೆದುಕೊಂಡು ಈಗಾಗಲೇ ಅಂದರೆ ಡಿಸೆಂಬರ್‌ನಿಂದ ಅಧಿಕಾರಿಗಳಗೆ ಆದೇಶವನ್ನು ಕೊಡುತ್ತಿದ್ದಾರೆ. ಈಗ ಹೊಸದಾಗಿ 'VB-G RAM G' ಏನು ತಂದಿದ್ದಾರೆ, ಅದರಿಂದ ಲ್ಯಾಂಡ್ ಲಾರ್ಡ್‌ಗಳು ಜಾಸ್ತಿಯಾಗುತ್ತಿದ್ದಾರೆ, feudalism ಜಾಸ್ತಿಯಾಗುತ್ತದೆ. ಬಡತನ ಜಾಸ್ತಿಯಾಗುತ್ತದೆ. ಜನರು ತಮಗೆ ಬೇಕಾಗಿರುವಂತಹ ಕೆಲಸವನ್ನು 125 ದಿವಸಗಳು ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಾವು 100 ದಿನಗಳ ಕೆಲಸವನ್ನು ಕೊಡುತ್ತಿದ್ದೆವು. ಆದರೆ, ನೀವು ಏತಕ್ಕೆ ಕೊಡುತ್ತಿದ್ದೀರಿ? 125 ದಿವಸಗಳ ಕೆಲಸವನ್ನು ಯಾರೋ ಒಬ್ಬರು ಗುತ್ತಿಗೆದಾರನು ಅವನಿಗೆ ಬೇಕಾದಂತಹ ಯೋಜನೆಯನ್ನು ಮಾಡಿಸಿ, ಆ ಯೋಜನೆಯನ್ನು ಅವನು ತೆಗೆದುಕೊಳ್ಳುತ್ತಾನೆ. ಸಮಯಕ್ಕೆ ಸರಿಯಾಗಿ ಜನರಿಗೆ ಕೂಲಿ ಸಿಗುವುದಿಲ್ಲ, ಕೆಲಸ ಸಿಗುವುದಿಲ್ಲ. ಅವರು ಆಗ ಏನು ಮಾಡುತ್ತಾರೆಂದರೆ ನನಗೆ ಸಂಕಟ ಬಂದಿದೆ, ನಮಗೆ ದುಡ್ಡು ಕೊಡಿ ಎಂದು ಹೇಳ ಮತ್ತೆ ಅವರು ಒಬ್ಬ ಗುತ್ತಿಗೆದಾರನ ಹತ್ತಿರ ಹೋಗಿ ದುಡ್ಡನ್ನು ತೆಗೆದುಕೊಳ್ಳುತ್ತಾನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)**

ಮತ್ತೆ ಅವನಿಗೆ ಹಣವನ್ನು ವಾಪಸ್ಸು ಕೊಡಬೇಕೆಂದರೆ, ನಿನಗೆ ಆ ಒಂದು ಕಾಲದಲ್ಲಿ ಎಷ್ಟು ದುಡ್ಡನ್ನು ಕೊಟ್ಟಿದ್ದೆ. ನೀನು ಈಗ ತೀರಿಸಬೇಕೆಂದರೆ, ನಾನು ಅದನ್ನು ಮುರಿದುಕೊಂಡು ಕೊಡುತ್ತೇನೆಂದು ಹೇಳಿದಾಗ ಅವನಿಗೆ ಸಿಗುವಂತಹ ಕೂಲಿಯು ಸಹ ಅವನಿಗೆ ಸರಿಯಾಗಿ ಸಿಗುವುದಿಲ್ಲ. ಹಾಗಾಗಿ, 'VB–G RAM G' ಕಾರ್ಯಕ್ರಮದಿಂದ ನಮ್ಮ ಗ್ರಾಮೀಣ ಪ್ರದೇಶದ ಪ್ರಗತಿಯೂ ತಳಮಟ್ಟಕ್ಕೆ ಹೋಗುತ್ತದೆ. ಗುತ್ತಿಗೆದಾರರ ಹಾವಳಿ ಜಾಸ್ತಿಯಾಗುತ್ತದೆ. ಲ್ಯಾಂಡ್ ಲಾರ್ಡ್‌ಗಳ ಹಾವಳಿ ಜಾಸ್ತಿಯಾಗುತ್ತದೆ, feudalism ಜಾಸ್ತಿಯಾಗುತ್ತದೆ. ಈ ವಿಚಾರವನ್ನು ಸನ್ಮಾನ್ಯ ಸಭಾಪತಿಯವರ ಮೂಲಕ ಕೇಂದ್ರ ಸರ್ಕಾರಕ್ಕೆ ಇವತ್ತಿನ ಈ ಸಭೆಯ ಮೂಲಕ ಈ ಯೋಜನೆಯನ್ನ ಹಿಂದೆ ತೆಗೆದುಕೊಂಡು ನಮ್ಮ M.G.N.R.E.G.A. ವನ್ನು ಮತ್ತೆ ಜಾರಿಗೊಳಿಸಬೇಕೆಂದು ಹೇಳುತ್ತಾ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್, ಜೈಕರ್ನಾಟಕ.

## 4. ಪ್ರಶ್ನೋತ್ತರಗಳು.

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಪ್ರಶ್ನೆ ಸಂಖ್ಯೆ 428(46)**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್ ಎಸ್.(ವಿಧಾಸಭಾ ಕ್ಷೇತ್ರ)(ಶ್ರೀ ಗೋವಿಂದರಾಜುರವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಕೋಲಾರ ಜಿಲ್ಲೆಯ ಎಲ್ಲಾ ವಿಧಾನಸಭೆಯ ಕ್ಷೇತ್ರಗಳ ರಸ್ತೆಗಳು ಕೂಡ ತುಂಬಾ ಹಾಳಾಗಿವೆ. ಮಾನ್ಯ ಸಚಿವರು ಉತ್ತರದಲ್ಲಿ ಏನು ಹೇಳುತ್ತಾರೆಂದರೆ ನರೇಗಾ ಯೋಜನೆಯನ್ನು ಹೊರತುಪಡಿಸಿ, ಇದಕ್ಕೆ ಕೊಟ್ಟಿರುವಂತಹ ಅನುದಾನಗಳು ಬಹಳ ಕಡಿಮೆ ಇರುವುದು ಕಂಡುಬರುತ್ತದೆ. ಎಲ್ಲಾ ಪ್ರಮುಖವಾದಂತಹ ಪೇಪರ್‌ಗಳಲ್ಲಿಯೂ ಕೂಡ ರಸ್ತೆ ಬಗ್ಗೆ ಎಷ್ಟೊಂದು ವಿವರವಾಗಿ ಬಂದಿದೆ ಎಂದರೆ ಯಾವ ರಸ್ತೆ ಕೂಡ ಸಾಧಾರಣ ವಾಹನ ಕೂಡ ಓಡಾಡುವಂತಿಲ್ಲ. ಅಷ್ಟೊಂದು ದುರಸ್ತಿಗೆ ಈ ರಸ್ತೆಗಳು ಒಳಗಾಗಿವೆ. ಹಾಗೆಯೇ ಹೊಂಡಗಳಲ್ಲಿ two wheelers ಬಿದ್ದಿರುವಂತಹವುಗಳ ಸಂಖ್ಯೆ ಲೆಕ್ಕಕ್ಕೆ ಇಲ್ಲದೇ ಇರುವಷ್ಟು ಬಿದ್ದಿವೆ. ಇದರಲ್ಲಿ ವಿಶೇಷವಾಗಿ ನಾನು ಕೇಳಿರುವಂತಹ ಪ್ರಶ್ನೆಗೆ ಇವರು ಕೊಟ್ಟಿರುವಂತಹದ್ದರಲ್ಲಿ ನನಗೆ ತಿಳಿದು ಬರುವುದೇನೆಂದರೆ ಒಟ್ಟು ಲಕ್ಷಗಳಲ್ಲಿ 589 ಲಕ್ಷಗಳಲ್ಲಿ ಅಂದರೆ 5 ಕೋಟಿ 89 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವಶ್ಯಕತೆ ಇರುವಂತಹ ಹಣ ಇಡೀ ಕೋಲಾರ ಜಿಲ್ಲೆಗೆ ನೂರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸುಮಾರು 5 ಕೋಟಿ ಹಣದಲ್ಲಿ ಏನು ಕೆಲಸ ಮಾಡಲಿಕ್ಕೆ ಆಗುತ್ತದೆ? ಇದಕ್ಕೆ ನನಗೆ ದಯವಿಟ್ಟು ಉತ್ತರ ಬೇಕಾಗಿದೆ.

**ಶ್ರೀ ಪ್ರಿಯಾಂಕ್ ಖರ್ಗೆ( ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಕಳೆದ ಎರಡು ವರ್ಷಗಳಲ್ಲಿ 2024-25 ಮತ್ತು 2025-26 ರಲ್ಲಿ 3054-ಲಿಂಕ್ ಡಾಕ್ಯೂಮೆಂಟ್, 3054-ಟಾಸ್ಕ್ ಫೋರ್ಸ್, 5054-ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ, ಎಸ್.ಸಿ.ಪಿ. ಮತ್ತು

ಟಿ.ಎಸ್.ಪಿ. ಕಾರ್ಯಕ್ರಮ, ಸಿಎಂ.ಐ.ಡಿ.ಪಿ. ಅದೆಲ್ಲವೂ ಸೇರಿ ಕೋಲಾರಕ್ಕೆ ಸುಮಾರು 231.89 ಕೋಟಿ ರೂಪಾಯಿಗಳನ್ನು ನಾವು ನೀಡಿದ್ದೇವೆ. ಅದರಲ್ಲಿ ಏನು ಬಿಲ್‌ಗಳು ಬಂದಿವೆ ಅಥವಾ ಸುಮಾರು 80 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆಯನ್ನು ಮಾಡಿದ್ದೇವೆ. ಅದನ್ನು ಹೊರತುಪಡಿಸಿ, ಮೊನ್ನೆ ಕೆಲವು ರಸ್ತೆಗಳ ಬಗ್ಗೆ ನಮ್ಮ ಸಾರ್ವಜನಿಕರ ಅಹವಾಲುಗಳಲ್ಲಿ ಬಂದಿವೆ. ಇವುಗಳನ್ನು ಹೊರತುಪಡಿಸಿದರೂ ಕೂಡ, besides the regular funds ನಮಗೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಇರಬಹುದು, ಬೇರೆ comprehensive plan ಗಳಲ್ಲಿ ಇರಬಹುದು. ಇದರ ಬಗ್ಗೆ ನೀವು ಅನುಬಂಧ-1 ರಲ್ಲಿ ನೋಡಿದರೆ ಅದರಲ್ಲೂ ಕೂಡ local works ಸುಮಾರು 700 ಕೋಟಿ ರೂಪಾಯಿಗಳಾಗಿದೆ. ಆದರೆ, ಯಾವುದಾದರೂ specific works ಅಥವಾ specific ಗ್ರಾಮೀಣ ರಸ್ತೆಗಳಲ್ಲಿ ಇರಬಹುದು, ಊರಿನಲ್ಲಿ ಇರಬಹುದು ಅಥವಾ connecting roads for habitations ಇರಬಹುದು, ಅಂತಹವುಗಳು ಯಾವುದಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ we will get that also done. ಏಕೆಂದರೆ, ಮಾನ್ಯ ಸದಸ್ಯರು ಇಡೀ ಜಿಲ್ಲೆಗೆ ಸಂಬಂಧಪಟ್ಟಂತೆ ಕೇಳಿದ್ದಾರೆ. Specific ಆಗಿ ಯಾವುದಾದರೂ ಇಂತಹ ಕಾಮಗಾರಿ ಆಗಬೇಕೆಂದರೆ ಅದನ್ನು ಪರಿಶೀಲನೆ ಮಾಡಿ ಮಾಡಿಕೊಡುತ್ತೇವೆ.

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಉತ್ತರದಲ್ಲಿಯೇ 238 ರೂಪಾಯಿಗಳನ್ನು ಕೊಟ್ಟಿದ್ದು, ಅದರಲ್ಲಿ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದರೆ one-third ಖರ್ಚು ಮಾಡಿದ್ದಾರೆ. ಅಂದರೆ, ಬಿಡುಗಡೆಯಾದಂತಹ ಹಣವನ್ನು ನಮಗೆ ರೋಚಕವಾಗಿ ಹೇಳಿ ಎಷ್ಟು ಕಾಮಗಾರಿ ಮಾಡಿದ್ದೇವೆ ಎನ್ನುವುದರಲ್ಲಿ one-third ತೋರಿಸುತ್ತಿದ್ದಾರೆ. ಹಾಗಾಗಿ, ನೀವು one-third ತೋರಿಸಿ, 238 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದರಲ್ಲಿ ಏನು ಅರ್ಥವಿಲ್ಲ. ನಾನು ಕೇಳುತ್ತಿರುವುದೇನೆಂದರೆ ನೀವು specific ಆಗಿ ಇಂತಹ ಬದಲಾವಣೆ ಮಾಡಿ ಎನ್ನುವುದರ ಬದಲು ಈ 238 ಕೋಟಿ ರೂಪಾಯಿಗಳನ್ನು ಸಂಪೂರ್ಣವಾಗಿ ಬಳಕೆ ಮಾಡಿದರೆ ಎಲ್ಲವೂ ಸರಿ ಹೋಗುತ್ತದೆ ಅಲ್ಲವೇ?

**ಶ್ರೀ ಪ್ರಿಯಾಂಕ್ ಖರ್ಗೆ:-** ಕಳೆದ ಎರಡು ವರ್ಷಗಳಲ್ಲಿ 231 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಿಲ್‌ಗಳು ಬಂದಂತೆ ನಾವು ಮಾಡುತ್ತಿದ್ದೇವೆ. ಈಗ ಬಿಡುಗಡೆಯಾದ ಹಣವನ್ನು ಕಾಮಗಾರಿ ಮುಗಿಯಬೇಕಾದರೆ, ನಿಮಗೆ ಗೊತ್ತಿರುವ ಹಾಗೆ K.R.I.D.L. ನಲ್ಲಿ ಕೊಟ್ಟರೆ ಸ್ವಲ್ಪ percentage ನಾವು ಮುಂಗಡವಾಗಿ ಕೊಡಬೇಕಾಗುತ್ತದೆ ಮತ್ತು ನಾವು ಟೆಂಡರ್ ಹಣವನ್ನು ನಾವು ಬಿಡುಗಡೆ ಮಾಡಬೇಕಾಗುತ್ತದೆ. As and when bills are raised we are releasing. In fact, ಈಗಲೂ ಕೂಡ ನೀವು ಕೇಳಿದ ಹಾಗೆ ಮೊನ್ನೆ C.M.I.D.P. ನಲ್ಲಿ 250 ಕೋಟಿ ರೂಪಾಯಿಗಳು ನಮ್ಮ ಹತ್ತಿರ ಇದೆ. ಅದನ್ನು ಕೂಡ ಬಿಲ್‌ಗಳು ಬಂದರೆ ನಮ್ಮ ಕೋಲಾರ ಸಿ.ಇ.ಓ ರವರು ಕಳುಹಿಸಿಕೊಟ್ಟರೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ. ಅದರಲ್ಲಿ ಎರಡು ಮಾತಿಲ್ಲ. ತಾವು ಹೇಳುತ್ತಿರುವ ವಿಷಯದ ಬಗ್ಗೆ ಇನ್ನು ಯಾವುದಾದರೂ ನಿಮಗೆ ಹೆಚ್ಚಿನ ರಸ್ತೆ ಬೇಕಾಗಿದ್ದರೆ ಅಥವಾ ಯಾವುದಾದರೂ particular habitation ಗೆ ಬಹಳಷ್ಟು ಹೋಗಲಿಕ್ಕೆ ಬರಲಿಕ್ಕೆ ತೊಂದರೆಯಾಗುತ್ತಿದ್ದರೆ we will get it done. ಈ ಕಾಮಗಾರಿಗಳು ಆಗುತ್ತಿದ್ದಂತೆ ನಮಗೆ ಹಣದ ಕೊರತೆ ಇರುವುದಿಲ್ಲ. ಈ ಹಣವನ್ನು ಪಾವತಿ ಮಾಡುತ್ತೇವೆ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೆ, ನಾನು ಒಂದು ಪಟ್ಟಿಯನ್ನು ಅವರ ಹತ್ತಿರ ತೆಗೆದುಕೊಳ್ಳುತ್ತೇನೆ. ಅಂದರೆ, ನನಗೆ ಏನಾಗಬೇಕೋ ಅದನ್ನು specific ಆಗಿ ಹೇಳುವಂತಹ ಕೆಲಸವನ್ನು ನಾನು ಮಾಡುತ್ತೇನೆ. ನನ್ನ ವಿನಂತಿ ಏನೆಂದರೆ ಬೆಂಗಳೂರಿನಿಂದ ಕೇವಲ 60-70 ಕಿ.ಮೀ. ದೂರದಲ್ಲಿ ಇರುವಂತಹದ್ದಕ್ಕೆ ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆಯವರು ಒಮ್ಮೆಯೂ ಕೂಡ ಭೇಟಿ ಕೊಟ್ಟಿರುವುದಿಲ್ಲ. ಒಮ್ಮೆ ಭೇಟಿ ಕೊಟ್ಟು ನಮ್ಮ ಜೊತೆ ಸುತ್ತಾಡಿ ಬಂದುಬಿಟ್ಟರೆ ರಸ್ತೆಗಳು ಎಷ್ಟು ಚನ್ನಾಗಿವೆ ಎನ್ನುವುದು ಅವರಿಗೆ ಗೊತ್ತಾಗುತ್ತದೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾಲೂರು ಯಾವ ಜಿಲ್ಲೆಯಲ್ಲಿದೆ?

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾಲೂರು ಕೋಲಾರ ಜಿಲ್ಲೆಯಲ್ಲಿದೆ. ಅದರೆ, ಇಡೀ ಕೋಲಾರ ಜಿಲ್ಲೆಯನ್ನು ಒಂದು ಬಾರಿ ನೋಡಬೇಕಲ್ಲವೇ?

**ಶ್ರೀ ಪ್ರಿಯಾಂಕ್ ಖರ್ಗೆ:-** ಆದರೆ, ಬಂದೇ ಇಲ್ಲವೆಂದು ಹೇಳುವುದು ಸರಿಯಲ್ಲ.

**ಶ್ರೀ ಕೇಶವ ಪ್ರಸಾದ್ ಎಸ್.:–** ತಾವು ಆ ಕಡೆ ಬರಬೇಕು. ಅಂದರೆ, ನಾನು ಹೇಳುವಂತಹದ್ದು ಏನೆಂದರೆ ಪಕ್ಕದಲ್ಲಿ ಇರುವಂತಹದ್ದು.

**ಶ್ರೀ ಪ್ರಿಯಾಂಕ್ ಖರ್ಗೆ:–** ನಾವು ಆ ಕಡೆ ಬಂದಿರುತ್ತೇವೆ.

**ಸಭಾಪತಿಯವರು:–** ಶ್ರೀಯುತ ಪ್ರಿಯಾಂಕ್ ಖರ್ಗೆಯವರೆ, ಅವರ ಪ್ಲಾನ್ ಬೇರೆ ಇರುತ್ತದೆ. ಅವರ ಜೊತೆ ಹೋಗಿ ಬನ್ನಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ನಾನು ಅದೇ ವಿಚಾರವಾಗಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಿಗೆ ಪಾಯಿಂಟ್–ಎ ನಿಂದ ಪಾಯಿಂಟ್–ಬಿ ಗೆ ರಸ್ತೆ ಬೇಕೆಂದರೆ I have committed and will give it. That is my job. ನಾನು ಇದರ ಬಗ್ಗೆ ಪ್ರಾಮಾಣಿಕವಾಗಿ ಹೇಳುತ್ತೇನೆ. ಈಗ 10 ಕೆಲಸಗಳು ಆಗುವುದಿಲ್ಲ. ಈ ಬಾರಿ 3 ಕೆಲಸಗಳಾಗುತ್ತದೆ ಎಂದು ನಾನು ಪ್ರಮಾಣಿಕವಾಗಿ ಹೇಳುತ್ತೇನೆ. ಅದರಲ್ಲಿ ಸುಳ್ಳು ಹೇಳುವುದು ಏನಿದೆ? ನಂತರ ಇದೇ ವಿಷಯವಾಗಿ ಕೇಳದರೆ ನಾನು ಇಲ್ಲಿಯೇ ಬಂದು ಉತ್ತರ ಕೊಡಬೇಕಲ್ಲವೇ?

**ಶ್ರೀ ಕೇಶವ ಪ್ರಸಾದ್ ಎಸ್. :–** ತಾವು ಈ ಜಿಲ್ಲೆಗೆ ಒಂದು ಬಾರಿ ಬಂದರೆ, ಅ ಭಾಗದ ರಸ್ತೆಗಳನ್ನು ನಾನು ನಿಮಗೆ ತೋರಿಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ತಾವು ದಯವಿಟ್ಟು, ಈ ಬಗ್ಗೆ ಒಂದು ಪಟ್ಟಿಯನ್ನು ಕೊಡಿ.

**ಶ್ರೀ ಕೇಶವ ಪ್ರಸಾದ್ ಎಸ್.:–** ಆಗಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

## ಪ್ರಶ್ನೆ ಸಂಖ್ಯೆ 552

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಬೇಜವಾಬ್ದಾರಿಯ ಉತ್ತರವನ್ನು ಕೊಟ್ಟಿದ್ದಾರೆಂದು ಅವರ ಉತ್ತರದಲ್ಲಿ ಎದ್ದು ಕಾಣುತ್ತದೆ.

**ಸಭಾಪತಿಯವರು:–** ಬೇಜವಾಬ್ದಾರಿ ಎಂದು ಹೇಳಬೇಡಿ.

**ಡಾ॥ ಧನಂಜಯ ಸರ್ಜಿ:–** ಕೋಟ್ಯಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡುವುದರ ಜೊತೆಗೆ ಶ್ರಮವನ್ನು ಹಾಕಿ ಜಯಂತಿಗಳನ್ನು ಆಚರಣೆ ಮಾಡುವಂತಹ ಉದ್ದೇಶ ಈಡೇರುತ್ತಿಲ್ಲವೆನ್ನುವುದು ನನ್ನ ಭಾವನೆಯಾಗಿದೆ. ಅದಕ್ಕೆ ಸರಿಯಾದ ಉತ್ತರ ನನಗೆ ಸಿಕ್ಕಿರುವುದಿಲ್ಲ. ಅವರು ಏನು ಹೇಳುತ್ತಾರೆಂದರೆ ಮಹಾಪುರಷರ ತತ್ವ ಸಿದ್ಧಾಂತಗಳನ್ನು ಹಾಗೂ ಅವರ ಬದುಕಿನ ಜೀವನದ ಆದರ್ಶಗಳನ್ನು ಸಮಾಜದ ಜನರಿಗೆ ತಿಳಿಸಿ, ಅರಿವನ್ನು ಉಂಟು ಮಾಡುವುದಕ್ಕಾಗಿ ಎಂದು ಹೇಳಿದ್ದಾರೆ. ಅಂದರೆ ಸಮಾಜದ ಜನರು ಎಂದರೆ ಯಾರು? ನೀರಿಗಿಲ್ಲದ ಜಾತಿ, ಕೂಳಿಗಿಲ್ಲದ ಜಾತಿ, ವೇಳೆಗಿಲ್ಲದ ಜಾತಿ, ನಿನಗೆ ಏತಕ್ಕೆ ಹೇಳು ಹುಲುಮಾನವ. ನೆಲ ಒಂದೇ, ಜಲ ಒಂದೇ, ಅಲೆಯುವ ಹಾದಿ ಒಂದೇ, ನೆಲಸಿದ ಭೂಮಿಯೂ ಒಂದೇ, ಸೇವಿಸುವ ಗಾಳಿಯು ಒಂದೇ , ತಾಯಿಯ ಪ್ರೀತಿಯೂ ಒಂದೇ, ಹಸಿವು, ನೀರಡಿಕೆ ಒಂದೇ, ಹುಟ್ಟು ಒಂದೇ, ಸಾವು ಒಂದೇ. ಎಲ್ಲವೂ ಒಂದಿರಲು....

**ಸಭಾಪತಿಯವರು:–** ನೀವು ಪ್ರಶ್ನೆಯನ್ನು ಕೇಳಿ.

**ಡಾ॥ ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಜಾತಿ ಬೇಧದ ಮಂಗನಾಟ ಎಂದು ಉಲ್ಲೇಖವನ್ನು ನಾವು ನೋಡುತ್ತೇವೆ.

(ಮುಂದು)

**ಶ್ರೀ ಧನಂಜಯ ಸರ್ಜಿ (ಮುಂದು):–**

ಮಹಾಪುರುಷರ ಸಿದ್ಧಾಂತಗಳು ಎಂದು ಅವರು ಹೇಳಿದ್ದಾರೆ. ಅದು ಸಮಾಜದವರಿಗೆ. ಅಂದರೆ ಶಿವಾಜಿ ಮಹಾರಾಜರು, ಬಸವಣ್ಣನವರು, ಕನಕದಾಸರು, ವಾಲ್ಮೀಕಿಯವರನ್ನು ಯಾವ ಸಮಾಜಕ್ಕೆ ಸೇರಿಸುತ್ತಿದ್ದೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

**ಶ್ರೀ ಶಿವರಾಜ್ ಎಸ್. ತಂಗಡಗಿ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಸಚಿವರು):–** ಮಾನ್ಯ ಸಭಾಪತಿಯವರೆ, ನಾನು ಇಲ್ಲಿ ಜಾತಿ ಹೆಸರನ್ನೇ ಉಲ್ಲೇಖಿಸಿರುವುದಿಲ್ಲ. ಬೇಜವಾಬ್ದಾರಿ ಎಂದು ಹೇಗೆ ಹೇಳುತ್ತಾರೆ? ಸಮಾಜ ಎಂದರೆ ಎಲ್ಲಾ ಸಮಾಜವೂ ಬರುತ್ತದೆ. ಸಮಾಜ ಎಂದರೆ ಯಾವುದಾದರೊಂದು ಸಮಾಜವನ್ನು ಉತ್ತರದಲ್ಲಿ ಉಲ್ಲೇಖಿಸಿದ್ದೇನೆಯೇ? ಬೇಜವಾಬ್ದಾರಿ ಎಂದು ಹೇಗೆ ಹೇಳುತ್ತಾರೆ? ಮಾನ್ಯ ಸದಸ್ಯರು ಮೊದಲು ಅವರ ಮಾತನ್ನು ಹಿಂಪಡೆದುಕೊಳ್ಳಬೇಕು. ನಾನು ಸಮಾಜ ಎಂದು ಹೇಳಿದ್ದೇನೆ. ಅದರಲ್ಲಿ ಎಲ್ಲರೂ ಬರುತ್ತಾರೆ. ಅದರಲ್ಲಿ ಏನಾದರೂ ಜಾತಿಭೇದ ಮಾಡಿದ್ದೇನೆಯೇ? ಬೇಜವಾಬ್ದಾರಿಯಾಗಿ ಅವರು ಪ್ರಶ್ನೆಯನ್ನು ಕೇಳಬಾರದು. ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ.

**ಡಾ: ಧನಂಜಯ ಸರ್ಜಿ:–** ಇಲ್ಲ, ಇಲ್ಲ... ಮಾನ್ಯ ಸಚಿವರೆ.

**ಸಭಾಪತಿಯವರು:–** ಮಾನ್ಯ ಸರ್ಜಿಯವರೆ, ಕುಳಿತುಕೊಳ್ಳಿ. ಮಾನ್ಯ ಸಚಿವರೆ, ನೀವು ಉತ್ತರ ಹೇಳಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೆ, ಅವರ ಮಾತು ಸರಿಯಾಗಿರಬೇಕು, ಬೇಜವಾಬ್ದಾರಿತನದಿಂದಲ್ಲ. ಅವರಿಗೆ ಸಮಾಜ ಎಂದರೆ ಅರ್ಥ ಗೊತ್ತಿಲ್ಲ. ಸಮಾಜ ಎಂದರೆ ಎಲ್ಲಾ ಜಾತಿಗಳೂ ಸೇರುತ್ತವೆ. ಎಲ್ಲರೂ ಒಳಪಡುತ್ತೇವೆ. ಮಹಾಪುರುಷರ ಜಯಂತಿ ಏಕೆ ಮಾಡುತ್ತಿದ್ದೇವೆ? ಇವತ್ತು ಸರ್ಕಾರದಿಂದ ಮಹಾಪುರುಷರ ಜಯಂತಿ ಮಾಡುತ್ತಿರುವುದು ಈಗಿನ ಯುವಕರಿಗೆ ಆ ಮಹಾಪುರುಷರ ಬಗ್ಗೆ ತಿಳಿಯಲಿ ಎನ್ನುವ ಕಾರಣದಿಂದ. ಇನ್ನೊಂದು ಕಡೆ ಈಗಿನ ಯುವಕರಿಗೆ ಕೆಲವು ಮಹಾಪುರುಷರ ಬಗ್ಗೆ ಅರಿವೇ ಇರುವುದಿಲ್ಲ. ಅವರಿಗೆ ಮಾಹಿತಿ ತಿಳಿಸುವ ಕೆಲಸವನ್ನು ಮಾಡುವುದಕ್ಕೆ ಉಪನ್ಯಾಸಕರನ್ನು ಕರೆಸುತ್ತೇವೆ. ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ, ರಾಜ್ಯ ಮಟ್ಟಗಳಲ್ಲಿ ಮಹಾಪುರುಷರ ಇತಿಹಾಸವನ್ನು, ಅವರು ನಡೆದು ಬಂದ ಹಾದಿಯನ್ನು ತಿಳಿಸುವಂಥ ಕೆಲಸವನ್ನು ಮಾಡುವುದೇ ಜಯಂತಿ ಆಚರಣೆಯ ವೈಶಿಷ್ಟ್ಯವಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಎಷ್ಟೋ ಮಂದಿ ಯುವಕರಿಗೆ ಎಂ.ಜಿ. ರೋಡ್‌ನ full form ಗೊತ್ತಿರುವುದಿಲ್ಲ. ನೀವು ಹೇಳುವುದು ಸರಿಯಿದೆ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ನಿಶ್ಚಿತವಾಗಲೂ.. ಎಷ್ಟೋ ಯುವಕರಿಗೆ ಮಹಾಪುರುಷರ ಬಗ್ಗೆ ಗೊತ್ತಿರುವುದಿಲ್ಲ. ಅದಕ್ಕೆ ನಾನು ಇದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಸಮಾಜ ಎಂದರೆ ನಾನು ಯಾವುದೋ ಒಂದು ಸಮಾಜ ಉಲ್ಲೇಖ ಮಾಡಿದ್ದೇನೆಯೇ? ಇಲ್ಲ. ಸಮಾಜ ಎಂದರೆ ಎಲ್ಲರೂ ಬರುತ್ತಾರೆ. ಮಾನ್ಯ ಡಾ:ಧನಂಜಯ ಸರ್ಜಿಯವರೆ, ಆ ರೀತಿಯ ಬೇಜವಾಬ್ದಾರಿ ಹೇಳಿಕೆಯನ್ನು ನೀವು ಕೊಡಬೇಡಿ. ಏಕೆಂದರೆ ನಾನು ಇದನ್ನು ಒಪ್ಪುವುದಿಲ್ಲ. ೩೩ ಜಯಂತಿಗಳನ್ನು ನಾವು ಆಚರಣೆ ಮಾಡಿದ್ದೇವೆ. ನಿಮಗೆ ಯಾವ ಜಯಂತಿಯ ಬಗ್ಗೆ ಬೇಕೋ ಕೇಳಿ, ಅದರ ಪೂರ್ಣವಾದ ವಿವರಣೆಯನ್ನು ಕೊಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಚಿವರೆ, ಯಾವುದನ್ನು ಬೇಕಾದರೂ ಮಾಡಿ. ಆದರೆ ಬಳ್ಳಾರಿಯ ರೀತಿ ಮಾತ್ರ ಮಾಡಬೇಡಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಬಳ್ಳಾರಿಯಲ್ಲಿ ಜಯಂತಿ ಮಾಡಿದ್ದು ನಿಮ್ಮ ಪಕ್ಷದ ತೊಂದರೆಯಿಂದ. ಯಾಕೆಂದು ಹೇಳುತ್ತೇನೆ ಕೇಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಅದಕ್ಕೆ ನಿಮ್ಮ ಪಕ್ಷದ ಕಾರ್ಯಕರ್ತನ ಹೆಣವನ್ನು ಬೀಳಿಸಿದ್ದೇ? ನಿಮ್ಮ ಪಾರ್ಟಿಯ ಬಗ್ಗೆ ನಾನು ಕೇಳುತ್ತಿಲ್ಲ. ಒಂದು ಸರ್ಕಾರಕ್ಕೆ ನಾನು ಕೇಳುತ್ತಿದ್ದೇನೆ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಭಾರತಿ ಶೆಟ್ಟಿಯವರೆ, ನಾನು ಪಕ್ಕದ ಜಿಲ್ಲೆಯವನು. ಈ ಕದನ ಏಕಾಯಿತು? ಬ್ಯಾನರ್ ಕಟ್ಟುವ ಜಾಗದಲ್ಲಿಯೇ ಜಯಂತಿಯ ಬ್ಯಾನರ್ ಕಟ್ಟಿದ್ದೇವೆ. ಅದೇನು ನಿಮ್ಮ ಮೇಲೆ ಬಂದು ಬಿದ್ದಿತ್ತಾ?

**ಶ್ರೀಮತಿ ಭಾರತಿ ಶೆಟ್ಟಿ:–** ಬ್ಯಾನರ್ ಅನ್ನು ಎಲ್ಲಿ ಕಟ್ಟಬೇಕು? ಯಾವ ಉದ್ದೇಶದಿಂದ ಕಟ್ಟಿದ್ದೀರಿ? ಅವರ ಮನೆಯ ಮುಂದೆ ಏಕೆ ಕಟ್ಟಬೇಕು?

**ಶ್ರೀ ಶಿವರಾಜ್ ಎಸ್. ತಂಗಡಗಿ:–** ನಿಮ್ಮ ಮೋದಿಯವರ ಬ್ಯಾನರ್ ಆದರೆ ಕಟ್ಟಬಹುದೇ? ಮಹಾಪುರುಷರ ಬ್ಯಾನರ್ ಅನ್ನು ಕಟ್ಟಬಾರದೇ?

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:–** ವಾಲ್ಮೀಕಿ ಜನಾಂಗದವರ ವೋಟ್ ಬೇಕು. ಆದರೆ ವಾಲ್ಮೀಕಿಯವರ ಬ್ಯಾನರ್ ನಿಮಗೆ ಬೇಡವೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಭಾರತಿ ಶೆಟ್ಟಿಯವರೆ, ಮಾನ್ಯ ಹೇಮಲತಾ ನಾಯಕ್ ಅವರೇ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ರಾಮ ಬೇಕು, ರಾಮಾಯಣ ಬೇಕು. ಆದರೆ ಅದನ್ನು ಬರೆದ ವಾಲ್ಮೀಕಿಯವರು ಬೇಡವೇ?

**(ಗೊಂದಲ)**

**ಸಭಾಪತಿಯವರು (ಎದ್ದು ನಿಂತು):–** ಮಾನ್ಯ ಭಾರತಿ ಶೆಟ್ಟಿಯವರೆ, ಯಾರು ಪ್ರಶ್ನೆ ಕೇಳಿರುತ್ತಾರೆಯೋ ಅವರು ಮಾತ್ರ ಮಾತನಾಡಬೇಕು. ನೀವೆಲ್ಲರೂ ಎದ್ದು ನಿಂತರೆ ಹೇಗೆ? ಹಾಗೆಲ್ಲಾ ಮಾತನಾಡಬೇಡಿ. ಸ್ವಲ್ಪವಾದರೂ ತಿಳುವಳಿಕೆ ಬೇಡವೇ?

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನ್ನ ಭಾವನೆಯನ್ನು ಅರ್ಥ ಮಾಡಿಕೊಳ್ಳಲಿಲ್ಲ. ಇಂದಿನ ಮಕ್ಕಳು ಕೇವಲ ಮುಂದಿನ ಪ್ರಜೆಗಳಲ್ಲ, ದೇಶದ ಆಸ್ತಿ ಎಂದು ನಾನು ಉಲ್ಲೇಖ ಮಾಡಿದ್ದೆನು. ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಮಹಾಪುರುಷರ ಬಗ್ಗೆ ತಿಳಿಸಬೇಕೆಂದು ನೀವೇ ಹೇಳಿದ್ದಿರಿ. ಅದಕ್ಕೆ ಪೂರಕವಾಗಿ ಶಾಲಾ–ಕಾಲೇಜುಗಳಲ್ಲಿ ಏನು ಮಾಡುತ್ತೀರಿ ಎಂದು ನಾನು ಕೇಳಿದ್ದೆನು. ಅದಕ್ಕೆ ಅವರು ಸಾಧಕ–ಬಾಧಕಗಳನ್ನು ಪರಿಶೀಲಿಸಲಾಗುವುದು ಎಂದು ಅವರು ಉತ್ತರವನ್ನು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ೮, ೯ ಮತ್ತು 10ನೇ ತರಗತಿಗಳ ವಿದ್ಯಾರ್ಥಿಗಳಿದ್ದಾರೆ. ಒಂದು ಬ್ಯಾಚ್‌ನಲ್ಲಿ ಸುಮಾರು 10 ಲಕ್ಷ ಜನರಿದ್ದಾರೆ. ೮, ೯ ಮತ್ತು 10ನೇ ತರಗತಿಗಳ ವಿದ್ಯಾರ್ಥಿಗಳು ಸೇರಿದರೆ ಸುಮಾರು ೩೦ ಲಕ್ಷ ಜನ ಆಗುತ್ತಾರೆ. ಅವರಿಗೆಲ್ಲಾ ೩೦ ಜನ

ಮಹಾಪುರುಷರ ಜಯಂತಿಯ ಬಗ್ಗೆ ಪುಸ್ತಕದ ಪ್ರತಿಗಳನ್ನು ನೀಡಿದರೆ almost 1 ಕೋಟಿ ಜನರ ಮನೆಗಳಿಗೆ ಅದು ತಲುಪುತ್ತದೆ.

ಶಾಲಾ ಕಾಲೇಜುಗಳಲ್ಲಿ ಆಶುಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹೀಗೆ ಮಕ್ಕಳನ್ನು involve ಮಾಡಿದರೆ ಇಡೀ ಕುಟುಂಬವೇ involve ಆಗುತ್ತದೆ. ಈ ರೀತಿ ಏಕೆ ಶಾಲಾ-ಕಾಲೇಜುಗಳಲ್ಲಿ ನಾವು ಮಾಡಬಾರದು ಎಂದು ಕೇಳಿದ್ದಕ್ಕೆ ಪರಿಶೀಲಿಸಲಾಗುವುದು ಎಂದು ಹೇಳುತ್ತಾರೆ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಿಗೆ ಜವಾಬ್ದಾರಿಯಿಂದ ಕೂಡಿದ ಉತ್ತರವನ್ನು ನೀಡಿಲ್ಲ ಎಂದು ಹೇಳಿದೆನು.

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಡಾಕ್ಟರ್ ಈಗ ಸರಿಯಾದ ದಾರಿಗೆ ಬಂದರು. ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ. ನಿಜವಾಗಲೂ ಅವಶ್ಯಕತೆ ಇದೆ. ಇವತ್ತಿನ ಯುವಕರಿಗೆ, ಇವತ್ತಿನ ಮಕ್ಕಳಿಗೆ ಮಹಾಪುರುಷರ ಇತಿಹಾಸವನ್ನು ಹೇಳಬೇಕಾದ ಅವಶ್ಯಕತೆ ಇದೆ. ಅದಕ್ಕಾಗಿ ನಾನು ಸಾಧಕ-ಬಾಧಕಗಳನ್ನು ಪರಿಶೀಲನೆ ಮಾಡುತ್ತೇನೆಂದು ನಾನು ಹೇಳಿದ್ದೇನೆ. ಅದು ನಿಮ್ಮ ಬಾಯಿಂದ ಬರಬೇಕು. ಅಕಸ್ಮಾತ್ ನಮ್ಮ ಬಾಯಿಂದ ಬಂದರೆ ಶಾಲೆಯೊಳಗೂ ಜಾತಿಬೀಜವನ್ನು ಕಾಂಗ್ರೆಸ್‌ನವರು ಬಿತ್ತುತ್ತಿದ್ದಾರೆ ಎಂದು ಮಾತನಾಡುವುದಕ್ಕೆ ಪ್ರಾರಂಭ ಮಾಡಿಬಿಡುತ್ತೀರಿ. ಅದಾಗಬಾರದು ಎನ್ನುವ ಕಾರಣಕ್ಕಾಗಿ ನಿಮ್ಮ ಬಾಯಿಂದ ಬಂದದ್ದು ಬಹಳ ಸಂತೋಷ.

ನಿಶ್ಚಿತವಾಗಿಯೂ ಶಿಕ್ಷಣ ಇಲಾಖೆಯವರೊಂದಿಗೆ ಮಾತನಾಡಿ ಮಹಾಪುರುಷರ ಪುಸ್ತಕವನ್ನು ಪ್ರಿಂಟ್ ಮಾಡಿಸಿ ಮಕ್ಕಳಿಗೆ ವಿತರಣೆ ಮಾಡುವಂಥ ಕಾರ್ಯಕ್ಕೆ ನನ್ನ ಒಪ್ಪಿಗೆಯೂ ಇದೆ. ಇದು ಬಹಳ ಸಂತೋಷದ ವಿಚಾರ. ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ. ಇವತ್ತಿನ ಮಕ್ಕಳಿಗೆ ಮಹಾಪುರುಷರ ಇತಿಹಾಸದ ಬಗ್ಗೆ ತಿಳಿಸಬೇಕಾದ ಅವಶ್ಯಕತೆ ಇದೆ. ಆ ಕೆಲಸವನ್ನು ಮಾಡಲು ನಮ್ಮ ಇಲಾಖೆಯು ಮುಂದಾಗುತ್ತದೆ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ನನ್ನ ಮನವಿಯಿಷ್ಟೆ. ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾರ್ಯಕ್ರಮಗಳಾಗುತ್ತಿವೆ. ಸರ್ಕಾರಿ ಅಧಿಕಾರಿಗಳು ಮತ್ತು ಕೆಲವು ಮುಖಂಡರನ್ನೊಳಗೊಂಡಂತೆ ಸರಾಸರಿ ೫೦ ರಿಂದ ೧೦೦ ಜನ ಇರುತ್ತಾರೆ. ಅದುವೇ ವಿಪರ್ಯಾಸ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ನನ್ನ ಮನವಿಯೇನೆಂದರೆ ಮಕ್ಕಳಿಗೆ ವಾರ್ಷಿಕ ಕ್ಯಾಲೆಂಡರ್ ಮಾಡಿ ೮ನೇ ತರಗತಿಗೆ ೧೦ ಕಾರ್ಯಕ್ರಮಗಳು, ೯ನೇ ತರಗತಿ ೧೦ ಕಾರ್ಯಕ್ರಮಗಳು ಮತ್ತು ೧೦ನೇ ತರಗತಿ ೧೦

ಕಾರ್ಯಕ್ರಮಗಳು – ಹೀಗೆ ಜಯಂತಿ ಕಾರ್ಯಕ್ರಮಗಳನ್ನು ಮಾಡಿ ಒಂದೊಂದು ಪ್ರತಿಯನ್ನು ಕೊಡುವುದರಿಂದ…

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸರ್ಜಿಯವರೆ, ಈಗ ಬಿಸಿಯೂಟದಿಂದ ಪ್ರಾರಂಭಿಸಿ ಶಾಲಾ ಶಿಕ್ಷಕರೇ ಕೂರುವುದಿಲ್ಲ. ಈ ಜಯಂತಿಗಳಿಗೆ ಅವರನ್ನು ಭಾಗವಹಿಸಿ ಎಂದರೆ ಒಂದು ವರ್ಷದಲ್ಲಿ 33 ಜಯಂತಿಗಳನ್ನು ಆಚರಿಸುತ್ತೇವೆ. ಮಕ್ಕಳನ್ನು ಶಾಲೆಗೆ ಕರೆಯುವುದು ಬೇಡ. ನೀವು ಜನ ಸೇರುವುದಿಲ್ಲ ಎಂದು ಹೇಳಿದಿರಿ. ನಾವೇನು ಮಾಡುವುದಕ್ಕಾಗುತ್ತದೆ? ಸಭೆ ಮಾಡುತ್ತೇವೆ, ಸಮಾರಂಭ ಮಾಡುತ್ತೇವೆ. ನಾನು ಹೋಗುತ್ತೇನೆ, ಇತರ ಸಚಿವರೂ ಭಾಗವಹಿಸುತ್ತಾರೆ. ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಸ್ಥಳೀಯ ಶಾಸಕರು ಭಾಗವಹಿಸುತ್ತಾರೆ. ಎಷ್ಟು ಜನರನ್ನು ಕರೆಯಬೇಕೋ ಕರೆದಿದ್ದೇವೆ. ಬರುವುದು ಬಿಡುವುದು ಅವರಿಗೆ ಸೇರಿರುವುದು. ನಾವು ನಮ್ಮ ಪ್ರಯತ್ನ ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅವರು ಸಭೆ ಮಾಡುತ್ತಾರೆ. ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳು ಸಭೆಯನ್ನು ಮಾಡುತ್ತಾರೆ. ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಮಾಡುತ್ತೇವೆ. ಆದರೆ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಬರುವುದು ಬೇಡ.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಚಿವರೆ, ನೀವು ತಪ್ಪು ತಿಳಿದುಕೊಳ್ಳುತ್ತಿದ್ದೀರಿ. ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಬರಬೇಕೆಂದು ನಾನು ಹೇಳಲಿಲ್ಲ. ಪುಸ್ತಕ ಪ್ರತಿಗಳನ್ನು ಶಾಲೆಯಲ್ಲಿ ವಿತರಿಸಬೇಕು.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಶಾಲೆಗಳಲ್ಲಿ ಮಕ್ಕಳಿಗೆ ಪುಸ್ತಕಗಳನ್ನು ವಿತರಣೆ ಮಾಡುವ ಬಗ್ಗೆ ಹಾಗೂ ಮಹಾಪುರುಷರ ಬಗ್ಗೆ ಮಾಹಿತಿಯನ್ನು ಕೊಡುವುದಕ್ಕೆ ನಿಶ್ಚಿತವಾಗಲೂ ನಮ್ಮ ಇಲಾಖೆಯು ಕ್ರಮ ವಹಿಸುತ್ತದೆ.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಚಿವರೇ, ನಾನು ಖಂಡಿತವಾಗಿಯೂ ಮಕ್ಕಳನ್ನು ಶಾಲೆಗಳಿಂದ ಕರೆದುಕೊಂಡು ಹೋಗಿ ಎಂದು ಹೇಳಲಿಲ್ಲ. ರೂ.3 ಕೋಟಿ ಖರ್ಚು ಮಾಡಿದರೆ 30 ಲಕ್ಷ ಪುಸ್ತಕಗಳನ್ನು ಮುದ್ರಿಸಿ ವಿತರಿಸಬಹುದು ಎಂದು ಹೇಳಿದೆನು.

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಚಿವರೆ, ಪುಸ್ತಕವನ್ನು ಯಥಾವತ್ತಾಗಿ ಬರೆಯಿರಿ. ಇತಿಹಾಸವನ್ನು ತಿರುಚಬೇಡಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ನಾವು ನಿಮ್ಮ ರೀತಿ ಹೊಸದಾಗಿ ಇತಿಹಾಸವನ್ನು ತಿರುಚಿ ಬರೆಯುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಪೂಜಾರ್ ಅವರೇ, ಏನ್ರೀ ನೀವು? ಮಾನ್ಯ ಸಚಿವರೆ, ಬಿಡಿ. ಉತ್ತರ ಹೇಳಬೇಡಿ. ಮುಂದಿನ ಪ್ರಶ್ನೆ ಮಾನ್ಯ ಡಿ.ಟಿ.ಶ್ರೀನಿವಾಸ್ ಅವರದ್ದು.

**ಪ್ರಶ್ನೆ ಸಂಖ್ಯೆ: 504**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಡಿ.ಟಿ.ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವುದು ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಎಂದು ಕೇಳಿದ್ದೇನೆ. ಹಿಂದುಳಿದವರನ್ನು ಸೇರಿಸಿಕೊಂಡು ನಾನು ಕೇಳಿರುವುದಿಲ್ಲ. ಹಿಂದುಳಿದ ಶಾಲೆಗಳ ಪಟ್ಟಿಯನ್ನು ನಾನು ಕೇಳಿಲ್ಲ. ನಾನು ಕೇಳಿರುವುದು ಹಿಂದುಳಿದ ಜಾತಿಗಳಲ್ಲಿರುವ ಅಲೆಮಾರಿಗಳಿಗೆ ವಸತಿ ಶಾಲೆಗಳು ಎಲ್ಲಿವೆ ಎಂದು ಕೇಳಿದ್ದೇನೆ. ಅದಕ್ಕೆ ಇಲ್ಲಿ ಪೂರ್ಣ ಪ್ರಮಾಣದ ಮಾಹಿತಿಯಿಲ್ಲ. ಜೊತೆಗೆ ಹಿಂದುಳಿದ ಅಲೆಮಾರಿಗಳು ಎಂಬುದಕ್ಕೆ ನಮ್ಮಲ್ಲಿ ಪ್ರವರ್ಗ 1 ರಡಿಯಲ್ಲಿ 95 ಜಾತಿಗಳು 376 ಉಪ ಜಾತಿಗಳಿವೆ. ಅದರಲ್ಲಿ 46 ಅಲೆಮಾರಿ, ಅರೆ ಅಲೆಮಾರಿ ಸಮಾಜಗಳಿವೆ. ಈ ಹಿಂದೆ 2018ರಿಂದ 2023ರಲ್ಲಿ ಇದ್ದಂಥ ಸರ್ಕಾರ 2 ಅಲೆಮಾರಿಗಳಿಗೆ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿತ್ತು. ಒಂದು ಪಾವಗಡದಲ್ಲಿ, ಮತ್ತೊಂದು ಹಿರಿಯೂರಲ್ಲಿ.

**(ಮುಂದು)**

(94) ದಿ.30-01-2026 5.10 ಕೆಜಿ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಮುಂದು):–**

ನಾವು ಅದಕ್ಕೆ ಜಾಗವನ್ನು ಸಹ ಗುರುತು ಮಾಡಿಕೊಟ್ಟಿದ್ದೇವೆ. ತದನಂತರದಲ್ಲಿ ಆಗಿಲ್ಲ. ಅದರ ಬಗ್ಗೆ ಏನು ಕ್ರಮಕೈಗೊಂಡಿದ್ದಾರೆ ಎಂಬುದರ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಮಾಹಿತಿಯನ್ನು ನೀಡಬೇಕು. ಜೊತೆಗೆ ಈಗಾಗಲೇ ಇಲಾಖೆಯ ವತಿಯಿಂದ ಇಡೀ ರಾಜ್ಯದಲ್ಲಿರುವ ಅಲೆಮಾರಿ ಮತ್ತು ಅರೆ ಅಲೆಮಾರಿಗಳ ಪಟ್ಟಿಯನ್ನು ಮಾಡಿದ್ದಾರೆ. ಹಾಗಾಗಿ, ನಿಖರವಾಗಿ ಇವರ ಸಂಖ್ಯೆ ಎಷ್ಟು ಇದೆ ಎಂಬುದನ್ನು ಹೇಳಬೇಕು. ನಂತರ ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲನೆಯದಾಗಿ, ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳು ಎಷ್ಟು ಎಂಬುದಾಗಿ ಪ್ರಶ್ನೆ ಕೇಳಿದ್ದಾರೆ. ಒಟ್ಟು ವಸತಿ ಶಾಲೆಗಳು ಮತ್ತು ಮೊರಾರ್ಜಿ

ದೇಸಾಯಿ ವಸತಿ ಶಾಲೆಗಳು ಎಲ್ಲಾ ಸೇರಿ 14 ಇವೆ. ಈಗ ಅದರಲ್ಲಿ ವಸತಿ ಶಾಲೆಗಳು 1ನೇ ತರಗತಿಯಿಂದ 5ನೇ ತರಗತಿಯವರೆಗೂ ಕನಿಷ್ಠ 04 ಡಿ.ದೇವರಾಜ ಅರಸು ವಸತಿ ಶಾಲೆಗಳು ಇವೆ. ಮೆಟ್ರಿಕ್ ನಂತರದ 01 ಬಾಲಕ ಮತ್ತು 02 ಬಾಲಕಿಯರ ವಿದ್ಯಾರ್ಥಿ ನಿಲಯಗಳು ಸೇರಿ 03 ವಸತಿ ನಿಲಯಗಳು ಇವೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು 06 ರಿಂದ 10ನೇ ತರಗತಿಯವರೆಗೆ KREIS (Karnataka Residential Educational Institutions Society) ನಲ್ಲಿ ಕೆಲಸ ಮಾಡುವಂತಹದ್ದು 02 ಇವೆ. ಅದರ ಜೊತೆಗೆ ಡಿ.ದೇವರಾಜ ಅರಸು ವಸತಿ ಶಾಲೆ KREIS ದ್ದು 06 ರಿಂದ 12ನೇ ತರಗತಿಯವರೆಗೆ ಓದುವಂತಹ ಮಕ್ಕಳ ವಸತಿ ನಿಲಯಗಳು 04 ಇವೆ. ಇವುಗಳನ್ನು ಕಳೆದ ವರ್ಷ ಪ್ರಾರಂಭ ಮಾಡಿದ್ದೇವೆ. ಅವುಗಳನ್ನು division ಗೆ ಒಂದು ಪ್ರಾರಂಭ ಮಾಡಿದ್ದೇವೆ. ಒಂದು ಬೆಳಗಾವಿ division ಗೆ, ಒಂದು ಕೊಪ್ಪಳ/ಗುಲ್ಬರ್ಗ division ಗೆ ಹಾಗೂ ಮೈಸೂರು ಮತ್ತು ತುಮಕೂರು division ಗಳಿಗೆ ಈ 4 ಕಡೆಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಅಲ್ಲಿ ಕನಿಷ್ಠ 911 ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡುವುದಕ್ಕೆ admission ಕೊಡುವಂತಹ ಕೆಲಸವನ್ನು ಮಾಡಿದ್ದೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗೂ ಮತ್ತು ಮಾನ್ಯ ಸಚಿವರು ಕೊಡುತ್ತಿರುವ ಉತ್ತರಕ್ಕೂ ಒಂದಕ್ಕೊಂದು ತಾಳೆಯಾಗುತ್ತಿಲ್ಲ. ನಾನು 46 ಹಿಂದುಳಿದ ಅಲೆಮಾರಿಗಳ ಬಗ್ಗೆ ಕೇಳಿದ್ದೇನೆ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, ಅಲೆಮಾರಿಗಳ ಮತ್ತು ಅರೆ ಅಲೆಮಾರಿಗಳ ಜನಾಂಗದ ಸಂಖ್ಯೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಾಡಿದ್ದು 46 ಇದೆ. ಆದರೆ, ಮಾನ್ಯ ಸದಸ್ಯರು ಅವರ ಜನಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಆ ಜನಸಂಖ್ಯೆ ಎಷ್ಟು ಎಂದು ನಮಗೆ ಇನ್ನು ಮಾಹಿತಿ ಬಂದಿರುವುದಿಲ್ಲ. ಈಗ ಶ್ರೀ ಮಧುಸೂದನ್‌ನಾಯಕ್‌ರವರ ವರದಿ ಬಂದ ಮೇಲೆ ನಮಗೆ ಪೂರ್ಣ ಪ್ರಮಾಣದ ಮಾಹಿತಿ ಸಿಗುತ್ತದೆ. ಅದಾದ ಮೇಲೆ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರತಿಯೊಂದು ಊರಿಗೆ ಹೋಗಿ ಎಲ್ಲೆಲ್ಲಿ ಅಲೆಮಾರಿಗಳು ಮತ್ತು ಅರೆ ಅಲೆಮಾರಿಗಳು ವಾಸ ಮಾಡುತ್ತಿರುವ ಬಗ್ಗೆ ಪಟ್ಟಿಯನ್ನು ಮಾಡಿಸಿದ್ದಾರೆ. ಪ್ರವರ್ಗ-1ಕ್ಕೆ 10% ಕೊಟ್ಟಿದ್ದಾರೆ. ಪ್ರವರ್ಗ-1 ರಲ್ಲಿಯೇ 376

ಜಾತಿಗಳು ಇವೆ. ಅದರಲ್ಲಿ 10% ಎಂದರೆ, ಸರಿ ಸುಮಾರು 50 ರಿಂದ 60 ಲಕ್ಷದಷ್ಟು ಜನಸಂಖ್ಯೆ ಇದೆ. ಅದರಲ್ಲಿ 46 ಅಲೆಮಾರಿಗಳು ಇವೆ. ಆದರೆ, ಸರ್ಕಾರದಲ್ಲಿ ಅಲೆಮಾರಿಗಳು ಯಾರು ಯಾರು apply ಮಾಡಿರುತ್ತಾರೆ, ಅವರಿಗೆ ನಿರಾಕರಿಸಬಾರದೆಂದು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಇತ್ತೀಚೆಗೆ ನಾನೇ KREIS ಗೆ ಖುದ್ದಾಗಿ ಭೇಟಿಕೊಟ್ಟಿದ್ದೇನೆ. ಎಷ್ಟೋ ಅರ್ಜಿಗಳನ್ನು ಅವರು ವಿಲೇ ಇಡುತ್ತಿದ್ದಾರೆ. ಏಕೆಂದರೆ, ಅದರ ಜೊತೆಗೆ ಬರಿ ಅಲೆಮಾರಿ, ಅರೆ ಅಲೆಮಾರಿ ಎಂದು ಹಾಕಿಲ್ಲ. ಅದರೆ ಜೊತೆಗೆ ಹಿಂದುಳಿದವರು ಎಂದು ಹಾಕಿದ್ದಾರೆ. ಅಂತಹ ಸಂದರ್ಭದಲ್ಲಿ ಅವರು ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರ ನೆಲೆ ಇಲ್ಲದವರಿಗೆ ನೆಲೆ ಕೊಡಬೇಕಲ್ಲವೇ? ಅವರಿಗೆ ನೆಲೆ ಕೊಡಬೇಕು ಎಂದರೆ, ಬಂದಿರುವಂತಹ ಎಲ್ಲಾ ಅರ್ಜಿಗಳಿಗೆ ಶಿಕ್ಷಣಕ್ಕೆ ಮತ್ತು ವಸತಿಗೆ ಅವಕಾಶ ಕಲ್ಪಸಿ ಕೊಡಬೇಕು. ಇವತ್ತು KREIS ನಲ್ಲಿ ಆ ಕೆಲಸ ಆಗುತ್ತಿಲ್ಲ. ಅದರ ಜೊತೆಗೆ ಇನ್ನೊಂದು ಉಪ ಪ್ರಶ್ನೆ ಇದೆ. ಸರ್ಕಾರ 'ಅಲೆಮಾರಿ ಕೋಶ' ಎಂದು ಮಾಡಿದೆ. ಆದರೆ, 'ಅಲೆಮಾರಿ ಕೋಶ' ಇನ್ನೂ active ಆಗಿಲ್ಲ. ಈ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ನಮಗೆ 'ಅಲೆಮಾರಿ ಆಯೋಗ' ರಚನೆ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು. ಅದರಂತೆ 'ಅಲೆಮಾರಿ ಆಯೋಗ'ವನ್ನು ರಚನೆ ಮಾಡಿದರು. ಆದರೆ, ಇದುವರೆಗೂ 'ಅಲೆಮಾರಿ ಆಯೋಗ'ಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. 'ಅಲೆಮಾರಿ ಅಭಿವೃದ್ಧಿ ನಿಗಮ' ಇದೆ. ಆದರೆ, ಸರ್ಕಾರ ಬಂದು ಎರಡೂವರೆ ವರ್ಷ ಆಗಿದೆ, ಇನ್ನು ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಅದಕ್ಕೆ ಅಧ್ಯಕ್ಷರು ಇಲ್ಲದಿದ್ದರೆ, ಈ ಯೋಜನೆಗಳನ್ನು ಯಾವ ರೀತಿ ಪೂರಕವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾನು 4-5 ಬಾರಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಪೂರ್ತಿ defer ಆಗಿಕೊಂಡು ಬರುತ್ತಿದೆ. Category-1 ಪೂರ್ತಿ defer ಆಗುತ್ತಿದೆ. 'ಕೋಶ' ಕ್ಕೆ ಇದುವರೆಗೂ ಯಾರನ್ನು ನೇಮಕ ಮಾಡಿಲ್ಲ. 'ಅಭಿವೃದ್ಧಿ ನಿಗಮ'ಕ್ಕೆ ಇದುವರೆಗೂ ಯಾರನ್ನು ನೇಮಕ ಮಾಡಿಲ್ಲ.

**ಸಭಾಪತಿಯವರು:-** ಮಾನ್ಯ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) ರವರೇ, ಸಾಕು ಬಿಡಿ. ವಿಷಯ ಏನಿದೆ, ಅದನ್ನು ಮುಖ್ಯವಾಗಿ ಕೇಳಬೇಕು. ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಧ್ಯಕ್ಷರನ್ನು ನೇಮಕ ಮಾಡುವ ವಿಷಯದ ಬಗ್ಗೆ ಇಲ್ಲಿ ಪ್ರಶ್ನೆ ಕೇಳಿಲ್ಲ. 'ಕೋಶ' ಮತ್ತು 'ಅಧ್ಯಕ್ಷರ'ರನ್ನು ಮಾನ್ಯ ಮುಖ್ಯ ಮಂತ್ರಿಯವರು ನೇಮಕ ಮಾಡುತ್ತಾರೆ. ಆದರೆ, ಮಾನ್ಯ ಸದಸ್ಯರು ಹೇಳಿರುವಂತೆ, ನಿಜವಾಗಲೂ ಅಧ್ಯಕ್ಷರನ್ನು

ನೇಮಕ ಮಾಡುವುದು ಅವಶ್ಯಕತೆ ಇದೆ. ಮಾನ್ಯ ಸದಸ್ಯರು ಪ್ರವರ್ಗ–1 10% ಬಗ್ಗೆ ಹೇಳಿದ್ದಾರೆ. ಈಗ ನಮಗೆ ಬಂದಿರುವಂತಹ ಎಲ್ಲಾ ಅರ್ಜಿಗಳಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ, ಅದರಲ್ಲಿ ಹೆಚ್ಚಿಗೆ ಆದಂತಹ ಸಂದರ್ಭದಲ್ಲಿ ಇದನ್ನು KREIS ನ ಮುಖಾಂತರ ತುಂಬಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. KREIS ನ ಮುಖ್ಯಸ್ಥರು ಇಲ್ಲಿಯೇ ಇದ್ದಾರೆ. KREIS ನ ಮುಖಾಂತರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವಂತಹ ಕೆಲಸವನ್ನು ಮಾಡುತ್ತೇವೆ. ಆದರೆ, ನಿಜವಾಗಲೂ ಇನ್ನು ಹೆಚ್ಚಿಗೆ ಅವಶ್ಯಕತೆ ಇದೆ. ಅಲೆಮಾರಿಗಳಿಗೆ ಮತ್ತು ಅರೆ ಅಲೆಮಾರಿಗಳಿಗೆ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಹೆಚ್ಚಿಗೆ ಮಾಡುವಂತಹ ಅವಶ್ಯಕತೆ ಇದೆ.

ಮಾನ್ಯ ಸಭಾಪತಿಯವರೇ, ಹಿಂದೆ ಎಂದು ಆಗಲಾರದಷ್ಟು ಕಳೆದ ವರ್ಷ ನಾವು ಈ 4 ವಿಭಾಗಗಳಿಗೆ ಅನುದಾನ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಅಧ್ಯಕ್ಷರು ಇಲ್ಲ ಮತ್ತು ಕೋಶ ಅಧ್ಯಕ್ಷರು ಇಲ್ಲವೆಂದು ಹೇಳುತ್ತಾರೆ. ಇವರನ್ನು ಮಾನ್ಯ ಮುಖ್ಯಮಂತ್ರಿಯವರು ನೇಮಕ ಮಾಡಬೇಕಾಗುತ್ತದೆ. ಆದರೆ, ಈಗ ಆ ಕೆಲಸವನ್ನು ಇಲಾಖೆಯ ಮಂತ್ರಿಯಾಗಿ ನಾನೇ ಅದರ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು ಅದರ ಬಗ್ಗೆ ಮತ್ತೆ ಏನಾದರೂ ಮಾಹಿತಿ ಇದ್ದರೆ ಹೇಳಲಿ, ಅದರ ಪೂರ್ಣ ಪ್ರಮಾಣದ ಮಾಹಿತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಅಲೆಮಾರಿಗಳ ಬಗ್ಗೆ ವಿಶೇಷವಾಗಿ ಕಾಳಜಿಯನ್ನು ವಹಿಸುವಂತಹ ಕೆಲಸವನ್ನು ಮಾಡಿದ್ದಾರೆ. ಈಗ ಅಲೆಮಾರಿ ಮತ್ತು ಅರೆ ಅಲೆಮಾರಿಗೆ ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಅದನ್ನು ಮೂಲಭೂತ ಸೌಕರ್ಯ ಮಾಡುವುದಕ್ಕಿಂತ ಮೊದಲು ಅವರಿಗೆ ಮನೆಗಳನ್ನು ಮಾಡಿಕೊಡಬೇಕು ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು ಆ ನಿಟ್ಟಿನಲ್ಲಿ ಈ ವರ್ಷ 4 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈ 4 ಜಿಲ್ಲೆಗಳಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಬೇರೆ ಯೋಜನೆಗಳಲ್ಲಿ ಒಂದು ಮನೆಗೆ ಕನಿಷ್ಠ 2.50 ಲಕ್ಷ ರೂಪಾಯಿಗಳಿಂದ 4 ಲಕ್ಷ ರೂಪಾಯಿಗಳು ಇದೆ. ನಾವು ಈ ಬಾರಿ ಅದನ್ನು ಮಾಡುತ್ತಿಲ್ಲ. Financially special approval ಅನ್ನು ತೆಗೆದುಕೊಂಡು ಅದಕ್ಕೆ ಕನಿಷ್ಠ 10 ಲಕ್ಷ ರೂಪಾಯಿಗಳವರೆಗೂ ಅವರಿಗೆ ಮನೆಯನ್ನು ಕಟ್ಟಿಸಿಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಈ ರೀತಿಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಹಾಗಾಗಿ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಇನ್ನೂ ಮಾಹಿತಿ ಬೇಕು ಎಂದರೆ, ಕೇಳಲಿ ಕೊಡುತ್ತೇವೆ. ಆದರೆ, ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ನಾನು ಮಾಡುವಂತಹದ್ದಲ್ಲ. ಅದು ಮಾನ್ಯ

ಮುಖ್ಯಮಂತ್ರಿಯವರು ಮಾಡುವಂತಹ ನಿರ್ಧಾರ. ಅದು ಸರ್ಕಾರ ಮಾಡುವಂತಹ ನಿರ್ಧಾರ. ಅದಕ್ಕೆ ಆದಷ್ಟುಬೇಗ ಅಧ್ಯಕ್ಷರನ್ನು ನೇಮಕ ಮಾಡಲು ಮಾನ್ಯ ಸದಸ್ಯರು ಒತ್ತಾಯ ಮಾಡಲಿ. ನಾನು ಒತ್ತಾಯ ಮಾಡುತ್ತೇನೆ. ಅಲೆಮಾರಿ ಕೋಶಕ್ಕೆ ಅವಶ್ಯಕತೆ ಇದ್ದು, ಮಾಡಿಸುವಂತಹ ಪ್ರಯತ್ನವನ್ನು ಮಾಡೋಣ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ನಮ್ಮ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಬಂದ ಎಲ್ಲಾ ಅರ್ಜಿಗಳಿಗೂ ಹಾಸ್ಟಲ್‌ಗಳಿಗೆ admission ಕೊಡುತ್ತಾರೆ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, ಹೌದು, ಇದನ್ನು ಸಮಾಜ ಕಲ್ಯಾಣ ಇಲಾಖೆಯ ಸಚಿವರು ಕೊಡುತ್ತಾರೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ತಾವು ಅದೇತರಹ ಎಷ್ಟೇ ಅರ್ಜಿಗಳು ಬಂದರೂ ಸಹ ಯಾರನ್ನು ಸಹ ವಸತಿಯಿಂದ ಹೊರಗಡೆ ಕಳುಹಿಸಬಾರದು ಎಂದು ಒಂದು ಆದೇಶವನ್ನು ಹೊರಡಿಸಿ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, ಈಗಲೂ ಮಾನ್ಯ ಸಚಿವರು KREIS ನ ಮುಖ್ಯಸ್ಥರು. ನಾನು ಬರಿ ನೋಡುವುದಷ್ಟೇ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ಇನ್ನೊಂದು ಉಪ ಪ್ರಶ್ನೆ ಇದೆ. ಏಕೆಂದರೆ, ನಿನ್ನೆ ದಿವಸ ಪ್ರಶ್ನೆ ಬರಬೇಕಾಗಿತ್ತು ಬಂದಿಲ್ಲ.

**(ಗೊಂದಲ)**

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, admission ಅನ್ನು ಎಲ್ಲರಿಗೂ ಕೊಡುತ್ತಿದ್ದೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಕೇಳಕೊಳ್ಳುತ್ತೇನೆ. ಹಿಂದೆ ೬೦,೦೦೦ ಅಲೆಮಾರಿಗಳಿಗೆ ಮನೆಗಳನ್ನು ನಿಗದಿ ಪಡಿಸಲಾಗಿತ್ತು. ಆದರೆ, ಅಲೆಮಾರಿಗಳಿಗೆ ಮನೆಗಳನ್ನು restructure ಮಾಡಿ ಕೊಡುವಂತಹದ್ದನ್ನು ಮಾಡಿಲ್ಲ. ಮಾನ್ಯ ವಸತಿ ಸಚಿವರು unit cost ಅನ್ನು merge ಮಾಡಿ double ಮಾಡುತ್ತೇವೆಂದು ಹೇಳುತ್ತಿದ್ದರು. ಅದು ಸಹ ಆಗಲಿಲ್ಲ.

**ಶ್ರೀ ಶಿವರಾಜ ಎಸ್.ತಂಗಡಗಿ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಮತ್ತು ಇದಕ್ಕೆ ಸಂಬಂಧ ಇಲ್ಲ. ವಸತಿಯದ್ದು ಬೇರೆ ಇದೆ. ನಮ್ಮದ್ದು ಬೇರೆ ಇದೆ. ನಾವು ನಮ್ಮದ್ದನ್ನು ನಮ್ಮ unit cost ಅನ್ನು, ಈ ಬಾರಿ special grant ಅನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವುದರಿಂದ ಆ ರೀತಿ 4 ಜಿಲ್ಲೆಗಳನ್ನು ಗುರುತಿಸಿದ್ದೇವೆ. ಅದಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

**ಸಭಾಪತಿಯವರು:–** ಆಯಿತು.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲಾಖೆಯ ಸಚಿವರಾಗಿದ್ದು, ಅವರೆ ಗುರುತು ಮಾಡಿ ವಸತಿಗೆ recommend ಮಾಡಲಿ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಕಿಶೋರ್‌ಕುಮಾರ್ ಪುತ್ತೂರ್‌ರವರೇ, ತಮ್ಮ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ 15 ದಿವಸಗಳ ಕಾಲವಕಾಶ ಕೇಳಿದ್ದಾರೆ. ಒಂದು ನಿಮಿಷ ಕೇಳಿ. ಮಾನ್ಯ ಸಭಾನಾಯಕರೇ, ಈಗ ಅಧಿವೇಶನ ಎಷ್ಟು ದಿವಸಗಳವರೆಗೆ ನಡೆಯುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಯಾರೋ ಒಬ್ಬ ಅಧಿಕಾರಿ ಬರೆದುಕೊಟ್ಟಿದ್ದಕ್ಕೆ 15 ದಿವಸಗಳ ಟೈಮ್ ಕೇಳುತ್ತಾರೆ ಎಂದರೆ ಅರ್ಥ ಏನು? ನಾನು ಈಗ ಎಲ್ಲರಿಗೂ ಪತ್ರ ಬರೆದು ಕಳುಹಿಸುತ್ತಿದ್ದೇನೆ. 15 ದಿವಸಗಳ ಕಾಲ ಟೈಮ್ ಕೇಳುತ್ತೀರಿ ಎಂದರೆ, ಅರ್ಥ ಏನು? ನನಗೆ ಉತ್ತರ ಹೇಳಿ ನೋಡೋಣ? ಮಂತ್ರಿಗಳು ಯಾರೋ ಬರೆದು ಕೊಟ್ಟಿದ್ದನ್ನು ಸಹಿ ಮಾಡಿ ಕಳುಹಿಸಬೇಡಿ. ದಯಮಾಡಿ ಹೇಳಿ. 15 ದಿವಸಗಳ ಕಾಲ ಟೈಮ್ ಕೇಳಬೇಡಿ. ಅಧಿವೇಶನ ಮುಗಿಯವರೆಗೆ ಅಥವಾ ಬೇರೆ ಏನಾದರೂ ಹೇಳಿ. 15 ದಿವಸಗಳ ಕಾಲ ಟೈಮ್ ಕೇಳಿದರೆ ಅರ್ಥ ಏನು?

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...,

**ಸಭಾಪತಿಯವರು:–** ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡುವಂತಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:**– ಮಾನ್ಯ ಸಭಾಪತಿಯವರೇ, ತಮಗೆ ಒಂದು submission ಇದೆ.

**(ಗೊಂದಲ)**

**ಸಭಾಪತಿಯವರು:–** ಶ್ರೀ ಪ್ರಿಯಾಂಕ್ ಖರ್ಗೆಯವರೇ, ಬೇಡ. ತಾವು ಈಗ ಉತ್ತರ ಹೇಳುತ್ತೀರಾ?

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾ ಅಭಿವೃದ್ಧಿ ಮತ್ತು ಪಂಚಾಯತ್ ಸಚಿವರು):–** ಮಾನ್ಯ ಸಭಾಪತಿಯವರೇ, ಇಲ್ಲ. ತಾವು ಪ್ರಶ್ನೆಯನ್ನು ಗಮನಿಸಬೇಕು. ಇದರಲ್ಲಿ 20 ವರ್ಷದ್ದು ಜಿಲ್ಲಾವಾರು ಮಾಹಿತಿ ಕೇಳಿದ್ದಾರೆ.

**ಸಭಾಪತಿಯವರು:–** ಶ್ರೀ ಪ್ರಿಯಾಂಕ್ ಖರ್ಗೆಯವರೇ, ಆಯಿತು, ನಾವು ಒಪ್ಪಿದ್ದೇವೆ. 15 ದಿವಸ ಟೈಮ್ ಕೇಳಿದ್ದಾರೆ ಅಲ್ಲವೇ, ಕೊಡಿ. ತಾವು ಈಗ ಏಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.,

**(ಗೊಂದಲ)**

**ಸಭಾಪತಿಯವರು:–** ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡುವಂತಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರೇ.,

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯವಿಟ್ಟು ಮಾತನಾಡುವುದಕ್ಕೆ ಬಿಡಿ. ನಾನು 378 ಪಂಚಾಯಿತಿಗಳಲ್ಲಿ, 94 ಪಂಚಾಯಿತಿಗಳಲ್ಲಿ ಮೂರು ಗಂಟೆಗಳ ಕಾಲ ಕುಳಿತುಕೊಳ್ಳುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡುವಂತಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರೇ., ಇಲ್ಲ. ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರೇ,

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯವಿಟ್ಟು ಉತ್ತರ ನನ್ನಲ್ಲಿ ಉಂಟು,.

**(ಗೊಂದಲ)**

**ಸಭಾಪತಿಯವರು:–** ಇಲ್ಲ. ತಾವು ಕುಳಿತುಕೊಳ್ಳಿ. ತಮಗೆ ಹೇಳಿದ್ದು ತಿಳಿಯುವುದಿಲ್ಲವೇ? ಅವರು ಟೈಮ್ ಕೇಳಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:–** ಮಾನ್ಯ ಸಭಾಪತಿಯವರೇ, ನಾವು ರಾತ್ರಿಯೆಲ್ಲಾ ತಯಾರಾಗಿ ಬಂದಿರುತ್ತೇವೆ. ಈ ತರಹ ಮಾಡಿದರೆ ಹೇಗೆ? ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:–** ಇಲ್ಲ. ನಾನು ಕೊಡುವುದಿಲ್ಲ. ಮಾನ್ಯ ಸಚಿವರು ಟೈಮ್ ಕೇಳಿದ್ದಾರೆ. ತಾವು ಏನು ಮಾತನಾಡುತ್ತೀರಿ? ಶ್ರೀಮತಿ ಹೇಮಲತಾ ನಾಯಕ್‌ರವರೇ. ತಾವು ಮಾತನಾಡಿ. ಇದು ಯಾವುದು ಕಡತಕ್ಕೆ ಹೋಗಬಾರದು.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಸದರಿ ಪರಿಶೋಧನಾ.,

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು 15 ದಿವಸಗಳ ಕಾಲ ಟೈಮ್ ಕೇಳಿದ್ದೀರಿ. 15 ದಿವಸ ಟೈಮ್ ಕೊಟ್ಟಿದ್ದೆ. ತಾವು ಮತ್ತೆ ಏಕೆ ಉತ್ತರ ಹೇಳುತ್ತೀರಿ?

(ಮುಂದು)

**(೦೯೫) 30.01.2026/5.20/ಎಂವಿ-ಬಿಎನ್‌ಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ನಾವು ಯಾವುದೇ information ಅನ್ನು block ಮಾಡುತ್ತಿಲ್ಲ. ಈಗ 20 years audit information ಕೇಳುತ್ತಿದ್ದಾರೆ. ಅದು ಅವರ ಬಳಿ ಇದೆ ಎಂದು ಹೇಳುತ್ತಿದ್ದಾರೆ. ಅವರು ಎಂಟು ಪ್ರಶ್ನೆಗಳನ್ನು ಕೇಳಿದ್ದಾರೆ. ದಯವಿಟ್ಟು ಅವರು ಅದನ್ನು ನೋಡಲಿ.

**ಸಭಾಪತಿಯವರು:** ಆಯಿತು.

**ಪ್ರಶ್ನೆ ಸಂಖ್ಯೆ:522**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನಗೆ ಸಮಯ ಸಿಗದಕ್ಕೋಸ್ಕರ ನಾನು ಕಳೆದ ಡಿಸೆಂಬರ್ ತಿಂಗಳಿನಲ್ಲಿ ಕೇಳಿರತಕ್ಕಂತಹ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದ್ದೇನೆ. ಆಗ ಕೊಟ್ಟಿರುವಂತಹ ಉತ್ತರ ಮತ್ತು ಈಗ ಕೊಟ್ಟಿರುವಂತಹ ಉತ್ತರ ಸರಿಯಾಗಿದೆ. ಆದರೆ, ಕೊಟ್ಟಿರತಕ್ಕಂತಹ ಯೋಜನೆ, ಹಂಚಿಕೆ ಇವೆಲ್ಲವೂ ಸಹ ಯಾವುದಕ್ಕೂ ಹೊಂದಾಣಿಕೆ ಆಗುತ್ತಿಲ್ಲ. ಇವತ್ತು ಎಲ್ಲಾ ಪ್ರಶ್ನೆಗಳಿಗಿಂತ ಕೊನೆಯ ಪ್ರಶ್ನೆಯ ಬಗ್ಗೆ ಮಾನ್ಯ ಸಚಿವರಿಂದ clarity ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವಂತಹ ನಿಗಮಗಳ ಕುರಿತು ಪ್ರಶ್ನೆ ಕೇಳಿದ್ದೆ. ಅದಕ್ಕೆ ಅವರು ಏಳು ನಿಗಮಗಳು ಬರುತ್ತವೆಂದು ಹೇಳಿದ್ದಾರೆ. ಆ ನಿಗಮಗಳಲ್ಲಿ 2021–22, 2022–23, 2023–24, 2024–25 ಮತ್ತು 2025–26ನೇ ಇಸವಿಯಲ್ಲಿ ಬರತಕ್ಕಂತಹ ಅನುದಾನಗಳ ವಿವರವನ್ನು ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ.

**ಸಭಾಪತಿಯವರು:–** ಈಗ ಏನಾಗಬೇಕೆಂದು ಹೇಳಿ. ಮತ್ತೆ ಅದನ್ನು repeat ಮಾಡಬೇಡಿ. ಇದು ಪ್ರಶ್ನೋತ್ತರ ವೇಳೆ.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಈಗ ನಿಗಮದಲ್ಲಿ ಇರತಕ್ಕಂತಹ 2021–22ನೇ ಸಾಲಿನಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 73.00 ಕೋಟಿ ರೂಪಾಯಿ ಅನುದಾನ ಹಂಚಿಕೆಯಾಗಿದೆ. ಅದೇ ರೀತಿ 73.00 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ. ಆದರೆ, 10,041 ಭೌತಿಕ ಸಾಧನೆ ಮಾತ್ರ ಕಳಪೆಯಾಗಿದೆ. ಆಮೇಲೆ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದಲ್ಲಿ ಹಣ ಹಂಚಿಕೆಯಾಗಿ ಬಿಡುಗಡೆಯಾಗಿದೆ. ಆದರೆ, ಅಭಿವೃದ್ಧಿ ಮಾತ್ರ ಆಗುತ್ತಿಲ್ಲ. ಇವತ್ತು ಕರ್ನಾಟಕ ತಾಂಡ ಅಭಿವೃದ್ಧಿ ನಿಗಮಕ್ಕೆ 50.00 ಕೋಟಿ ರೂಪಾಯಿ ಹಂಚಿಕೆ ಮತ್ತು 50.00 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿ ಯಾವುದೇ ಅಭಿವೃದ್ಧಿ ಕಂಡುಬಂದಿಲ್ಲ.

**ಸಭಾಪತಿಯವರು:–** ತಾವು ಪ್ರಶ್ನೆ ಕೇಳಿ.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಅಲ್ಲಿರುವಂತಹವರಿಗೆ ಶಾಲೆ, ಮನೆ ಮತ್ತು ನೀರು ಈ ರೀತಿಯಲ್ಲಿ ಯಾವುದೇ ಅನುಕೂಲಗಳನ್ನು ಮಾಡದೇ ಇಷ್ಟೊಂದು ಹಂಚಿಕೆ ಮಾಡಿ ಕೊಟ್ಟಿರತಕ್ಕಂಥದ್ದನ್ನು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಡಾ: ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಬಗ್ಗೆ ಕೇಳಿದರೆ, ಅದಕ್ಕೆ 35.00 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿ, 35.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಭೌತಿಕ ಸಾಧನೆ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಈ ರೀತಿ ಕೊಟ್ಟಿರುವಂತಹ ಎಲ್ಲವೂ ಸಹ ಹೇಗೆ ಆಗಿದೆ ಎಂದರೆ, ಸಾಧನೆಗಳು ಮಾತ್ರ ಅವುಗಳಿಗೆ ಹೋಲಿಕೆ ಆಗುತ್ತಿಲ್ಲ. ಮಾನ್ಯ ಸಚಿವರು ಹೇಳಿರುವಂತಹ ಲೆಕ್ಕ ಚೆನ್ನಾಗಿದೆ. ಆದರೆ, ಅಭಿವೃದ್ಧಿ ಮಾತ್ರ ನಾವು ನಿರೀಕ್ಷೆ ಮಾಡಿದಷ್ಟು ಆಗಿಲ್ಲ ಎನ್ನುವುದನ್ನು ಮಾನ್ಯ ಸಚಿವರ ಬಳಿ ಸ್ಪಷ್ಟನೆ ತೆಗೆದುಕೊಳ್ಳುತ್ತೇನೆ. ನಂತರ ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಡಾ: ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ವಿವರವಾದಂತಹ ಉತ್ತರವನ್ನು ನೀಡಿದ್ದೇವೆ. ಈಗ ಏಳು ನಿಗಮಗಳಲ್ಲಿ ಹಂಚಿಕೆಯಾಗಿ ಬಿಡುಗಡೆಯಾಗಿರುವ ಏನು ಹಣ ಇದೆ, ಎಲ್ಲಾ ಏಳು ನಿಗಮಗಳು ಸೇರಿ 57,287 ಭೌತಿಕವಾದ ಸಾಧನೆಗಳನ್ನು ಮಾಡಿದ್ದೇವೆ. ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸುಮಾರು 73.00 ಕೋಟಿ ರೂಪಾಯಿಗಳಲ್ಲಿ ಸುಮಾರು 10,041 ಸಾಧನೆಗಳನ್ನು ಮಾಡಿದ್ದೇವೆ. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದಲ್ಲಿ 9,609 ಭೌತಿಕ ಸಾಧನೆಯಾಗಿದೆ. ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಲ್ಲಿ 5,500 ಭೌತಿಕ ಸಾಧನೆಯಾಗಿದೆ. ಕರ್ನಾಟಕ ಸಫಾಯಿ ಅಭಿವೃದ್ಧಿ ನಿಗಮದಲ್ಲಿ 5,722 ಭೌತಿಕ ಸಾಧನೆಯಾಗಿದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ 4,887 ಭೌತಿಕ ಸಾಧನೆಯಾಗಿದೆ. ಈ ರೀತಿ 57,287 ಭೌತಿಕ ಸಾಧನೆಗಳನ್ನು ಮಾಡಿದ್ದೇವೆ. ನಾವು ಸಾಧನೆ ಮಾಡಿಲ್ಲವೆಂದು ಅಲ್ಲ. ಅವರ ನಿರೀಕ್ಷೆಗಿಂತ ಎಂದರೆ, ಅವರ ನಿರೀಕ್ಷೆ ವಿಪರೀತವಿದೆ. ಆದರೆ, ಬಜೆಟ್ ಎಷ್ಟು ಇದೆ ನಾವು ಅಷ್ಟಕ್ಕೆ ಗುರಿ ಇಟ್ಟುಕೊಂಡು ಹಂಚಿಕೆ ಮಾಡಿದ್ದೇವೆ. ಮತ್ತೆ ಸಾಧನೆ ಮಾಡಿದ್ದೇವೆ. ಅವರು ಸಾಧನೆ ಮಾಡಿಲ್ಲವೆಂದು ಹೇಳಿದ್ದಾರೆ. ಆದರೆ, ಅವರು ಏನು details ಕೇಳಿದ್ದಾರೆ ಅದನ್ನು ಸವಿವರವಾದ ಉತ್ತರವನ್ನು ಸುದೀರ್ಘವಾಗಿ ನೀಡಿದ್ದೇವೆ.

**ಶ್ರೀಮತಿ ಹೇಮಲತಾ ನಾಯಕ:-** ಮಾನ್ಯ ಸಭಾಪತಿಯವರೇ, ಈಗ ಒಂದು ಉದಾಹರಣೆ ಹೇಳುವುದಾದರೆ, ಮಾನ್ಯ ಸದಸ್ಯರ ನಿರೀಕ್ಷೆಗಳವೆ ಎಂದು ಹೇಳಿದ್ದಾರೆ. ಏಕೆಂದರೆ, ಹಿಂದುಳಿದ ವರ್ಗಗಳಿಗೆ ಕೊಡುವಂತಹ ಸೌಲಭ್ಯಗಳು ಅವರಿಗೆ ಸರಿಯಾಗಿ ಹೋಗಬೇಕು ಎನ್ನುವಂಥದ್ದು ಆಗಬೇಕು ಎಂದು ನ್ಯಾಯಯುತವಾಗಿ ಕೇಳುತ್ತೇವೆ. ಆದರೆ, ಇವತ್ತು ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ, ಈಗ ಶಕ್ತಿ ಯೋಜನೆಗೆ ಉದಾಹರಣೆ ಹೇಗಿದೆ ಎಂದರೆ, 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 52 ಲಕ್ಷ ಪರಿಶಿಷ್ಟ ಜಾತಿ ಮತ್ತು 21 ಲಕ್ಷ ಪರಿಶಿಷ್ಟ ಪಂಗಡದ ಮಹಿಳೆಯರು ಇದ್ದಾರೆ. ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಶಕ್ತಿ ಯೋಜನೆಗೆ 2023-24ನೇ ಸಾಲಿನಲ್ಲಿ 183 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. 2024-25ನೇ ಸಾಲಿನಲ್ಲಿ 244.65 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. 2025-26ನೇ ಸಾಲಿನಲ್ಲಿ 183.25 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಇಷ್ಟು ಸಂಖ್ಯೆಯ ಉಚಿತ ಟಿಕೆಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಿದ್ದೇವೆಂದು ಹೇಳುತ್ತಾರೆ. ಅದರಲ್ಲಿ ಎಸ್.ಸಿ/ಎಸ್.ಟಿ. ಮಹಿಳೆಯರು ಸಹ ಸೇರಿರುತ್ತಾರೆ. ಹಾಗಾದರೆ, ಅಲ್ಲಿ ಪ್ರಯಾಣ ಮಾಡಿದಂತಹ ಮಹಿಳೆಯರನ್ನು ಎಸ್.ಸಿ./ಎಸ್.ಟಿ. ಎಂದು ಹೇಗೆ ಪರಿಗಣನೆ ಮಾಡಿದ್ದಾರೆ? ಈಗ ಏನಾದರೂ ಟಿಕೆಟ್ ಕೊಡಬೇಕಾದರೆ ನೀವು ಎಸ್.ಸಿ./ಎಸ್.ಟಿ. ತೆಗೆದುಕೊಳ್ಳಿ ಎಂದು ಕೊಡುವುದಕ್ಕೆ ಆಗುತ್ತದೆಯೇ? ಮಾನ್ಯ ಸಚಿವರು ಇದನ್ನು ಹೇಗೆ ಹೇಳಿದ್ದಾರೆ?

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, 2011ರ ಜನಗಣತಿ ಇದೆ. ಆ ಜನಗಣತಿಯಲ್ಲಿ ಎಸ್.ಸಿ. ಜನಸಂಖ್ಯೆ ಸಂಖ್ಯೆ ಎಷ್ಟು ಇದೆ? ಅದರಲ್ಲಿ women ಎಷ್ಟು ಇದ್ದಾರೆಂದರೆ ಸುಮಾರು 53 ಲಕ್ಷ S.C. women ಇದ್ದಾರೆ, 21 ಲಕ್ಷ S.T. women ಇದ್ದಾರೆ. ಅವರು ಹೋಗುವಾಗ ಶೇಕಡಾ 24ರಷ್ಟು ಎಂದು ಅಂದಾಜು ಮಾಡಿ, ಅದರ ಆಧಾರದ ಮೇಲೆ ಎಷ್ಟು ಟ್ರಿಪ್? ಅದರಲ್ಲಿ ಇಷ್ಟೆ ಬರುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ಅಂದಾಜಿನ ಮೇಲೆ ಈ 24% mandatory ಇರುತ್ತದೆ.

**ಶ್ರೀಮತಿ ಹೇಮಲತಾ ನಾಯಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಹೇಗೆ ಅಂದಾಜು ಸಿಗುತ್ತದೆ? ಅವರು ಜಾತಿಗಣತಿಯನ್ನು ಪರಿಗಣಿಸಿಕೊಂಡು ಎಸ್.ಸಿ./ಎಸ್.ಟಿ. ಮಹಿಳೆಯರು ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಈಗ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ತಾವು ಕುಳಿತುಕೊಳ್ಳಿ. ಅವರು ಹೇಳುವುದನ್ನು ತಾವು ಕೇಳಿಸಿಕೊಳ್ಳಿ.

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಈಗ ಖಂಡಿತವಾಗಿ ಏನು ಜನಗಣತಿ ಇದೆ. ಆ ಜನಗಣತಿಯ ಸಂಖ್ಯೆಯ ಆಧಾರದ ಮೇಲೆ ನಾವು ಅದಕ್ಕೆ ಹಣವನ್ನು ನೀಡುವುದು. ಅದರಲ್ಲಿ ಏನು ಇಲ್ಲದೇ ಇರುವುದನ್ನು ಕೊಟ್ಟುಬಿಟ್ಟು, ಈ ಹಣವನ್ನು ಬೇರೆ ಕಡೆಗೆ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ಆ ರೀತಿ ಮಾಡುವುದಕ್ಕೆ ಆಗುವುದೂ ಇಲ್ಲ. ಈಗ ಅದರಲ್ಲಿ ಏನು ಜನಸಂಖ್ಯೆ ಇದೆ, ಅಂದರೆ, 53 ಲಕ್ಷ ಎಸ್.ಸಿ. ಮತ್ತು 21 ಲಕ್ಷ ಎಸ್.ಟಿ. ಮಹಿಳೆಯರು ಇದ್ದಾರೆ. ಅದಕ್ಕೆ ಸೇರಿಸಿ ಬೇಕಾದಂತಹ ವೆಚ್ಚ ಇದೆ. ಅದರಲ್ಲಿ ಅವರು ಐದರಿಂದ ಆರು ಬಾರಿ ಟ್ರಿಪ್ ಹೋಗಬಹುದು. ಹೀಗಾಗಿ ಮಾನ್ಯ ಸದಸ್ಯರು ಹೇಳಿದಂತೆ ಖಚಿತವಾಗಿ 100% accurate ಆಗಿ ಎಸ್.ಸಿ. ಮಹಿಳೆಯೆ ಹೊರಟು ಹೋಗಿದ್ದಾರೆ ಎಂದು ಅಲ್ಲ. ಆದರೆ, ಈ ಜನಸಂಖ್ಯೆ ಇದೆಯಲ್ಲ. ಅವರು ಪ್ರಯಾಣ ಮಾಡಿರುತ್ತಾರೆ.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ನಾನು ಕೇಳುವುದೇನೆಂದರೆ, ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣದಿಂದ ನಮಗೆ ಕೊಟ್ಟಿದ್ದಾರೆ. ಹಾಗಾದರೆ ಜನರಲ್‌ರವರಿಗೂ ಸಹ ಈ ಹಣದಿಂದ ಕೊಟ್ಟಿದ್ದಾರೆಯೇ?

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಆ ರೀತಿ ಕೊಡುವುದಕ್ಕೆ ಬರುವುದಿಲ್ಲ.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ. ಈ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ಹೇಗೆ ಕೊಟ್ಟಿದ್ದಾರೆ?

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ನಾನು ಸಮರ್ಥನೆ ಮಾಡುತ್ತಿಲ್ಲ.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವ ಲೆಕ್ಕ ನೋಡಿದರೆ ಮತ್ತೇನು?

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಇದನ್ನು ಜನರಲ್‌ರವರಿಗೆ ಕೊಡುವುದಕ್ಕೆ ಬರುವುದಿಲ್ಲ.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ನನಗೆ ಕಳೆದ ಬಾರಿಯೂ ಸಹ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ನನಗೆ ಕೊಟ್ಟಿರುವಂತಹ ಉತ್ತರ ವಿಚಿತ್ರದಂತೆ ಕಾಣುತ್ತಿದೆ. ಆಯಿತು ಇದನ್ನು ಬಿಡಿ.

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ನಾನು ಈ ಗ್ಯಾರಂಟಿ question ಗೆ ಹತ್ತು ಬಾರಿ ಕೇಳಿದರೂ ಸಹ same ಉತ್ತರವನ್ನು ಕೊಡಬೇಕು.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಳೆದ ಬಾರಿಯೂ ಸಹ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದರು

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, I cannot change my answer.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಈ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ನಮಗೂ ಖರ್ಚು ಮಾಡಿ, ಮತ್ತೆ ಬೇರೆಯವರಿಗೂ ಖರ್ಚು ಮಾಡುತ್ತಾರೆಯೇ? ಈ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ಹೇಗೆ ಕೊಡುತ್ತಾರೆ?

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, under Section 7(c), where the Act is being violated?

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದೊಂದನ್ನು ಕಲಿತುಬಿಟ್ಟಿದ್ದಾರೆ. ಅಂದರೆ, Section 7(c), 7(d) ಎಂದು.

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, where is it being violated?

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೆ ಹೇಳುತ್ತಾರೆ, ಈ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ನಮಗೆ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಮತ್ತೆ ಜನರಲ್‌ನವರಿಗೂ ಸಹ ಹೇಳುತ್ತಾರೆ.

**ಸಭಾಪತಿಯವರು:–** ತಾವು ಮಾನ್ಯ ಸಚಿವರು ಹೇಳುವಂತಹ ಉತ್ತರವನ್ನು ಕೇಳಿ.

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, provisions of Section 7(c) of the Act says general scheme ನಲ್ಲಿ ಬರುವ ಎಸ್.ಸಿ./ಎಸ್.ಟಿ. ಫಲಾನುಭವಿಗಳಿಗಷ್ಟೆ ಕೊಡಬೇಕೆಂದು ಇದೆ. It is a provision of the Act which is passed in both the Houses of the Legislature. It is not my decision. There is a provision in the Act.

**ಶ್ರೀಮತಿ ಹೇಮಲತಾ ನಾಯಕ:–** ಮಾನ್ಯ ಸಭಾಪತಿಯವರೇ, ಯಾವ ಆಕ್ಟ್ ಇಂದ ಎಂದು. ದಯವಿಟ್ಟು ಒಂದು clarification ಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಏನೂ ಹೇಳುವುದಿಲ್ಲ. ಮಾನ್ಯ ಸದಸ್ಯರಿಗೆ ನಾನೇ ಉತ್ತರ ಕೊಡುತ್ತೇನೆ. ಶ್ರೀಮತಿ ಹೇಮಲತಾ ನಾಯಕ ರವರೆ ಒಂದು ನಿಮಿಷ. ನಾವು ಇದರ ಬಗ್ಗೆ ಎಷ್ಟು ಬಾರಿ ಪ್ರಶ್ನೆ ಮಾಡಿದರೂ ಸಹ ಮಾನ್ಯ ಸಚಿವರು ಎಷ್ಟು ಬಾರಿ ಉತ್ತರ ಕೊಟ್ಟರೂ ಸಹ ಇದು ಇಷ್ಟೆ ಇರುತ್ತದೆ. ಏಕೆಂದರೆ, ಇವರ ತೀರ್ಮಾನ ಏನಿದೆ ಆಕ್ಟ್ ಪ್ರಕಾರವೇ ಇರಬಹುದು. ಜನಸಂಖ್ಯೆ ಆಧಾರದ ಮೇಲೆಯೇ ಕೊಡುವುದು. ಇಲ್ಲಿ ಇರುವಂತಹ ಅನ್ಯಾಯ ಏನೆಂದು ಒಂದು ಮಾತಿನಲ್ಲಿ ಹೇಳುತ್ತೇನೆ. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣಮಕ್ಕಳು ಕೂಲಿ ಮಾಡತಕ್ಕಂತಹ ಕೆಳವರ್ಗಗಳು, ಅವರು ಪ್ರತಿ ದಿನ ಪ್ರಯಾಣ ಮಾಡುವುದಿಲ್ಲ. ಆದರೆ, ಕೆಲವರು ಪ್ರಯಾಣ ಮಾಡಬಹುದು. ಆದರೆ, ಪರಿಸ್ಥಿತಿ ಏನೆಂದರೆ, ಅವರು ಜಾತಿ ಕೇಳಿ ಹಣವನ್ನು ತೆಗೆಯುವುದಿಲ್ಲ. ಈಗ ಯಾರು ಪ್ರಯಾಣ ಮಾಡಿದ್ದಾರೆ. ಅವರ ಜಾತಿಯನ್ನು ಕೇಳುವುದಿಲ್ಲ. ಅದು ನಿಜ. ಆದರೆ, ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ.ಯಲ್ಲಿ ಇರತಕ್ಕಂತಹ ಹಣವನ್ನು ಇದಕ್ಕೆ transfer ಮಾಡಿಕೊಳ್ಳುತ್ತಾರೆ. ಆದರೆ, ಜನರಿಗೆ ಆದಂತಹ ಅನ್ಯಾಯ ಏನೆಂದರೆ, ಅವರು ಅಷ್ಟು transport ನಲ್ಲಿ ಓಡಾಡುವುದಿಲ್ಲ. ಆದರೂ ಕೂಡ ಜನಸಂಖ್ಯೆಗೆ ಅನುಗುಣವಾಗಿ ಹಣ ತೆಗೆಯುವುದರಿಂದ ಆ ಸಮಾಜದ ಹಣ ಬೇರೆಯದಕ್ಕೆ ಉಪಯೋಗವಾಯಿತು ಎಂದು. ಅದರ ಜೊತೆಗೆ ಮಾನ್ಯ ಸಚಿವರು ಹೇಳಿದಂತೆ, ಈಗ ವಿದ್ಯುಚ್ಛಕ್ತಿ ವಿಚಾರದಲ್ಲೂ ಕೂಡ ಹಾಗೆಯೇ ಆಗುತ್ತದೆ. ಆದುದರಿಂದ, ನಾವು ಪ್ರಶ್ನೆ ಕೇಳುವುದನ್ನೇ ಬಿಟ್ಟುಬಿಟ್ಟಿದ್ದೇವೆ. ಏಕೆಂದರೆ, ಇದರಲ್ಲಿ ಸಮಾಜವೇ ಒಂದು ರೀತಿ. ಗ್ಯಾರಂಟಿಗಳನ್ನು ಕೊಡತಕ್ಕಂಥದ್ದು ಎಲ್ಲರಿಗೂ ಸಹ ಗ್ಯಾರಂಟಿ ಎಂದು ಹೇಳಿದರು. ಈ ಆಕ್ಟ್ ಪ್ರಕಾರ ಈ ಹಣವನ್ನು ಅವರಿಗೇ ಕೊಡಬೇಕು. ಅದು ಸತ್ಯ. ಅವರು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆಂದು ಹೇಳುವುದಿಲ್ಲ. ಅದು ಸತ್ಯವಾಗಿರುವುದರಿಂದ ಇಲ್ಲಿ ಏನಿದೆ ಎಂದರೆ, ಈ ಹಣವನ್ನು ಅವರಿಗೇ ಕೊಡಬೇಕು ಆಗ

ಗ್ಯಾರಂಟಿ ಹಣ ಇವರಿಗೆ ಇಲ್ಲ. ನಮ್ಮ ಹಣ ನಮಗೆ. ಆದರೆ, ಗ್ಯಾರಂಟಿ ಹಣ ಇಲ್ಲ. ಅಂದಮೇಲೆ ಈ ಗ್ಯಾರಂಟಿಯಲ್ಲೂ ಸಹ ಅಸ್ಪೃಶ್ಯತೆ ಇದೆ. ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕವಾಗಿ ಕೊಡುವುದರಿಂದ ಈ ಹಣ ಸೇರಲಿಲ್ಲವೆಂದರೆ, ಅದು ಅಸ್ಪೃಶ್ಯತೆಯನ್ನು ಪಾಲನೆ ಮಾಡಿದಂತೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ನೀಡಿದ್ದಾರೆ.

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಾವೆಲ್ಲರೂ ಸಹ ಜೊತೆಯಲ್ಲಿ ಇದ್ದಾಗ, ಜೊತೆಯಲ್ಲಿಯೇ ಬೇಕಾದಷ್ಟು ಸಭೆ ಮತ್ತು ಸಮಾರಂಭಗಳನ್ನು ಮಾಡಿದ್ದೇವೆ. ನಾವು ಜಾಗೃತಿ ಮೂಡಿಸುವಂತಹ ಕೆಲಸ ಮಾಡಿದ್ದೇವೆ. ನಾವು ಹಕ್ಕುಗಳಾಗಿ ಹೋರಾಟ ಮಾಡಿದ್ದೇವೆ. ಅವರು ಮತ್ತು ನಾವೆಲ್ಲರೂ ಸಹ ಜೊತೆಯಲ್ಲಿಯೇ ಹೋಗಿದ್ದೇವೆ.

**ಸಭಾಪತಿಯವರು:–** ಅವರನ್ನು ಈಗ ಏಕೆ ಬಿಟ್ಟಿದ್ದೀರಿ?

**ಡಾ: ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ನಾವು ಈಗಲೂ ಸಹ ಜೊತೆಯಲ್ಲಿಯೇ ಇದ್ದೇವೆ. ಅದರ ಬಗ್ಗೆ ಏನು doubt ಇಲ್ಲ. ಎಸ್.ಸಿ./ಎಸ್.ಟಿ. ಸಾಮಾಜಿಕ ನ್ಯಾಯ ಬಂದ ಮೇಲೆ ಗ್ಯಾರಂಟಿಯಲ್ಲಿ ಅಸ್ಪೃಶ್ಯತೆಯನ್ನು ಮಾಡುವುದಕ್ಕೆ ಬರುವುದಿಲ್ಲ.

**(ಮುಂದು)**

**(96) 30.01.2026 5.30 ಎಲ್ಎಲ್(ಹೆಚ್ವಿ)ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಡಾ॥ ಹೆಚ್.ಸಿ.ಮಹದೇವಪ್ಪ(ಮುಂದು):–**

ಸನ್ಮಾನ್ಯ ಸಭಾಪತಿಯವರೇ, Article 17 of the Constitution of India abolishes the practice of untouchability. If anyone practices the untouchability or violates the untouchability act, such behavior and conduct ಅನ್ನು ಮಾಡುವುದಕ್ಕೆ ಬರುವುದಿಲ್ಲ. ನಾವು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೆಲವು accurate ಆಗಿ ಇಲ್ಲ. ಶೇಕಡಾ 24ಕ್ಕಿಂತಲೂ ಹೆಚ್ಚು ಇದ್ದರೂ ಸಹ ಕೊಡುತ್ತಿದ್ದೀರಿ ಎಂದು ಅವರು ಹೇಳುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಸರಿಯಾದಂತಹ ದತ್ತಾಂಶಗಳನ್ನು ನೀಡಬೇಕೆಂದು ನಾವು ಕೇಳಿದ್ದೇವೆ. Even in power also, ದತ್ತಾಂಶಗಳನ್ನು ಕೊಡುವಾಗ, ಖಚಿತವಾಗಿ

ಎಸ್.ಸಿ., ಎಸ್.ಟಿ., ಜನಸಂಖ್ಯೆಯ ಬಗ್ಗೆ ನಿಖರವಾದ ಮಾಹಿತಿಯನ್ನು ಒದಗಿಸಿದರೆ, ಅದರ ಆಧಾರದ ಮೇಲೆ ಸಾಮಾನ್ಯ ಯೋಜನೆಗಳಲ್ಲಿ ಬರುವಂತಹ ಎಸ್.ಸಿ., ಎಸ್.ಟಿ., ಫಲಾನುಭವಿಗಳಿಗೆ ಅವರ ಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ನೀಡಲಾಗುತ್ತದೆ. ಒಂದು ಪಕ್ಷ ಅವರ ಸಂಖ್ಯೆ ಹೆಚ್ಚಾಗಿದ್ದರೆ, ಹೆಚ್ಚು ಅನುದಾನ ಕೊಡುತ್ತೇವೆ. Because, the S.C.S.P. (Scheduled Castes Sub–Plan)/T.S.P. (Tribal Sub–Plan) Act provides it under Section 7(c). ಇದರ ಬಗ್ಗೆ ನಾನು ಬಹಳಷ್ಟು ಬಾರಿ ವಿವರಣೆಯನ್ನು ಕೊಟ್ಟಿದ್ದೇನೆ. ಹಿಂದೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಗಳಿಗೆ ಮೀಸಲಿಡುವ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡಲು ಅವಕಾಶ ಕಲ್ಪಿಸಿಕೊಡುವ S.C.S.P./T.S.P. ಕಾಯಿದೆಯ ಸೆಕ್ಷನ್ 7(ಡಿ) ಅಡಿಯಲ್ಲಿ ಹಣವನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿತ್ತು. ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿಯೂ ಸಹ "ಈ ಸೆಕ್ಷನ್ ಅಡಿಯಲ್ಲಿ ಮೀಸಲಿಟ್ಟಿರುವ ಅನುದಾನ ದುರುಪಯೋಗವಾಗುತ್ತದೆ" ಎನ್ನುವುದನ್ನು ಒಪ್ಪಿಕೊಂಡಿದ್ದರು. ಅವರ ಪಕ್ಷದ ಆಡಳಿತದ ಅವಧಿಯಲ್ಲಿ S.C.S.P./T.S.P. ಕಾಯಿದೆಯ ಸೆಕ್ಷನ್ 7(ಡಿ) ಅಡಿಯಲ್ಲಿ ಸುಮಾರು 8–10 ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ದುರುಪಯೋಗವಾಗಿದೆ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಸುಮಾರು 4–5 ಸಾವಿರ ಕೋಟಿ ರೂಪಾಯಿಗಳ ಅನುದಾನ ದುರುಪಯೋಗವಾಗಿದೆ. ಅದಕ್ಕಾಗಿಯೇ, we have removed Section 7(d) from the S.C.S.P./T.S.P. Act. ಈಗ S.C.S.P. / T.S.P. ಕಾಯಿದೆಯ ಸೆಕ್ಷನ್ 7(ಎ), 7(ಬಿ) ಮತ್ತು 7(ಸಿ) ಗಳನ್ನು ಉಳಿಸಿಕೊಳ್ಳಲಾಗಿದೆ. ಸೆಕ್ಷನ್ 7(ಸಿ) ಅಡಿಯಲ್ಲಿ ಸಾಮಾನ್ಯ ಅಭಿವೃದ್ಧಿ ಯೋಜನೆಗಳು ಬರುತ್ತವೆ. The Government of India and all State Governments are practicing it. But, the Central Government or any other states do not have it in their act, other than the States of Maharashtra, Andhra Pradesh, and Karnataka. ಈಗ ಇದನ್ನೆಲ್ಲ ನೋಡಿ, ಇಲಾಖೆಗಳಿಂದ ದತ್ತಾಂಶಗಳನ್ನು ಕೇಳಿದ್ದೇವೆ, ಅವರು ಕೊಡುವಂತಹ ಸರಿಯಾದ ದತ್ತಾಂಶಗಳ ಆಧಾರದ ಮೇಲೆ ಅನುದಾನವನ್ನು ಕೊಡಲಾಗುತ್ತದೆ. ಅದಕ್ಕಿಂತ ಹೆಚ್ಚಾಗಿದ್ದರೆ, ನಾವು ನೋಡಲ್ ಏಜೆನ್ಸಿ ಮೀಟಿಂಗ್‌ನಲ್ಲಿ ಇದರ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಪ್ರಶ್ನೆ ಸಂಖ್ಯೆ:471**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸಾಕಷ್ಟು ಮಾಹಿತಿಯನ್ನು ಮಾನ್ಯ ಸಚಿವರು ಒದಗಿಸಿಕೊಟ್ಟಿದ್ದಾರೆ. "ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದ ರೈತರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು ಯಾವುವು" ಎನ್ನುವ ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. "ಕಳೆದ ಮೂರು ವರ್ಷದ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು; ಅದಕ್ಕೆ ಎಷ್ಟು ಪರಿಹಾರಧನವನ್ನು ಒದಗಿಸಲಾಗಿದೆ" ಎನ್ನುವ ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಕಳೆದ ಮೂರು ವರ್ಷಗಳ ಮಾಹಿತಿಯನ್ನು ಮಾನ್ಯ ಸಚಿವರು ಒದಗಿಸಿಕೊಟ್ಟಿದ್ದಾರೆ. ಆ ಮಾಹಿತಿಯಲ್ಲಿ "ಬಂದಿರುವಂತಹ ಅರ್ಜಿಗಳೆಷ್ಟು; ತಿರಸ್ಕೃತವಾಗಿರುವ ಅರ್ಜಿಗಳು ಎಷ್ಟು ಮತ್ತು ತೀರ್ಮಾನಿಸಬೇಕಾಗಿರುವ ಪ್ರಕರಣಗಳು ಎಷ್ಟು" ಎನ್ನುವುದರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. "2023-24ನೇ ಸಾಲಿನಲ್ಲಿ ತೀರ್ಮಾನಿಸಬೇಕಾಗಿರುವ ಪ್ರಕರಣಗಳ ಸಂಖ್ಯೆ 1,090 ಮತ್ತು ತೀರ್ಮಾನಿಸಬೇಕಾಗಿರುವ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 1090" ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಅದೇ ರೀತಿ "2024-25ನೇ ಸಾಲಿನಲ್ಲಿ ತೀರ್ಮಾನಿಸಬೇಕಾಗಿರುವ ಪ್ರಕರಣಗಳ ಸಂಖ್ಯೆ 1.022 ಮತ್ತು ತೀರ್ಮಾನಿಸಬೇಕಾಗಿರುವ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 1022" ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಅದೇ ರೀತಿ "2025-26ನೇ ಸಾಲಿನಲ್ಲಿ ತೀರ್ಮಾನಿಸಬೇಕಾಗಿರುವ ಪ್ರಕರಣಗಳ ಸಂಖ್ಯೆ 359 ಮತ್ತು ತೀರ್ಮಾನಿಸಬೇಕಾಗಿರುವ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 331" ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಪ್ರತಿ ಕುಟುಂಬಕ್ಕೂ ಸುಮಾರು 5 ಲಕ್ಷ ರೂಪಾಯಿಗಳ ಪರಿಹಾರಧನ ದೊರೆತಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

2022-23ನೇ ಸಾಲಿನಲ್ಲಿ ಇರುವಂತಹ ರೈತ ಕಲ್ಯಾಣ ಯೋಜನೆಗಳು ಯಥಾವತ್ತಾಗಿ ಮುಂದುವರೆಸಲಾಗಿದೆಯೇ ಅಥವಾ ಯಾವುದಾದರು ಯೋಜನೆಯನ್ನು ಕೈಬಿಡಲಾಗಿದೆಯೇ ಎನ್ನುವ ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಎನ್.ಚಲುವರಾಯಸ್ವಾಮಿ(ಕೃಷಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ ಸವಿವರವಾಗಿರುವ ಉತ್ತರವನ್ನು ಕೊಟ್ಟಿದ್ದೇವೆ. ಪ್ರಮುಖವಾಗಿ ಅವರು ಕಳೆದ ಮೂರು ವರ್ಷಗಳಲ್ಲಿ ರೈತ ಕಲ್ಯಾಣ ಯೋಜನೆಗಳು ಯಥಾವತ್ತಾಗಿ ಮುಂದುವರೆಸಲಾಗಿದೆಯೇ ಅಥವಾ ಯಾವುದಾದರು

ಯೋಜನೆಯನ್ನು ಕೈಬಿಡಲಾಗಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಮಿನಿ ಆಹಾರ ಪಾರ್ಕುಗಳನ್ನು ಸ್ಥಾಪನೆ ಮಾಡುವುದನ್ನು ನಿಲ್ಲಿಸಿ, ಶಿವಮೊಗ್ಗದ ಸೋಗಾನೆ, ವಿಜಯಪುರದ ಇಟ್ಟಂಗಿಯಾಳ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿರುವ ಪೂಜೇನಹಳ್ಳಿ ಈ ಮೂರು ಸ್ಥಳಗಳಲ್ಲಿ ದೊಡ್ಡ ಪ್ರಮಾಣದಲ್ಲಿನ ಆಹಾರ ಪಾರ್ಕುಗಳನ್ನು ಸ್ಥಾಪನೆ ಮಾಡುವ ಮೂಲಕ ರೈತರು ಶೈತ್ಯಾಗಾರದ ಅನುಕೂಲವನ್ನು ಪಡೆದುಕೊಳ್ಳುವಂತೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ "ನೈಸರ್ಗಿಕ ಯೋಜನೆ"ಯನ್ನು "ರಾಷ್ಟ್ರೀಯ ಕೃಷಿ ಅಭಿಯಾನ ಯೋಜನೆ" ಯಡಿಯಲ್ಲಿ ವಿಲೀನಗೊಳಸಲಾಗಿದೆ. "ರೈತ ಶಕ್ತಿ ಯೋಜನೆ" ಯಡಿಯಲ್ಲಿ ಟ್ರ್ಯಾಕ್ಟರ್, ಟಿಲ್ಲರ್ ಮುಂತಾದ ಯಂತ್ರಗಳನ್ನು ಬಳಸುವ ರೈತರಿಗೆ ಎಕರೆಗೆ 250 ರೂಪಾಯಿಗಳಂತೆ, ಗರಿಷ್ಠ 5 ಎಕರೆಗೆ 1,250 ರೂಪಾಯಿಗಳ ಡೀಸೆಲ್ ಸಹಾಯಧನಕ್ಕೆ ಬದಲಾಗಿ P.M.K.S.Y. (Pradhan Mantri Krishi Sinchayee Yojana) ಅಡಿಯಲ್ಲಿ ಸೋಲಾರ್ ಪಂಪ್‌ಸೆಟ್‌ಗಳನ್ನು ಸಹಾಯಧನದ ಮೂಲಕ ನೀಡಲಾಗುತ್ತಿದೆ.

ಮಾನ್ಯ ಸದಸ್ಯರು ಕಳೆದ ಮೂರು ವರ್ಷಗಳಲ್ಲಿ ರೈತ ಕಲ್ಯಾಣಕ್ಕಾಗಿ ಏನೇನು ಯೋಜನೆಗಳನ್ನು ರೂಪಿಸಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಬಿತ್ತನೆ ಬೀಜ ಸಹಾಯಧನವನ್ನು ಸುಮಾರು 39 ಲಕ್ಷ ರೈತರಿಗೆ 423 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಕೃಷಿ ಯಾಂತ್ರೀಕರಣಕ್ಕಾಗಿ ಸುಮಾರು 3,23,000 ರೈತರಿಗೆ 1.500 ಕೋಟಿ ರೂಪಾಯಿಗಳಗಿಂತಲೂ ಹೆಚ್ಚು ಸಹಾಯಧನವನ್ನು ನೀಡಲಾಗಿದೆ. ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಸುಮಾರು 75,000ಕ್ಕಿಂತಲೂ ಹೆಚ್ಚು ಕೃಷಿ ಹೊಂಡಗಳನ್ನು ಮಾಡಲಾಗಿದೆ. ಕೃಷಿ ಸಂಸ್ಕರಣ ಘಟಕಗಳಗೆ 3,71,000 ರೈತರಿಗೆ 78 ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡಲಾಗಿದೆ. ಸೂಕ್ಷ್ಮ ನೀರಾವರಿಗೆ ಸುಮಾರು 6,41,000 ರೈತರಿಗೆ 1,320 ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡಲಾಗಿದೆ. "ರೈತ ಸಿರಿ ಯೋಜನೆ" ಯಡಿಯಲ್ಲಿ 38 ಕೋಟಿ ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಲಾಗಿದೆ. "ಹೈಟೆಕ್ ಹಾರ್ವೆಸ್ಟರ್ ಹಬ್" ಅನ್ನು ಉತ್ತರ ಕರ್ನಾಟಕ ಭಾಗಕ್ಕೆ ಹೆಚ್ಚು ನೀಡಲಾಗಿದೆ. ಆಧುನಿಕ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಖರೀದಿ ಮಾಡಲು ಸುಮಾರು 1,127 ಕೋಟಿ ರೂಪಾಯಿಗಳ ವೆಚ್ಚದಲ್ಲಿ 340 ಹೈಟೆಕ್ ಹಾರ್ವೆಸ್ಟರ್ ಹಬ್ ಮಾಡಲಾಗಿದೆ. ಎರಡೂವರೆ ವರ್ಷಗಳಲ್ಲಿ ಸುಮಾರು 6,000 ಕೋಟಿ ರೂಪಾಯಿಗಳನ್ನು ಬೆಳೆ ವಿಮೆಯ ರೂಪದಲ್ಲಿ ವಿತರಣೆ ಮಾಡಲಾಗಿದೆ. ಇ-ಸ್ಯಾಪ್ ಕೀಟ ರೋಗ ನಿರ್ವಹಣೆಯ ಸಲಹೆಯನ್ನು ಸುಮಾರು 15 ಲಕ್ಷ ಜನ ರೈತರಿಗೆ ನೀಡಲಾಗಿದೆ. ಇದರ ಜೊತೆಗೆ ರೈತ ಸಮೃದ್ಧಿ ಯೋಜನೆ ಕರ್ನಾಟಕ ರಾಜ್ಯದ ಬೀಜ ನಿಗಮದಿಂದ... K.A.P.P.E.C. (Karnataka State Agricultural

Produce Processing & Export Corporation Limited) ನಿಂದ 206 ಕೋಟಿ ರೂಪಾಯಿಗಳನ್ನು ನೀಡಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 5,000 ಕಿರು ಉದ್ದಿಮೆದಾರರಿಗೆ 15 ಲಕ್ಷ ರೂಪಾಯಿಗಳ ಸಹಾಯಧನವನ್ನು ನೀಡಲಾಗಿದೆ. 600 ಕೋಟಿ ವೆಚ್ಚದಲ್ಲಿ 5 ವರ್ಷಗಳಲ್ಲಿ REWARD (Rejuvenating Watersheds for Agricultural Resilience through Innovative Development) ಯೋಜನೆಯನ್ನು ಪೂರ್ಣಗೊಳಿಸಲಿದ್ದೇವೆ. ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಬರ ಪರಿಹಾರವನ್ನು ನೀಡದೇ ಇರುವಾಗ, ಸುಪ್ರೀಂ ಕೋರ್ಟ್ ಮೂಲಕ ಆದೇಶವನ್ನು ತಂದು 3,454 ಕೋಟಿ ರೂಪಾಯಿಗಳ ಬರ ಪರಿಹಾರವನ್ನು ರೈತರಿಗೆ ವಿತರಣೆ ಮಾಡಲಾಗಿದೆ. ಕಲಬುರಗಿ ಮತ್ತಿತರ 12 ಜಿಲ್ಲೆಗಳಲ್ಲಿ ಅತಿವೃಷ್ಟಿಯುಂಟಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಕಲಬುರಗಿ ಉಸ್ತುವಾರಿ ಸಚಿವರು ಮತ್ತು ಕಂದಾಯ ಸಚಿವರು ಎಲ್ಲರೂ ಹೋಗಿ 2,250 ಕೋಟಿ ರೂಪಾಯಿಗಳ ಪರಿಹಾರವನ್ನು ನೀಡಿದ್ದಾರೆ. ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾಗಿ 58 ಪ್ರಯೋಗಶಾಲೆಗಳ ಬಲವರ್ಧನೆಗೆ ಮತ್ತು 28 ಲ್ಯಾಬ್‌ಗಳಿಗೆ N.A.B.L. (National Accreditation Board for Testing and Calibration Laboratories) accreditation ಮಾನ್ಯತೆಯನ್ನು ಪಡೆದುಕೊಳ್ಳಲಾಗಿದೆ. ಬೆಳೆ ವಿಮೆ ವಿತರಣೆಯಲ್ಲಿ ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ. ಅದಕ್ಕಾಗಿ ಕೇಂದ್ರ ಸರ್ಕಾರದಿಂದ ಪ್ರಶಸ್ತಿ ದೊರೆಯುವುದರ ಜೊತೆಗೆ, ಕೇಂದ್ರ ಸಚಿವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳ ಅವಧಿಯಲ್ಲಿ ನಮ್ಮ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಪಂಚ ಗ್ಯಾರಂಟಿಗಳ ಜೊತೆಗೆ ಏನೇನು ಹೆಚ್ಚುವರಿಯಾಗಿ ಸೌಲಭ್ಯಗಳನ್ನು ನೀಡುವುದಕ್ಕೆ ಸಾಧ್ಯವಾಗುತ್ತದೆ, ಅದೆಲ್ಲವನ್ನೂ ಆಗಿಂದಾಗ್ಯೆ ಒದಗಿಸಿಕೊಡಲಾಗುತ್ತಿದೆ. ಕಬ್ಬು ಬೆಳೆ ನಷ್ಟವಾದಾಗ, ಅತಿವೃಷ್ಟಿ ಮತ್ತು ಅನಾವೃಷ್ಟಿಗಳ ಕಾಲದಲ್ಲಿ ರೈತರಿಗೆ ಪರಿಹಾರಗಳನ್ನು ನೀಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕೆಳ ಮನೆಯಲ್ಲಿ ಒಂದು ಪ್ರಶ್ನೆಯನ್ನು ಸಹ ಕೇಳಿದ್ದರು. ಕಲಬುರಗಿ ಜಿಲ್ಲೆಯೊಂದಕ್ಕೆ 990 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಕಳೆದ ವರ್ಷ 674 ಕೋಟಿ ರೂಪಾಯಿಗಳ ಬೆಳೆ ವಿಮೆಯನ್ನು ಕ್ಲೈಮ್ ಮಾಡಲಾಗಿದೆ. ಎಲ್ಲ ಸೇರಿದರೆ ಒಟ್ಟು 2,500 ಕೋಟಿ ರೂಪಾಯಿಗಳ ವಿಮೆಯನ್ನು ವಿತರಣೆ ಮಾಡಲಾಗಿದೆ.

ರೈತರ ಆತ್ಮಹತ್ಯೆ ಪ್ರಕಣಗಳಗೆ ಸಂಬಂಧಪಟ್ಟಂತೆ ನೀಡಲಾಗಿರುವ ಪರಿಹಾರದ ಬಗ್ಗೆ ಹೇಳಬೇಕಾದರೆ, 2023-24ನೇ ಸಾಲಿನಲ್ಲಿ 164 ಅರ್ಜಿಗಳು ತಿರಸ್ಕೃತಗೊಂಡಿವೆ, 2024-25ನೇ ಸಾಲಿನಲ್ಲಿ 55 ಅರ್ಜಿಗಳು ತಿರಸ್ಕೃತಗೊಂಡಿವೆ. 2025-26ನೇ ಸಾಲಿನಲ್ಲಿ 55 ಅರ್ಜಿಗಳು ತಿರಸ್ಕೃತಗೊಂಡಿವೆ. ಉಳಿದ ಎಲ್ಲ ಪ್ರಕರಣಗಳಿಗೂ 5 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡುವಂತಹ ಕೆಲಸ ಮಾಡಲಾಗಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, "ರೈತ ವಿದ್ಯಾನಿಧಿ ಯೋಜನೆ" ಬಹಳಷ್ಟು ರೈತರ ಮಕ್ಕಳಿಗೆ ಅನುಕೂಲವಾಗಿರುವಂತಹ ಯೋಜನೆಯಾಗಿದೆ. ಈ ಯೋಜನೆಯನ್ನು ನಿಲ್ಲಿಸಲಾಗಿದೆ ಎನ್ನುವ ವಿಚಾರ ತಿಳಿದು ಬಂದಿದೆ. ದಯವಿಟ್ಟು ಅದನ್ನು ಪುನಃ ಪ್ರಾರಂಭ ಮಾಡುವ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕಾಗಿದೆ. ಇದರಿಂದ ಪ್ರತಿ ವರ್ಷ ಸುಮಾರು 10 ಲಕ್ಷ  ಬಡ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತಿತ್ತು. ಇದನ್ನು ಮುಂದಿನ ಆಯವ್ಯಯದಲ್ಲಿ ಪ್ರಾರಂಭ ಮಾಡಿದರೆ ಉತ್ತಮ ಎನ್ನುವುದು ನನ್ನ ಅನಿಸಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ನೀರಾವರಿ ಜಮೀನುಗಳು ಸಾಕಷ್ಟು ಪ್ರಮಾಣದಲ್ಲಿ ಸವಳು-ಜವಳು ಆಗುತ್ತಿವೆ. ಬಹಳಷ್ಟು ಜಮೀನುಗಳು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ಜಾರಿಗೆ ತರಬೇಕಾಗುತ್ತದೆ ಅಥವಾ ಆ ಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಸಬ್ಸಿಡಿ ರೂಪದಲ್ಲಿ ಸಹಾಯಧನವನ್ನು ನೀಡುವಂತಹ ಹೊಸ ಯೋಜನೆಗಳನ್ನು ಮುಂದಿನ ದಿನಗಳಲ್ಲಿ ಸರ್ಕಾರ ಜಾರಿಗೊಳಿಸಿದರೆ, ಕೃಷಿ ಭೂಮಿ ತನ್ನ ಫಲವತ್ತತೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.  ಈ ನಿಟ್ಟಿನಲ್ಲಿ ಸರ್ಕಾರ ಯೋಜನೆ ಮಾಡಬೇಕಾಗುತ್ತದೆ. ತೋಟಗಾರಿಕೆಯಲ್ಲಿ ಹನಿ ನೀರಾವರಿಗೆ ಹೆಚ್ಚು ಒತ್ತನ್ನು ನೀಡಿದರೆ ನೀರು ಮತ್ತು ಮಣ್ಣನ್ನು ಬಳಸಿಕೊಳ್ಳುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ಚಲುವರಾಯಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ರೈತ ಮಕ್ಕಳಿಗೆ ನೀಡುತ್ತಿರುವ ವಿದ್ಯಾನಿಧಿ ಯೋಜನೆಯನ್ನು ನಿಲ್ಲಿಸಿಲ್ಲ. ಸಮಾಜ ಕಲ್ಯಾಣ ಇಲಾಖೆಯಿಂದ ಮತ್ತು ನಮ್ಮ ಇಲಾಖೆಯಿಂದ ನೀಡುವಂತಹ ಸಹಾಯಧನದ duplication ಆಗಬಾರದೆಂದು ಅದನ್ನು ಮಾನಿಟರ್ ಮಾಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಯವರು ಕೊಡದೇ ಇರುವವರಿಗೆ ನಮ್ಮ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ. ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲಾಗುತ್ತದೆ.

ಮಾನ್ಯ ಸದಸ್ಯರು ಸವಳು–ಜವಳಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಬರುತ್ತಿರುವ ಅನುದಾನದ ಪ್ರಮಾಣ ದಿನೇದಿನೇ ಕಡಿಮೆಯಾಗುತ್ತಿದೆ. ಕಳೆದ ಬಾರಿ ನಾವು ಹೆಚ್ಚು ಒತ್ತಡವನ್ನು ಹೇರಿದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಸುಮಾರು 13 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದರು. ಮೊನ್ನೆ ನಾನು ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಸುಮಾರು 4 ಕೋಟಿ ರೂಪಾಯಿಗಳನ್ನು ಈ ಉದ್ದೇಶಕ್ಕಾಗಿ ನೀಡಲು ಒಪ್ಪಿಕೊಂಡಿದ್ದಾರೆ. ಇದಕ್ಕೆ ದೊರೆಯುತ್ತಿರುವ ಅನುದಾನದ ಪ್ರಮಾಣ ಬಹಳ ಕಡಿಮೆಯಾಗುತ್ತಿದೆ. ಆದ್ದರಿಂದ ಈ ಬಾರಿಯ ರಾಜ್ಯದ ಆಯವ್ಯಯದಲ್ಲಿ ರಾಜ್ಯ ಸರ್ಕಾರದಿಂದ ಇದಕ್ಕೆ ಅನುದಾನವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಸ್ತಾವವನ್ನು ಸಲ್ಲಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ಈ ವಿಚಾರಕ್ಕೆ ಹೆಚ್ಚುವರಿ ಅನುದಾನ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೂ ಪತ್ರವನ್ನು ಬರೆದಿದ್ದೇನೆ. ಉತ್ತರ ಕರ್ನಾಟಕ ಭಾಗದಲ್ಲಿ ಸುಮಾರು 50 ಸಾವಿರ ಹೆಕ್ಟೇರ್ ಸವಳು–ಜವಳು ಭೂಮಿ ಇದೆ. ಅದಕ್ಕೆ ಉಪಚಾರ ಮಾಡಬೇಕೆನ್ನುವುದರ ಬಗ್ಗೆ ನಮಗೂ ಆಸಕ್ತಿ ಇದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೂ ಮತ್ತೊಮ್ಮೆ ಪತ್ರ ಬರೆಯುತ್ತೇನೆ ಮತ್ತು ರಾಜ್ಯ ಸರ್ಕಾರದಿಂದಲೂ ಅನುದಾನವನ್ನು ಪಡೆದುಕೊಳ್ಳುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸಹಾಯಧನದ ರೂಪದಲ್ಲಿ ಕೊಟ್ಟರೆ, ರೈತರಿಗೆ ಅನುಕೂಲವಾಗುತ್ತದೆ.

**ಶ್ರೀ ಎನ್.ಚಲುವರಾಯಸ್ವಾಮಿ(ಕೃಷಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈ ಬಗ್ಗೆ ಪ್ರಯತ್ನಿಸಲಾಗುತ್ತದೆ.

(ಮುಂದುವರಿದಿದೆ)

(097) 30.01.2026 ವೈಎಲ್-ಕೆಎಸ್ 5.40 (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 436**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರದ ಬಗ್ಗೆ ಪ್ರಶ್ನೆ ಕೇಳಿದ್ದು, 1,938 ವಿದ್ಯಾರ್ಥಿನಿಲಯಗಳು ನಡೆಯುತ್ತಿವೆ ಎಂದು ಉತ್ತರದಲ್ಲಿ ಸಚಿವರು ತಿಳಿಸಿದ್ದಾರೆ. ಹಾಗೆಯೇ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ಎಷ್ಟೆಷ್ಟು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ ಎಂದು ಪ್ರಶ್ನೆ ಕೇಳಿದ್ದು, ಬಾಲಕರಿಗೆ 1,338 ವಿದ್ಯಾರ್ಥಿನಿಲಯಗಳು ಮತ್ತು ಬಾಲಕಿಯರಿಗೆ 600 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದೆ ಎನ್ನುವಂಥ ಉತ್ತರ ಕೊಡಲಾಗಿದೆ. ಈ ಅಂಕಿ-ಅಂಶವನ್ನು ನೋಡಿದಾಗ ಇಷ್ಟು ದೊಡ್ಡ ರೀತಿಯಲ್ಲಿ ಏತಕ್ಕೆ ವ್ಯತ್ಯಾಸವಾಗಿದೆ; ಅಂದರೆ ಶೇಕಡ 30 ರಷ್ಟು ಮಾತ್ರ ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದೆ. ಎಸ್.ಸಿ/ಎಸ್.ಟಿ. ಸಮುದಾಯದ ಬಾಲಕಿಯರು ಓದುವುದಿಲ್ಲ ಎಂದು ಏನಾದರೂ ಅಷ್ಟು ತಾತ್ಸಾರ ಮಾಡಲಾಗಿದೆಯೇ? ಏಕೆಂದರೆ, ಕೇವಲ ಶೇಕಡ 30 ರಷ್ಟು ಮಾತ್ರ ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದೆ. ಅದರ ಜೊತೆಗೆ ಜಿಲ್ಲಾವಾರು ಪಟ್ಟಿಯನ್ನು ಸಹ ಕೇಳಿದ್ದು, ಪಟ್ಟಿಯಲ್ಲಿರುವಂತೆ ಬೆಂಗಳೂರು ಮಹಾನಗರದಲ್ಲಿ 60 ವಿದ್ಯಾರ್ಥಿನಿಲಯಗಳಿದ್ದು, ತುಮಕೂರಿನಲ್ಲಿ 103 ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಬೆಂಗಳೂರು ಮಹಾನಗರದಲ್ಲಿರುವಂಥ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಪಡೆಯಲು ಹೊರಗಿನಿಂದ ಬರುವಂಥ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ವಿದ್ಯಾರ್ಥಿಗಳ ಬಗ್ಗೆ ತಮ್ಮ ಇಲಾಖೆ ವತಿಯಿಂದ ಯಾವುದೇ ಅಧಿಕಾರಿಗಳು ಕೂಡ ಗಮನಹರಿಸುವಂಥ ಕೆಲಸ ಮಾಡಿಲ್ಲವೆಂದು ತಾವು ಕೊಟ್ಟಿರುವಂಥ ಉತ್ತರದಲ್ಲಿ ಕಾಣಿಸುತ್ತಿದೆ. ಹಾಗೆಯೇ ಎಷ್ಟು ಡಿವಿಷನ್ ಮಾಡುತ್ತೀರಿ ಎನ್ನುವಂಥ ಪ್ರಶ್ನೆಯನ್ನು ಸಹ ಕೇಳಿದ್ದು, ಶೇಕಡ 75 ರಷ್ಟು ಎಸ್.ಸಿ/ಎಸ್.ಟಿ. ಸಮುದಾಯದವರಿಗೆ ಮೀಸಲಾದ ನಂತರ ಶೇಕಡ 25 ರಷ್ಟು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕೊಡುತ್ತೇವೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಸುಮಾರು 60,000 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಾರೆ. ಅದರಲ್ಲಿ ಕೇವಲ ಸುಮಾರು 10,000 ರಿಂದ 15,000 ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಗುತ್ತಿದೆ. ಸದರಿ ವಿಚಾರವಾಗಿ ನಿಯಮ 330 ರಡಿ ಹಿಂದುಳಿದ ವರ್ಗಗಳ ಇಲಾಖೆಯವರಿಗೆ ಪ್ರಶ್ನೆ ಸಹ ಕೇಳಲಾಗಿತ್ತು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದನ್ನು ಸರಿಪಡಿಸಲಿಕ್ಕೆ ಸಂಪನ್ಮೂಲ

ಇದೆ. ಆದಾಗ್ಯೂ ಕೂಡ ಏತಕ್ಕೆ ಇದರ ಬಗ್ಗೆ ನಿರ್ಲಕ್ಷ್ಯವಹಿಸಲಾಗಿದೆ. ಜೊತೆಗೆ ಸರ್ಕಾರವು ಆ ವರ್ಗದಿಂದ ಬರುವಂಥ ವಿದ್ಯಾರ್ಥಿಗಳ ಬಗ್ಗೆ ಉದಾಹರಣೆಯನ್ನು ಸಹಿತ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ, ಕಮರ್ಷಿಯಲ್ ಜಾಗದ ಬೆಸ್‌ಮೆಂಟ್‌ನಲ್ಲಿ ಒಂದು ಹಾಸ್ಟೆಲ್ ನಿರ್ಮಿಸಲಾಗಿದ್ದು, ಮೇಲೆ ಅಂಗಡಿಗಳಿದ್ದು, ಕಮರ್ಷಿಯಲ್ ಜಾಗದಲ್ಲಿ ಹಾಸ್ಟೆಲ್ ಮಾಡಿದ್ದಾರೆ. ಅದಕ್ಕೆ shutter ಎಳೆದು ಒಳಗೆ ಹೋಗಿ, ಮತ್ತೆ shutter ಮುಚ್ಚಬೇಕು. ಅಲ್ಲಿ ಸುಮಾರು 36 ರಿಂದ 37 ಬಾಲಕಿಯರಿದ್ದು, ಅದರಲ್ಲಿ ಒಂದು ಬಾತ್‌ರೂಮ್ ಸಹ ಇರುವುದು. ಮೈನ್ ರೋಡ್‌ನಲ್ಲಿಯೇ ಆ ಹಾಸ್ಟೆಲ್ ಇದ್ದು, ಬಸ್ಸುಗಳು ಹೋರಾಡುವುದರಿಂದ ರಸ್ತೆಯ ಧೂಳು ಹಾಸ್ಟೆಲ್ ಒಳಗೆ ಹೋಗುತ್ತವೆ.

**ಸಭಾಪತಿಯವರು:–** ಯಾವ ಸ್ಥಳದಲ್ಲಿದೆ ಎಂಬುದನ್ನು ಹೇಳಿ. ಮಾನ್ಯ ಸಚಿವರು ಉತ್ತರ ನೀಡಲಿ.

**ಡಾ|| ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಇಲ್ಲಿ ಹೆಣ್ಣು ಮಕ್ಕಳಿಗೆ ಕಡಿಮೆ ಹಾಸ್ಟೆಲ್ ಗಂಡು ಮಕ್ಕಳಿಗೆ ಜಾಸ್ತಿ ಹಾಸ್ಟೆಲ್ ಎಂದು ತಾರತಮ್ಯ ಮಾಡಿಲ್ಲ. ಒಟ್ಟು 1,938 ಹಾಸ್ಟೆಲ್‌ಗಳು ಏನಿವೆ, ಆ ಹಾಸ್ಟೆಲ್‌ನಲ್ಲಿ ಗಂಡು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಹೆಣ್ಣು ಮಕ್ಕಳು ಸಹ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಅದರ ಜೊತೆಗೆ ಪ್ರತ್ಯೇಕವಾಗಿಯೇ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಇಟ್ಟಿದ್ದೇವೆ. ಅದರ ಜೊತೆಗೆ ಇನ್ನೂ ಸುಮಾರು 150 ಹೊಸ ಹಾಸ್ಟೆಲ್ ತೆರೆಯಲು ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕೆಂದು ಆಲೋಚನೆಯನ್ನಿಟ್ಟುಕೊಂಡಿದ್ದೇವೆ. ಹಾಗೆಯೇ ಮೂರ್ನಾಲ್ಕು ವರ್ಷಗಳಲ್ಲಿ ನಮ್ಮ ಸ್ವಂತ ಕಟ್ಟಡದಲ್ಲಿ ಹಾಸ್ಟೆಲ್ ನಿರ್ಮಿಸಬೇಕು; ಬಾಡಿಗೆಗೆ ತೆಗೆದುಕೊಳ್ಳಬಾರದು; ಎನ್ನುವಂಥ ಯೋಜನೆಯನ್ನಿಟ್ಟುಕೊಂಡಿದ್ದೇವೆ. ನಮ್ಮ ಒಟ್ಟು residential schools ಸುಮಾರು 175 ಹಾಸ್ಟೆಲ್‌ಗಳನ್ನು ಹೊರತುಪಡಿಸಿದರೆ, ಉಳಿದೆಲ್ಲಾ ಹಾಸ್ಟೆಲ್‌ಗಳನ್ನು ಸ್ವಂತ ಕಟ್ಟಡ ಮೇಲೆಯೇ ನಡೆಸುತ್ತಿದ್ದೇವೆ. ಯಾವುದೇ ವಿದ್ಯಾರ್ಥಿಗೂ ಸಹ ಹಾಸ್ಟೆಲ್‌ನಲ್ಲಿ ಜಾಗ ಇಲ್ಲವೆಂದೂ ಹೇಳುವುದಕ್ಕಾಗುವುದಿಲ್ಲ, general policy ಯಾಗಿದ್ದು, ಎಲ್ಲರಿಗೂ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲೇಬೇಕು. ಹಾಸ್ಟೆಲ್‌ಗಳಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ ಪಕ್ಷದಲ್ಲಿ ಬಾಡಿಗೆಗಾದರೂ ಕಟ್ಟಡ ಖರೀದಿಸಿ, ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಬೇಕೆನ್ನುವಂಥ ಪಾಲಿಸಿ ಮಾಡಿದ್ದೇವೆ. ಇಲ್ಲಿ ಶೇಕಡ 25 ರಷ್ಟು others ಗೆ ವ್ಯವಸ್ಥೆ ಕಲ್ಪಿಸುವಾಗ ಹಿಂದುಳಿದ ವರ್ಗದವರು ಸಹ ಬೇರೆ–ಬೇರೆ ಕಡೆ ಸೇರಿಕೊಳ್ಳುತ್ತಿರುತ್ತಾರೆ. ಅವರಿಗೇನು ನಾವು ಹಾಸ್ಟೆಲ್‌ನಲ್ಲಿ ಜಾಗ ಕೊಡುವುದಿಲ್ಲ ಎಂದು ಹೇಳುವುದಿಲ್ಲ. These are all the special category of schools run by

the Social Welfare Department. ಸುಮಾರು ಎರಡು ಲಕ್ಷ ಹತ್ತೊಂಬತ್ತು ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, general school ಗಿಂತ ಹೆಚ್ಚು ಪರ್ಸೆಂಟ್‌ನಲ್ಲಿ ವಿದ್ಯಾರ್ಥಿಗಳು ಉತ್ತೀರ್ಣ ಹೊಂದುತ್ತಿದ್ದಾರೆ. ಕಳೆದ ವರ್ಷ K.R.E.I.S. (Karnataka Residential Educational Institutions Society) ಶಾಲೆಯ ವಿದ್ಯಾರ್ಥಿಗಳು 1st rank ನಲ್ಲಿ ಉತ್ತೀರ್ಣರಾಗಿದ್ದಾರೆ. ಅದೇ ರೀತಿ ಈ ಸಲವು ವಿದ್ಯಾರ್ಥಿಗಳು rank ಬಂದಿದ್ದಾರೆ. Education standard ಸಹ ಜನರಲ್ ಸ್ಕೂಲ್‌ನಲ್ಲಿ ಏನಿದೆ, ಅಲ್ಲಿಗಿಂತ ಈ ಶಾಲೆಗಳಲ್ಲಿ ಚೆನ್ನಾಗಿದೆ ಹಾಗೂ ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣ ಹೊಂದುತ್ತಿದ್ದಾರೆ. ಹಾಗಾಗಿ, ತಾರತಮ್ಯ ಮಾಡುವುದು; ತಾತ್ಸಾರ ತೋರುವುದು; ಬೇಜವಾಬ್ದಾರಿ; ನಡೆದುಕೊಳ್ಳುತ್ತಿಲ್ಲ. Bengaluru is a big city, ಇಲ್ಲಿ ಒಂದು ಕೋಟಿಗಿಂತ ಹೆಚ್ಚು ಜನಸಂಖ್ಯೆ ಇದೆ. ಇಲ್ಲಿ ಬೇಕಾದಷ್ಟು ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳಿವೆ. 'Right to Education' ನಡಿ ಶೇಕಡ 25 ರಷ್ಟು ಅಡ್ಮಿಷನ್‌ಗೆ ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಬೇರೆ ಬೇರೆ ಕಾರಣಗಳಿಂದ ಸ್ಥಗಿತಗೊಳಿಸಿದರೆ ಪುನಃ ಪರಿಶೀಲನೆ ಮಾಡಬೇಕಾಗಿದೆ. ಹಾಗಾಗಿ, ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. Regardless of whether it is for S.C./S.T. children or general category children, education is the priority area in the Country. ಇದರ ಮುಖಾಂತರ ಹೊಸ ಸಮಾಜವನ್ನು ನಿರ್ಮಿಸಲು ಸಾಧ್ಯವಾಗುತ್ತದೆ. ನಾನು ನೀಡಿರುವಂಥ ಉತ್ತರದನ್ವಯ ತಾತ್ಸಾರ, negligence, ತಾರತಮ್ಯ ಮಾಡುವಂಥ ಪ್ರಶ್ನೆ ಬರುವುದಿಲ್ಲ. As and when it requires, as and when we receive budgetary allocation, we will certainly concentrate and ensure that children receive quality education.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು K.R.E.I.S. ಶಾಲೆಯಿಂದ ಒಳ್ಳೆಯ ಫಲಿತಾಂಶ ಬರುತ್ತಿದೆ ಎಂದು ಹೇಳಿದ್ದು, ನಾನು ಅದರ ಬಗ್ಗೆ dispute ಮಾಡುತ್ತಿಲ್ಲ. ನಾನು ಕೇಳುವುದೇನೆಂದರೆ, ತಾವು ಪ್ರತಿಯೊಬ್ಬ ವಿದ್ಯಾರ್ಥಿಗೆ ತಮ್ಮ ಇಲಾಖೆ ವತಿಯಿಂದಲೇ ಕೇವಲ ಹಾಸ್ಟೆಲ್‌ಗೋಸ್ಕರ ರೂ.37,915/- ಹಾಗೂ ಬಾಲಕಿಯರಿಗೆ ರೂ.39,462/- ಗಳನ್ನು ವೆಚ್ಚ ಮಾಡಲಾಗುತ್ತಿದೆ. ಅಷ್ಟು ಖರ್ಚಿಗೆ ಸೂಕ್ತವಾದಂಥ ಸವಲತ್ತು ಆ ಹಾಸ್ಟೆಲ್‌ನಲ್ಲಿ ಸಿಗುತ್ತಿದೆಯೇ? ಸರ್ಕಾರದ ಕಡೆಯಿಂದ ಅಷ್ಟು ಹಣ ಖರ್ಚಾಗುತ್ತಿದ್ದು, ಆ ಗುಣಮಟ್ಟದ ಸವಲತ್ತನ್ನು ಕೊಡುವಂಥದ್ದು ಆಗುತ್ತಿದೆಯೇ ಎಂಬುದನ್ನು ತಮ್ಮ ಇಲಾಖೆ ವತಿಯಿಂದ ಅಧಿಕಾರಿಗಳು ಪರಿಶೀಲನೆ ಮಾಡುತ್ತಿದ್ದಾರೆಯೇ? ಏಕೆಂದರೆ, ನಾನು ವೈಯಕ್ತಿಕ ಆಸಕ್ತಿಯಿಂದ

ಹಾಸ್ಟೆಲ್‌ಗಳಿಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಎಷ್ಟೋ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕೂಡ ಜಾಸ್ತಿ ಇದೆ ಹಾಗೂ ಎಷ್ಟೋ ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿಗಳು ಅನೇಕ ಸಮಸ್ಯೆಗಳನ್ನು ಹೇಳಿಕೊಳ್ಳಲಿಕ್ಕೆ ಆಗದೇ ಏನೋ ಬಂದು ಸೇರಿಕೊಂಡಿದ್ದೇವೆ, ಶಿಕ್ಷಣವನ್ನು ಮುಗಿಸಿ ಬೇಗ ನಮ್ಮ ಮನೆಗೆ ಹೋಗೋಣ ಎನ್ನುವ ರೀತಿಯಾಗಿದೆ. ಸರ್ಕಾರವು ಇಷ್ಟು ಯೋಜನೆಯನ್ನು ಯಾರಿಗೋಸ್ಕರ ಮಾಡುತ್ತಿದೆ? ವಿದ್ಯಾರ್ಥಿಗಳು ಚೆನ್ನಾಗಿ ಓದಲಿ ಎನ್ನುವ ಸಲುವಾಗಿ ಮಾಡುತ್ತಿದೆ. ಶಿಕ್ಷಣದಲ್ಲಿ ಯಾವುದೇ ರೀತಿಯ compromise ಮಾಡುವುದಿಲ್ಲ ಎಂದು ತಾವೇ ಹೇಳಿದ್ದೀರಿ. ಆದರೆ, ತಾವು ಕೊಟ್ಟಂತಹ ಅಂಕಿಅಂಶಗಳ ಪ್ರಕಾರ district–wise allocation of hostels ನಲ್ಲಿ ತುಂಬಾ disparity ಇದೆ.

**ಡಾ॥ ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾನವಾಗಿ ಹಾಸ್ಟೆಲ್‌ಗಳ ಹಂಚಿಕೆಯಾಗಬೇಕೆಂಬುದು ಮಾನ್ಯ ಸದಸ್ಯರ ಉದ್ದೇಶವಾಗಿದೆ. ಜೊತೆಗೆ ಮಾನ್ಯ ಸದಸ್ಯರು ಭೇಟಿ ನೀಡಿರುವಂಥ ಹಾಸ್ಟೆಲ್‌ಗಳಲ್ಲಿ ಏನಾದರೂ ಮಾಹಿತಿ ಸಿಕ್ಕಿದ್ದರೆ ನನಗೆ ಕೊಡಲಿ. ಆದರೆ, ನನ್ನ ಪ್ರಕಾರ, the quality has been improving. ಹಾಗೆಂದು ಶ್ರೇಷ್ಠ ಮಟ್ಟದ ಗುಣಮಟ್ಟದ ಹಾಸ್ಟೆಲ್ ಕೊಟ್ಟಿದ್ದೇವೆ ಎಂದು ಹೇಳುವುದಿಲ್ಲ. ಆದರೆ, ಕೆಳಮಟ್ಟದಲ್ಲಿ ಅಂತೂ ಇಳಿದಿಲ್ಲ. ಸುಧಾರಣೆ ಮಾಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಎರಡೂ–ಮೂರು ವರ್ಷಗಳಿಂದ ಮಾಡುತ್ತಿದ್ದೇವೆ. There has been a considerable improvement in the quality of infrastructure, as well as in food and teaching facilities. ಬೇರೆ ಬೇರೆ ವಿನ್ಯಾಸಗಳನ್ನು ಮಾಡಿ, ಎಲ್ಲಾ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಮಾನ್ಯ ಕೆ.ಎಸ್.ನವೀನ್‌ರವರು ಭೇಟಿ ನೀಡಿರುವಂಥ ಶಾಲೆಗಳಲ್ಲಿ ವಿದ್ಯಾರ್ಥಿಗಳೇನಾದರೂ feedback ಕೊಟ್ಟಿದ್ದರೆ ಅಥವಾ ನಿಮ್ಮದೇನಾದರೂ findings ಇದ್ದರೆ. Please give us feedback and I will try to address it..

**ಸಭಾಪತಿಯವರು:–** ಮಾನ್ಯ ಜಗದೇವ್ ಗುತ್ತೇದಾರ್‌ರವರೇ, ತಮ್ಮ **ಪ್ರಶ್ನೆ ಸಂಖ್ಯೆ: 551** ಕ್ಕೆ ಕಾಲಾವಕಾಶ ಕೋರಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 446+526**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೈಸೂರಿನಲ್ಲಿರುವ ರಾಷ್ಟ್ರಕವಿ ಕುವೆಂಪುರವರ ಉದಯರವಿ ನಿವಾಸವು ಶ್ರೀ ರಾಮಾಯಣ ದರ್ಶನಂ ಕೃತಿಯ ಜನ್ಮಕ್ಕೆ ಮತ್ತು ವಿಶ್ವಮಾನವ ಸಂದೇಶದ ಉಗಮಕ್ಕೆ ಸಾಕ್ಷಿಯಾದ ಸಂಕೇತವಾಗಿದ್ದು, ಇಂಥ ಪುಣ್ಯಸ್ಥಳವನ್ನು ವಸ್ತು ಸಂಗ್ರಹಾಲಯವನ್ನಾಗಿ ಮಾಡಬೇಕೆನ್ನುವುದು ಪ್ರತಿಯೊಬ್ಬ ಕನ್ನಡಿಗರ ಬಹುಕಾಲದ ಕನಸು ಮತ್ತು ಬೇಡಿಕೆಯಾಗಿದೆ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದೆನು. ಮಾನ್ಯ ಸಚಿವರ ಉತ್ತರದಲ್ಲಿ 2018–19ನೇ ಸಾಲಿನ ಆಯವ್ಯಯದ ಕಂಡಿಕೆ–252 ರಲ್ಲಿತ್ತು ಎಂದು ಹೇಳಿದ್ದಾರೆ. ದಿನಾಂಕ: 13.01.2026 ರಂದು ಮಹಾಕವಿ ಕುವೆಂಪುರವರ ಮೈಸೂರಿನ ನಿವಾಸ ಉದಯರವಿ ಇಲ್ಲಿಗೆ ಭೇಟಿ ನೀಡಿ ಮಾತನಾಡಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇಷ್ಟು ವರ್ಷಗಳ ತರುವಾಯ ಹೋಗಿದ್ದಾರೆ ಎಂದರೆ, ದೊಡ್ಡ ಗ್ಯಾಪ್ ಆಗಿದ್ದು, ಮತ್ತೆ ಸುಮಾರು 8 ವರ್ಷಗಳು ಕಳೆದು ಹೋಗುವ ಹಾಗೆ ನೋಡಿಕೊಂಡು ಸಾಧ್ಯವಾದಷ್ಟು ಬೇಗ ಆಗುವ ರೀತಿಯಲ್ಲಿ ವಿಶೇಷ ಪ್ರಯತ್ನ ಮಾನ್ಯ ಸಚಿವರ ಕಾಲದಲ್ಲಿಯೇ ಆಗಿತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ಇದು 2018–19ನೇ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಘೋಷಣೆ ಮಾಡಿದರು.

(ಮುಂದು)

**(98) 30.01.2026/5.50/ ಎಸ್‌ಕೆ–ಎಂಡಿ.** **ಸಭಾಪತಿಯವರ ಉಪಸ್ಥಿತಿ**

**ಶ್ರೀ ಶಿವರಾಜ ಎಸ್. ತಂಗಡಗಿ (ಮುಂದು)**

ಆ ಘೋಷಣೆ ಮಾಡಿದ ನಂತರ ಆ ಮನೆಯವರೆಲ್ಲರೂ ಸೇರಿ, ನಾವು ಇಂತಿಷ್ಟು ಬೆಲೆಗೆ ಕೊಡುತ್ತೇವೆ ಎಂದು ಮತ್ತೆ ಒಂದು ಖರೀದಿ ಹಾಕಿಕೊಳ್ಳಬೇಕೆಂಬುದರೊಳಗೆ ಆರು ತಿಂಗಳಾದ ಮೇಲೆ ಮತ್ತೆ 5 ಕೋಟಿ ರೂಪಾಯಿಗಳಿದ್ದಿದ್ದು, 10 ಕೋಟಿ ರೂಪಾಯಿಗಳವರೆಗೂ ಬೆಲೆಯನ್ನು ಜಾಸ್ತಿ ಮಾಡಿದರು. ಹತ್ತು ಕೋಟಿ

ರೂಪಾಯಿಗಳಾದ ಮೇಲೆ ಮೊನ್ನೆ ನಿಮ್ಮ ಸರ್ಕಾರ ಮತ್ತೆ ಅದರ ಬೆಲೆಯನ್ನು ಜಾಸ್ತಿ ಮಾಡಿ 15 ಕೋಟಿ ರೂಪಾಯಿಗಳಗೆ ಬೇಡಿಕೆಯನ್ನು ಇಟ್ಟರು. ನಾನು ಮೊನ್ನೆ ಅಲ್ಲಿಗೆ ಹೋಗಿದ್ದೆ. ನಾನು ಏತಕ್ಕೆ ಹೋಗಿದ್ದೆಂದರೆ, ಸರ್ಕಾರ ಏನು ನಿರ್ಧಾರ ಮಾಡುತ್ತದೆ ಎಂಬ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಬೇಕಾಗಿತ್ತು. ಅದು ಬಹಳ ಅವಶ್ಯಕತೆ ಇದೆ. ಅದನ್ನು ಸ್ಮಾರಕ ಮಾಡಬೇಕೆಂಬುದರ ಬಗ್ಗೆ ಎಲ್ಲರ ಬೇಡಿಕೆಯಾಗಿದೆ. ಈ ಹಿಂದೆ ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಿದ್ದಾಗ, ಅದನ್ನು ಘೋಷಣೆ ಮಾಡಿದ್ದಾರೆ. ಅದನ್ನು ಮತ್ತೆ ಮತ್ತೆ ಘೋಷಣೆ ಮಾಡುವುದು ಬೇಡ. ಅದನ್ನು ನೀವು ಕೊಡಿ ನಾವು ಸ್ಮಾರಕ ಮಾಡುತ್ತೇವೆ ಎಂದು ಹೇಳಿದಾಗ, ಮತ್ತಷ್ಟು ಬೇಡಿಕೆಯನ್ನು ಇಡುವಂತಹ ಕೆಲಸವನ್ನು ಮಾಡಿದ್ದಾರೆ. ಆ ಬೇಡಿಕೆಗಳು ಬಹಳ ದೊಡ್ಡ ಪ್ರಮಾಣದ್ದಾಗಿದೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಅದನ್ನು ತೆಗೆದುಕೊಳ್ಳಬೇಕು ಎಂಬ ಆಸೆ ಇದೆ. ನನ್ನ ಹಿಂದಿನ ಅವಧಿಯೊಳಗೆ ದಿವಂಗತ ನಿಜಲಿಂಗಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂತಹ ಮಹಾನ್ ವ್ಯಕ್ತಿ. ಮೊನ್ನೆ ಅವರ ಮನೆಯನ್ನು ತೆಗೆದುಕೊಂಡಿದ್ದೇವೆ. ಅವೊತ್ತು ಅವರಿಗೆ ನಾನು ಒಂದೇ ಬೇಡಿಕೆ ಇಟ್ಟಿದ್ದು. ಇದು ಬಹಳ ನಮಗೆ ಅವಶ್ಯಕತೆ ಇದೆ. ನಿಮ್ಮ ಸಹಕಾರ ಬೇಕೆಂದಾಗ, ಇಡೀ ಕುಟುಂಬ ಮತ್ತು ಲಂಡನ್‌ನಲ್ಲಿ ಇರುವಂತಹ ಅವರ ಮೊಮ್ಮಗನು ಸೇರಿ ಖರೀದಿ ಹಾಕಿದರು. 5 ಕೋಟಿ ರೂಪಾಯಿಗಳೊಳಗೆ ಕನಿಷ್ಟ 4 ಕೋಟಿ ರೂಪಾಯಿಗಳಗೆ ಮಾತ್ರ. ನಿಮ್ಮ ಸರ್ಕಾರ ಎಷ್ಟು ಬೆಲೆಗೆ ಕೊಡುತ್ತೀರಾ ಕೊಡಿ. ನಾವು ಉಳಿದಿದ್ದನ್ನು ನಾವು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಇಟ್ಟುಕೊಂಡು, ಈಗ ಅದು ಖರೀದಿಯಾಗುತ್ತಿದೆ. ಅದೇ ರೀತಿ ನೀವು ಸಹಕಾರ ಮಾಡಿರಿ ಎಂದು ನಾನು ಅವರ ಮನೆಗೆ ಹೋಗಿದ್ದೆ. ಅವರ ಮಗಳಾದಂತಹ ಶ್ರೀಮತಿ ತಾರುಣಿದೇವಿ ಮತ್ತು ಪ್ರೋಪೆಸರ್ ಚಿದಾನಂದರವರನ್ನು ಭೇಟಿಯಾಗಿ ನಾನು ವಿನಂತಿಯನ್ನು ಮಾಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರ ಆಸೆ ಏನಿದೆ ಅದನ್ನು ಮಾಡಬೇಕೆಂಬ ಬಗ್ಗೆ ನಿಶ್ಚಿತವಾಗಿ ಸರ್ಕಾರಕ್ಕೂ ಕೂಡ ಆಸೆ ಇದೆ. ವಿಶೇಷವಾಗಿ ಅವರ ಮನೆಯನ್ನು ಪೂರ್ತಿಯಾಗಿ ನೋಡುಕೊಂಡು ಬಂದಿದ್ದೇನೆ. ಆದಾದ ಮೇಲೆ ಮತ್ತೆ ಅವರು ಏನು ಹೇಳಿದರು ಎಂದರೆ, ನಮಗೆ ಮನೆ ಕಟ್ಟಿಕೊಳ್ಳುವುದಕ್ಕೆ ಮುಂದಿನ ಜಾಗ ಬಿಡುತ್ತೇವೆ. ಹಿಂದಿನ ಜಾಗ ಬಿಡುವುದಿಲ್ಲ. ಕೆಲವೊಂದು ಬೇರೆ ಬೇರೆ ವಿಚಾರಗಳನ್ನು ಹೇಳಿದರು. ಅದರ ಬಗ್ಗೆ ನಾನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಸರ್ಕಾರದೊಳಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ. ಮತ್ತೊಮ್ಮೆ ಅವರ ಕುಟುಂಬವನ್ನು ಕರೆದು, ಚರ್ಚೆ ಮಾಡುವ ಅವಶ್ಯಕತೆ ಇದೆ. ಚರ್ಚೆ ಮಾಡಿ ಮನೆಯನ್ನು

ಕೊಡಿ ಸರ್ಕಾರ ಸ್ಮಾರಕ ಮತ್ತು ವಸ್ತು ಸಂಗ್ರಾಲಯ ಮಾಡುವುದಕ್ಕೆ ಸಿದ್ಧವಿದೆ ಎನ್ನುವ ಬಗ್ಗೆ ನಾನು ಮತ್ತೊಮ್ಮೆ ಅವರಿಗೆ ಮನವರಿಕೆ ಮಾಡುತ್ತೇನೆ. ನಾನು ಮನೆಗೆ ಹೋಗುವ ಸಮಯದಲ್ಲಿ ಮಾಧ್ಯಮದವರು ಬಂದಾಗ, ನಾನು ಬೆಲೆಯಾಗಲೀ ಮತ್ತೊಂದಾಗಲೀ ಮಾತನಾಡುವುದಕ್ಕೆ ಬಂದಿಲ್ಲ. ಅವರಿಗೆ ಸವಿಸ್ತಾರವಾದ ವಿಷಯವನ್ನು ಹೇಳಲು ಬಂದಿದ್ದೇನೆ ಎಂದು ಹೇಳುತ್ತೇನೆ. ನಾನು ಇದರ ಬಗ್ಗೆ ಮಾತನಾಡುವುದಕ್ಕೆ ಬಂದಿಲ್ಲ. ಅವರನ್ನು ಕರೆಯಿಸಿ ಮಾತನಾಡಿದ ನಂತರ ನಿರ್ಧಾರವನ್ನು ಮಾಡುತ್ತೇನೆ ಎಂದು ಹೇಳಿ ಬಂದಿದ್ದೆ. ಈಗ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ವಿಷಯವನ್ನು ಹೇಳುತ್ತೇನೆ. ನಮ್ಮ ಆಸೆ ಕೂಡ ಇದೆ. ಮಾನ್ಯ ಪ್ರತಾಪ್ ಸಿಂಹ ನಾಯಕ್ ಆಸೆ ಇದೆ. ಇಡೀ ನಮ್ಮ ರಾಜ್ಯದ ಜನರ ಆಸೆ ಏನಿದೆ, ಆದಷ್ಟು ಬೇಗ ಅವರ ಮನೆಯವರು ನಮಗೆ ಮನೆಯನ್ನು ಕೊಡಲು ಸಹಕಾರ ಮಾಡಬೇಕು. ಅವರಿಗೆ ಸಹಕಾರ ಮಾಡುವಂತೆ ನಾನು ವಿನಂತಿಯನ್ನು ಮಾಡಿ ಬಂದಿದ್ದೇನೆ. ಆದಾದ ಮೇಲೆ ನಿಶ್ಚಿತವಾಗಿ ವಸ್ತು ಸಂಗ್ರಾಲಯ ಮಾಡುವುದಕ್ಕೆ ಸಿದ್ಧರಿದ್ದೇವೆ. ಇನ್ನು ಒಂದಿಷ್ಟು ಬೇಡಿಕೆಯನ್ನು ಇಟ್ಟಿದ್ದಾರೆ. ಇಲ್ಲಿ ಆ ಬೇಡಿಕೆಯನ್ನು ಚರ್ಚೆ ಮಾಡುವುದು ಬೇಡ. ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಚಿವರೇ, ಸಮಯ ಕಳೆದಷ್ಟು, ಸಮಸ್ಯೆ ದೊಡ್ಡದಾಗುತ್ತಾ ಹೋಗುತ್ತದೆ ಎಂದು ನಾನು ಹೇಳುವಂತಹದ್ದು.

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಇಲ್ಲ. ತಾವು ಹೇಳುವುದು ಸತ್ಯ. ಅವರು ಕೂಡ ನಮಗೆ ಸ್ವಲ್ಪ ಸಹಕಾರ ಮಾಡಬೇಕು. ದಿವಂಗತ ನಿಜಲಿಂಗಪ್ಪನವರ ಕುಟುಂಬ ಬಹಳ ಸಹಕಾರವನ್ನು ಕೊಟ್ಟರು. ನಾನು ಕೂಡ ಅವರ ಮನೆಗೆ ಭೇಟಿ ಕೊಟ್ಟಿದ್ದೇನೆ. ಈಗ ಆ ಕೆಲಸವನ್ನು ಪ್ರಾರಂಭ ಮಾಡಿದ್ದೇನೆ. ಮೊನ್ನೆ ಮೈಸೂರಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಭೇಟಿಯಾಗಿ ಬಂದಿದ್ದೇನೆ.

**ಪ್ರಶ್ನೆ ಸಂಖ್ಯೆ: 510**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಮಾಜ ಕಲ್ಯಾಣ ವತಿಯಿಂದ ಯಾವ್ಯಾವ ವಿಶೇಷ ಯೋಜನೆಗಳಿವೆ ಎಂದು ನಾನು ಕೇಳಿದ್ದೇನೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು, ಬಿಲವಾರ ಗ್ರಾಮದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಸಂಕೀರ್ಣ ರೂ.22.00 ಕೋಟಿ.

ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಪಟ್ಟಣ ಗ್ರಾಮದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಸಂಕೀರ್ಣ ರೂ.22.00 ಕೋಟಿ. ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಘರತಾಬಾದ್ ಗ್ರಾಮದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ನಿರ್ಮಾಣ ಕಾಮಗಾರಿ ರೂ.22.00 ಕೋಟಿ. ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಚಿತ್ತಾಪುರ ಪಟ್ಟಣದಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ನಿರ್ಮಾಣ ಕಾಮಗಾರಿ ರೂ.12.00 ಕೋಟಿ. ಇದು ಯಾವಾಗ ಹಣ ಬರುತ್ತದೆ? ಇದು ಯಾವ ಹಂತದಲ್ಲಿದೆ? ಟೆಂಡರ್ ಪ್ರಗತಿಯಲ್ಲಿದೆ. ಟೆಂಡರ್ ಎಷ್ಟು ವರ್ಷದವರೆಗೂ ಪ್ರಗತಿಯಲ್ಲಿದೆ? ಅದರ ಬಗ್ಗೆ ನಮಗೆ ಗೊತ್ತಾಗಬೇಕಲ್ಲ. ಇದರ ದಿನಾಂಕ ಕೂಡ ಇಲ್ಲ. ಪ್ರಗತಿಯಲ್ಲಿದೆ ಎಂದು ಹೇಳಿದ್ದೀರಿ. ದಯವಿಟ್ಟು, ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ. ಇದು ಯಾವಾಗ ಕಾಮಗಾರಿ ಮುಗಿಯುತ್ತದೆ? ಇದನ್ನು ಯಾವಾಗ ಲೋಕಾರ್ಪಣೆ ಮಾಡುತ್ತೀರಿ. ನಮ್ಮ ಜಿಲ್ಲೆಯಲ್ಲಿ ಅತ್ಯಂತ ಕಡು ಬಡತನದಲ್ಲಿರುವ ಮಕ್ಕಳಿಗೆ ವಸತಿ ಪ್ರವೇಶ ಸಿಗುವುದಿಲ್ಲ. ಖಾಸಗಿ ಹಾಸ್ಟೆಲ್‌ಗಳ ವ್ಯವಸ್ಥೆ ಸರಿ ಇರುವುದಿಲ್ಲ. ಒಂದೊಂದು ರೂಮ್‌ನಲ್ಲಿ ಮೂರು–ನಾಲ್ಕು ಮಕ್ಕಳು ಇರುತ್ತಾರೆ. ಅವರಿಗೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಅದಕ್ಕಾಗಿ ತಮ್ಮದೇ ಆದಂತಹ ಇಲಾಖೆ ವತಿಯಿಂದ ಇದನ್ನು ಕಟ್ಟುವಂತಹದ್ದು. ಮಕ್ಕಳಿಗೆ ಸಮರ್ಪಕವಾಗಿ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಕೊಟ್ಟರೆ ಎಲ್ಲರಿಗೂ ಅನುಕೂಲವಾಗುತ್ತದೆ. ಈ ಇಲಾಖೆಯ ಅಕೌಂಟ್‌ನಲ್ಲಿ ಯಾವಾಗ ಹಣ ಜಮಾ ಆಗಿದೆ. ಇದು ಯಾವ ಹಂತದಲ್ಲಿದೆ? ಇದನ್ನು ಯಾವಾಗ ಲೋಕಾರ್ಪಣೆ ಮಾಡುತ್ತೀರಿ.

**ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮೊದಲು ಮೂರು ಟೆಂಡರ್ ಆಗಿ ಕೆಲಸ ಪ್ರಾರಂಭವಾಗಿದೆ. ನಾಲ್ಕನೇಯದು, ಕಲಬುರಗಿ ಚಿತ್ತಾಪುರ ತಾಲ್ಲೂಕು ಈಗ ಟೆಂಡರ್ ಮಾಡಬೇಕು. ಅದನ್ನು 12 ತಿಂಗಳನಲ್ಲಿ ಕೆಲಸ ಮಾಡಬೇಕೆಂಬುದು ಇದೆ. ಮಾನ್ಯ ಸದಸ್ಯರು ಮೊದಲು ಮೂರು ಏನು ಹೇಳಿದರು? ಅದರ ಟೆಂಡರ್ ಕರೆದು ಕೆಲಸ ನಡೆಯುತ್ತಿದೆ. ಆದಷ್ಟು ಬೇಗ ಪೂರ್ಣಗೊಳಿಸುತ್ತೇವೆ. ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ 12 ಕೋಟಿ ರೂಪಾಯಿ ಟೆಂಡರ್ ಕರೆಯಬೇಕು. ಈಗ ಕರೆದು ಕೆಲಸ ಪ್ರಾರಂಭ ಮಾಡುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಕಲಬುರಗಿ ನಗರದಲ್ಲಿ 1000 ವಿದ್ಯಾರ್ಥಿಗಳ ಸಾಮರ್ಥ್ಯದ ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯದ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ ಎನ್ನಲಾಗಿದೆ. ಮುಕ್ತಾಯ ಹಂತ ಎಂದರೆ ಏನು? ಶೇಕಡಾ ಎಷ್ಟು ಕಾಮಗಾರಿ ಮುಗಿದಿದೆ? ಮುಂದಿನ ಶೈಕ್ಷಣಿಕ ವರ್ಷ 2026–27ಕ್ಕೆ ಆರಂಭದ ವೇಳೆಗೆ ವಿದ್ಯಾರ್ಥಿಗಳಿಗೆ ಇದು ಲಭ್ಯವಾಗುವುದೇ ಎಂಬ ಬಗ್ಗೆ ಕೇಳಿದ್ದೆ. ಮಾನ್ಯ ಸಚಿವರೇ ಇದರ ಬಗ್ಗೆ ಹೇಳಿ.

**ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, Hardly 2–3 months ನಲ್ಲಿ complete ಆಗುತ್ತದೆ. "ಮೆಗಾ ಹಾಸ್ಟೆಲ್" ಇದೆಯೆಲ್ಲಾ 1000 ವಿದ್ಯಾರ್ಥಿಗಳು ವಾಸಿಸಲು ವ್ಯವಸ್ಥೆ ಮಾಡಲಾಗಿದೆ. ಇದು 2–3 months ನಲ್ಲಿ complete ಆಗುತ್ತದೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಏಕೆಂದರೆ..,

**ಸಭಾಪತಿಯವರು:–** ಮಾನ್ಯ ಸಚಿವರು ಆಯಿತು ಎಂದು ಹೇಳಿದ್ದಾರೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಿಯಾಂಕ್ ಖರ್ಗೆಯಾಗಲೀ, ಮತ್ತು ಡಾ ಹೆಚ್. ಸಿ. ಮಹದೇವಪ್ಪನವರಾಗಲೀ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳನ್ನು ಕನಸನ್ನು ನನಸು ಮಾಡುವಂತಹವರಾಗಿದ್ದಾರೆ. ರಾಷ್ಟ್ರ ಕೂಡ ಒಪ್ಪಿದೆ. ರಾಜ್ಯ ಕೂಡ ಒಪ್ಪಿದೆ. ಮಾನ್ಯ ಪ್ರಿಯಾಂಕ್ ಖರ್ಗೆಯವರು ಅಗ್ರಗಣ್ಯ ವ್ಯಕ್ತಿ ಎಂದು ಹೇಳಿ, ವಿಶ್ವದಲ್ಲಿ ಅವರ ಹೆಸರು ಒಂಭತ್ತನೇ ಸಾಲಿನಲ್ಲಿ ದಾಖಲೆಯಾಗಿದೆ. ನಿಮ್ಮ ಬಗ್ಗೆ ಹೆಚ್ಚಿಗೆ ಹೇಳಿ, ನಿಮ್ಮನ್ನು ಎಬ್ಬಿಸುವುದು, ಕೂರಿಸುವ ಪ್ರಯತ್ನವನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. ಆ ಭಾಗದ ಬಡವರಿಗೆ ಅನುಕೂಲವಾಗಬೇಕಲ್ಲ. ನನ್ನ ಮಗನಿಗೊಂದು ಪ್ರವೇಶ ಕೊಡಿಸಬೇಕೆಂದು ನನಗೆ

ದೂರವಾಣಿ ಕರೆ ಮಾಡಿ, ನನ್ನ ಬಳಿ ಹುಡುಗರನ್ನು ಕರೆದುಕೊಂಡು ಬರುತ್ತಾರೆ. ನಮ್ಮಲ್ಲಿ ರೂಮ್‌ಗಳು ಭರ್ತಿಯಾಗಿದೆ. ಮಕ್ಕಳಿಗೆ ಶಾಲೆಗೆ ಹೋಗುವುದಕ್ಕೆ ತೊಂದರೆಯಾಗುತ್ತದೆ. ಚಿತ್ತಾಪುರ ತಾಲ್ಲೂಕಿನಲ್ಲಿ ಶಾಲೆಯಿಂದ ಬಿಟ್ಟು ಹೋದ ಮಕ್ಕಳು ಧನ ಕಾಯುವುದಕ್ಕೆ ಹೋದ 10,000 ಮಕ್ಕಳನ್ನು ವಾಪಸ್ಸು ಕರೆದುಕೊಂಡು ಬಂದು ಪುನಃ ಶಾಲೆಗೆ ಕಳುಹಿಸುವಂತಹ ಕೆಲಸವನ್ನು ಮಾನ್ಯ ಪ್ರಿಯಾಂಕ್ ಖರ್ಗೆಯವರು ಪ್ರಮಾಣಿಕವಾಗಿ ಮಾಡಿದ್ದಾರೆ. ಅವರಿಗೆ ಉಳಿದ ಮೂಲಭೂತ ಸೌಕರ್ಯ ಸಿಗಬೇಕಲ್ಲ. ಡಾ॥ ಹೆಚ್.ಸಿ. ಮಹದೇವಪ್ಪನವರೇ, ತಮಗೆ ಏತಕ್ಕೆ ಖಾತೆ ಕೊಟ್ಟರೆಂಬುದು ಗೊತ್ತಿದೆಯಾ? ಡಾ॥ ಬಿ.ಆರ್. ಅಂಬೇಡ್ಕರ್ ಕನಸು ನನಸಾಗಲಿ. ಶೇಕಡಾ 100 ರಷ್ಟು ಬಡವರು, ದಲಿತರು ಹಾಗೂ ಆ ವರ್ಗದ ಜನರಿಗೆ ನ್ಯಾಯ ಸಿಗಲಿ ಎಂದು ಮಾಡಿದ್ದಾರೆ. ಹಾಗಾದರೆ ತಮ್ಮ ಕೆಲಸ ಏನು?

**ಡಾ॥ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಇನ್ನೂ ಎರಡು-ಮೂರು ತಿಂಗಳಿನಲ್ಲಿ ಪೂರ್ತಿಗೊಳಿಸಿ, complete ಮಾಡಿ handover ಮಾಡುತ್ತೇನೆ. ಧನ್ಯವಾದಗಳು

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ಮಾನ್ಯ ಸಚಿವರು ಕೆಲಸ ಮಾಡುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, 2020-21 ರಲ್ಲಿ ಪೂರ್ಣಗೊಂಡಿರುವ 1000 ವಿದ್ಯಾರ್ಥಿಗಳ ಸಾಮರ್ಥ್ಯದ ವಿದ್ಯಾರ್ಥಿ ನಿಲಯ ಸಮುಚ್ಚಯದಲ್ಲಿ ಪ್ರಸ್ತುತ ಎಷ್ಟು ವಿದ್ಯಾರ್ಥಿಗಳು ಇದ್ದಾರೆ? ಅಲ್ಲಿ ಕುಡಿಯುವ ನೀರು, ಇಂಟರ್‌ನೆಟ್, ಭದ್ರತೆಯ ಸೌಲಭ್ಯವನ್ನು ಸಮರ್ಪಕವಾಗಿದೆಯಾ ಎಂಬುದನ್ನು ಖಚಿತಪಡಿಸಿಕೊಂಡು ಸರ್ಕಾರ ...

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ಕುಳಿತುಕೊಳ್ಳಿ. ತಮ್ಮ ಹತ್ತಿರ ಇರುವ ಮಾಹಿತಿಯನ್ನು ಮಾನ್ಯ ಸಚಿವರಿಗೆ ಕೊಡಿ. ಅವರು ಮಾಡುತ್ತಾರೆ.

**ಡಾ॥ ಹೆಚ್.ಸಿ. ಮಹದೇವಪ್ಪ:-** ಅಲ್ಲಿಗೆ automatically ಕುಡಿಯುವ ನೀರು ಇತರೆ ಸೌಲಭ್ಯವನ್ನು ಕೊಡುತ್ತೇವೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಇದು automatically ಆಗುವುದಿಲ್ಲ. ಒಂದು ಬಾರಿ inspection ಗೆ ಕಳುಹಿಸಿರಿ. ಇದಕ್ಕೊಂದು ವ್ಯವಸ್ಥೆಯನ್ನು ಮಾಡಿರಿ. ಇಲ್ಲಿಗೆ ಯಾರಾದರೂ ಬಂದು ಹೋದರೆ alert ಆಗುತ್ತಾರೆ. ಇಲ್ಲವೆಂದರೆ, ಅಧಿಕಾರಿಗಳು ಮಾತು ಕೇಳುವುದಿಲ್ಲ. ಮೊದಲಿರುವಂಥ ಅಧಿಕಾರಿಗಳು ಈಗ ಇಲ್ಲ. ಅದಕ್ಕಾಗಿ ಒಂದು Task Force ಮಾಡಿ ವಿಶೇಷ ತಪಾಸಣೆಯನ್ನು ಕಳುಹಿಸಿದರೆ, ಸ್ವಲ್ಪ ಹೆದರಿಕೆ ಬರುತ್ತದೆ.

**ಶ್ರೀ ರಮೇಶ್‌ಬಾಬು:–** ಅದಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್ ಹೆಸರು last ಗಂತೆ ಕೇಳಿ.

**ಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೇ, ತಾವು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀ ಬೀಮರಾವ್ ಬಸವರಾಜ ಪಾಟೀಲ್‌ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರು:–** ನಾನು overall ಮಕ್ಕಳ ಭವಿಷ್ಯ ಮತ್ತು ಮಾನವೀಯತೆಯ ದೃಷ್ಟಿಯಿಂದ ತಕ್ಷಣ ಇವೆಲ್ಲ ಕೆಲಸಗಳು ಆಗಬೇಕು. ಯಾವ ಟೆಂಡರ್ ಪ್ರಕ್ರಿಯೆ ಎಂದಿದ್ದೀರಿ. ಅವು ಪೂರ್ಣಗೊಳಿಸಿ. ಆ ಮಕ್ಕಳಿಗೆ ಅಲ್ಲಿ ಇರುವುದಕ್ಕೆ ಅನುಕೂಲವಾಗಬೇಕು. ದಯವಿಟ್ಟು, ಮಾನ್ಯ ಸಚಿವರು ಇದನ್ನು ಮಾಡಬೇಕು.

**ಡಾ॥ ಹೆಚ್.ಸಿ. ಮಹದೇವಪ್ಪ:–** ಆಯಿತು.

**ಪ್ರಶ್ನೆ ಸಂಖ್ಯೆ: 461**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಭೀಮರಾವ್ ಬಸವರಾಜು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನಲ್ಲಿ ಮೋಳಕೇರಾ, ಘಾಟಬೋದಳ, ಹುಣಸಗೇರಾ ಗ್ರಾಮಗಳಲ್ಲಿ ಜೆ.ಜೆ.ಎಂ. ಕಾಮಗಾರಿ ಒಂಭತ್ತು ತಿಂಗಳನಲ್ಲಿ ಕೆಲಸ ಮುಗಿಸಬೇಕಾಗಿತ್ತು. ಈಗಾಗಲೇ ಮೂರು-ನಾಲ್ಕು ವರ್ಷ ಕಳೆದರೂ ಇನ್ನೂ ಕಾಮಗಾರಿ ಪೂರ್ಣಗೊಂಡಿಲ್ಲ. ಅಲ್ಲಿ ಇನ್ನೂ ಕಾಮಗಾರಿ ಕೆಲಸ ಸರಿಯಾಗಿಲ್ಲ. ಕುಡಿಯುವ ನೀರಿನ pipeline ಏನು ಮಾಡಿದ್ದಾರೆ. ಆ pipeline leak ಆಗಿದೆ. ನೀರು ಕುಡಿಯುವುದು ಕೂಡ ಕಷ್ಟವಾಗಿದೆ ಟಿವಿಯಲ್ಲಿ News 18 Kannada Channel ನಲ್ಲಿ ಬಂದಿದೆ ಮತ್ತು ಪಂಚಾಯಿತಿ ಸದಸ್ಯರು ಹಾಗೂ ಊರಿನ ಜನರು ಎಲ್ಲಾ ಫೋಟೋವನ್ನು ತೆಗೆದು ಹಾಕಿದ್ದಾರೆ.

**(ಮುಂದು)**

(೯೯) 30.01.2026 6.00 ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಮುಂದು):-**

ದಯಮಾಡಿ ಅದು ಏಕೆ late ಆಗಿದೆ, ಏಕೆಂದರೆ ಅದು ೯ ತಿಂಗಳಲ್ಲೇ ಕೆಲಸ ಆಗಬೇಕಾಗಿತ್ತು. ಆದರೆ ಮೂರುವರೆ ವರ್ಷಗಳಾದರೂ ಕೂಡ ಅದು ಇನ್ನೂ ಕೆಲಸ ಸರಿಯಾಗಿ ಆಗಿಲ್ಲ. ಆದ್ದರಿಂದ ಮಾನ್ಯ ಸಭಾಪತಿಯವರೇ, ನಾನು ದಯಮಾಡಿ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುವುದಿಷ್ಟೇ. ಅದು ಏನು illegal ಆಗಿ work ಆಗಿದೆಯೋ ಅಥವಾ ಏನಾಗಿದೆಯೆಂದು ಅಣ್‌ಕರಿ ಮಾಡಿ ಹುಮ್ನಾಬಾದ್ ಮಹಾಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ೩ ಹಳ್ಳಿಗಳಲ್ಲಿ ಈ ಕಾಮಗಾರಿ ನಡೆದಿದೆ. ಹುಣಸಗೇರಾ ಗ್ರಾಮದಲ್ಲಿ 100 percent work complete ಆಗಿ Third Party Inspection and Quality Report ಕೂಡ ಬಂದಿದೆ. Trial run ಕೂಡ ಮುಗಿದು ಅದು ಗ್ರಾಮ ಪಂಚಾಯಿತಿಗೆ handover ಆಗಿದೆ. ಘಾಟಬೋರಳ ಮತ್ತು ಮೋಳಕೇರಾದಲ್ಲಿ ಶೇ.೯೦ರಷ್ಟು work complete ಆಗಿದೆ. Third Party Inspection Report ಕೂಡ ಬಂದಿದೆ. ಸುಮಾರು

2 ತಿಂಗಳ ಹಿಂದೆ ಇವೆರಡೂ ಕಡೆ spotಗೆ ಹೋಗಿ SQM (State Quality Monitor) spot inspection ಕೂಡ ಆಗಿದೆ. ಈ ಎರಡೂ ಹಳ್ಳಿಗಳಲ್ಲೂ ಕೂಡ trial run ನಡೆಯುತ್ತಿದೆ. ಈ trial run ಏನಾದರೂ ಸಮರ್ಪಕವಾಗಿ ಮುಗಿದ ನಂತರ satisfactory ಇದ್ದರೆ ಮಾತ್ರ ಗ್ರಾಮ ಪಂಚಾಯಿತಿಗೆ handover ಮಾಡುತ್ತೇವೆ. ಮಾನ್ಯ ಶಾಸಕರು ಹೇಳಿದಂತೆ, ಟಿ.ವಿಗಳಲ್ಲಿ ಕೆಲವು ವರದಿಗಳು ಪ್ರಸಾರ ಆಯಿತು. ಆಗ immediate ಆಗಿ ನಾವು ಆ delay ಆಗಿರುವುದಕ್ಕೆ ಆ contractors ಗೆ ನಾವು notice ಕೊಟ್ಟುಬಿಟ್ಟು delay ಏಕೆ ಆಗಿದೆಯೆಂದು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು 1 ವರ್ಷದಲ್ಲಿ ಮಾಡಕಾಗಿರತಕ್ಕಂಥ ಕಾಮಗಾರಿ 3 ವರ್ಷ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದು ವಿಳಂಬ ಏಕೆ ಆಗಿದೆಯೆಂದರೆ ಅಲ್ಲಿ ಸುಮಾರು 2 ವರ್ಷ ಬರಗಾಲ ಬಂದಿತ್ತು. ಅದು ಅವರಿಗೂ ಗೊತ್ತಿದೆ. ನಾವು trial run ಮಾಡಬೇಕಾದರೆ ಸಂಪೂರ್ಣವಾಗಿ source ನಿಂದ ಹಿಡಿದುಕೊಂಡು Functional Household Tap Connection ರವರೆಗೂ ಕೂಡ ನಾವು ನೋಡಬೇಕಾಗುತ್ತದೆ. ಬರಗಾಲದಿಂದ ಅಲ್ಲಿ ಕೆಲವು ಕೆಲಸಗಳು delay ಆಗಿದೆಯೇ ಹೊರತು ಬೇರೆ ಯಾವ ಕಾರಣವೂ ಇಲ್ಲ. ಮಾನ್ಯ ಶಾಸಕರ ಮನವಿ ಏನಿದೆಯೆಂದರೆ ಅಥವಾ ಅವರ ಇಚ್ಛೆ ಏನಿದೆಯೆಂದರೆ ಅದನ್ನು ಮರುಪರಿಶೀಲನೆ ಮಾಡಿ ಪರಿಷ್ಕರಣೆ ಮಾಡಿಬಿಟ್ಟು. ಅಲ್ಲಿ ಯಾವುದಾದರೂ ಭ್ರಷ್ಟಾಚಾರ ನಡೆದಿದೆ ಅಥವಾ ಕಳಪೆ ಕಾಮಗಾರಿಯಾಗಿದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಖಂಡಿತವಾಗಿಯು ಕೂಡ ಸೋಮವಾರದ ನಂತರ ಅಲ್ಲಿಗೆ ಒಂದು team ಅನ್ನು ಕಳುಹಿಸಿ ಅವರನ್ನು ಕೂಡ ಸಂಪರ್ಕ ಮಾಡುವುದಕ್ಕೆ ಹೇಳುತ್ತೇನೆ. ಎಲ್ಲೆಲ್ಲಿ ಅವರಿಗೆ ಅಮಾನ ಇದೆ, ಅದು ಕಳಪೆ ಕಾಮಗಾರಿಯಾಗಿದೆಯೋ ಅಥವಾ ಬೇರೆ ರೀತಿಯಾದಂತಹ ಯಾವುದಾದರೂ ಅಕ್ರಮ ನಡೆದಿದೆ ಎಂದು ಅವರನ್ನು ಸಂಪರ್ಕ ಮಾಡಿಬಿಟ್ಟು ಒಂದು Enquiry Report ಮಾಡುತ್ತೇವೆ. ಆ Enquiry Report ನಲ್ಲಿ ಏನಾದರೂ ಅಕ್ರಮ ನಡೆದಿರುವುದು ಕಂಡುಬಂದಲ್ಲಿ ಖಂಡಿತವಾಗಿಯು ಅವರ ನಿರೀಕ್ಷೆಗೆ ತಕ್ಕಂತೆ we will take action.

**ಶ್ರೀ ಭೀಮರಾವ್ ಬಸವರಾಜ ಪಾಟೀಲ್:–** ಮಾನ್ಯ ಸಭಾಪತಿಯವರೇ, ಹುಣಸಗೇರಾ ಗ್ರಾಮದ್ದು ಮೊನ್ನೆ ಜನವರಿ 21ಕ್ಕೆ ತೆಗೆದುಕೊಂಡಿದ್ದಾರೆ. ಅದರಲ್ಲಿ ಏನಾಗಿದೆಯೆಂದರೆ ಊರಿನ ಜನರು ಎಲ್ಲರೂ . . . ದಯಮಾಡಿ ತಾವೇ ಬೆಂಗಳೂರಿನಿಂದ ಯಾವುದಾದರು ಒಂದು team ಕಳುಹಿಸಿ inspection ಮಾಡಿಸಿ ಅಲ್ಲಿನ ಜನರಿಗೆ ನ್ಯಾಯ ಕೊಡಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಗೆ ಹಸ್ತಾಂತರವಾಗುವುದಕ್ಕಿಂತ ಮುಂಚೆ ಸಂಪೂರ್ಣವಾಗಿ ನಮ್ಮ ಕಡೆಯಿಂದ ಪರಿಶೀಲನೆಯಾಗುತ್ತದೆ. ಗ್ರಾಮ ಪಂಚಾಯಿತಿಯವರ ಅನುಮೋದನೆ ಇಲ್ಲದೇ ಅದು handover ಆಗುವುದಕ್ಕೂ ಸಾಧ್ಯವಿಲ್ಲ. But ಖಂಡಿತವಾಗಿಯು ಕೂಡ ಮಾನ್ಯ ಸದಸ್ಯರಾದ ಶ್ರೀ ಭೀಮರಾವ್ ಬಸವರಾಜ ಪಾಟೀಲ್ ರವರು ಈ ಮೂರು ಹಳ್ಳಿಗಳಲ್ಲಿ ಏನು ಅನುಮಾನ ವ್ಯಕ್ತಪಡಿಸಿದ್ದಾರೆ, we will initiate a departmental enquiry and we will get to the bottom of the facts. ಅದು ಏನಾದರೂ ಕಂಡುಬಂದರೆ ಖಂಡಿತವಾಗಿಯು ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ.479**
**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಪ್ರಮುಖವಾಗಿ ಬಿತ್ತನೆ ಮಾಡುವ ಸಮಯವಾದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ವ್ಯವಸಾಯ ಮಾಡಲು ರೈತರಿಗೆ ರಾಸಾಯನಿಕ ಗೊಬ್ಬರ ತುಂಬಾ ಅವಶ್ಯಕವಾಗಿರುತ್ತದೆ. ತಾವುಗಳು ಈಗ ನೀಡಿರುವ ಉತ್ತರದಲ್ಲಿ ಅಕ್ಟೋಬರ್–25 ರಿಂದ ಜನವರಿ– 2026 ತಿಂಗಳವರೆಗೆ ಮಾತ್ರ ಮಾಹಿತಿ ನೀಡಿರುತ್ತಾರೆ. ಆದರೆ ತಾವುಗಳು ರೈತರು ಮಳೆಗಾಲದ ಸಂದರ್ಭದಲ್ಲಿ ಬಿತ್ತನೆ ಮಾಡಲು ಯಾವುದೇ ತೊಂದರೆಯಾಗದಂತೆ ರಾಸಾಯನಿಕ ಗೊಬ್ಬರವನ್ನು ಸರಬರಾಜು ಮಾಡಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಇತ್ತೀಚಿನ ದಿನಗಳಲ್ಲಿ ಸಬ್ಸಿಡಿ ದರದಲ್ಲಿ ನೀಡಿರುವ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟ ಮಾಡುವ ದಂಧೆ ಹೆಚ್ಚಾಗಿದೆ. ಇವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ವಿನಂತಿಸುತ್ತೇನೆ.

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಕಳೆದ ಬಾರಿ 2025ರ ಮುಂಗಾರು ಹಂಗಾಮಿನಲ್ಲಿ ಮೇ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೆ ಮಾತ್ರ ನಮ್ಮ ರಾಜ್ಯದಲ್ಲಿ ಕಳೆದ ಎರಡೂವರೆ ವರ್ಷಗಳಲ್ಲಿ ಕೊರತೆಯಾಗಿತ್ತು. ಎಲ್ಲರಿಗೂ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದಲ್ಲಿ ಆಗ import and production ಸಮಸ್ಯೆಯಾಗಿತ್ತು. ಆದರೆ ಯೂರಿಯಾ–1 ಮತ್ತು ಡಿ.ಎ.ಪಿ ಮಾತ್ರ ಸ್ವಲ್ಪ ಕಡಿಮೆಯಾಗಿತ್ತು. ಅದನ್ನು ಕಡಿಮೆ ಉಪಯೋಗಿಸುವುದರಿಂದ ರೈತರಿಗೆ ಬೆಳೆಯತಕ್ಕಂಥ ಬೆಳೆಯ ಮೇಲೆ ಮತ್ತು ಮಣ್ಣಿನ ಮೇಲೆ ಎಲ್ಲಾ ಪರಿಣಾಮ ಬೀರುತ್ತದೆ ಎಂದು ಕೇಂದ್ರ ಸರ್ಕಾರ ಈಗಾಗಲೇ ಅನೇಕ ಸಲಹೆಗಳನ್ನು ಕೊಟ್ಟಿತ್ತು. ಆ ಸಮಯದಲ್ಲಿ import ಇಲ್ಲದೇ ಇರುವುದರಿಂದ ಸುಮಾರು ಮೂರುವರೆ ಲಕ್ಷ ಮೆಟ್ರಿಕ್ ಟನ್ ಕಡಿಮೆಯಾಗಿತ್ತು. ಆದರೆ ಆ ಸಮಯದಲ್ಲಿ ಸ್ವಲ್ಪ ಸಣ್ಣಪುಟ್ಟ ವ್ಯತ್ಯಾಸವಾದರೂ ಕೂಡ ಅದನ್ನು ಸರಿಪಡಿಸಿ ರೈತರಿಗೆ ಬೇಕಾಗತಕ್ಕಂಥ ಎಲ್ಲಾ ರಸಗೊಬ್ಬರವನ್ನು supply ಮಾಡಿದ್ದೇವೆ. ಈ ವರ್ಷ ಯಾವುದೇ ಸಮಸ್ಯೆ ಇಲ್ಲ. ಕಳೆದ ವರ್ಷ ನಮಗೆ **OB (Organic Based) fertilizer** ಕಡಿಮೆ ಇತ್ತು. ಈ ವರ್ಷ ಯಾವುದೇ ಸಮಸ್ಯೆ ಇಲ್ಲ. ಸಂಪೂರ್ಣವಾಗಿ ಏನು ರೈತರಿಗೆ ಅವಶ್ಯಕತೆ ಇದೆಯೋ ಅದನ್ನು ನಾವು ಸರಬರಾಜು ಮಾಡುವುದಕ್ಕೆ ಕೇಂದ್ರ ಸರ್ಕಾರ ತಯಾರಾಗಿದೆ. ನಾವು ಕೂಡ ಮಾಡುತ್ತೇವೆ. ಇದರ ಜೊತೆಗೆ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆಯೆಂದು ಹೇಳಿದ್ದಾರೆ, ಅದನ್ನು ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ, ಕೇಸ್ ಹಾಕುವುದಕ್ಕೆ ಮತ್ತು ಅವರ ಲೈಸೆನ್ಸ್‌ನ್ನು ರದ್ದುಪಡಿಸುವುದಕ್ಕೆ

ಹಾಗೂ penalty ಹಾಕುವುದಕ್ಕೆ ಸಾಧ್ಯತೆ ಇದೆಯೋ ಅದೆಲ್ಲವನ್ನೂ ಮಾಡುತ್ತಾ ಬಂದಿದ್ದೇನೆ. Vigilance ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ vigilance ಸಹ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಯಾವುದೇ ಸಮಸ್ಯೆ ಇಲ್ಲ. ಮಾನ್ಯ ಸದಸ್ಯರಾದ ವಿವೇಕಾನಂದ ರವರಿಗೆ ಬಹುಶಃ ಆ ರೀತಿಯದ್ದು ಏನಾದರೂ ನಿಮ್ಮ ಗಮನಕ್ಕೆ ಬಂದರೆ ಖಂಡಿತವಾಗಿಯು ನನಗೆ ಹೇಳಿದರೆ ನಾನು ಅದನ್ನು ಸರಿಪಡಿಸುತ್ತೇನೆ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷದಲ್ಲಿ ರಸಗೊಬ್ಬರ ಸುಮಾರು ರೂ.೩,೦೧೪ ಮೆಟ್ರಿಕ್ ಟನ್ ಕಾಳಸಂತೆಯಲ್ಲಿ ಮಾರಾಟವಾಗಿದೆ. ಇವರ ಮೇಲೆ ಏನು action ತೆಗೆದುಕೊಂಡಿದ್ದೀರಿ? ಎಷ್ಟು ಜನ ಜೈಲಿಗೆ ಕಳುಹಿಸಿದ್ದೀರಿ? ಅದಾದನಂತರ ಅನ್ನದಾತನಿಗೆ ಅನ್ಯಾಯವಾಗುತ್ತಿದೆ. ಮಾನ್ಯ ಸಚಿವರೇ, ತಾವು ಇದನ್ನು ಹೇಗೆ ತಡೆಗಟ್ಟುತ್ತಿದ್ದೀರಿ? ಅನ್ನದಾತನಿಗೆ ಅನ್ಯಾಯವಾಗದಂತೆ ತಡೆಗಟ್ಟಬೇಕೆಂದು ನಾನು ಮಾನ್ಯ ಸಚಿವರಿಗೆ ಮನವಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಬೇಕಾದರೆ ಇದು ಪತ್ರಿಕೆಯಲ್ಲಿ ಬಂದಿರುವುದನ್ನು ತಾವು ನೋಡಬಹುದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ವಿವೇಕಾನಂದ ರವರು ಪತ್ರಿಕಾ ವರದಿಯ ಪ್ರತಿಯನ್ನು ಸದನದಲ್ಲಿ ಪ್ರದರ್ಶಿಸಿದರು)**

**ಶ್ರೀ ಚೆಲುವರಾಯಸ್ವಾಮಿ:–** ಹೌದಪ್ಪಾ, ಅಯ್ಯೋ! ತಾಳ್ಮೆ ಇರಲಿ. ನಿಮಗೆ ಇದೆಲ್ಲಾ ಗೊತ್ತೇ ಇಲ್ಲ. ನನಗೂ ಆಶ್ಚರ್ಯ ಮತ್ತು ಖುಷಿ ಆಗುತ್ತದೆ. ನಾನು ನಿಮಗೆ ಅಭಿನಂದನೆ ಹೇಳುತ್ತೇನೆ. ಏಕೆಂದರೆ ನೀವು ಕೃಷಿಕ ಅಲ್ಲ. ಆದರೂ ಕೂಡ ಇದರ ಬಗ್ಗೆ ಪ್ರಶ್ನೆ ಕೇಳುತ್ತಿದ್ದೀರಿ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಚಿವರೇ, ನೀವು ಮತ್ತು ನಾನು ಇಬ್ಬರೂ ಕೃಷಿಕರೇ. ಏಕೆ ನಾನು ಕೃಷಿಕ ಅಲ್ಲವೆಂದು ನೀವು ಹೇಳುತ್ತೀರಿ? ನೀವು ಈ ಸದನಕ್ಕೆ ತಪ್ಪು ಮಾಹಿತಿ ಕೊಡಬೇಡಿ. ಏಕೆಂದರೆ ನಾನು ಒಬ್ಬ ಕೃಷಿಕ.

**ಶ್ರೀ ಚೆಲುವರಾಯಸ್ವಾಮಿ:–** ಮಾನ್ಯ ವಿವೇಕಾನಂದ ರವರೇ, ತಾವು ಮೈಸೂರಿಗೆ ಹೋದಮೇಲೆ ಕೃಷಿ ಬಿಟ್ಟುಬಿಟ್ಟಿದ್ದೀರಲ್ಲಪ್ಪಾ, ಅದಕ್ಕೋಸ್ಕರ ಹೇಳಿದೆನು.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಚಿವರೇ, ನೀವು ಕೂಡ ಕೃಷಿ ಬಿಟ್ಟುಬಿಟ್ಟಿದ್ದೀರಲ್ಲಾ. ನೀವು ಕೂಡ ಬೆಂಗಳೂರಿಗೆ ಬಂದುಬಿಟ್ಟಿದ್ದೀರಲ್ಲವೇ?

**(ಸದನದಲ್ಲಿ ನಗು)**

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ವಿವೇಕಾನಂದ ರವರೇ, ಆದರೆ ನನಗೆ ಕೃಷಿ ಖಾತೆ ಕೊಟ್ಟಿದ್ದಾರೆ. ಹಾಗಾಗಿ, ನಾವು ಕೃಷಿ ಕಡೆ ಗಮನಹರಿಸಿದ್ದೇವೆ. ಈಗ ಎಲ್ಲಾ ಕೇಸ್‌ಗಳನ್ನು recovery ಮಾಡಿ ದಂಡವನ್ನು ಹಾಕಿದ್ದೇವೆ. Ultimately, ಜೈಲಿಗೆ ಕಳುಹಿಸತಕ್ಕಂಥದ್ದು ಕೋರ್ಟಿಗೆ ಬಿಟ್ಟಿದ್ದು. ನಾವು ನಮ್ಮ preliminary FIR ಹಾಕಿಸಿ ಅಲ್ಲಿಂದ ಕೋರ್ಟ್‌ಗೆ submit ಮಾಡತಕ್ಕಂಥದ್ದು ಅಷ್ಟೇ ನಮ್ಮ ಇಲಾಖೆಯ ಕರ್ತವ್ಯವಾಗಿರುತ್ತದೆ. ಮುಂದಿನ ಅಂತಿಮ ತೀರ್ಮಾನ ನ್ಯಾಯಾಲಯದ ಮೇಲೆ ನಾವೆಲ್ಲಾ depend ಆಗಬೇಕಾಗುತ್ತದೆ. ಇದು ಈ ಮೊದಲು ಬಹಳಷ್ಟಿತ್ತು ಎಂದು ನಾನು ಕೇಳಿದ್ದೆನು. ಆದರೆ ಇತ್ತೀಚಿನ ದಿನಗಳಲ್ಲಿ ಕೇರಳದಿಂದ ಚನ್ನೈಗೆ ಸಪ್ಲೈ ಸರಗೊಬ್ಬರವನ್ನು ಮಾಡತಕ್ಕಂಥದ್ದನ್ನೂ ನಾವು ಹಿಡಿದಿದ್ದೇವೆ. ಕೇಂದ್ರ ಸರ್ಕಾರ ಮತ್ತು ನಾವು ಜಂಟಿಯಾಗಿ ಬೆಂಗಳೂರಿನಲ್ಲಿ ಮಾಡಿದ್ದೇನೆ. Vigilance ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. Last report ಪ್ರಕಾರ 2022-23ರಿಂದ ಇಲ್ಲಿಯವರೆಗೆ 530 ಕೇಸ್‌ಗಳನ್ನು ಹಾಕಿದ್ದೇವೆ. 4,174 ಮೆಟ್ರಿಕ್ ಟನ್ ರಷ್ಟು quantity collect ಮಾಡಿದ್ದೇವೆ. ಇದರ ಜೊತೆಗೆ ಅದರಲ್ಲಿ Quantity of fertilizer sized metric tonne 1,736 ಲಕ್ಷ ದಷ್ಟು worth ಅನ್ನು ನಾವು ಅವರ ಮೇಲೆ sieze ಮಾಡಿರತಕ್ಕಂಥದ್ದು. ಆ ರೀತಿಯ ಕಾಳಸಂತೆಯಲ್ಲಿ ಮಾರಾಟ ಮಾಡುವುದಾಗಲೀ ಅಥವಾ ಲೈಸೆನ್ಸ್ ಇರತಕ್ಕಂಥವರು ಬೇರೆ ಕಡೆ divert ಮಾಡತಕ್ಕಂಥದ್ದಾಗಲೀ ಅದ್ಯಾವುದಕ್ಕೂ ಅವಕಾಶವನ್ನು ಕೊಡುವುದನ್ನು ನಾವು ಸಂಪೂರ್ಣವಾಗಿ ನಿರ್ಬಂಧ ಹೇರಿದ್ದೇವೆ. ಎಲ್ಲಾದರೂ ನೀವು ಆ ರೀತಿಯದ್ದು ಏನಾದರು ಮಾನ್ಯ ಸದಸ್ಯರ ಗಮನಕ್ಕೆ ಬಂದರೆ ತಾವು ಯಾವಾಗ ಬೇಕಾದರೂ 24 hours ಕೇಳಬಹುದು. ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ವಿವೇಕಾನಂದ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್‌ರವರ ಪ್ರಶ್ನೆ ಸಂಖ್ಯೆ.438ಕ್ಕೆ ಮಾನ್ಯ ಹಿಂದುಳಿದ ವರ್ಗಳ ಕಲ್ಯಾಣ ಸಚಿವರು ಸಮಯ ಕೇಳಿದ್ದಾರೆ.

**ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನಗೆ ಗೊತ್ತಾಯಿತು. ನಾನು ಸಾಮಾನ್ಯವಾದ ಪ್ರಶ್ನೆಯನ್ನು ಕೇಳಿದ್ದೇನೆ. ಅವರು ಸುಮಾರು 15 ದಿನ ಸಮಯ ತೆಗೆದುಕೊಂಡರೆ ಹೇಗೆ? ಇದು ಏನಾಗಿದೆಯೆಂದರೆ Robot Technology ಕೇಳಿದಂತಾಗಿದೆ. ಮಾನ್ಯ

ಸಭಾಪತಿಯವರೇ, ನಾನು ದೇವರಾಜ ಅರಸು ನಿಗಮಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಯನ್ನು ಕೇಳಿದ್ದೇನೆ. ಸಣ್ಣಪುಟ್ಟ ಜಾತಿಗಳಿಗೆ ನಿಮ್ಮ ನಿಗಮದಲ್ಲಿ ಎಷ್ಟು ದುಡ್ಡು ಕೊಡುತ್ತಿದ್ದೀರಿ ಎಂದು ಪ್ರಶ್ನೆ ಕೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ಶಿವಕುಮಾರ್ ರವರೇ, ತಾವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸಚಿವರು ಸಮಯ ಕೇಳಿದ್ದಾರೆ. ನಾನು ಏನು ಮಾಡುವುದಕ್ಕೆ ಬರುತ್ತದೆ?

**ಶ್ರೀ ಶಿವಕುಮಾರ್.ಕೆ:–** ಇಲ್ಲ, ಸ್ವಾಮಿ. ಮಾನ್ಯ ಸಭಾಪತಿಯವರೇ, 'ಸ್ವಾಮೀಜಿ' ಎಂದು ಬಂದುಬಿಡ್ತು ನೋಡಿ.

**(ಮುಂದು)**

(100)30.1.2026/6.10/ಎಂ.ಎಂ–ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಕುಮಾರ್. ಕೆ (ಮುಂದು):–**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರನ್ನು ಪ್ರಶ್ನೆ ಕೇಳಿದ್ದೇನೆ, ಅದಕ್ಕೆ ಅವರು 15 ದಿನಗಳ ಸಮಯ ಕೇಳಿದ್ದಾರೆ. ನಾನು ಅಂಥದ್ದು ಏನು ಕೇಳಿದ್ದೇನೆ? ಇದೇನೂ robot technology ಅಲ್ಲ.

**ಸಭಾಪತಿಯವರು:–** ಆಯಿತು ಉತ್ತರ ಕೊಡಿಸುತ್ತೇನೆ. ಈಗ ತಡೆಹಿಡಿಯಲಾದ ಪ್ರಶ್ನೆ.

**<u>ತಡೆಹಿಡಿಯಲಾದ ಪ್ರಶ್ನೆ</u>**

**ಪ್ರಶ್ನೆ ಸಂಖ್ಯೆ: 170**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ನಿನ್ನೆ ದಿವಸ ಸಾರಿಗೆ ಸಚಿವರ ಜೊತೆ ವಿಸ್ತೃತವಾದ ಚರ್ಚೆ ಮಾಡಿದ್ದೇನೆ. ಅಮಾಯಕರು ಸ್ಲೀಪರ್ ಬಸ್‌ನಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಬಸ್‌ನಲ್ಲಿ ಸುಮಾರು 20 ಜನರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದರು. ಆ ಬಸ್ ಒಂದು ಬೈಕ್‌ಗೆ ಡಿಕ್ಕಿ ಹೊಡೆದು ಬೈಕನ್ನು ತುಂಬಾ ದೂರಕ್ಕೆ ಎಳೆದುಕೊಂಡು ಹೋದಾಗ ಡಾಂಬರ್‌ಗೆ ತಾಗಿ spark ಆದ ಸಂದರ್ಭದಲ್ಲಿ ಬೆಂಕಿ ಹತ್ತಿಕೊಂಡಿತು. ನಂತರ ಬೆಂಗಳೂರಿನಿಂದ ಗೋಕರ್ಣಕ್ಕೆ ಹೋಗುವ ಬಸ್ ಹಿರಿಯೂರು ಬಳಿ ಅಪಘಾತವಾಗಿ 8 ಜನರು ಸಜೀವ ದಹನವಾದರು. ಅವರನ್ನು ಬದುಕಿಸುವುದಕ್ಕಾಗಲಿಲ್ಲ. ಕ್ರಿಸ್‌ಮಸ್ ರಜೆ, ಬೇರೆ ಬೇರೆ ರಜೆಯ ಕಾರಣಕ್ಕೆ ಒಂದು ಊರಿನಿಂದ ಇನ್ನೊಂದು ಊರಿಗೆ ಖುಷಿ ಖುಷಿಯಾಗಿ ಹೋಗುವ ಜನರು ಜೀವಂತವಾಗಿ ಭಸ್ಮವಾಗಿ ಹೋದರು. ಕಾರಣವೆಂದರೆ, ಸ್ಲೀಪರ್ ಬಸ್‌ಗಳಲ್ಲಿ ಅತಿಯಾದ ಸರಕುಗಳನ್ನು ಸಾಗಿಸುತ್ತಾರೆ. ಸ್ಲೀಪರ್ ಬಸ್‌ನಲ್ಲಿ ಕೇವಲ ಪ್ಯಾಸೆಂಜರ್‌ಗಳು ಮಾತ್ರ ಹೋಗುವುದಕ್ಕಿದೆ. ಆದರೆ ತೆರಿಗೆ ಮತ್ತು ಜಿ.ಎಸ್.ಟಿ. ಕದ್ದು ಸಿಲಿಂಡರ್, ಪಟಾಕಿ, paint, ದ್ವಿಚಕ್ರ ವಾಹನ, ಜವಳಿ ಉತ್ಪನ್ನ ಇವುಗಳನ್ನು ಬ್ಲಾಕ್‌ನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಬಸ್ ಮಾಲೀಕರು ಅವರ ದುರಾಸೆಗೋಸ್ಕರ; ಅಮಾಯಕ ಜನರಿಗೆ ಗೊತ್ತೇ ಇರುವುದಿಲ್ಲ. ಪ್ಯಾಸೆಂಜರ್ ಹೋಗುವ ಬಸ್‌ನಲ್ಲಿ ಅವರ luggage ಮಾತ್ರ ಇರಬೇಕು. ಆದರೆ ಬಸ್‌ನಲ್ಲಿ ಸುಮಾರು 6 ರಿಂದ 8 ಟನ್‌ಗಳಷ್ಟು luggage ಹಾಕುತ್ತಾರೆ. ನಾವು ಕೆಲವು ಸಲ ಬಸ್ ಹಿಂದುಗಡೆ ಹೋಗುವಾಗ ಬಸ್‌ಗಳು ಬಲಬದಿಗೆ, ಎಡಬದಿಗೆ ಜೋತಾಡಿಕೊಂಡು ಹೋಗುತ್ತವೆ. ಅಪಘಾತವಾದ ತಕ್ಷಣ ಬೆಂಕಿಗೆ ಅತ್ಯಂತ ಆಕರ್ಷಣೆಯಾಗುವ ವಸ್ತುಗಳು ಇರುವ ಕಾರಣಕ್ಕೋಸ್ಕರ ಇಡೀ ಬಸ್‌ಗೆ ಬೆಂಕಿ ಹೊತ್ತಿಕೊಳ್ಳುತ್ತದೆ. ಅಪಘಾತದಿಂದ ಸಾಯುವುದಿಲ್ಲ. ನಾನು ನಿನ್ನೆ ದಿವಸ ಸಾರಿಗೆ ಸಚಿವರ ಜೊತೆ ಮಾತನಾಡಿದ್ದೇನೆ. ರಾತ್ರಿ ಸಮಯದಲ್ಲಿ 'ಆನಂದರಾವ್ ಸರ್ಕಲ್'ಗೆ ಹೋದರೆ ಗೊತ್ತಾಗುತ್ತದೆ. ರಾಶಿ ರಾಶಿ luggage ಇರುತ್ತವೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಅತ್ಯಂತ ಕಠಿಣ ಕ್ರಮಗಳನ್ನು ವಹಿಸಬೇಕು. ಬಸ್‌ನ ಟಾಪ್ ನಲ್ಲಿ ಕೂಡ luggage ಹಾಕುತ್ತಾರೆ. ಬಸ್‌ಗಳಿಗೆ 8 ಟನ್ ಅಷ್ಟು luggage ಹೊರುವ ಸಾಮರ್ಥ್ಯವಿರುವುದಿಲ್ಲ. 100-200 ಬಸ್‌ಗಳಿರುವ ಬಸ್

ಮಾಲೀಕರ ಸ್ವಾರ್ಥಕ್ಕೋಸ್ಕರ, ಲಾಭಕ್ಕೋಸ್ಕರ ಅಮಾಯಕ ಜನರ ಬಲಿಯಾಗುತ್ತಿದೆ. ಅದನ್ನು ನಿಲ್ಲಿಸಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡುತ್ತೇನೆ. ಬಸ್‌ಗಳಲ್ಲಿ ಗಾಜನ್ನು ಒಡೆಯಲು ಸುತ್ತಿಗೆಯಂತಹ ಯಾವುದೇ ವ್ಯವಸ್ಥೆ ಇಲ್ಲದ ಕಾರಣ ಅದನ್ನು ಸಹ ಸರಿ ಮಾಡಬೇಕು. ಕೇಂದ್ರ ಮತ್ತು ರಾಜ್ಯದ ಗೈಡ್‌ಲೈನ್ಸ್ ಮುಖಾಂತರ ಅವರಿಗೆ ಸರಿಯಾದ ಶಿಕ್ಷೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಸಾರಿಗೆ ಸಚಿವರ ಜೊತೆ ವಿವರವಾಗಿ ಚರ್ಚೆ ಮಾಡಿದ್ದಾರೆ. ಮಾನ್ಯ ಸದಸ್ಯರು ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಈ ತರಹದ ಎಷ್ಟು ಅವಘಡಗಳು ಸಂಭವಿಸಿವೆ, ಈ ತರಹದ ಅವಘಡದಲ್ಲಿ ಎಷ್ಟು ಸಾವು ಸಂಭವಿಸಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಕಳೆದ 3 ವರ್ಷಗಳಲ್ಲಿ ಎರಡು ಅಪಘಾತಗಳು ಕರ್ನಾಟಕ ರಾಜ್ಯದಲ್ಲಿ ಆಗಿವೆ. ಹಿರಿಯೂರಿನಲ್ಲಿ ದಿನಾಂಕ 25.12.2025ರಂದು ಅಪಘಾತವಾಗಿ 8 ಜನರು ಮೃತರಾಗಿದ್ದಾರೆ. ದಿನಾಂಕ 27.1.2026ರಂದು ಹರಿಗೆ, ಹೊಸನಗರ ತಾಲ್ಲೂಕು ಇಲ್ಲಿ ಅಪಘಾತವಾದಾಗ ಯಾವುದೇ ಜೀವಹಾನಿಯಾಗಿರುವುದಿಲ್ಲ. ಅವೆರಡೂ ಇಲ್ಲಿ ರೆಕಾರ್ಡ್ ಆಗಿವೆ. ಮುಂದೆ ಏನೇನು ಕ್ರಮ ತೆಗೆದುಕೊಂಡಿದ್ದೇವೆಂದರೆ, ಈಗಾಗಲೇ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಹಾಗೂ ಖಾಸಗಿ ಬಸ್‌ಗಳ ಬಾಡಿ ಬಿಲ್ಡರ್ಸ್ ರವರುಗಳ ಜೊತೆ ಮಾತನಾಡಿ ಕಟ್ಟುನಿಟ್ಟಿನ ಆದೇಶಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಆದೇಶಗಳನ್ನು, ಸೂಚನೆಗಳನ್ನು ದಿನಾಂಕ 28.2.2026 ರೊಳಗಾಗಿ ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು ಎಂದು ಕಟ್ಟುನಿಟ್ಟಾಗಿ ಸೂಚನೆಗಳನ್ನು ಕೊಟ್ಟು ಸಭೆಯ ನಡವಳಿಗಳನ್ನು ಮಾಡಿದ್ದಾರೆ. ಇದರಲ್ಲಿ ಅತಿ ಮುಖ್ಯವಾಗಿ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಸಜೆಸ್ಟ್ ಮಾಡಿದ್ದಾರೆ. 12 ಮೀಟರ್ ಇರುವಂತಹ ಬಸ್‌ಗೆ 4 ತುರ್ತು ನಿರ್ಗಮನ ದ್ವಾರಗಳಿರಬೇಕು. 12 ಮೀಟರ್‌ಗಿಂತ ಹೆಚ್ಚಿನ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಟ 5 ತುರ್ತು ನಿರ್ಗಮನ ದ್ವಾರಗಳಿರಬೇಕು. ಬಸ್‌ನ ಗಾಜುಗಳನ್ನು ಒಡೆಯುವುದಕ್ಕೆ ಸುತ್ತಿಗೆಗಳಿರಬೇಕು. ಅಗ್ನಿ ಅವಘಡಗಳಾದಾಗ ಬೆಂಕಿಯನ್ನು ನಂದಿಸುವ ಸಾಧನವನ್ನು ಎಲ್ಲಾ ಬಸ್ಸುಗಳಲ್ಲಿ ಕಡ್ಡಾಯವಾಗಿ ಅಳವಡಿಸುವಂತೆ ಎಲ್ಲಾ ಖಾಸಗಿ ಬಸ್ಸುಗಳ ಮಾಲೀಕರಿಗೆ ಸೂಚಿಸಲಾಗಿದೆ. ಭಾರತ ಸರ್ಕಾರದ ಎಐಎಸ್:119 ಮಾನದಂಡಗಳನ್ನು strict ಆಗಿ observe ಮಾಡಲೇಬೇಕು. ಅದರ ಜೊತೆಯಲ್ಲಿ ಹಿಂದೆ ರಾಜಸ್ಥಾನದಲ್ಲಿ ಆಗಿರುವಂತಹ ಒಂದು suo-moto case ಅನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತೆಗೆದುಕೊಂಡಿರುವುದರಿಂದ ಜಾಗೃತಿಗಾಗಿ 10 ಅಂಶಗಳನ್ನು ಸೂಚಿಸಿದೆ.

ರಾಜಸ್ಥಾನದ ಪ್ರಕರಣದಲ್ಲಿ ಮಾಡಿರುವ 10 ಅಂಶಗಳನ್ನು ಕರ್ನಾಟಕದಲ್ಲಿಯೂ ಸಹ ಪಾಲಿಸಬೇಕೆಂದು ಇವೆರಡು ಮಾನದಂಡಗಳ ಪ್ರಕಾರ ದಿನಾಂಕ 28.2.2026ರೊಳಗಾಗಿ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಿಗೆ ನಿರ್ದೇಶನ ಕೊಟ್ಟಿದ್ದಾರೆ. ಇದರ ಜೊತೆಗೆ ಬಸ್‌ನಲ್ಲಿ public address system ಮಾಡುವುದು ಅಂದರೆ ಫ್ಲೈಟ್‌ನಲ್ಲಿ ಯಾವರೀತಿ announce ಮಾಡುತ್ತಾರೋ ಬಸ್ ಹತ್ತಿದ ಕೂಡಲೆ ಆ ರೀತಿ ಮಾಡುವುದು ಹಾಗೂ ಬಸ್‌ಗಳ ಮೇಲೆ ಯಾವುದೇ luggage ಹಾಕುವುದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಬಸ್‌ಗಳ ಒಳಗಿರುವ luggage ಗಳ ಬಗ್ಗೆ screening ಮಾಡಬೇಕೆಂದು ಹೇಳಿದ್ದಾರೆ. ಸದರಿ ಸೂಚನೆಗಳನ್ನು ಕಡ್ಡಾಯವಾಗಿ ಮತ್ತು ಚಾಚೂ ತಪ್ಪದೆ ಪಾಲಿಸುವಂತೆ, ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೆ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಲಾಗಿದೆ. ಮಾನ್ಯ ಸದಸ್ಯರು ರಾಜ್ಯದಲ್ಲಿ ಈವರೆಗೆ ಎಷ್ಟು ಬಸ್‌ಗಳನ್ನು ಪರಿಶೀಲನೆ ನಡೆಸಲಾಗಿದೆ ಎಂದು ಕೇಳಿದ್ದಾರೆ. ಮೂರು ವರ್ಷಗಳಲ್ಲಿ 13,799 ಬಸ್‌ಗಳನ್ನು ತಪಾಸಣೆಗೊಳಪಡಿಸಿದ್ದು ಯಾವ ಯಾವ ಡಿಪೋಗಳಲ್ಲಿ ತಪಾಸಣೆಗೊಳಿಸಲಾಗಿದೆ ಎಂಬ ವಿವರವನ್ನು ಅನುಬಂಧ-2ರಲ್ಲಿ ಕೊಟ್ಟಿದ್ದೇವೆ. ಡ್ರೈವರ್‌ಗಳಿಗೆ ಲೈಸೆನ್ಸ್ ಕೊಡಬೇಕಾದ ಸಂದರ್ಭದಲ್ಲಿ ಎಲ್ಲಾ ರೀತಿಯ ಮಾನದಂಡಗಳ ಪ್ರಕಾರ ತಪಾಸಣೆ ಮಾಡತಕ್ಕದ್ದು ಮತ್ತು ಅವರು ವೈದ್ಯರಿಂದ ಪ್ರಮಾಣಪತ್ರ ತರಬೇಕು. 50 ವರ್ಷ ಮೇಲ್ಪಟ್ಟವರಿಗೆ ನವೀಕರಣ ಸಮಯದಲ್ಲಿ ಅವರು ಮತ್ತೊಂದು ಸಲ ಆರೋಗ್ಯ ತಪಾಸಣೆ ಮಾಡಿಸಿ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಈ ರೀತಿಯಾಗಿ ಎಲ್ಲಾ ರೀತಿಯಾದಂತಹ ಷರತ್ತುಗಳನ್ನು ಹಾಕಿ ಕಟ್ಟುನಿಟ್ಟಾಗಿ ಮಾಡಬೇಕೆಂದು ಹೇಳಿದರು. ಡಿಪೋದಲ್ಲಿರುವ ಬಸ್‌ಗಳ conditions ನೋಡುವುದಕ್ಕೆ ಡಿಪೋ ಮ್ಯಾನೇಜರ್‌ರವರೇ ಜವಾಬ್ದಾರರು. ನಾವು ಏನು ಈ ಅಂಶಗಳನ್ನೆಲ್ಲಾ ಸೂಚಿಸಿದ್ದೇವೆ ಅವರು ಅದನ್ನೆಲ್ಲಾ ತಪಾಸಣೆ ಮಾಡಬೇಕು. ಏನಾದರೂ ಹೆಚ್ಚು ಕಡಿಮೆಯಾದರೆ ಅದಕ್ಕೆ ಡಿಪೋ ಮ್ಯಾನೇಜರ್‌ರವರೇ ಜವಾಬ್ದಾರರು ಎಂದು ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟು ನಡವಳಿಯನ್ನು ಮಾಡಲಾಗಿದೆ. ಈಗ ಆಗಿರುವಂತಹ ಘಟನೆಗಳು ಮುಂದೆ ಮರುಕಳಿಸಬಾರದು ಎನ್ನುವ ಉದ್ದೇಶಕ್ಕಾಗಿ ಈ ರೀತಿಯಾದಂತಹ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಸಚಿವರು ಕಟ್ಟುನಿಟ್ಟಿನ ಆದೇಶ ಕೊಟ್ಟಿದ್ದಾರೆ. ಬರುವಂತಹ ದಿನಗಳಲ್ಲಿ ಈ ರೀತಿಯಾದ ಘಟನೆಗಳಿಗೆ ಅವಕಾಶವಿಲ್ಲದಂತೆ ಸರ್ಕಾರ ಜವಾಬ್ದಾರಿ ವಹಿಸುತ್ತದೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಮಾನ್ಯ ಸಚಿವರೆ, ಪ್ರಾದೇಶಿಕ ಸಾರಿಗೆ ಕಛೇರಿ ಭ್ರಷ್ಟಾಚಾರದಿಂದ ತುಂಬಿದೆ. ಮಾನ್ಯ ಸಚಿವರು ತುಂಬಾ ಪ್ರಾಮಾಣಿಕರಿದ್ದಾರೆ ಮತ್ತು ಅವರು ಅತ್ಯಂತ ಸ್ವಚ್ಛ ರಾಜಕಾರಣಿ ಮತ್ತು

ಹಿರಿಯರಿದ್ದಾರೆ. ನಾನು ಅವರ ಜೊತೆ ಚರ್ಚೆ ಮಾಡಿದ್ದೇನೆ. ದಯವಿಟ್ಟು ಪ್ರಾದೇಶಿಕ ಸಾರಿಗೆ ಕಛೇರಿಯು ಭ್ರಷ್ಟಾಚಾರದಿಂದ ಕೂಡಿದ್ದು ಮಧ್ಯವರ್ತಿಗಳಿಂದ ತುಂಬಿದೆ. ದಯವಿಟ್ಟು ಅದನ್ನು ತಡೆಗಟ್ಟುವಲ್ಲಿ ಕಟ್ಟುನಿಟ್ಟಿನ ಕ್ರಮ ವಹಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೆ, ತಾವು ಹೇಳಿದ ಸೂಚನೆಯನ್ನು ಪಾಲಿಸುತ್ತೇವೆ.

**ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಗೆ ಆಚಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು);–** ಮಾನ್ಯ ಸಭಾಪತಿಯವರೆ, ದಿನಾಂಕ 30ನೇ ಜನವರಿ 2026 ಸಮೂಹ–Vರ ಆಚಿತ ಮೂಲಕ ಉತ್ತರಿಸುವ ಒಟ್ಟು 126 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:** ಮಂಡಿಸಲಾಯಿತು.

## 7. ನಿಯಮ 59ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ವಿಷಯ:- ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಹಾಗೂ ಸರ್ಕಾರಿ, ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಧ್ಯಾಪಕರಿಗೆ ಪಿಂಚಣಿಯಲ್ಲಿ ಕಡಿತ ಆಗುತ್ತಿರುವ ಕುರಿತು.**

- - -

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 7ನೇ ವೇತನ ಆಯೋಗದಿಂದ ಯು.ಜಿ.ಸಿ. ವೇತನ ಪಡೆದು ದಿನಾಂಕ 1-7-2022ರ ನಂತರ ನಿವೃತ್ತರಾದ ಪ್ರಾಧ್ಯಾಪಕರಿಗೆ ಸದ್ಯ ಪಡೆಯುತ್ತಿರುವ ಪಿಂಚಣಿಯಲ್ಲಿ ಭಾರಿ ಪ್ರಮಾಣದ ಕಡಿತ ಆಗುತ್ತಿರುವ ಬಗ್ಗೆ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ವರದಿಯಾದುದನ್ನು ಶೂನ್ಯ ಅವಧಿಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯ ಹಾಗೂ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೆಜುಗಳಲ್ಲಿ ಸೇವೆ ಸಲ್ಲಿಸಿ ದಿನಾಂಕ 1-7-2022ರ ನಂತರ ನಿವೃತ್ತರಾದ 2000 ಸಾವಿರಕ್ಕಿಂತ ಹೆಚ್ಚು ಅಧ್ಯಾಪಕರಿಗೆ ಈಗ ಪಡೆಯುತ್ತಿರುವ ಪಿಂಚಣಿಯಲ್ಲಿ ಪ್ರತಿ ತಿಂಗಳು 25,000 ರೂ.ಗಳಿಂದ 30,000 ರೂ.ಗಳವರೆಗೆ ಕಡಿಮೆಯಾಗುವ ಸನ್ನಿವೇಶ ಸೃಷ್ಠಿಯಾಗಿರುವುದು, ಇದಕ್ಕೆ ಕಾರಣವೇನೆಂದರೆ, 7ನೇ ವೇತನ ಆಯೋಗದ ಆದೇಶದ ಭಾಗ-1 (29ಜಿ) ಮತ್ತು ಭಾಗ-2ರಲ್ಲಿ ವಿಧಿಸಿರುವ ಷರತ್ತುಗಳು ಕಾರಣವಾಗಿವೆ. ಇದಲ್ಲದೆ ದಿ: 1-7-2022ರ ಪೂರ್ವದಲ್ಲಿ ನಿವೃತ್ತರಾದ ನೌಕರರಿಗೆ ಪಿಂಚಣಿಯನ್ನು ನಿಗದಿಪಡಿಸಲು ಫಿಟ್‌ಮೆಂಟ್ ಟೇಬಲ್ ಪುಸ್ತಕ ಇರುತ್ತದೆ. ಆದರೆ, ದಿ: 1-7-2022ರ ನಂತರ ನಿವೃತ್ತರಾದ ನೌಕರರಿಗೆ ಫಿಟ್‌ಮೆಂಟ್ ಪುಸ್ತಕ ಇರುವುದಿಲ್ಲ.

ಈ ಎಲ್ಲಾ ಕಾರಣಕ್ಕೆ 7ನೇ ವೇತನ ಆಯೋಗದ ಆದೇಶದಡಿ ನಿವೃತ್ತರಾದ ಅನೇಕ ಯು.ಜಿ.ಸಿ. ಪ್ರಾಧ್ಯಾಪಕರುಗಳಗೆ ಪಿಂಚಣಿಯಲ್ಲಿ ಅನ್ಯಾಯವಾಗುತ್ತಿದೆ. ಆದ್ದರಿಂದ ಉನ್ನತ ಶಿಕ್ಷಣ ಸಚಿವರು ದಿ: 1-7-2022ರ ನಂತರ ನಿವೃತ್ತರಾದ ಯು.ಜಿ.ಸಿ. ನೌಕರರಿಗೆ ಪಿಂಚಣಿಯಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಆರ್ಥಿಕ ಇಲಾಖೆಗೆ ಸೂಕ್ತ ಸೂಚನೆಯನ್ನು ನೀಡಲು ಕೋರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು);-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

(101) 30-01-2026 6-20 KH/AK (ಸಭಾಪತಿಯವರ ಉಪಸ್ಥಿತಿ)

**(ಆ) ವಿಷಯ:- ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 50 ವರ್ಷ ಹಳೆಯ ಒಳಚರಂಡಿ ಜಾಲವನ್ನು ಅಭಿವೃದ್ಧಿಪಡಿಸುವ ಬಗ್ಗೆ.**

***

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 50 ವರ್ಷ ಹಳೆಯ ಒಳಚರಂಡಿ ಜಾಲವನ್ನು ಅಭಿವೃದ್ಧಿ ಪಡಿಸುವ ಬಗ್ಗೆ, ಪಾಲಿಕೆ ಬಜೆಟ್‌ನಲ್ಲಿ ಘೋಷಿಸದಿದ್ದರೆ ಚುನಾವಣೆ ಬಹಿಷ್ಕಾರಕ್ಕೆ ಚಿಂತನೆ ಮತ್ತು ಪೋಸ್ಟ್ ಕಾರ್ಡ್ ಚಳುವಳಿ ಬಗ್ಗೆ 'ಉದಯವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿರುವುದಕ್ಕಾಗಿ ಧನ್ಯವಾದಗಳು.

ಮಂಗಳೂರು ನಗರದ ಭೂಗತ ಒಳಚರಂಡಿ ಯೋಜನೆಯು 1961 ನೇ ಸಾಲಿನಲ್ಲಿ ಅಂದಿನ ಜನಸಂಖ್ಯೆ 1.41 ಲಕ್ಷಗಳಿಗೆ ಅನುಗುಣವಾಗಿ ಮತ್ತು 1991 ಕ್ಕೆ ಅಂದಾಜಿತ ಜನಸಂಖ್ಯೆ 2.00 ಲಕ್ಷಗಳಿಗೆ ಅನುಗುಣವಾಗಿ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಈ ಯೋಜನೆಯ ಪ್ರಕಾರ ಸುಮಾರು 170 ಕಿ.ಮೀ ನಷ್ಟು ಉದ್ದಕ್ಕೆ, 150 ಮಿ.ಮೀ ರಿಂದ 750 ಮಿ.ಮೀ ವ್ಯಾಸದ ಕೊಳವೆ ಜಾಲ ಮತ್ತು 4000 ಸಂಖ್ಯೆಯ ಆಳುಗುಂಡಿಗಳನ್ನು ನಿರ್ಮಿಸಲಾಗಿದೆ. ಕಾವೂರು ಮತ್ತು ಎಕ್ಕೂರುಗಳಲ್ಲಿ ಕ್ರಮವಾಗಿ 5 MGD ಮತ್ತು 1 MGD ಜಲತ್ಯಾಜ್ಯ ಸಂಸ್ಕರಣ ಘಟಕ (STP) ನಿರ್ಮಿಸಲಾಗಿತ್ತು. ಕಾವೂರು ಘಟಕಕ್ಕೆ ವೆಟ್‌ವೆಲ್ 1 ರಿಂದ 5 ಹಾಗೂ ಎಕ್ಕೂರು ಘಟಕಕ್ಕೆ 6 ಮತ್ತು 7 ವೆಟ್‌ವೆಲ್‌ಗಳಿಂದ ಜಲ ತ್ಯಾಜ್ಯವು ಹರಿದು ಬರುತ್ತದೆ. ಈ ಒಳಚರಂಡಿ ಕೊಳವೆ ಜಾಲವು ಹಳೆಯ ಮುನ್ಸಿಪಲ್ ವಾರ್ಡಿನ ವ್ಯಾಪ್ತಿಯಲ್ಲಿ ಹರಡಿಕೊಂಡಿರುತ್ತದೆ. ತದನಂತರ ನಗರವು ಬೆಳೆದಂತೆ ಅಗತ್ಯತೆಗೆ ಅನುಗುಣವಾಗಿ ಒಳಚರಂಡಿ ಜಾಲ ವಿಸ್ತರಣೆ ಮಾಡಲಾಗಿದೆ. ಇದರ ಪ್ರಕಾರ ಪಾಲಿಕೆಯ ಸುಮಾರು 245 ಕಿ.ಮೀ. ನಷ್ಟು ಕೊಳವೆ ಜಾಲ ಮತ್ತು 8,000 ಮಶಿನ್ ಹೋಲ್‌ಗಳನ್ನು ನಿರ್ಮಿಸಿದೆ.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಗರದ ಬಹುತೇಕ ಕಡೆ ಕೆಂಪು ಕಲ್ಲಿನ ಮಶಿನ್ ಹೋಲ್ ಹಾಗೂ ಸ್ಟೋನ್ ವೇರ್ ಪೈಪ್‌ಗಳು ಶಿಥಿಲಾವಸ್ಥೆಯಲ್ಲಿರುತ್ತದೆ.

ಇದರಿಂದಾಗಿ ಮಳೆಯ ನೀರು ಸದರಿ ಮಶಿನ್ ಹೋಲ್‌ಗಳ ಮೂಲಕ ಹರಿಯುವುದರಿಂದ ಮಶಿನ್ ಹೋಲ್‌ಗಳಲ್ಲಿ ಒಳಚರಂಡಿ ತ್ಯಾಜ್ಯವು ಹೊರಸೂಸಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ, ಹಾಗೂ ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ ಮನೆಗಳಿಗೆ – ಒಳಚರಂಡಿ ಸಂಪರ್ಕ ಕಲ್ಪಿಸಲು ಶೇಕಡಾ 35 ರಷ್ಟು ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ವಿಸ್ತರಿಸುವುದು ಅಗತ್ಯವಾಗಿರುತ್ತದೆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 850.00 ಕಿ.ಮೀ ಒಳಚರಂಡಿ ಜಾಲವಿದ್ದು, 25,000,00 ಆಳುಗುಂಡಿಗಳು ಇರುತ್ತದೆ. ಸದರಿ 850.00 ಕಿ.ಮೀ ಒಳಚರಂಡಿ ಜಾಲದಲ್ಲಿ 250.00 ಕಿ.ಮೀ ಒಳಚರಂಡಿ ಜಾಲವು 50 ವರ್ಷ ಹಳೆಯದಾಗಿರುತ್ತದೆ. ಸದರಿ 250.00 ಕಿ.ಮೀ ಗಳಲ್ಲಿ 25.00 ಕಿ.ಮೀ ಗಳನ್ನು ಅಮೃತ್ ಯೋಜನೆಯಡಿ ಕೆ.ಯು.ಐ.ಡಿ.ಎಫ್.ಸಿ. ಇಲಾಖೆ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುತ್ತದೆ. 9.00 ಕಿ.ಮೀ. ಒಳಚರಂಡಿ ಜಾಲವನ್ನು N.G.T. ಅನುದಾನದಡಿ ಅಭಿವೃದ್ಧಿಪಡಿಸಲು D.P.R ಅನ್ನು ಕೆ.ಯು.ಐ.ಡಿ.ಎಫ್.ಸಿ. ಗೆ ಸಲ್ಲಿಸಲಾಗಿರುತ್ತದೆ. ಉಳಿದ 216.00 ಕಿ.ಮೀ. ಒಳಚರಂಡಿ ಜಾಲ ಹಾಗೂ ಒಳಚರಂಡಿ ಜಾಲವನ್ನು ಹೊಂದಿರದ ಪ್ರದೇಶಗಳಲ್ಲಿ ಒಳಚರಂಡಿ ಜಾಲವನ್ನು ನಿರ್ಮಿಸುವುದು ಅಗತ್ಯವಾಗಿರುತ್ತದೆ. 50 ವರ್ಷ ಹಳೆಯ ಒಳಚರಂಡಿ ನೀರಿನ ಪೈಪ್‌ಗಳು ಹಾಳಾಗಿರುವುದರಿಂದ, ಒಳಚರಂಡಿ ನೀರು ರಾಜಕಾಲುವೆಯಲ್ಲಿ ಹರಿಯುತ್ತಿದ್ದು, ಕರ್ನಾಟಕ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಪಾಲಿಕೆಗೆ ನೋಟೀಸ್‌ಗಳನ್ನು ನೀಡಲಾಗುತ್ತಿರುತ್ತದೆ ಹಾಗೂ ಒಳಚರಂಡಿ ನೀರು ರಾಜಕಾಲುವೆಯಲ್ಲಿ ಹರಿಯುತ್ತಿರುವ ಬಗ್ಗೆ ಹಾಗೂ ನದಿಗಳು ಕಲುಷಿತವಾಗುತ್ತಿರುವ ಬಗ್ಗೆ ಪಾಲಿಕೆಯ ವಿರುದ್ಧ ಎನ್.ಜಿ.ಟಿ. ಪ್ರಕರಣಗಳು ದಾಖಲಾಗಿದ್ದು ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ ಹಳೆಯ ಶಿಥಿಲಾವಸ್ಥೆಯಲ್ಲಿರುವ ಕೆಂಪು ಕಲ್ಲಿನ ಮಶಿನ್ ಹೋಲ್ ಹಾಗೂ ಸ್ಟೋನ್ ವೇರ್ ಪೈಪ್‌ಗಳನ್ನು ಆರ್.ಸಿ.ಸಿ. ಮಶಿನ್ ಹೋಲ್ ಹಾಗೂ ಯು.ಪಿ.ವಿ.ಸಿ/ಆರ್.ಸಿ.ಸಿ/ಡಿ.ಐ. ಗೆ ಬದಲಾಯಿಸಲು ಹಾಗೂ ಒಳಚರಂಡಿ ರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಅಂದಾಜು ಮೊತ್ತ ರೂ. 1250.00 ಕೋಟಿ ರೂಪಾಯಿಗಳ ಅವಶ್ಯಕತೆ ಇರುತ್ತದೆ. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಇ) ವಿಷಯ:– ಬಾಗಲಕೋಟೆ ಜಿಲ್ಲೆ ರಬಕವಿ-ಬನಹಟ್ಟಿ ಜಾಕ್‌ವೆಲ್‌ನ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಮಹಿಷವಾಡಗಿ ಸೇತುವೆ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸುವ ಕುರಿತು.**

***

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬೆಳಗಾವಿ-ಬಾಗಲಕೋಟೆ ಜಿಲ್ಲೆಗೆ ಬೆಸುಗೆ ಮಾಡುವಲ್ಲಿ ಮಹತ್ವದ ಯೋಜನೆಯಾಗಿರುವ ರಬಕವಿ-ಬನಹಟ್ಟಿ ಚಾಕ್‌ವೆಲ್‌ನ ಹತ್ತಿರ ಕೃಷ್ಣಾನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಮಹಿಷವಾಡಗಿ ಸೇತುವೆ ಕಾಮಗಾರಿ ತಾತ್ಕಾಲಿಕವಾಗಿ ಕಳೆದ 4 ವರ್ಷಗಳಿಂದ ಸ್ಥಗಿತಗೊಂಡಿದೆ. ಅಳಿದುಳಿದ ಅವಶೇಷಗಳ ಆಸ್ತಿಪಂಜರದಂತೆ ಸೇತುವೆ ಅನಾಥವಾಗಿ ನಿಂತಿರುವುದನ್ನು ಕಂಡು ರಬಕವಿ-ಬನಹಟ್ಟಿ & ಅಥಣಿ ತಾಲ್ಲೂಕಿನ ನಾಗರಿಕರಲ್ಲಿ ಬೇಸರ ಮೂಡಿಸಿವೆ.

ಆ ಭಾಗದ ನಾಗರೀಕರ ಸತತ ಆಗ್ರಹದ ನಡುವೆ ಆರಂಭವಾದ ಕಾಮಗಾರಿಯು ಕಳೆದ 8 ವರ್ಷಗಳಲ್ಲಿ ಕೇವಲ ಶೇ.25 ರಷ್ಟು ಮಾತ್ರ ಆಗಿದೆ. ಸನ್ 2021 ರಲ್ಲಿ ಕಾಮಗಾರಿಗೆ ಮತ್ತಷ್ಟು ಉತ್ತೇಜನ ನೀಡುವ ಸಲುವಾಗಿ ಸರ್ಕಾರದ ಮೇಲೆ ಒತ್ತಡ ಹೇರಿ ಟೆಂಡರ್ ಕಾಮಗಾರಿಯ ಮೊತ್ತವನ್ನು ರೂ.50 ಕೋಟಿವರೆಗೆ ಹೆಚ್ಚಿಸುವ ಮೂಲಕ ಗುಣಮಟ್ಟದ ಕಾಮಗಾರಿ ಮತ್ತು ಸೇತುವೆ ವಿಸ್ತರಣೆಗೆ ಸರ್ಕಾರದಿಂದ ಅನುಮೋದನೆ ಪಡೆಯಲಾಗಿತ್ತು, ಜನತೆಯ ಪಾಲಿಗೆ ವರವಾಗಬೇಕಿದ್ದ ಕಾಮಗಾರಿಯು 04 ವರ್ಷಗಳಿಂದ ಸಂಪೂರ್ಣ ಸ್ಥಗಿತಗೊಂಡು ಹಳ್ಳ ಹಿಡಿದಿದೆ ಎಂದು ಜನರು ಮಾತನಾಡುತ್ತಿದ್ದಾರೆ.

ಕಾಮಗಾರಿ ಸ್ಥಗಿತಗೊಂಡಿದ್ದರೂ ಅಲ್ಲಿನ ಅಧಿಕಾರಿಗಳು/ರಾಜ್ಯ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೇ ಕಣ್ಮುಚ್ಚಿ ಕುಳಿತಿದ್ದಾರೆ ಎಂದು ನಾಗರೀಕರು ಹೇಳುತ್ತಿದ್ದಾರೆ.

ಸಂಪರ್ಕ ರಸ್ತೆಗೆ ಬೇಕಾದ 4-5 ಎಕರೆಯಷ್ಟು ಭೂಮಿ ಮಾತ್ರ ವಶಪಡಿಸಿಕೊಂಡಿದ್ದು ಬಿಟ್ಟರೆ ರಬಕವಿಯ ತ್ರಿಶಲಾದೇವಿ ಆಸ್ಪತ್ರೆವರೆಗಿನ ನಿಯೋಜಿತ ರಸ್ತೆ ನಿರ್ಮಾಣ ಹಾಗೂ ಇತರೆ ಅಗತ್ಯ ಜಮೀನುಗಳಿಗೆ ಸರ್ಕಾರದಿಂದ ಇಲ್ಲಿಯವರೆಗೂ ರೈತರಿಗೆ ಪರಿಹಾರ ನೀಡಿಲ್ಲ. ನದಿಯಲ್ಲಿನ ಪಿಲ್ಲರ್ ಸೇರಿದಂತೆ ರಬಕವಿಯಿಂದ ಸೇತುವೆ ಮತ್ತು ಸೇತುವೆಯಿಂದ ಮಹಿಷವಾಡಗಿಗೆ ಸಂಪರ್ಕ ಕಲ್ಪಿಸಲು ಅಗತ್ಯವಾಗಿರುವ ರಸ್ತೆ ಕಾಮಗಾರಿಯ ಸೇತುವೆ ನಿರ್ಮಾಣವು ಸ್ಥಗಿತವಾಗಿದೆ.

ಸರ್ಕಾರ ಅಥವಾ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸ್ಥಗಿತಕ್ಕೆ ಕಾರಣವಾದ ಅಂಶಗಳನ್ನು ಗುರುತಿಸಿ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗದಿದ್ದರೆ ಸಾರ್ವಜನಿಕವಾಗಿ ಅನಾನೂಕೂಲವಾಗುವುದನ್ನು ಗಮನಿಸಿ ಸಂಬಂಧಿಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಶೀಘ್ರ ಕಾಮಗಾರಿ ಪುನರ್ ಪ್ರಾರಂಭಿಸಬೇಕೆಂಬುದು ನಾಗರೀಕರ ಒತ್ತಾಯವಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಈ ಸೇತುವೆ ಕಾಮಗಾರಿ ವಿಳಂಬ ವಿರೋಧಿಸಿ ರಬಕವಿಯಲ್ಲಿ ಅನೇಕ ಹಿರಿಯರು ಉಪವಾಸ ಸತ್ಯಾಗ್ರಹವನ್ನು ಸತತವಾಗಿ ನಡೆಸುತ್ತಲೇ ಇದ್ದಾರೆ. ಆದರೆ ಸರ್ಕಾರವು ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ಇರುವುದು ನೋವಿನ ಸಂಗತಿಯಾಗಿದೆ.

ಸರ್ಕಾರದ ನಿರ್ಲಕ್ಷತನದಿಂದಲೇ ಕಾಮಗಾರಿ ಸ್ಥಗಿತಗೊಂಡಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕು ಹಾಗೂ ಆ ಭಾಗದ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಸರ್ಕಾರವು ಈ ಕೂಡಲೇ ಸ್ಥಗಿತಗೊಂಡಿರುವ ರಬಕವಿಯ ಮಹಿಷವಾಡಗಿ ಸೇತುವೆ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಬೇಕೆಂದು ಹಾಗೂ ಅದಕ್ಕೆ ಬೇಕಾದ ಎಲ್ಲ ರೀತಿಯ ಹಣಕಾಸಿನ ವ್ಯವಸ್ಥೆಯನ್ನು ಕಲ್ಪಿಸಿ ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸಿ ಆ ಭಾಗದ ಜನರಿಗೆ ಮತ್ತು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ ರವರು ಕೇಳದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಈ) ವಿಷಯ:- ಬೆಳಗಾವಿ ನಗರದ ಐತಿಹಾಸಿಕ ಕೋಟೆ ಕೆರೆಯ ಮಧ್ಯದಲ್ಲಿ 100 ಅಡಿ ಎತ್ತರದ ಬುದ್ಧ ಮೂರ್ತಿಯ ಸ್ಥಾಪನೆಯ ವಿಳಂಬದ ಕುರಿತು.**

***

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬೆಳಗಾವಿ ನಗರದ ಐತಿಹಾಸಿಕ ಕೋಟೆ ಕೆರೆಯ ಮಧ್ಯದಲ್ಲಿ 100 ಅಡಿ ಎತ್ತರದ ಬುದ್ಧ ಮೂರ್ತಿಯ ಸ್ಥಾಪನೆಯ ವಿಳಂಬದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಬೆಳಗಾವಿ ನಗರದ ಐತಿಹಾಸಿಕ ಕೋಟೆ ಕೆರೆಯ ಮಧ್ಯದಲ್ಲಿ 100 ಅಡಿ ಎತ್ತರದ ಬುದ್ಧ ಮೂರ್ತಿಯನ್ನು ಪ್ರತಿಷ್ಠಾಪಿಸಲು ಕಳೆದ 2015 ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯು ನಿರ್ಣಯ ಕೈಗೊಂಡು, ಈ ಯೋಜನೆಗಾಗಿ 1 ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿಟ್ಟಿತ್ತು.

ಆದರೆ, ಯೋಜನೆ ಘೋಷಣೆಯಾಗಿ ದಶಕ ಕಳೆಯುತ್ತಾ ಬಂದರೂ, ಈವರೆಗೆ ಬುದ್ಧ ಮೂರ್ತಿಯ ಪ್ರತಿಷ್ಠಾಪನೆಯ ಕಾರ್ಯವು ಕಾರ್ಯರೂಪಕ್ಕೆ ಬಂದಿಲ್ಲ. ಈ ವಿಳಂಬಕ್ಕೆ ಕಾರಣಗಳೇನು? ಮೀಸಲಿಟ್ಟ ಅನುದಾನದ ಸದ್ಬಳಕೆಯಾಗಿದೆಯೇ ಅಥವಾ ತಾಂತ್ರಿಕ/ಆಡಳಿತಾತ್ಮಕ ಕಾರಣಗಳಿಂದ ಯೋಜನೆ ಸ್ಥಗಿತಗೊಂಡಿದೆಯೇ? ಎಂಬ ಬಗ್ಗೆ ಸಾರ್ವಜನಿಕರಲ್ಲಿ ತೀವ್ರ ಕುತೂಹಲ ಹಾಗೂ ಅಸಮಾಧಾನವಿದೆ. ಈ ವಿಷಯವು ಅತ್ಯಂತ ಜರೂರಾದ ಹಾಗೂ ಸಾರ್ವಜನಿಕ ಮಹತ್ವವುಳ್ಳದ್ದಾಗಿರುವುದರಿಂದ, ಈ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಫ್.ಹೆಚ್.ಜಕ್ಕಪ್ಪನವರ್ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಉ) ವಿಷಯ:– "ಆಕಸ್ಮಿಕ ಬೆಂಕಿಯಿಂದ ನಾನ್–ಎ.ಸಿ. ಸ್ಲೀಪರ್ ಬಸ್ ಭಸ್ಮವಾಗಿರುವ ಕುರಿತು.**

***

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ ಕನ್ನಡ ಪ್ರಭ ಪತ್ರಿಕೆಯಲ್ಲಿ "ಆಕಸ್ಮಿಕ ಬೆಂಕಿ: ನಾನ್– ಎ.ಸಿ. ಸ್ಲೀಪರ್ ಬಸ್ ಭಸ್ಮ" ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿದೆ.

ಬೆಂಗಳೂರಿನ ಅನ್ನಪೂರ್ಣ ಟ್ರಾವೆಲ್ಸ್ ಸಂಸ್ಥೆಗೆ ಸೇರಿದ ನಾನ್–ಎ.ಸಿ. ಸ್ಲೀಪರ್ ಬಸ್ ಹೊಸನಗರ ತಾಲ್ಲೂಕಿನ ನಿಟ್ಟೂರಿನಿಂದ ಹೊರಟು ಹೊಸನಗರ, ರಿಪ್ಪನ್ ಪೇಟೆ ಮೂಲಕ ಶಿವಮೊಗ್ಗದತ್ತ ಬರುವಾಗ ಅರಸಾಳು–ಸೂಡೂರು ಬಳಿಯ 9ನೇ ಮೈಲುಗಲ್ಲಿನ ಮಾರ್ಗದಲ್ಲಿ ಕಾಡಿನ ಮಧ್ಯೆ ಬೆಂಕಿ ಕಾಣಿಸಿಕೊಂಡಿದೆ.

ಬಸ್‌ನಲ್ಲಿ 36 ಮಂದಿ ಪ್ರಯಾಣಿಕರು ಇದ್ದು, ಆರಂಭದಲ್ಲಿ ಬಸ್‌ನಲ್ಲಿ ತಾಂತ್ರಿಕ ದೋಷದಿಂದ ಹೊಗೆ ಕಾಣಿಸಿಕೊಂಡಿದ್ದು, ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಮರಕ್ಕೆ ಡಿಕ್ಕಿಯಾಗಿ ನಿಂತಿದೆ. ನಂತರ ಬೆಂಕಿ ಹತ್ತಿಕೊಂಡಿದ್ದು ತಕ್ಷಣ ಪ್ರಯಾಣಿಕರನ್ನು ಕೆಳಗೆ ಇಳಿಸಲಾಗಿದೆ. ಬಸ್ಸಿನಲ್ಲಿ ಕಾಣಿಸಿಕೊಂಡ ಬೆಂಕಿ ಅವಘಡದಲ್ಲಿ ಹತ್ತು ಜನರಿಗೆ ತೀವ್ರ ಗಾಯಗಳಾಗಿವೆ ಇನ್ನುಳಿದ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಕೆಲವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಮತ್ತು ಇನ್ನೂ ಕೆಲ ಪ್ರಯಾಣಿಕರನ್ನು ರಿಪ್ಪನ್ ಪೇಟೆಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪ್ರಾಥಮಿಕ ತನಿಖೆಯ ಪ್ರಕಾರ ಬಸ್‌ನಲ್ಲಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಚಾಲಕನ ಆಸನದ ಹಿಂಬದಿಯಲ್ಲಿ ಅಳವಡಿಸಲಾಗಿದ್ದ ಇ.ಸಿ.ಎಂ. ಬೋರ್ಡ್ ಏಕಾಏಕಿ ಸ್ಫೋಟಗೊಂಡಿದೆ. ಇದರ ಪರಿಣಾಮವಾಗಿ ಬಸ್‌ನ ಬ್ರೇಕ್ ವಾಕ್ಯೂಮ್ ವ್ಯವಸ್ಥೆ ಸಂಪೂರ್ಣವಾಗಿ ನಿಷ್ಕ್ರಿಯಗೊಂಡು ಚಾಲಕನ ನಿಯಂತ್ರಣ ತಪ್ಪಿದೆ ಎಂದು ಅಧಿಕಾರಿಗಳು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ಚಿತ್ರದುರ್ಗದ ಬಸ್ ದುರಂತ ಮಾಸುವ ಮುನ್ನವೇ ಮತ್ತೊಂದು ಬೆಂಕಿ ಅವಘಡ ಸಂಭಸಿರುವುದು ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲದಂತಾಗಿದೆ.

ಸಾರಿಗೆ ಇಲಾಖೆಯವರು ಎಫ್.ಸಿ. ತಪಾಸಣೆ ಮಾಡುವ ಸಮಯದಲ್ಲಿ ಹಳೆಯದಾದ ಮತ್ತು ರಸ್ತೆಯಲ್ಲಿ ಓಡಿಸಲು ಯೋಗ್ಯವಲ್ಲದ ಬಸ್‌ಗಳ ಪರವಾನಗಿಯನ್ನು ರದ್ದುಗೊಳಿಸಬೇಕು. ಆಕ್ರಮವಾಗಿ ಸಂಚರಿಸುವ (ಪರ್ಮಿಟ್ ಇಲ್ಲದ) ಬಸ್‌ಗಳನ್ನು ಜಪ್ತಿ ಮಾಡಬೇಕು. ಪ್ರತಿಯೊಂದು ಖಾಸಗಿ ಬಸ್‌ಗಳಲ್ಲಿ 'ಸ್ಪೀಡ್ ಗವರ್ನರ್'

ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ವೇಗದ ಮಿತಿಯನ್ನು ಮೀರುವವರ ಮೇಲೆ ಕಠಿಣ ದಂಡ ವಿಧಿಸಬೇಕು. ಈ ಬಗ್ಗೆ ಮಾನ್ಯ ಸಾರಿಗೆ ಸಚಿವರು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಬಲ್ಕೀಸ್ ಬಾನು ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(102) 30.01.2026 6.30 ಹೆಚ್‌ವಿ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಊ) ವಿಷಯ: ಕಲಬುರಗಿ ಕೋಟೆಯ ವಿಶ್ವದ ಅತಿದೊಡ್ಡ "ಬಾರಾ ಗಾಜಿ ತೋಪಿ"ನ ರಕ್ಷಣೆ ಹಾಗೂ ಗಿನ್ನಿಸ್ ದಾಖಲೆಗೆ ಸೇರಿಸುವ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಕುರಿತು**

---

**ಶ್ರೀ ತಿಪ್ಪಣ್ಣಪ್ಪ ಕಮಕನೂರ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಯ ಐತಿಹಾಸಿಕ ಬಹಮನಿ ಕೋಟೆಯು ತನ್ನದೇ ಆದ ವಿಶಿಷ್ಟ ಇತಿಹಾಸವನ್ನು ಹೊಂದಿದೆ. ಈ ಕೋಟೆಯಲ್ಲಿರುವ "ಬಾರಾ ಗಾಜಿ ತೋಪು" ಕೇವಲ ಜಿಲ್ಲೆಯ ಹೆಮ್ಮೆಯಲ್ಲ. ಇಡೀ ದೇಶದ ಅತಿದೊಡ್ಡ ಐತಿಹಾಸಿಕ ರಕ್ಷಣಾ ಶಸ್ತ್ರಾಸ್ತ್ರವಾಗಿದೆ. ಆದರೆ, ಸೂಕ್ತ ಪ್ರಚಾರ ಮತ್ತು ದಾಖಲಾತಿಯ ಕೊರತೆಯಿಂದಾಗಿ ಈ ಅಪೂರ್ವ ಸ್ಮಾರಕವು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡದೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಗ್ಗೆ ದಿನಾಂಕ:26.01.2026ರ "ವಾರ್ತಾ ಭಾರತಿ" ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಪ್ರಸ್ತುತ ದಾಖಲೆಯಲ್ಲಿರುವ ಆಂಧ್ರಪ್ರದೇಶದ ತೋಪು 23 ಅಡಿ ಉದ್ದವಿದೆ. ಆದರೆ, ಕಲಬುರಗಿಯ ಈ ತೋಪು 29 ಅಡಿ ಉದ್ದವಿದ್ದು, ವೈಜ್ಞಾನಿಕ ಸಮೀಕ್ಷೆಯ ಮೂಲಕ ಇದನ್ನು ದಾಖಲಿಸಿದರೆ ಜಗತ್ತಿನ ಅತಿದೊಡ್ಡ ತೋಪು ಎಂಬ ಹೆಗ್ಗಳಿಕೆಗೆ ಇದು ಅಧಿಕೃತವಾಗಿ ಪಾತ್ರವಾಗಲಿದೆ. ನಿರ್ವಹಣೆಯ ಕೊರತೆಯಿಂದ ತೋಪಿನ ಉಂಗುರಗಳು ಮಾಯವಾಗುತ್ತಿವೆ ಮತ್ತು ಸುತ್ತಮುತ್ತ ಕಸ, ಮಣ್ಣು ತುಂಬಿಕೊಂಡಿದೆ. ಇದನ್ನು ತಕ್ಷಣವೇ ಸ್ವಚ್ಛಗೊಳಿಸಿ, ಭದ್ರತಾ ಬೇಲಿ ಹಾಗೂ ನೆರಳಿನ ವ್ಯವಸ್ಥೆ ಮಾಡಬೇಕಿದೆ. ಹೈದ್ರಾಬಾದ್–ಕರ್ನಾಟಕ(ಕಲ್ಯಾಣ ಕರ್ನಾಟಕ)ಭಾಗದ ಇತಿಹಾಸವನ್ನು ಜಗತ್ತಿಗೆ ಪರಿಚಯಿಸಲು ಈ ತೋಪಿನ ಸುತ್ತ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ, ಮಾಹಿತಿ ಫಲಕವನ್ನು ಅಳವಡಿಸುವುದು ಸಹ ಅತ್ಯಗತ್ಯವಾಗಿದೆ. ಸರ್ಕಾರವು ಕೂಡಲೇ ಪುರಾತತ್ವ ಇಲಾಖೆಯ ತಜ್ಞರ ಸಮಿತಿಯನ್ನು ರಚಿಸಿ ತೋಪಿನ ನಿಖರ ಅಳತೆ ಮತ್ತು ತೂಕವನ್ನು ಅಧಿಕೃತಗೊಳಿಸಬೇಕು. ಈ ವರದಿಯನ್ನು ಆಧರಿಸಿ ಗಿನ್ನಿಸ್ ವಿಶ್ವ ದಾಖಲೆ(Guinness World Record) ಸಮಿತಿಗೆ ರಾಜ್ಯ ಸರ್ಕಾರದ ವತಿಯಿಂದಲೇ ಪ್ರಸ್ತಾವನೆ ಸಲ್ಲಿಸಬೇಕು. ಕಲಬುರಗಿ ಕೋಟೆಯನ್ನು ಪ್ರವಾಸಿ ತಾಣವಾಗಿ ಮೇಲ್ದರ್ಜೆಗೇರಿಸಲು ವಿಶೇಷ ಅನುದಾನ ಬಿಡುಗಡೆ ಮಾಡಬೇಕು, ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವಿರುವ ಈ ಸ್ಮಾರಕವನ್ನು

ಅಳಿವಿನಿಂದ ಉಳಿಸಿ, ಮುಂದಿನ ಪೀಳಿಗೆಗೆ ತಲುಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪಣ್ಣಪ್ಪ ಕಮಕನೂರ ಇವರಿಗೆ ಮೊದಲಿಗೆ ನಾನು ಅಭಿನಂದೆನಗಳನ್ನು ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಅತ್ಯಂತ ಮಹತ್ವದ ವಿಚಾರವನ್ನು ಅವರು ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಇದೊಂದು ಅಪರೂಪದ ತೋಪಾಗಿದೆ. ಇದು ಸುಮಾರು 29 ಅಡಿಗಳಷ್ಟು ಉದ್ದವಿದೆ. ಸಹಜವಾಗಿಯೇ ಇದು ಗಿನ್ನೀಸ್ ವರ್ಲ್ಡ್ ರೆಕಾರ್ಡ್‌ಗೆ ಸೇರಬೇಕಾಗುತ್ತದೆ. ಪ್ರಸ್ತುತ ದಾಖಲೆಯಲ್ಲಿರುವ ಆಂಧ್ರಪ್ರದೇಶದ ತೋಪು 23 ಅಡಿ ಉದ್ದವಿದೆ. ಆದರೆ, ಕಲಬುರಗಿಯ ಈ ತೋಪು ಅದಕ್ಕಿಂತ ಹೆಚ್ಚಿನ ಉದ್ದವಿದೆ. ಸುದೈವದಿಂದ ಕಲಬುರಗಿಯ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಮಾನ್ಯ ಆರ್.ಡಿ.ಪಿ.ಆರ್., ಸಚಿವರು ಈ ಸದನದಲ್ಲಿಯೇ ಇದ್ದಾರೆ. ಅವರ ಜೊತೆಗೆ ಈ ಬಗ್ಗೆ ವಿಶೇಷವಾಗಿ ಚರ್ಚೆ ಮಾಡುತ್ತೇನೆ ಮತ್ತು ಒಂದು ವಾರದೊಳಗಾಗಿ ಇದರ ಬಗ್ಗೆ ಎಲ್ಲ ರೀತಿಯಲ್ಲಿ ಅಧ್ಯಯನ ಮಾಡಿ ವರದಿ ಕಳುಹಿಸಿಕೊಡುವುದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಆ ವರದಿ ಬಂದ ಮೇಲೆ ಪ್ರಾಚ್ಯ ವಸ್ತು ಇಲಾಖೆಯ ಮೂಲಕ ನಾವು ಹೇಗೆ ಅದನ್ನು ಅಭಿವೃದ್ಧಿಪಡಿಸಬೇಕು ಮತ್ತು ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಅಗತ್ಯವಿರುವ ಅನುದಾನವನ್ನು ನೀಡಲಾಗುತ್ತದೆ. ಇದನ್ನು ಒಂದು ಮಹತ್ವದ ಪ್ರವಾಸಿ ತಾಣವನ್ನಾಗಿ ಮಾರ್ಪಡಿಸಲು ಏನೇನು ಪ್ರಯತ್ನಗಳನ್ನು ಮಾಡಬಹುದು ಅದನ್ನು ಮಾಡುತ್ತೇವೆ.

**ಖ) ವಿಷಯ: ಚಿಕ್ಕಮಗಳೂರು ಜಿಲ್ಲೆ ಅತ್ಯಂತ ಸೂಕ್ಷ್ಮ ಪರಿಸರ ವಲಯವಾದ ಚಂದ್ರದ್ರೋಣ ಪರ್ವತ ಶ್ರೇಣಿಯ ತಪ್ಪಲಿನಲ್ಲಿ ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ರೆಸಾರ್ಟ್ ನಿರ್ಮಾಣ ಮಾಡುತ್ತಿರುವ ಕುರಿತು.**

----

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರಿನ ಕೊಳಗಾವ ಗ್ರಾಮದ ಸರ್ವೆ ನಂಬರ್ 53ರಲ್ಲಿ ಸುಮಾರು 4.32 ಎಕರೆ ಪ್ರದೇಶದಲ್ಲಿ ಬೃಹತ್ ರೆಸಾರ್ಟ್ ನಿರ್ಮಾಣವಾಗುತ್ತಿದೆ. ಈ ಪ್ರದೇಶವು ವಿಶ್ವವಿಖ್ಯಾತ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಬಫರ್ ಝೋನ್(Buffer Zone) ಹಾಗೂ ಪರಿಸರ ಸೂಕ್ಷ್ಮ ವಲಯದ (ಇ.ಎಸ್) ವ್ಯಾಪ್ತಿಗೆ ಬರುತ್ತದೆ. ನಿಯಮಗಳ ಪ್ರಕಾರ ಇಂತಹ ಸೂಕ್ಷ್ಮ ಪ್ರದೇಶದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಬೃಹತ್ ಕಟ್ಟಡ ನಿರ್ಮಾಣ ಅಥವಾ ವಾಣಿಜ್ಯ ಚಟುವಟಿಕೆ ನಡೆಸಲು ಕೇಂದ್ರ ಮತ್ತು ರಾಜ್ಯ ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಿರುತ್ತದೆ. ಆದರೆ, ಇಲ್ಲಿ ಯಾವುದೇ ನಿರಾಕ್ಷೇಪಣಾ ಪ್ರಮಾಣ ಪತ್ರ(ಎನ್.ಓ.ಸಿ.) ಪಡೆಯದೇ ಕಾಮಗಾರಿ ನಡೆಸಲಾಗುತ್ತಿರುವ ಬಗ್ಗೆ "ಡೈಲಿ ಹಂಟ್" ಮತ್ತು ವಿವಿಧ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಸಂರಕ್ಷಿತ ಪ್ರದೇಶದ ಸುತ್ತಮುತ್ತಲ ಚಟುವಟಿಕೆಗಳಿಗೆ ಕಟ್ಟುನಿಟ್ಟಿನ ನಿರ್ಬಂಧವಿದೆ. ಆದರೆ, ರಾಜಕೀಯ ಪ್ರಭಾವ ಬಳಸಿ ಇಲ್ಲಿ ಗುಡ್ಡಗಳನ್ನು ಸವರಿ ಪರಿಸರ ನಾಶ ಮಾಡಲಾಗುತ್ತಿದೆ "ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ"ದ ವಿಜ್ಞಾನಿಗಳು ಈ ಹಿಂದೆಯೇ ಎಚ್ಚರಿಸಿರುವಂತೆ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಇಂತಹ ಬೃಹತ್ ಕಾಮಗಾರಿಗಳು ನಡೆದರೆ ಮುಳ್ಳಯ್ಯನಗಿರಿ ಸೇರಿದಂತೆ ಇಡೀ ಪರ್ವತ ಶ್ರೇಣಿ ಭೂ ಕುಸಿತದ ಅಪಾಯಕ್ಕೆ ಸಿಲುಕಲಿದೆ. ಪರಿಸರ ಪ್ರೇಮಿಗಳು ದೂರು ನೀಡಿದ್ದರೂ, ಅರಣ್ಯ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಅಪರೂಪದ ಶೋಲಾ ಅರಣ್ಯ ಜಲಮೂಲಗಳು ಮತ್ತು ವನ್ಯ ಜೀವಿಗಳ ಆವಾಸಸ್ಥಾನವಾಗಿರುವ ಈ ಪವಿತ್ರ ಭೂಮಿಯನ್ನು ಉಳಿಸಲು ಸರ್ಕಾರ ತಕ್ಷಣವೇ ಮಧ್ಯ ಪ್ರವೇಶಿಸಬೇಕು ಅಕ್ರಮವಾಗಿ ನಡೆಯುತ್ತಿರುವ ರೆಸಾರ್ಟ್ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಿ, ನಿಯಮ ಉಲ್ಲಂಘಿಸಿದ ಪ್ರಭಾವಿಗಳ ವಿರುದ್ಧ ಮತ್ತು ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮ ಪಂಚಾಯಿತಿ, ಬೊಮ್ಮೆನಹಳ್ಳಿ ಗ್ರಾಮದ ಸರ್ವೆ ನಂಬರ್ 76 ಮತ್ತು 77 ಒಟ್ಟು 12 ಎಕರೆ ವಿಸ್ತೀರ್ಣದಲ್ಲಿ 3ನೇ ಹಂತದ ಬಡಾವಣೆ ವ್ಯಾಪ್ತಿಯಲ್ಲಿ ತಡೆಗೋಡೆ ನಿರ್ಮಿಸಿರುವುದನ್ನು ತೆರವುಗೊಳಿಸುವ ಕುರಿತು**

----

**ಶ್ರೀ ರಮೇಶ್ ಬಾಬು(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮ ಪಂಚಾಯಿತಿ, ಬೊಮ್ಮೆನಹಳ್ಳಿ ಗ್ರಾಮದ ಸರ್ವೆ ನಂಬರ್ 76 ಮತ್ತು 77ರ ಒಟ್ಟು 12 ಎಕರೆ ವಿಸ್ತೀರ್ಣದಲ್ಲಿ ಜಿ.ಆರ್.ಸನ್ ವಿಲ್ಲಾಸ್ 3ನೇ ಹಂತ ಬಡಾವಣೆಯನ್ನು ನಿರ್ಮಿಸಲಾಗಿರುತ್ತದೆ. ಸದರಿ ಬಡಾವಣೆಯಲ್ಲಿ ಸಾರ್ವಜನಿಕರು ಮುಖ್ಯ ರಸ್ತೆಗೆ ಸಂಪರ್ಕಿಸಲು M/S ಪ್ರೊಕ್ಷಾ ಇಂಡಿಯಾ ಹೌಸಿಂಗ್ ಪ್ರೈ.ಲಿ.,ರವರು ನಿರ್ಮಿಸಿರುವ ವಸತಿ ಬಡಾವಣೆಯಲ್ಲಿ ಹಾದು ಹೋಗಿರುವ 24 ಮೀಟರ್ ಸಾರ್ವಜನಿಕ ರಸ್ತೆ ಮುಖಾಂತರ ಹೋಗಬೇಕಾಗಿರುತ್ತದೆ. ಆದರೆ, ಈ 24 ಮೀಟರ್ ಸಾರ್ವಜನಿಕ ರಸ್ತೆಗೆ ತಡೆಗೋಡೆ ನಿರ್ಮಿಸಿದ್ದು, ಅಲ್ಲಿನ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುತ್ತದೆ. ಈ ಬಗ್ಗೆ ಮಂಡೂರು ಪಂಚಾಯಿತಿಗೂ, ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೂ ಹಾಗೂ ಸಂಬಂಧಪಟ್ಟ ಪೊಲೀಸ್ ಠಾಣೆಗೂ ತಡೆಗೋಡೆಯನ್ನು ತೆರವುಗೊಳಿಸುವಂತೆ ಗ್ರಾಮಸ್ಥರು ದೂರು ಸಲ್ಲಿಸಿರುತ್ತಾರೆ.

ಮಂಡೂರು ಪಂಚಾಯಿತಿ ಮತ್ತು ಹೊಸಕೋಟೆ ಯೋಜನಾ ಪ್ರಾಧಿಕಾರ ತಡೆಗೋಡೆಯನ್ನು ತೆರವುಗೊಳಿಸಿರುವುದಿಲ್ಲ. ಇದರಿಂದ ಇಲ್ಲಿ ಓಡಾಡಲು ಅಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ M/S ಪ್ರೊಕ್ಷಾ ಇಂಡಿಯಾ ಹೌಸಿಂಗ್ ಪ್ರೈ.ಲಿ.,ರವರು ನಿರ್ಮಿಸಿರುವ ವಸತಿ ಬಡಾವಣೆಯಲ್ಲಿ ಹಾದು ಹೋಗಿರುವ 24 ಮೀಟರ್ ಸಾರ್ವಜನಿಕ ರಸ್ತೆಗೆ ನಿರ್ಮಿಸಿರುವ ತಡೆಗೋಡೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆರವುಗೊಳಿಸಲು ಕೂಡಲೇ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ)ವಿಷಯ: ಅಲೆಮಾರಿ ಅರೆ ಅಲೆಮಾರಿ ಜನರಿಗೆ ಸೂರು ಒದಗಿಸುವಂತೆ ಆಹೋರಾತ್ರಿ ಧರಣಿ ನಡೆಸುತ್ತಿರುವ ಕುರಿತು**

----

**ಡಾ॥ ಚಂದ್ರಶೇಖರ ಬಿ ಪಾಟೀಲ್(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಸರಿ ಸುಮಾರು ೨೦೦ ರಿಂದ ೨೫೦ ಕುಟುಂಬಗಳು ಹಿಂದುಳಿದ ವರ್ಗಕ್ಕೆ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಅಲೆಮಾರಿ, ಅರೆ ಅಲೆಮಾರಿ ಸಮುದಾಯದ ಜನರು ಔರಾದ ನಗರದಲ್ಲಿರುವ ಖಾಸಗಿಯವರ/ಸರ್ಕಾರಿ ಬಯಲು ಸ್ಥಳಗಳಲ್ಲಿ ಗುಡಿಸಲು ಹಾಕಿಕೊಂಡು ೩೫-೪೦ ವರ್ಷಗಳಿಂದ ವಾಸಿಸುತ್ತಿದ್ದು ಅವರು ನಿರಂತರವಾಗಿ ಸೂರಿಗಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಆದರೆ, ಅವರ ಗೋಳಿಗೆ ಸ್ಪಂದಿಸುವವರು ಯಾರೂ ಇಲ್ಲದಂತಾಗಿ ಕಳೆದ 2019ನೇ ಇಸವಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರೊಬ್ಬರು ಕಾಳಜಿ ವಹಿಸಿ ಜಿಲ್ಲಾಡಳತದ ಮೇಲೆ ಒತ್ತಡ ಹೇರಿದ ಪರಿಣಾಮವಾಗಿ 2020ನೇ ಇಸವಿಯಲ್ಲಿ ಔರಾದ ಸರ್ವೆ ನಂಬರ್ ೧೮೩ರಲ್ಲಿರುವ ೨ ಎಕರೆ ಜಮೀನನ್ನು ಹಿಂದುಳಿದ ವರ್ಗದವರಿಗೆ ಜಿಲ್ಲಾಧಿಕಾರಿಯವರು ಮಂಜೂರು ಮಾಡಿದ್ದರು. ಅದಕ್ಕೆ ಹದ್ದುಬಸ್ತು ಮಾಡಿದ ನಂತರ ಬಿ.ಸಿ.ಎಂ., ಇಲಾಖೆಯವರು ತನ್ನ ಅಧೀನಕ್ಕೆ ಪಡೆದು ಅಲ್ಲಿ ನಾಮಫಲಕವನ್ನು ಕೂಡ ಅದೇ ಸಂಜೆ ಹಾಕಿದರು. ಆದರೆ, ಬೆಳಗಾಗುವುದರಲ್ಲಿ ಆ ಬೋರ್ಡ್‌ನ್ನು ಯಾರೋ ತೆರವುಗೊಳಿಸಿದ್ದರು ಸ್ಥಳೀಯ ರಾಜಕೀಯ ಬೆಂಬಲದಿಂದ ಹಾಗೂ ಅವರ ಷಡ್ಯಂತರದಿಂದ ಆ ಸಮುದಾಯಕ್ಕೆ ಸೇರಿದ ಕೆಲವರ ಹಸ್ತಾಕ್ಷರ ಪಡೆದು, "ಈ ಜಮೀನು ನಮಗೆ ಬೇಡ, ಬೇರೆ ಜಮೀನು ನೀಡಬೇಕು" ಎಂದು ಅವರಿಂದ ಸಹಿ(ಅವರಿಗೆ ಓದು-ಬರಹ ಬರುವುದಿಲ್ಲ) ಹಾಕಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ನೀಡಿದ ಕಾರಣ ಮಂಜೂರಾ ಜಮೀನನ್ನು ಬದಲಾವಣೆ ಮಾಡಿ ಇಂದು ಔರಾದ ಪಟ್ಟಣದಿಂದ 6-8 ಕಿಲೋಮೀಟರ್ ದೂರ ಇರುವಂತಹ ಮಹಾಡೋಣಗಾಂವ ಗ್ರಾಮದದಲ್ಲಿ ಸರ್ವೆ ನಂ ೨೦೫ರಲ್ಲಿ ಮಂಜೂರು ಮಾಡಿದ್ದಾರೆ. ಆದರಿಂದ ಆ ಬಡ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಬದಕಲು ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಕಳೆದ ಹತ್ತು ದಿವಸಗಳಿಂದ ಈ ಸಮುದಾಯದವರು ಮತ್ತು ಪ್ರಗತಿ ಪರ ಸಂಘಟನೆಯವರು ತಹಸೀಲ್ದಾರ್‌ರವರ ಕಛೇರಿ ಆವರಣದಲ್ಲಿ ಆಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಇನ್ನೂ ರದ್ದಾಗದ ಸರ್ವೆ ನಂಬರ್ ೧೮೩ ಮೊದಲು ಮಂಜೂರಾದ ಜಮೀನಿನಲ್ಲೇ ೨ ಎಕರೆ ಜಮೀನು ಮಂಜೂರು ಮಾಡಬೇಕೆಂದು ಆ ಸಮುದಾಯದವರು ಒತ್ತಾಯಿಸುತ್ತಿದ್ದಾರೆ.

ಆದುದರಿಂದ ಸರ್ಕಾರ ಮತುವರ್ಜಿ ವಹಿಸಿ ಔರಾದ ೨೦೦-೨೫೦ ಅಲೆಮಾರಿ, ಅರೆ ಅಲೆಮಾರಿ ಕುಟುಂಬಗಳಿಗೆ ಆಶ್ರಯ ನೀಡುವಂತೆ ಕ್ರಮಕೈಗೊಂಡು, ಕಳೆದ 10 ದಿವಸಗಳಿಂದ ಆಹೋರಾತ್ರಿ ಧರಣಿ ನಿರತ

ಸಮುದಾಯಕ್ಕೆ ಸ್ಪಂದಿಸಿ ಔರಾದ ನಗರದ ಖಾಲಿಯಿರುವ ಸರ್ವೆ ನಂಬರ್ 183ರಲ್ಲಿ ಸ್ಥಳ ಒದಗಿಸಿ ಕೊಡುವಂತೆ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

(ಮುಂದುವರಿದಿದೆ)

(103) 30.1.2026 6.40 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):-** ಮಾನ್ಯ ಸಭಾಪತಿಗಳೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ತಹಸೀಲ್ದಾರರು ಮಂಜೂರು ಮಾಡಿದ್ದ 2 ಎಕರೆ ಜಾಗವನ್ನು ಕ್ಯಾನ್ಸಲ್ ಮಾಡಿದ್ದಾರೆ. ಅವರು ಅದೇ ಜಾಗ ಬೇಕು ಎಂದು ಕೇಳುತ್ತಿದ್ದಾರೆ. ಯಾರೋ ಅವರಿಂದಲೇ, ಈ ಜಾಗ ಬೇಡ ಎಂದು ಬರೆಸಿಕೊಂಡಿದ್ದಾರೆ. ಅವರಿಗೆ ಓದುವುದಕ್ಕೆ-ಬರೆಯುವುದಕ್ಕೆ ಬರುವುದಿಲ್ಲವಾದ್ದರಿಂದ ಅವರೂ ಸಹ ಸಹಿ ಮಾಡಿದ್ದಾರೆ. ಹಾಗಾಗಿ ಆ ಜಾಗ ಕ್ಯಾನ್ಸಲ್ ಆಗಿದೆ. ಇದಕ್ಕೆ ಹಿಂದುಳಿದ ವರ್ಗದ ಇಲಾಖೆಯ ರಾಜೀವ್‌ಗಾಂಧಿ ಹೌಸಿಂಗ್ ಬೋರ್ಡ್‌ಗೆ ಈಗಾಗಲೇ ರೂ.50 ಕೋಟಿ ದುಡ್ಡನ್ನು ಜಮಾ ಮಾಡಿದ್ದೇವೆ. ನಾನು ಡಿ.ಸಿ.ಅವರಿಂದ ಈ ಕುರಿತು ಮಾಹಿತಿ ತರಿಸಿದ್ದೇನೆ. ಡಿ.ಸಿ.ಅವರ ಹತ್ತಿರ ಮಾತನಾಡಿಸಿದ್ದೇವೆ. ಇದು 2006-07ರಲ್ಲಿ ಆದಂತಹ ಯೋಜನೆಯಾಗಿದೆ. ಡಿ.ಸಿ.ಯವರು ಅವರನ್ನು ಕರೆದು ಮಾತನಾಡಿ, ಅವರಿಗೆ ಒಂದು ಜಾಗವನ್ನು ಗುರುತಿಸಿ ಕೊಡಲಿ. ನೀವೂ ಕೂಡ ಆ ಜಿಲ್ಲೆಯವರೇ ಆಗಿದ್ದೀರಿ. ಜಾಗವನ್ನು ಗುರುತಿಸಿದ ತಕ್ಷಣ ಹೌಸಿಂಗ್ ಬೋರ್ಡ್‌ನಿಂದ ಮನೆ ಕಟ್ಟಿಸಿಕೊಡುತ್ತೇವೆ. ಹಿಂದೆ ಒಂದು ಮನೆಗೆ ರೂ. 1,20,000 ಕೊಟ್ಟಿದ್ದರು. ಅಷ್ಟು ಮೊತ್ತಕ್ಕೆ ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಹೇಳಿದ್ದರು. ನಮ್ಮ ಇಲಾಖೆಯ ಅಧಿಕಾರಿಗಳು ಡಿ.ಸಿ.ಅವರೊಂದಿಗೆ ಮಾತನಾಡಿದ್ದಾರೆ. ಅವರು ಜಾಗ ಗುರುತಿಸಿ ಕೊಟ್ಟರೆ ಮನೆಯನ್ನು ಕಟ್ಟಿಕೊಡುವಂತಹ ಕೆಲಸ ಮಾಡುತ್ತೇವೆ.

**ಐ) ವಿಷಯ: ಹೊಸಪೇಟೆ ಅಣೆಕಟ್ಟೆ ಕ್ರೆಸ್ಟ್‌ಗೇಟ್ ಬದಲಾವಣೆಗೆ ನಿಯೋಜಿಸಿರುವ ಸಿಬ್ಬಂದಿ ಸಂಬಳ, ಸಾರಿಗೆ, ಇತರೆ ವೆಚ್ಚಗಳಿಗೆ ಆಂಧ್ರಪ್ರದೇಶ ಸರ್ಕಾರ ಬಿಡುಗಡೆ ಮಾಡಿದ್ದ ರೂ.35.62 ಕೋಟಿಯಲ್ಲಿ, ರೂ. 10 ಕೋಟಿಯನ್ನು ಕರ್ನಾಟಕ ಸರಕಾರ ಹಿಡಿದಿಟ್ಟುಕೊಂಡಿದೆ ಎನ್ನುವ ಕುರಿತು.**

……..

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ದಿನಾಂಕ: 28-1-2026 ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ.

ರಾಜ್ಯ ಸರ್ಕಾರಕ್ಕೆ ತುಂಗಭದ್ರಾ ಮಂಡಳಿ ಕಾರ್ಯದರ್ಶಿಯಿಂದಲೇ ಪತ್ರ;

ಅಧಿಕಾರಿಗಳಿಗೆ ಹೇಳಲು ಆಗುತ್ತಿಲ್ಲ, ಹೀಗಾಗಿ ನಾನೇ ಹೇಳಬೇಕಾಯಿತು. ನನ್ನ ಮೇಲೆ ಆರೋಪ ಮಾಡುವುದರ ಬದಲಿಗೆ ಕರ್ನಾಟಕ ಸರ್ಕಾರ ತನ್ನ ಹೊಣೆಗಾರಿಕೆಯ ದುಡ್ಡನ್ನು ನೀಡಲಿ, ಕಾರ್ಯದರ್ಶಿ ಅವರ ಪತ್ರವನ್ನೇ ಗೇಟ್ ತಜ್ಞರು ತಮ್ಮ ಆರೋಪಕ್ಕೆ ಸಾಕ್ಷಿಯಾಗಿ ಹೊಂದಿದ್ದಾರೆ.

ಹೊಸಪೇಟೆ ಅಣೆಕಟ್ಟೆ ಕ್ರೆಸ್ಟ್‌ಗೇಟ್ ಬದಲಾವಣೆಗೆ ನಿಯೋಜಿಸಿರುವ ಸಿಬ್ಬಂದಿ ಸಂಬಳ, ಸಾರಿಗೆ, ಇತರೆ ವೆಚ್ಚಗಳಿಗೆ ಆಂಧ್ರಪ್ರದೇಶ ಸರ್ಕಾರ ಬಿಡುಗಡೆ ಮಾಡಿದ್ದ ರೂ.35.62 ಕೋಟಿಯಲ್ಲಿ, ರೂ. 10 ಕೋಟಿಯನ್ನು ಕರ್ನಾಟಕ ಸರಕಾರ ಹಿಡಿದಿಟ್ಟುಕೊಂಡಿದೆ ಎಂದು ತುಂಗಭದ್ರಾ ಮಂಡಳಿ ಕಾರ್ಯದರ್ಶಿ ಅವರೇ ಬೊಟ್ಟು ಮಾಡಿ ತೋರಿಸಿದ್ದಾರೆ.

ಕಾರ್ಯದರ್ಶಿ ಅವರು ಈ ಸಂಬಂಧ ಕರ್ನಾಟಕದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದು, ಅದು ಪ್ರಜಾವಾಣಿ ಪತ್ರಿಕೆಯವರಿಗೆ ಲಭ್ಯವಾಗಿದೆ. ಈ ಪತ್ರವನ್ನು ಅವರು ಮಂಡಳಿಯ ಅಧ್ಯಕ್ಷರಿಗೂ ರವಾನಿಸಿದ್ದಾರೆ.

ಕರ್ನಾಟಕ ಸರ್ಕಾರ ರೂ. 10 ಕೋಟಿ ವಾಪಸು ಪಡೆದಿದೆ ಎಂದು ಜನವರಿ 22ರಂದು ಗೇಟ್ ತಜ್ಞರು ಹೇಳಿದ್ದರು. ವಾಪಸ್ಸು ಪಡೆದಿಲ್ಲ ಎಂದು ರಾಜ್ಯ ಸಚಿವರು ಹೇಳಿದ್ದರು. ಆದರೆ ಮಂಡಳಿ ಕಾರ್ಯದರ್ಶಿ ಅವರ ಪತ್ರವನ್ನೇ ಗೇಟ್ ತಜ್ಞರು ತಮ್ಮ ಆರೋಪಕ್ಕೆ ಸಾಕ್ಷಿಯಾಗಿ ಹೊಂದಿದ್ದಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ನಿಮ್ಮ ಸಚಿವರು ಹೇಳುತ್ತಾರೆ. ಮಂಡಳಿ ಕಾರ್ಯದರ್ಶಿ ಅವರೇ ಪತ್ರ ಬರೆದಿದ್ದಾರೆ. ಈಗ ಏನು ಹೇಳುತ್ತಾರೆ' ಎಂದು ಕನ್ನಯ್ಯ ನಾಯ್ಡು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪತ್ರದಲ್ಲಿ ಏನಿದೆ? ತುಂಗಭದ್ರಾ ಅಣೆಕಟ್ಟೆ, ಬಲದಂಡೆ ಕಾಲುವೆಗಳ ನಿರ್ವಹಣೆ ಸಹಿತ ಇತರ ವೆಚ್ಚಗಳಿಗೆ ಆಂಧ್ರಪ್ರದೇಶ ಸರ್ಕಾರ ವಾರ್ಷಿಕ ರೂ. 390.66 ಕೋಟಿ ನೀಡುತ್ತದೆ. ಈ ಬಾರಿ ಕ್ರೆಸ್ಟ್‌ಗೇಟ್‌ಗಳ ಬದಲಾವಣೆಗಾಗಿ, ಸಾಮಗ್ರಿಗಳ ಖರೀದಿಗಾಗಿ 2025ರ ನವೆಂಬರ್ 26ರಂದು ಆಂಧ್ರ ಪ್ರದೇಶ ಸರ್ಕಾರ ರೂ.20 ಕೋಟಿಯನ್ನು, ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿರುವ ತುಂಗಭದ್ರಾ ಮಂಡಳ ಖಾತೆಗೆ ವರ್ಗಾಯಿಸಿತ್ತು. ಆಗ ಕರ್ನಾಟಕ ಸರ್ಕಾರವೂ ಖಾತೆಗೆ ರೂ.10 ಕೋಟಿ ವರ್ಗಾಯಿಸಿತ್ತು. ಸಿಬ್ಬಂದಿ ಸಂಬಳ, ಸಾರಿಗೆ ಇತರೆ ವೆಚ್ಚಗಳಿಗೆ ಅಂಧ್ರ ಪ್ರದೇಶ ಸರ್ಕಾರ ಹೆಚ್ಚುವರಿಯಾಗಿ ರೂ. 35.62 ಕೋಟಿಯನ್ನು ಡಿಸೆಂಬರ್ 17ರಂದು ನೀಡಿತ್ತು. ಆದರೆ, ಈ ಸಂಬಳ ಸಂಬಂಧಿತ ದುಡ್ಡನ್ನು ತುಂಗಭದ್ರಾ ಮಂಡಳಿಯ ಖಾತೆಗೆ ಹಾಕುವಾಗ ಕೇವಲ ರೂ. 25.62 ಕೋಟಿ ಮಾತ್ರ ಹಾಕಲು ಕರ್ನಾಟಕ ಸರ್ಕಾರ ತನ್ನ ಖಜಾನೆ ಇಲಾಖೆಗೆ ಸೂಚಿಸಿದೆ. ಸಮರ್ಪಕವಾಗಿ ಕೆಲಸ ಮುಂದುವರಿಸಲು ಈ ದುಡ್ಡನ್ನು ತಕ್ಷಣ ನೀಡಿ ಎಂಬ ಉಲ್ಲೇಖ ಕಾರ್ಯದರ್ಶಿ ಅವರು ಬರೆದ ಪತ್ರದಲ್ಲಿ ಇದೆ.

ಈ ಮಧ್ಯೆ, ಉಭಯ ಜಿಲ್ಲೆಗಳ ರೈತ ಮುಖಂಡರು ಮಂಗಳವಾರ ಮಂಡಳಿಯ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಿದರು. 'ಹಣ ಬಿಡುಗಡೆಗೆ ಕರ್ನಾಟಕ ಸರ್ಕಾರದ ಮೇಲೆ ಒತ್ತಡ ತನ್ನಿ ಎಂದು ಕಾರ್ಯದರ್ಶಿ ಹೇಳಿದರು' ಎಂದು ರೈತ ಮುಖಂಡರು ತಿಳಿಸಿದರು.

ಈ ಬಗ್ಗೆ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೂಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**೮. ನಿಯಮ ೧೫೮ಎ ಮೇರೆಗೆ ಶೂನ್ಯವೇಳೆಯ ಪ್ರಸ್ತಾವಗಳಿಗೆ ಸರ್ಕಾರದ ಲಿಖಿತ ಉತ್ತರಗಳ ಮಂಡನೆ.**

**ಅ) ವಿಷಯ: ಶಿವಮೊಗ್ಗ ಜಿಲ್ಲೆಯ ಅರೆಬಿಳಚಿ ಸರ್ಕಾರಿ ಆಸ್ಪತ್ರೆಯ ಕಟ್ಟಡದ ಸಿಮೆಂಟ್ ಪ್ಲಾಸ್ಟರಿಂಗ್ ಹಾಗೂ ಅಳವಡಿಸಿರುವ ಬಾಗಿಲುಗಳು ಕಳಪೆಯಾಗಿರುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನುರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಆ) ರಾಜ್ಯದಲ್ಲಿ ದ್ವೇಷ ಭಾಷಣ ಕಾಯಿದೆ ಜಾರಿಯಾಗದಿದ್ದರೂ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ಪೊಲೀಸ್ ನಿರೀಕ್ಷಕರು ಕಾಯಿದೆಯಡಿ ಕ್ರಮಕೈಗೊಂಡಿರುವ ಬಗ್ಗೆ.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಇ) ವಿಷಯ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಲು ಅರ್ಹತಾ ಮಾನದಂಡ, ಪಾರದರ್ಶಕ ಆಯ್ಕೆ ಪ್ರಕ್ರಿಯೆ ಹಾಗೂ ತಜ್ಞರ ಸಮಿತಿಯ ಶಿಫಾರಸ್ಸು ಕಡ್ಡಾಯ ಮಾಡುವುದರ ಜೊತೆಗೆ ಯಾವುದೇ ಪ್ರಭಾವಕ್ಕೆ ಒಳಗಾಗಿ ಪದವಿ ನೀಡಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಕಾಯಿದೆಯನ್ನು ರೂಪಿಸಬೇಕೆನ್ನುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬುರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಈ) ವಿಷಯ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ದುಡಿಯುತ್ತಿರುವ ಅಧಿಕಾರಿ ನೌಕರರಿಗೆ ವೇತನ ಪರಿಷ್ಕರಣೆಯಾಗದಿರುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಜಗದೇವ್ ಗುತ್ತೇದಾರ್‌ರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಉ) ವಿಷಯ: ಬಾಗಲಕೋಟೆಯ ಪ್ರವಾಸಿ ತಾಣಗಳ ಮೂಲ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ್‌ರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಊ) ವಿಷಯ: ಬೆಳಗಾವಿ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ಅಮಟೂರು ಬಾಳಪ್ಪ ಅವರ ಪ್ರತಿಮೆ ಸ್ಥಾಪಿಸುವ ಕುರಿತು.**

----

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)ರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಋ) ವಿಷಯ: ಗ್ರಾಮೀಣ ಭಾಗದಲ್ಲಿ ಆಸ್ತಿ ಮತ್ತು ದಾಖಲೆಗಳನ್ನು ಇ-ಸ್ವತ್ತು 2.0 ತಂತ್ರಾಂಶದಲ್ಲಿ ಅಳವಡಿಸುವಲ್ಲಿ ಆಗುತ್ತಿರುವ ಲೋಪದೋಷಗಳನ್ನು ಸರಿಪಡಿಸುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಕಿಶೋರ್‌ಕುಮಾರ್ ಪುತ್ತೂರ್ ರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಎ) ವಿಷಯ: ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚು ನಿಯಂತ್ರಣಕ್ಕೆ ಆಧುನಿಕ ಉಪಕ್ರಮಗಳನ್ನು ಹಾಗೂ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಡಾ:ಧನಂಜಯ ಸರ್ಜಿರವರು ದಿನಾಂಕ: 27.1.2026ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

## ೯. ಗಮನಸೆಳೆಯುವ ಸೂಚನೆಗಳು

ಅ) **ವಿಷಯ: ಬೆಂಗಳೂರು ಕೊಳಚೆ ನೀರನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮೂಲಕ ಸಂಸ್ಕರಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ಕೆ.ಸಿ.ವ್ಯಾಲಿ ಯೋಜನೆ ಬಗ್ಗೆ.**

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಬೆಂಗಳೂರು ಕೊಳಚೆ ನೀರನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮೂಲಕ ಸಂಸ್ಕರಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ಕೆ.ಸಿ.ವ್ಯಾಲಿ ಯೋಜನೆ ಬಗ್ಗೆ ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, . . .

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಗಳೆ, ಈಗಾಗಲೇ ವಿವರವಾದಂತಹ ಉತ್ತರವನ್ನು ಕೊಡಲಾಗಿದೆ. ಕೆ.ಸಿ.ವ್ಯಾಲಿ ಮುಖಾಂತರ 126 ಕೆರೆಗಳನ್ನು ತುಂಬಿಸುವ ಕೆಲಸ ಮಾಡಲಾಗುತ್ತಿದೆ. ಈ ಯೋಜನೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಲ್ಲಿ ಮತ್ತು ತಜ್ಞರಲ್ಲಿ ಎದುರಾಗಿರುವ ಗಂಭೀರ ಆತಂಕಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸದರಿ ಏತ ನೀರಾವರಿ ಯೋಜನೆಯಿಂದ ಕೆರೆಗಳಿಗೆ ತುಂಬಿಸುತ್ತಿರುವ ನೀರಿನ ಗುಣಮಟ್ಟವನ್ನು ಪೂರ್ವಭಾವಿಯಾಗಿ ಪರಿಶೀಲಿಸಲಾಗುತ್ತಿದ್ದು, ಮಾಲಿನ್ಯದ ಬಗ್ಗೆ ತಿಳಿದುಕೊಳ್ಳುವುದಕ್ಕೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. ಕೆ.ಸಿ.ವ್ಯಾಲಿ ಯೋಜನೆಯಿಂದ ನೀರನ್ನು ನೇರವಾಗಿ ಕೃಷಿ ಚಟುವಟಿಕೆಗಳಿಗೆ ಒದಗಿಸದೇ, ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಅಭಿವೃದ್ಧಿಯಾಗಿ ರೈತರು ತಮ್ಮ ತೆರೆದ ಬಾವಿ, ಕೊಳವೆ ಬಾವಿಗಳಿಂದ ಕೃಷಿ ಚಟುವಟಿಕೆಗಳಿಗೆ ನೀರನ್ನು ಬಳಸುತ್ತಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆಯವರು ಕೆ.ಸಿ.ವ್ಯಾಲಿ ಯೋಜನೆಯಿಂದ ತುಂಬಿಸಿರುವ ಕೆರೆಗಳ ನೀರಿನ ಗುಣಮಟ್ಟದ ಅಧ್ಯಯನ ಹಾಗೂ ಕೆರೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಶೋಧನೆಯನ್ನು ಕೈಗೊಂಡು ವರದಿಯನ್ನು ನೀಡಿದ್ದಾರೆ. ಅದನ್ನು ಓದಲು ಸಾಕಷ್ಟು ಸಮಯ ಬೇಕಾಗುತ್ತದೆ.

ಈಗ, ಅಂತರ್ಜಲ ಮಟ್ಟವು ಅಭಿವೃದ್ಧಿಯಾಗಿದ್ದು, ಅಂತರ್ಜಲ ಗುಣಮಟ್ಟವು ಸಹ ಸುಧಾರಣೆಯಾಗಿರುತ್ತದೆ. ನೀರಿನ ಹೆಚ್ಚಿನ ಲಭ್ಯತೆಯಿಂದಾಗಿ ಕೃಷಿ ಉತ್ಪನ್ನಗಳಲ್ಲಿ ಗಣನೀಯವಾಗಿ ಹೆಚ್ಚುವರಿ, ಹಾಲು ಮತ್ತು ಮೀನಿನ ಉತ್ಪಾದನೆಯಲ್ಲಿ ಗಣನೀಯ ಹೆಚ್ಚುವರಿ, ರೈತರ ಆದಾಯದಲ್ಲಿ ಗಣನೀಯ ಹೆಚ್ಚಳಿಕೆ, ಗ್ರಾಮೀಣ ಆರ್ಥಿಕತೆಯಲ್ಲಿ ಪುನಶ್ಚೇತರಿಕೆ ಕಂಡಿವೆ. ಈ ಸರ್ಕಾರ ಅಧಿಕಾರಕ್ಕೆ ಬಂದನಂತರ, ಕೆ.ಸಿ.ವ್ಯಾಲಿ ಮತ್ತು ಹೆಚ್.ಎನ್. ವ್ಯಾಲಿಗೆಂದು, ಹೋದ ವರ್ಷ ಮತ್ತು ಈ ವರ್ಷ ರೂ. 1,700 ಕೋಟಿ ಹಣವನ್ನು ಕೊಟ್ಟು ಆ ಯೋಜನೆಯನ್ನೂ ಸಹಿತ ಪ್ರಾರಂಭ ಮಾಡಿದೆ. Second treatment ಮಾಡಿ sewage water ಕೊಡುವಂಥದ್ದನ್ನು ಮಾಡುತ್ತಿದ್ದೇವೆ. ಈ ಎಲ್ಲಾ ಯೋಜನೆಗಳಿಂದ ಬರುವಂತಹ ದಿನಗಳಲ್ಲಿ 700 ಕೆರೆಗಳಿಗೆ ನೀರನ್ನು ತುಂಬಿಸುವ ಕೆಲಸ ಮಾಡುತ್ತೇವೆ. ಬೆಂಗಳೂರಿನ ಸುತ್ತಮುತ್ತ ಇರುವ ಎಲ್ಲಾ ಜಿಲ್ಲೆಗಳವರು, ನಮಗೂ ನೀರು ಕೊಡಿ ಎಂದು ಸರ್ಕಾರದ ಮೇಲೆ ಸಾಕಷ್ಟು ಒತ್ತಡ ತರುತ್ತಿದ್ದಾರೆ. ಎಲ್ಲಿ ನೀರು ಕೊಟ್ಟಿದ್ದೇವೆಯೋ ಅಲ್ಲಿ ರೈತರ ಪರಿಸ್ಥಿತಿ ಸುಧಾರಣೆಯಾಗಿದೆ. ಹೋದವರ್ಷದಿಂದ, ಮೂರು plant ಗಳು; ಒಂದನೆಯದಾಗಿ, Sewage water ನಿಂದ ಬರುವಂಥದ್ದಕ್ಕೆ ಒಂದು plant ಮಾಡಿದ್ದೇವೆ. ಇನ್ನೊಂದು plant ಗೆ ಸಂಬಂಧಪಟ್ಟಂತೆ ನಾವು

ಬೋರ್‌ವೆಲ್‌ನಿಂದ ತೆಗೆದುಕೊಂಡಿದ್ದೇವೆ. ಮೂರನೆಯ plant ಗೆ ಹೊರಗಿನಿಂದ, ಟ್ಯಾಂಕರ್ ಮೂಲಕ ನೀರು ತೆಗೆದುಕೊಂಡಿದ್ದೇವೆ. ಭಾರತೀಯ ವಿಜ್ಞಾನ ಸಂಸ್ಥೆ, NGT (National Green Tribunal) ಅವರು ಈ ಕುರಿತು ಕೊಟ್ಟಿರುವ ವರದಿಯನ್ನು ಸದನಕ್ಕೆ ಒಪ್ಪಿಸಿದ್ದೇನೆ. ಏನಾದರೂ clarifications ಇದ್ದರೆ ಕೇಳಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ಸರ್ಕಾರ ಒಳ್ಳೆಯ ಕಾರ್ಯಕ್ರಮ ಮಾಡಿದೆ. ಅದರಲ್ಲಿ ಎರಡು ಮಾತಿಲ್ಲ. ಆ ಭಾಗದಲ್ಲಿ ರೈತರ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಣೆಯಾಗಿದೆ. Underground water table ಇರಬಹುದು, greenery ಇರಬಹುದು, economy ಇರಬಹುದು, ಇವೆಲ್ಲವೂ ಬಹಳಷ್ಟು ಸುಧಾರಣೆಯಾಗಿವೆ. ಈಗ ಮೊದಲನೇ phase ನಲ್ಲಿ ಕೊಟ್ಟಿದ್ದಾರೆ. ಆದರೆ ಇಲ್ಲಿ, 2ನೇ phase ನಲ್ಲಿ 262 ಕೆರೆಗಳಿಗೆ ನೀರು ಕೊಡುವುದಕ್ಕೆ ತಯಾರಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಸರ್ಕಾರ ರೂ. 446 ಕೋಟಿ ಖರ್ಚು ಮಾಡುತ್ತಿದೆ.

(ಮುಂದು)

(104) 30-1-2026 6.50 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಕುಮಾರ್ ಕೆ.(ಮುಂದು):-**

S.T.P (Sewage Treated Plant) ಗಳನ್ನು setup ಮಾಡಿದ್ದಾರೆ. ಮೊದಲನೇ ಹಂತ ಮತ್ತು ಎರಡನೇ ಹಂತದಲ್ಲಿ ಸಂಸ್ಕರಣೆ ಮಾಡುವುದಕ್ಕೆ ಎಂದು S.T.P ಗಳನ್ನು ಮಾಡಿದ್ದಾರೆ. Environmental regulatory limits ಅನ್ನು ಕಾಯ್ದುಕೊಂಡಿದ್ದಾರೆಯೋ ಇಲ್ಲವೋ ಎನ್ನುವುದಕ್ಕೆ ಇವರು ಭಾರತೀಯ ವಿಜ್ಞಾನ ಸಂಸ್ಥೆಗೆ ಕೊಟ್ಟು ಅವರು ಕೊಟ್ಟಿರುವ ವರದಿಗಳನ್ನೆಲ್ಲಾ ನನಗೆ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ವರದಿಯನ್ನು ನಾನು ಓದಿದಾಗ ನನಗೆ ಗೊಂದಲ ಆಗುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆಯವರು ಕೊಟ್ಟಿರುವ ವರದಿಯಲ್ಲಿ ಏನು ಹೇಳುತ್ತಾರೆಂದರೆ, "Conclusions: Based on data collected in this study from the Directorate of Health and Family Welfare Services, Government of Karnataka, the analysis indicates that the reuse of secondary treated wastewater for indirect groundwater recharge through the Soil Aquifer Treatment technique does not adversely affect public health." ಎಂದು Health Department ನವರು clarify ಮಾಡಿದ್ದಾರೆ.

ಆದರೆ, ಭಾರತೀಯ ವಿಜ್ಞಾನ ಸಂಸ್ಥೆಯವರು ಮತ್ತೊಂದು ವರದಿಯನ್ನು ಕೊಟ್ಟಿದ್ದಾರೆ. "Conclusion: The utilization of direct wastewater for irrigation poses many environmental problems such as soil quality deterioration due to the accumulation of salts, heavy metals, micro–pollutants and health risk due to undesirable microorganisms. This hampers its agricultural reuse in arid and semi–arid regions. To address these concerns, the present study introduces a recent approach that involves using secondary treated municipal wastewater to indirectly recharge groundwater." ಎಂದು ಹೇಳುತ್ತಿದ್ದಾರೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ನನ್ನ ಹತ್ತಿರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಕೊಟ್ಟಿರುವ ವರದಿ ಇದೆ. ಮಾನ್ಯ ಸಭಾನಾಯಕರು ಭಾರತೀಯ ವಿಜ್ಞಾನ ಸಂಸ್ಥೆಯವರು ಕೊಟ್ಟಿರುವ ವರದಿಯನ್ನು ನನಗೆ ಕೊಟ್ಟಿದ್ದಾರೆ. ಆದರೆ, ನನ್ನ ಹತ್ತಿರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಕೊಟ್ಟಿರುವ ವರದಿ ಇದೆ. ಆ ವರದಿಯಲ್ಲಿ ಏನಿದೆ ಎಂದರೆ, Total Coliform and Fecal Coliform ಎನ್ನುವ ಬ್ಯಾಕ್ಟೀರಿಯಾಗಳು ಇವೆ. ಅದರಲ್ಲಿ ಏನಾಗುತ್ತದೆ ಎಂದರೆ, ಅಕಸ್ಮಾತ್ ಕೊಳಚೆ ನೀರು ಕೊಳವೆಬಾವಿಗಳಿಗೆ ಹೋದಾಗ ನಾವು ಆ ನೀರನ್ನು ಕುಡಿದಾಗ ಕಾಲರಾ ಬರುವುದು, ಮನುಷ್ಯರಿಗೆ ತೊಂದರೆಯಾಗುವುದು ಕಂಡುಬರುತ್ತಿದೆ. ಟ್ಯಾಂಕ್ ನೀರಿಗೆ ಮಿಕ್ಸ್ ಆಗಿ ಯಾರೋ ಒಬ್ಬರು ಸತ್ತು ಹೋದರು ಎಂದು ಇತ್ತೀಚಿನ ದಿನಗಳಲ್ಲಿ ವರದಿ ಬಂದಿದೆ. ಇದು ಈ coliform bacteria ನಿಂದಲೇ ಆಗುವಂಥದ್ದು. ಈ coliform and fecal coliform ratio ಕೆರೆಗಳಲ್ಲಿ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ನನ್ನ ಮನವಿ ಏನೆಂದರೆ, ಈಗ ವರ್ಷಕ್ಕೆ ಒಂದು ಸಲ ಪರೀಕ್ಷೆ ಮಾಡಿಸುತ್ತಿದ್ದಾರೆ. ಅದರಲ್ಲಿ ತೊಂದರೆ ಏನು ಇಲ್ಲ. ಆದರೆ, ಈ fecal coliform bacteria ಏನಿದೆ ಇದು ನೀರಿಗೆ ಹೋಗಿ ಅಂತರ್ಜಲದಲ್ಲಿ ಏನಾದರೂ percolate ಆಗಿಬಿಟ್ಟರೆ underground water table ಹೋದರೆ ಅದು ಇಡೀ region ಗೆ ಬಹಳ ದೊಡ್ಡ ತೊಂದರೆಯಾಗುತ್ತದೆ. ಅದಕ್ಕೆ ಸರ್ಕಾರ ದ್ವಿತೀಯ ಹಂತದಲ್ಲಿ ಸಂಸ್ಕರಣೆ ಮಾಡುತ್ತಿದೆ. ಅಗರದಿಂದ ನೀರನ್ನು ಲಿಫ್ಟ್ ಮಾಡುತ್ತಿದ್ದಾರೆ. ಈಗ HN (Hebbala–Nagawara) Valley ಯು ಬರುತ್ತಿದೆ. ಸರ್ಕಾರ ಕೂಡಲೇ ಮೂರನೇ ಹಂತದ ಸಂಸ್ಕರಣಾ ಘಟಕವನ್ನು setup ಮಾಡಬೇಕು. ಈಗಾಗಲೇ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಿದೆ. ಅದಕ್ಕೇನು ಹೆಚ್ಚು ಖರ್ಚಾಗುವುದಿಲ್ಲ. ಸರ್ಕಾರ ಮೂರನೇ ಹಂತದ ಸಂಸ್ಕರಣಾ ಘಟಕವನ್ನು

ಮಾಡಿದಾಗ ಅದರಿಂದ ನಮಗೆ ಇನ್ನಷ್ಟು ಶುದ್ಧವಾದ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಕೆರೆಯಲ್ಲಿ ಧೂಳು ಕಪ್ಪಗೆ ಇರುತ್ತದೆ. ಕೊಳಚೆ ನೀರು ಕೊಟ್ಟಿರುವುದರಿಂದ ಕೆರೆಗಳಲ್ಲಿ ನೀರು ಕಪ್ಪಗೆ ಇರುತ್ತದೆ. ಆದರೆ ಶುದ್ಧ ನೀರು ಕೊಟ್ಟಿರುವ ಕೆರೆಗಳಲ್ಲಿ ಕೆಂಪಗೆ ಇರುತ್ತದೆ. ಅದರ ಮಣ್ಣನ್ನು ತೆಗೆದುಕೊಂಡು ಪರೀಕ್ಷೆ ಮಾಡಿಸಬೇಕು. ಅದನ್ನು ಆರು ತಿಂಗಳಿಗೋ ಒಂದು ವರ್ಷಕ್ಕೋ ನಾವು periodical test ಮಾಡಿಸಿದಾಗ ಈ coliform bacteria ಯಾವ ಹಂತದಲ್ಲಿದೆ ಎಂಬುದು ಗೊತ್ತಾಗುತ್ತದೆ. ಆಗ ನಾವು ಎಷ್ಟು ಕೇರ್ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಇವತ್ತು ಸರ್ಕಾರ ಗಮನಹರಿಸಬೇಕು. ಏಕೆಂದರೆ, ಇದೇನಾದರೂ ಅಂತರ್ಜಲಕ್ಕೆ ಹೋದರೆ ಇಡೀ ಭಾಗಕ್ಕೆ ಅದು ಕುಡಿಯುವ ನೀರು ಇರಬಹುದು, ಮನುಷ್ಯನಿಗೆ ಬದುಕುವುದಕ್ಕೆ ಬಹಳ ದೊಡ್ಡ ತೊಂದರೆಯಾಗುತ್ತದೆ. ಈಗ ಆ alarming situation ಏನು ಇಲ್ಲ. ಆದರೆ ಇವೆರಡು dangerous bacteria. ಹಾಗಾಗಿ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯವರು ಕೊಟ್ಟಿರುವ ವರದಿಗೂ, ಭಾರತೀಯ ವಿಜ್ಞಾನ ಸಂಸ್ಥೆಯವರು ಕೊಟ್ಟಿರುವ ವರದಿಗೂ ಬಹಳ ವ್ಯತ್ಯಾಸಗಳು ಕಾಣಿಸುತ್ತಿವೆ. ನಾನು ಮಾನ್ಯ ಸಭಾನಾಯಕರಿಗೆ ಈ ವರದಿಯನ್ನು ಕೊಡುತ್ತೇನೆ. ದಯಮಾಡಿ ಈ ಸಲ ಮೂರನೇ ಹಂತದ ಸಂಸ್ಕರಣಾ ಘಟಕವನ್ನು ಮಾಡಬೇಕು. ಅದನ್ನು ಎಲ್ಲಾ ಕೆರೆಗಳಿಗೂ ಜಾಸ್ತಿ ಮಾಡಬೇಕು. ಎರಡನೇ ಹಂತದಲ್ಲಿ 262 ಕೆರೆಗಳನ್ನು ತೆಗೆದುಕೊಂಡಿದ್ದಾರೆ. ಬಂಗಾರಪೇಟೆ ತಾಲ್ಲೂಕು, ಮಾಲೂರು ತಾಲ್ಲೂಕು, ಶ್ರೀನಿವಾಸಪುರ ತಾಲ್ಲೂಕು, ಚಿಂತಾಮಣಿ ತಾಲ್ಲೂಕು ಇರಬಹುದು, ಒಂದೆರಡು ಹೋಬಳಿಗಳಿಗೆ ಬರುತ್ತವೆ. ಮಾಲೂರು ತಾಲ್ಲೂಕಿನ ಹುಂಗೇನಹಳ್ಳಿ ಹೋಬಳಿಯಲ್ಲಿ ಅರ್ಧ ಕೆರೆಗಳು ಬರುತ್ತಿವೆ, ಅರ್ಧ ಕರೆಗಳು ಬರುತ್ತಿಲ್ಲ. ಮಾಲೂರು ಟೌನ್ ಪಕ್ಕ ಬರುತ್ತಿಲ್ಲ. ಹೀಗಾಗಿ ಎಲ್ಲಾ ಕಡೆ water table recharge ಮಾಡಿದರೆ 1,200, 1,300 ಅಡಿಯಲ್ಲಿ ಇದ್ದದ್ದು ಇವತ್ತು ಕೋಲಾರ ಅಕ್ಕಪಕ್ಕ 600 ಅಡಿಗೆ ರೀಚಾರ್ಜ್ ಆಗಿದೆ. ಬೇರೆ ತಾಲ್ಲೂಕುಗಳಲ್ಲಿ 700-800 ಅಡಿಗೆ ನೀರು ಬಂದಿದೆ. ಇಲ್ಲಿ ಈ ಸಲ ಮಳೆ ಕಡಿಮೆಯಾಗಿರುವುದರಿಂದ, ಮಳೆ ನೀರು ಮತ್ತು ಕೊಳಚೆ ನೀರು ಇವೆರಡು ಹೋದಾಗ contamination ಕಡಿಮೆ ಇರುತ್ತದೆ. ಆ ನೀರು ಕೊನೆಗೆ ಕಮ್ಮಸಂದ್ರ ದಾಟಿ ಹೊಗೇನಕಲ್‌ಗೆ ಹೋಗಿ ಕಾವೇರಿಗೆ ಸೇರಿಕೊಳ್ಳುತ್ತದೆ. ಹಾಗಾಗಿ ಅದಕ್ಕೆ ತಮಿಳುನಾಡಿನವರು ಆಕ್ಷೇಪಣೆ ಮಾಡಿದ್ದಾರೆ, ಇಲ್ಲ ಎಂದೇನೂ ಅಲ್ಲ. ತಮಿಳುನಾಡಿನವರು ಆಕ್ಷೇಪಣೆ ಮಾಡಿದರೂ ಕೂಡ ಅವರು ಹೊಸೂರು ಭಾಗದಲ್ಲಿ, ಕೃಷ್ಣಗಿರಿ ಭಾಗದಲ್ಲಿ ಏನು ಮಾಡಿದ್ದಾರೆ ಅದೇ ತರಹ ಮಾದರಿಯಲ್ಲಿ ಮೂರನೇ ಸಂಸ್ಕರಣಾ ಘಟಕವನ್ನು ಹಾಕಿ ನಾವು ಇನ್ನಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು. ಆ ಭಾಗದಲ್ಲಿ underground water table deteriorate

ಆಗದಿರುವ ಹಾಗೆ ಮತ್ತು ಆ ನೀರು ಕಲುಷಿತ ಆಗದಿರುವ ಬಗ್ಗೆ pollution levels ನಾವು ಕಾಪಾಡದಿದ್ದರೆ ಮುಂದಿನ ದಿನಗಳಲ್ಲಿ ಇನ್ನು ಹತ್ತು ವರ್ಷಕ್ಕೆ ಆಗುತ್ತದೆಯೋ, ಇಪ್ಪತ್ತು ವರ್ಷಕ್ಕೆ ಆಗುತ್ತದೆಯೋ ಅದಕ್ಕೆ ನಾವು risk ತೆಗೆದುಕೊಳ್ಳಬಾರದು. ಲಕ್ಷ್ಮಿಸಾಗರ ಕೆರೆ ಮತ್ತು ನರಸಾಪುರ ಕೆರೆಯಲ್ಲಿ ಪರೀಕ್ಷೆ ಮಾಡಿದ್ದಾರೆ. Fecal coliform bacteria ಎಷ್ಟು ಇದೆ ಎಂಬುದನ್ನು ನಾನು ಮಾನ್ಯ ಸಭಾನಾಯಕರಿಗೆ ಕೊಡುತ್ತೇನೆ. ಮಾನ್ಯ ಸಭಾನಾಯಕರು 2023, 2024, 2025ನೇ ಸಾಲಿನ ಸಮಗ್ರ ವರದಿಯನ್ನು ನನಗೆ ಕೊಟ್ಟಿದ್ದಾರೆ. ನಾನು ಅದನ್ನು ವಿವರವಾಗಿ ಓದಿದ್ದೇನೆ. ಹಾಗಾಗಿ ನಾನು ಇದನ್ನು ಮಾನ್ಯ ಸಭಾನಾಯಕರ ಗಮನಕ್ಕೆ ತಂದಿದ್ದೇನೆ. ಭೂಮಿಯ ಒಳಗಡೆ percolate ಆಗದ ಹಾಗೆ ಕ್ರಮ ವಹಿಸಬೇಕು ಎಂದು ಮಾನ್ಯ ಸಭಾನಾಯಕರಿಗೆ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ 2018 ರಲ್ಲಿ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಇರುವಂತಹ ಸಂದರ್ಭದಲ್ಲಿ ಈ ಭಾಗದಲ್ಲಿ ಕೊಳವೆಬಾವಿಗಳಲ್ಲಿ ನೀರು 1,200 ರಿಂದ 1,500 ಅಡಿಯವರೆಗೆ ಹೋಗಿರುವುದರಿಂದ ಕೆಲವು ಪ್ರಮುಖರು ಕೇಳಿದರು ಎಂದು ಪ್ರಯತ್ನವನ್ನು ಮಾಡಿದರು. S.T.P (Sewage Treatment Plant) ಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯವರು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ STP ಗಳನ್ನು ಹಾಕಿ ಈ ನೀರನ್ನು ಸಾಕಷ್ಟು..... ಅದನ್ನು ಈಗ ಹೇಳುವುದು ಬೇಡ. ಏಕೆಂದರೆ, ರೆಕಾರ್ಡ್ ಆದರೆ Tribunal ರವರು ಕೇಳುತ್ತಾರೆ. ಸಾಕಷ್ಟು ನೀರು ಕಾವೇರಿ ನದಿಯ ಮೂಲಕ ಮೆಟ್ಟೂರಿಗೆ ಹೋಗುತ್ತದೆ, ಆ ನೀರನ್ನು recycling ಮಾಡಿಸಿ ಎರಡನೇ ಹಂತದ ಸಂಸ್ಕರಣೆ ಮಾಡುತ್ತಿದ್ದಾರೆ. ಅದನ್ನು ಕಳೆದ 7–8 ವರ್ಷಗಳಿಂದ ಮಾಡುತ್ತಿದ್ದಾರೆ. 1,800 ಅಡಿಯಲ್ಲಿ ನೀರು ಸಿಗುವಂಥದ್ದು ಈಗ 250 ಅಡಿಗೆ ನೀರು ಸಿಗುತ್ತಿದೆ. 7–8 ವರ್ಷಗಳಿಂದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅಲ್ಲಿ ಮೀನುಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ. ಯಾವುದರಲ್ಲಿಯೂ ಹೆಚ್ಚು ಕಡಿಮೆ ಆಗಿಲ್ಲ. Indian Institute of Science, C.S.T. (Centre for Sustainable Technologies), N.G.T. (National Green Tribunal) ಇವೆಲ್ಲಾ norms ಪ್ರಕಾರ ಮಾಡುತ್ತಿದ್ದಾರೆ. ಇನ್ನೂ ನಿಮಗೆ ವಿವರವಾಗಿ ಬೇಕೆಂದರೆ ನಾನು Scientists and Professors ಜೊತೆ ಚರ್ಚೆ ಮಾಡಿ ಮಾನ್ಯ ಸದಸ್ಯರಿಗೆ ವರದಿಯನ್ನು ಕೊಡುತ್ತೇನೆ. Surface water ನಲ್ಲಿ ಹೆಚ್ಚು ಕಡಿಮೆ ಆಗುತ್ತದೆಯೇ ಎಂಬುದನ್ನು ಅವರು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯವರು ಕೊಟ್ಟಿರುವ

ವರದಿಯನ್ನು ನಮಗೆ ರೆಫರ್ ಮಾಡಿದರೆ ನಾವು ಪರಿಶೀಲನೆ ಮಾಡಿಸುತ್ತೇವೆ. ಯಾವುದೇ ತಪ್ಪು ಸಂದೇಶ ಹೋಗಬಾರದು. ಇದರಿಂದ ಯಾವುದೇ ಗಂಭೀರ ಸಮಸ್ಯೆಗಳಾಗುವುದಿಲ್ಲ. ೮ ವರ್ಷಗಳಿಂದ ಸತತವಾಗಿ Indian Institute of Science ನಿಂದ regular ಆಗಿ watch ಮಾಡುತ್ತಿದ್ದಾರೆ. ಕೆರೆಗಳಲ್ಲಿ ನೀರು ಬದಲಾವಣೆಯಾಗುವುದಿಲ್ಲ. ನಾವು ರೆಗ್ಯುಲರ್ ಆಗಿ every S.T.P ಹತ್ತಿರ Jar ನಲ್ಲಿ ನೀರನ್ನು ಪರಿಶೀಲನೆ ಮಾಡುತ್ತಾರೆ. ಅವರು ಪರಿಶೀಲನೆ ಮಾಡಿ ಕೊಟ್ಟಿರುವ ನೀರನ್ನು ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಲಿಫ್ಟ್ ಮಾಡಿ ಕೊಡುತ್ತಿದ್ದೇವೆ. ಹಾಗಾಗಿ ನಮ್ಮ ಅಧಿಕಾರಿಗಳು ಕೂಡ ಪರಿಶೀಲನೆ ಮಾಡಿ ಸಿಗ್ನೇಚರ್ ತೆಗೆದುಕೊಂಡು ಆಮೇಲೆ ಆ ನೀರು ಮುಂದಕ್ಕೆ ಕಳುಹಿಸುವ ಪ್ರಯತ್ನ ಮಾಡುತ್ತಾರೆ. ಇಷ್ಟೆಲ್ಲಾ ಮಾಡುವಂತಹ ಸಂದರ್ಭದಲ್ಲಿ ನಾನು ಸಚಿವನಾಗಿ ಬಂದ ಮೇಲೆ ಮೂರು ಕಡೆಗಳಿಂದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಒಂದನೆಯದು, ಕೆರೆಯ ನೀರಿನಿಂದ ಬೆಳೆ ಬೆಳೆಯುತ್ತಿದ್ದಾರೆ, ಎರಡನೆಯದು, ಅಂತರ್ಜಲ ಹೆಚ್ಚಾಗಿ ಕೊಳವೆಬಾವಿಯಿಂದ ತೆಗೆದ ನೀರಿನಿಂದ ಬೆಳೆ ಬೆಳೆಯುವುದು, ಮೂರನೆಯದು ಟ್ಯಾಂಕರ್ ಮುಖಾಂತರ ಬೇರೆ ಪ್ರದೇಶಗಳಿಂದ ನಾರ್ಮಲ್ ವಾಟರ್ ಅನ್ನು ತರಿಸಿ ಮೂರು ಕಡೆ ಪ್ಲಾಂಟ್‌ಗಳನ್ನು ಮಾಡಿದ್ದೇವೆ. ಆದರೂ ಕೂಡ Scientists and Professors ಮೂರು ಕಡೆಯಿಂದ ಬೆಳೆದಿರುವ ಬೆಳೆಯ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ ಎಂದು ವರದಿಯನ್ನು ಕೊಟ್ಟಿದ್ದಾರೆ. ಹಾಗಾಗಿ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯವರು ಕೊಟ್ಟಿರುವ ವರದಿಯನ್ನು ಮಾನ್ಯ ಸದಸ್ಯರು ನಮಗೆ ಕೊಟ್ಟರೆ ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ ಬೇಕಾದರೆ ಮತ್ತೊಂದು ಸಲ ಮೌಲ್ಯಮಾಪನ ಮಾಡಿ ಅವರ ಗಮನಕ್ಕೆ ತರುತ್ತೇನೆ. ತಕ್ಷಣ ಮೂರನೇ ಹಂತದ ಸಂಸ್ಕರಣಾ ಘಟಕವನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಇಲಾಖೆಯ ಉದ್ದೇಶವೇನೆಂದರೆ, ಅಂತರ್ಜಲವನ್ನು ಅಭಿವೃದ್ಧಿ ಪಡಿಸಬೇಕಾದರೆ ಇವತ್ತು ಅನೇಕ ಜನಪ್ರತಿನಿಧಿಗಳು waste water ಅನ್ನು, ಮೂರನೇ ಹಂತದ ಸಂಸ್ಕರಣಾ ಘಟಕವನ್ನು ಮಾಡಿ ನೇರವಾಗಿ ಅಚ್ಚುಕಟ್ಟು ಪ್ರದೇಶಕ್ಕೆ ಕೊಡಿ ಎಂದು ಕೇಳುತ್ತಿದ್ದಾರೆ. ಬೆಂಗಳೂರು ಸುತ್ತಮುತ್ತ ಅಂತರ್ಜಲವನ್ನು ಅಭಿವೃದ್ಧಿಪಡಿಸುವುದೇ ದೊಡ್ಡ ಸಮಸ್ಯೆ ಆಗಿದೆ. ಹಾಗಾಗಿ ದ್ವಿತೀಯ ಹಂತದಲ್ಲಿ ಸಂಸ್ಕರಣೆ ಮಾಡಿ ಯಾವುದೇ ಬೆಳೆಗೆ ಹಾನಿಯಾಗದಂತೆ ಅಂತರ್ಜಲ ಅಭಿವೃದ್ಧಿ ಮಾಡುವುದಕ್ಕೆ ಮಾತ್ರ ಸದ್ಯ ಸರ್ಕಾರ ಯೋಚನೆ ಮಾಡುತ್ತಿದೆ. ಸುಮಾರು 700 ಕೆರೆಗಳನ್ನು 3 ವ್ಯಾಲಿಗಳಿಂದ K.C. Valley, H.N.Valley ಗೆ ಈಗ ಹೊಸದಾಗಿ ಕಳೆದ ವರ್ಷ, ಈ ವರ್ಷ ನಾವು 1,700

ಕೋಟಿ ರೂಪಾಯಿಗಳನ್ನು ಒದಗಿಸಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಈ 3 ವ್ಯಾಲಿಗಳ ಮುಖಾಂತರ ನಾವು ಅಂತರ್ಜಲ ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

**ಶ್ರೀ ಶಿವಕುಮಾರ್ ಕೆ.:–** ಮಾನ್ಯ ಸಭಾಪತಿಯವರೇ, ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮೂರನೇ ಹಂತದ ಸಂಸ್ಕರಣಾ ಘಟಕವನ್ನು ಮಾಡಿದರೆ ಶಾಶ್ವತವಾಗಿ ಪರಿಹಾರ ಸಿಗುತ್ತದೆ. ಮಾನ್ಯ ಸಭಾನಾಯಕರೇ, ನಾನು ಕೆರೆಗಳಿಗೆ ಭೇಟಿ ಕೊಟ್ಟಿದ್ದೇನೆ. ನಾವು ಹೋಗಿ ನೋಡಿದ ತಕ್ಷಣ nitrogen level ಜಾಸ್ತಿ ಇರುವುದು ನಮಗೆ ಗೊತ್ತಾಗುತ್ತದೆ. ನಾನು ಸುಮಾರು ಕೆರೆಗಳಿಗೆ ಭೇಟಿ ಕೊಟ್ಟಿದ್ದೇನೆ. ಈ ಪ್ರಶ್ನೆ ಹಾಕುವುದಕ್ಕಿಂತ ಮೊದಲೇ ನಾನು ನೋಡೋಣವೆಂದು ಅಲ್ಲಿಗೆ ಹೋಗಿದ್ದೆ. ಹಾಗಾಗಿ ಆ ನೀರು ಹರಿಯುವ ಕಡೆ algae ಪ್ರಮಾಣ ಎಷ್ಟಿದೆ ಎಂಬುದು ನಮಗೆ ಗೊತ್ತಾಗುತ್ತದೆ. Nitrogen level ಇದ್ದರೆ ಯಾವ ರೀತಿ ಗಿಡಗಳು ಬೆಳೆಯುತ್ತವೆ ಎಂದು ಸಮಗ್ರವಾಗಿ ಅಧ್ಯಯನ ಮಾಡಿಸಬೇಕಾಗುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಾನ್ಯ ಸಭಾನಾಯಕರ ಇಲಾಖೆಯ ಅಡಿಯಲ್ಲಿ ಬರುತ್ತದೆ. ಹಾಗಾಗಿ ಇದರ ವರದಿಯನ್ನು ಮಾನ್ಯ ಸಭಾನಾಯಕರಿಗೆ ಕೊಡುತ್ತೇನೆ. ಮೂರನೇ ಹಂತದ ಸಂಸ್ಕರಣಾ ಘಟಕ ಮಾಡುವುದಕ್ಕೆ ಆದಷ್ಟು ಅವಕಾಶ ಮಾಡಿಕೊಡಬೇಕೆಂದು ನಾನು ಕೋರುತ್ತಿದ್ದೇನೆ.

(ಮುಂದು)

**(105) 30/01/2026 7:00 ಎಸ್‌ಪಿಆರ್/ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಆ) ವಿಷಯ:– ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಿ, ಉದ್ಯೋಗವನ್ನು ಒದಗಿಸುವ ನಿಟಿನಲ್ಲಿ ಪ್ರತ್ಯೇಕವಾದ ಪ್ರವಾಸೋದ್ಯಮ ನೀತಿಯನ್ನು ಸ್ಥಾಪಿಸುವುದು ಮತ್ತು ಸಿ.ಆರ್.ಜೆಡ್. ತೊಂದರೆಗಳನ್ನು ಸರಳೀಕರಿಸುವ ಕುರಿತು**

* * * * *

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಿ, ಉದ್ಯೋಗವನ್ನು ಒದಗಿಸುವ ನಿಟ್ಟಿನಲ್ಲಿ ಪ್ರತ್ಯೇಕವಾದ ಪ್ರವಾಸೋದ್ಯಮ ನೀತಿಯನ್ನು ಸ್ಥಾಪಿಸುವುದು ಮತ್ತು ಸಿ.ಆರ್.ಜೆಡ್. ತೊಂದರೆಗಳನ್ನು ಸರಳೀಕರಿಸುವ ಕುರಿತು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಗಮನ ಸೆಳೆಯಬಯಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀ ಐವನ್ ಡಿಸೋಜಾರವರು ಪ್ರಮುಖ ಹಾಗೂ ಮಹತ್ವವಾಗಿರುವ ವಿಷಯವನ್ನು ಪ್ರಸ್ತಾಪಿಸಿ, ಸರ್ಕಾರದ ಗಮನವನ್ನು ಸೆಳೆಯುತ್ತಾ, ಕರಾವಳಿ ಕರ್ನಾಟಕ ಭಾಗವನ್ನು ಪ್ರವಾಸೋದ್ಯಮವನ್ನು ಉತ್ತೇಜಿಸಬೇಕೆಂದು ಹೇಳಿದ್ದಾರೆ. ಏಕೆಂದರೆ, ಕರಾವಳಿ ಪ್ರದೇಶ ಪ್ರವಾಸೋದ್ಯಮಕ್ಕೆ ಅತ್ಯಂತ ಹೆಸರುವಾಸಿಯಾಗಿರುವ ಮತ್ತು ಪ್ರಸಿದ್ಧವಾಗಿರುವ ಸ್ಥಳವಾಗಿದೆ. ಇದು ಧಾರ್ಮಿಕ, ನೈಸರ್ಗಿಕ, ಸಾಹಸ ಅಥವಾ sea ಬೀಚ್ ಪ್ರವಾಸಗಳಿರಬಹುದು. ಇವುಗಳಗೆಲ್ಲವುಗಳಿಗೆ ಅದು ಬಹಳ ಪ್ರಸಿದ್ಧವಾಗಿರುವಂಥಹದ್ದು. ಕರಾವಳಿ ಭಾಗದೊಳಗೆ ಪ್ರವಾಸೋದ್ಯಮವನ್ನು ಉತ್ತೇಜನ ಮಾಡುವುದೆಂದರೆ ಬಹಳ ಮಂದಿ ಕೇವಲ... ಅಲ್ಲಿ 320 ಕಿಲೋಮೀಟರ್ ಕರಾವಳಿ ಪ್ರದೇಶ ಅಂದರೆ sea ಬೆಲ್ಟ್ ಇದೆ. ಇದು ಅತ್ಯಂತ ಸುಂದರವಾಗಿರುವಂಥಹದ್ದು. ಇಲ್ಲಿ ನಾವು ಹಲವಾರು ನೋಡ್ಸ್‌ಗಳನ್ನು ಅಭಿವೃದ್ಧಿಗೊಳಸುತ್ತಿದ್ದೇವೆ. ಬ್ಲ್ಯೂ ಬೀಚ್‌ಗಳನ್ನು ಸುಧಾರಣೆ ಮಾಡಬೇಕೆಂದು ಹೇಳುತ್ತೇವೆ. ಇವುಗಳೆಲ್ಲದರ ಬಗ್ಗೆ ಗಮನ ಕೊಟ್ಟಿರುತ್ತಾರೆ. ಇದಲ್ಲದೇ, ಈ ಕರಾವಳಿ ಪ್ರದೇಶದೊಳಗೆ ಧಾರ್ಮಿಕ ಪ್ರವಾಸ ಬಹಳ ಹೆಸರು ಮಾಡಿಕೊಂಡಿದೆ. ನಮ್ಮ ರಾಜ್ಯದ ಜನರ ಸಂಸ್ಕೃತಿ, ದೊಡ್ಡಸ್ತನ ಹಾಗೂ ಪ್ರವಾಸೋದ್ಯಮಕ್ಕೆ ಅವರು ಕೊಡುವ ಬೆಂಬಲ ಎಷ್ಟು ಎನ್ನುವುದನ್ನು ನೋಡಬೇಕಾದರೆ..., ಶ್ರೀ ಛಲವಾದಿ ನಾರಾಯಣಸ್ವಾಮಿಯವರು ಗಮನಿಸಿರಬಹುದು. ಅಲ್ಲಿನ ಇಡುಗಂಜಿ ಗಣಪ ದೇವಸ್ಥಾನ, ಇದರ ಹಿಂದೆ ಇರುವ ಮುರುಡೇಶ್ವರದಿಂದ ಚಾಲು ಮಾಡಿದರೆ, ಅಷ್ಟೇಕೆ ಶಿರ್ಸಿ ಮಾರಿಕಾಂಬ ದೇವಸ್ಥಾನದಿಂದ ಚಾಲು ಮಾಡಿದರೆ, ಯಲ್ಲಾಪುರ, ಮುರುಡೇಶ್ವರಗಳಿಂದ ಚಾಲು ಮಾಡಿದರೆ, ಅಲ್ಲಿಂದ ಹಿಡಿದು ಮಂಗಳೂರು ದಾಟುವವರೆಗೂ ಸಹಿತ ಎಷ್ಟು ಗುಡಿ, ಮಠಗಳು ಮತ್ತು ಧಾರ್ಮಿಕ ಕ್ಷೇತ್ರಗಳು ಬರುತ್ತವೆ. ಅಲ್ಲಿ ಎಲ್ಲಾ ಕಡೆನೂ ಪ್ರವಾಸೋದ್ಯಮಕ್ಕೆ ಬೆಂಬಲಿಸುವ..., ಅಲ್ಲಿ ಶಾಲಾ ಮಕ್ಕಳು ಬಹಳ ಜಾಸ್ತಿ ಬರುತ್ತಾರೆ. ಅವರಿಗೆ ಉಚಿತವಾಗಿ ಉಪಹಾರ, ಊಟ, ರಾತ್ರಿ ಊಟ, ತಂಗಲು ವಸತಿ ವ್ಯವಸ್ಥೆಗಳನ್ನು ಯಾರು ಮಾಡುತ್ತಾರೆ? ಲಕ್ಷಾಂತರ ಮಕ್ಕಳಿಗೆ ಪ್ರತಿ ದಿವಸ ವ್ಯವಸ್ಥೆ ಮಾಡುವಂತಹ ದೊಡ್ಡಸ್ತನ ಇರುವ ಆ ಜನರು, ಅವರಿಗೆ ನಾನು ಮೊದಲು ಅಭಿನಂದಿಸುತ್ತೇನೆ. ಕರಾವಳಿ ಪ್ರವಾಸವೆಂದರೆ, ಇದು ಕೇವಲ ಮನೋರಂಜನೆಯ ಪ್ರವಾಸ ಅಲ್ಲ. ಇದನ್ನು ಬಹಳ ಮಂದಿ ತಪ್ಪಾಗಿ ತಿಳಿದುಕೊಂಡಿರುತ್ತಾರೆ. ಗೋವಾದಂತೆ ಚೈನಿ ಮಾಡಿರುವ ಪ್ರವಾಸ ಎಂಬುದಾಗಿ ಅಥವಾ ಅಲ್ಲಿರುವ ಜೂಜಾಡುವ ವ್ಯವಸ್ಥೆಯು ಏನಿದೆ, ಇದರ ಬಗ್ಗೆ ಕೆಲವು ಜನರು ಮಾತನಾಡುತ್ತಿರುತ್ತಾರೆ. ಇದು ಮಾತ್ರವಲ್ಲ. ಕರಾವಳಿ ಪ್ರದೇಶ ಅತ್ಯಂತ ಸಾತ್ವಿಕವಾದ ಪ್ರವಾಸೋದ್ಯಮವನ್ನು ಬೆಳೆಸುವ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತಿನ ದಿವಸ ಇಲ್ಲಿನ ಜನರ ಭಾವನೆಗಳು ಏನಿವೆಯೋ, ಆ ಭಾವನೆಗಳಿಗೆ ಯಾವುದೇ ರೀತಿಯಾಗಿರುವ ತೊಂದರೆ, ಆತಂಕಗಳು ಆಗದ ಹಾಗೆ ಈ ಪ್ರವಾಸೋದ್ಯಮವನ್ನು ಕರಾವಳಿ ಪ್ರದೇಶದ ತುಂಬೆಲ್ಲಾ ಮಾಡುತ್ತೇವೆ. 320 ಕಿಲೋ ಮೀಟರ್ ಸಮುದ್ರದ ದಂಡೆಯವರೆಗೂ ನಮ್ಮ ರಸ್ತೆ ಇದೆ, ಆ ರಸ್ತೆಯಲ್ಲಿ ಎಲ್ಲೆಲ್ಲಿ ಬೀಚ್‌ಗಳು ಬರುತ್ತವೆಯೋ, ಅಲ್ಲಿ ಈಗಾಗಲೇ 40 ಪಾಯಿಂಟ್‌ಗಳನ್ನು ನಿರ್ಣಯಿಸಿ, ಗುರ್ತಿಸಿದ್ದೇವೆ. ಅಲ್ಲಿಯೂ ಸಹಿತ

ವಿಶೇಷವಾದ ಬೆಳವಣಿಗೆಯಾಗಬೇಕು. ಸದಸ್ಯರಿಗೆ ತಿಳಿದಂತೆ, ಇದಕ್ಕಾಗಿಯೇ ಈಗಾಗಲೇ ಮುಖ್ಯಮಂತ್ರಿಗಳ, ಉಪ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಾವು ಪಾಲುದಾರರೊಂದಿಗೆ ಸಭೆಯನ್ನು ಮಾಡಿದ್ದೆವು. ಅಲ್ಲಿರುವ ಉದ್ದಿಮೆದಾರರು ಯಾರು ಇದ್ದಾರೆಯೋ, ಅವರುಗಳು ಮುಂದೆ ಬಂದು ಹಣವನ್ನು ಹೂಡಿಕೆ ಮಾಡಿ, ಅಲ್ಲಿನ ವ್ಯವಸ್ಥೆಗಳನ್ನು ಮಾಡುವಂತೆ ನಾವು ವಿನಂತಿಯನ್ನು ಮಾಡಿಕೊಂಡಿದ್ದೇವೆ. ಇದಕ್ಕಾಗಿ ಬಹಳಷ್ಟು ಜನರು ಆಸಕ್ತಿಯನ್ನು ತೋರಿಸಿದ್ದಾರೆ. ಆ ಭಾಗದಲ್ಲಿ ಕ್ರೀಯಾಶೀಲರಾಗಿರುವ ಶಾಸಕರು ಮತ್ತು ನಾಯಕರು ಇದ್ದಾರೆ. ಮತ್ತೂ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ರವರು ಬಹಳಷ್ಟು ಆಸಕ್ತಿಯನ್ನು ವಹಿಸಿದ್ದಾರೆ. ಅನೇಕ ಶಾಸಕರುಗಳು, ಮಾಜಿ ಶಾಸಕರುಗಳು ಸಹಿತ ಆಸಕ್ತಿಯನ್ನು ವಹಿಸಿದ್ದಾರೆ. ನಾನು ಅವರೆಲ್ಲರಿಗೂ ಅಭಿನಂದಿಸುತ್ತೇನೆ. ಮೊನ್ನೆಯ ದಿನ ಮಂಗಳೂರಿನಲ್ಲಿ ನಡೆದ ಪಾಲುದಾರರ ಸಭೆಯು ಅತ್ಯಂತ ಯಶಸ್ವಿಯಾಗಿದೆ. ಅಲ್ಲಿ ಕೆಲವು ಎಂ.ಓ.ಯು.ಗಳನ್ನು ಮಾಡಿದ್ದೇವೆ ಅಲ್ಲದೇ, ಇದರ ಜೊತೆಗೆ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಬಹಳಷ್ಟು ಭರವಸೆಗಳನ್ನು ಕೊಟ್ಟಿದ್ದಾರೆ. ನಾವು ನಮ್ಮ ನೀತಿಯನ್ನು ಸರ್ಮಪಕವಾಗಿ ಅವರೆಲ್ಲರಿಗೂ ತಿಳಿ ಹೇಳಿದ್ದೇವೆ. ಈ ಹಿನ್ನೆಲೆಯೊಳಗೆ, ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಬೆಳೆಸಿ, ಉತ್ತೇಜಿಸುವುದಕ್ಕೆ ನಾವು ಹಲವಾರು ಕಾರ್ಯಕ್ರಮಗಳನ್ನು ಮಾಡಿಕೊಂಡಿದ್ದೇವೆ. ಅದನ್ನು ಮುಂದುವರೆಸುತ್ತೇವೆ. ಬಹುಶಃ ಇನ್ನು ಒಂದು ವರ್ಷದ ಒಪ್ಪತ್ತಿನೊಳಗೆ ನೀವುಗಳೆಲ್ಲರೂ...., ಸಿ.ಆರ್.ಝಡ್.ಗೆ ಸಂಬಂಧಪಟ್ಟಂತೆ ಏನು ಮಾಡುತ್ತೀರಿ ಎಂದು ನೀವು ಕೇಳುತ್ತೀರಿ ಎನ್ನುವುದು ನನಗೆ ಗೊತ್ತಿದೆ. ಸಿ.ಆರ್.ಝಡ್. ನೀತಿಯೊಳಗೂ ಸಹಿತ ಬದಲಾವಣೆಯಾಗಬೇಕು ಎಂದು ನಾವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ತಮಿಳುನಾಡು, ಕೇರಳ, ಗೋವಾ ಮತ್ತು ನಮ್ಮ ರಾಜ್ಯಗಳಿಗೆ ಒಂದೊಂದು ತರಹ ಮಾಡುತ್ತಾರೆ. ಹೀಗಾಗಿ ಇದನ್ನು ಹೇಗೆ ಒಪ್ಪುವುದಕ್ಕೆ ಸಾಧ್ಯವಾಗುತ್ತದೆ. ಹೀಗಾಗಿ ನಾವು ನಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಅಷ್ಟೇ ಅಲ್ಲ, ಈ ವಿಷಯವನ್ನು ಕೈಗೆತ್ತಿಕೊಂಡು ಸಿ.ಆರ್.ಝಡ್.ನಲ್ಲಿ ದೇಶದಲ್ಲಿರುವ ಎಲ್ಲಾ ರಾಜ್ಯಗಳಿಗೆ ಏನು ನಿಯಮಗಳು ಇವೆಯೋ, ಆ ನಿಯಮಗಳನ್ನು ನಮ್ಮ ಮೇಲೆ ಹೇರುವುದಕ್ಕ ನಮ್ಮದೇನೂ ತಕರಾರು ಇಲ್ಲ. ಆದರೆ, ಅದನ್ನು ಬಿಟ್ಟು ಅವರು ಯಾವುದಾದರೂ ಅನಾವಶ್ಯಕವಾದ ನಿಯಮಗಳನ್ನು ನಮ್ಮ ಮೇಲೆ ಮಾತ್ರ ಹೇರುವುದು ಆದರೆ, ಅದನ್ನು ನಾವು ಒಪ್ಪುವುದಿಲ್ಲ ಎನ್ನುವುದನ್ನು ಈ ಸದನದ ಮೂಲಕ ಹೇಳುತ್ತೇನೆ. ಸಿ.ಆರ್.ಝಡ್. ನಿಯಮಗಳನ್ನು ಸಡಿಲಗೊಳಿಸಬೇಕೆಂಬುದರ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುವಂತಹ ಒಂದು ಮನವಿಯನ್ನು ಮಾಡುತ್ತೇವೆ.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಅವರು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿರುವುದು ಸರಿ ಇದೆ. ರಾಜ್ಯದ ಮುಖ್ಯಮಂತ್ರಿಗಳೂ ಸಹಿತ ಇಡೀ ಕರ್ನಾಟಕ ಸರ್ಕಾರವೇ ಮಂಗಳೂರಿಗೆ ಬಂದು ಒಂದು ರೀತಿಯಾಗಿ ಕರಾವಳಿಯ ಅಭಿವೃದ್ಧಿಗೆ ಮತ್ತು ಪ್ರವಾಸೋದ್ಯಮಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಂಡಿದೆ. ನಮ್ಮಲ್ಲಿ ಅಂತರರಾಷ್ಟ್ರೀಯ ಗಾಲ್ಫ್ ಕ್ಲಬ್ ಇದೆ. ಅಂತರರಾಷ್ಟ್ರೀಯ

ಈಜುಕೊಳ ಇದೆ. ಅಲ್ಲಿ ಸರ್ಫಿಂಗ್ ಇದೆ. ಹೀಗೆ ಅಂತರರಾಷ್ಟ್ರೀಯ ಮಟ್ಟದ, ಬೇರೆ ಬೇರೆ ರೀತಿಯ ವಿಚಾರಗಳಿದ್ದರೂ ಕೂಡ ಅಲ್ಲಿ ಒಂದೇ ಒಂದು ಫೈವ್ ಸ್ಟಾರ್ ಹೋಟೆಲ್ ಇದುವರೆವಿಗೂ ಮಂಗಳೂರಿನಲ್ಲಿ ಅಥವಾ ಕರಾವಳಿ ಭಾಗದಲ್ಲಿ ಇಲ್ಲ. ಮೊನ್ನೆ ಮೊನ್ನೆ ಅಲ್ಲಿ ಅಂತರರಾಷ್ಟ್ರೀಯ ಮಟ್ಟದ ಷಟಲ್ ಬ್ಯಾಡ್ಮಿಟನ್ ಪಂದ್ಯಾವಳಿ ನಡೆದಾಗ, ಅದರಲ್ಲಿ ಬೇರೆ ಬೇರೆ ದೇಶದವರು ಭಾಗವಹಿಸಿದ್ದರು. ಹೀಗೆ ಬಂದವರು ಮೊದಲು ನಮ್ಮನ್ನು "ನಮಗೆ ನಿಲ್ಲುವುದಕ್ಕೆ ಎಲ್ಲಿಯಾದರೂ ಹೋಟೆಲ್ ಕೊಡಪ್ಪಾ!" ಎಂಬುದಾಗಿ ಕೇಳುತ್ತಾರೆ. ಇದು ಈವರೆಗೆ ನಮ್ಮಿಂದ ಸಾಧ್ಯವಾಗಿಲ್ಲ. ಇದೇ ರೀತಿಯಾಗಿ ಮೊನ್ನೆಯ ದಿನ ಕರಾವಳಿ ಉತ್ಸವಕ್ಕೆ ಸಂಬಂಧಪಟ್ಟಂತೆ, ಗಾಳಿಪಟ ಸ್ಪರ್ಧೆ ನಡೆಯಿತು. ಅಂತರರಾಷ್ಟ್ರೀಯ ಮಟ್ಟದ ಗಾಳಿಪಟ ಹಾರಾಟಗಾರರು ಬಂದಿದ್ದರು. ಆಗ ಅಲ್ಲಿಯೂ ಸಹ ಸರಿಯಾದ ವ್ಯವಸ್ಥೆಗಳನ್ನು ಮಾಡಿಕೊಡಲು ನಮ್ಮಿಂದ ಸಾಧ್ಯವಾಗಿಲ್ಲ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರವನ್ನು ಹೊರತುಪಡಿಸಿ, ಅತ್ಯಧಿಕ ತೆರಿಗೆಯನ್ನು ಕೊಡುವ ಜಿಲ್ಲೆ ಇದ್ದರೆ ಅದು ದಕ್ಷಿಣ ಕನ್ನಡ ಮತ್ತು ಕರಾವಳಿ ಭಾಗದ ಜಿಲ್ಲೆಗಳಾಗಿವೆ.

ಸಿ.ಆರ್.ಝೆಡ್. ಬಗ್ಗೆ ಹೇಳುವುದಾದರೆ, ತಾವು ಅಲ್ಲಿಗೆ ಬರುತ್ತಾ ಇರುತ್ತೀರಿ. ಗೋವಾಕ್ಕೆ ಹೋದರೆ, ಅಲ್ಲಿ ಸಮುದ್ರದ ಬದಿಯಲ್ಲಿಯೇ ಕಟ್ಟಡಗಳನ್ನು ನಿರ್ಮಿಸಿ, ಅವರು ರೆಸ್ಟೋರೆಂಟ್ ಮತ್ತಿತರೆಗಳನ್ನು ಮಾಡಿ ವ್ಯಾಪಾರ ಮಾಡಬಹುದು. ಕಾರವಾರಕ್ಕೆ ಬಂದ ಕೂಡಲೇ, ಸಮುದ್ರ ಬದಿಯಿಂದ ಒಂದು ಕಿಲೋಮೀಟರ್ ದೂರದಲ್ಲಿ ಕಟ್ಟಬೇಕೆಂದು ತಿಳಿಸುತ್ತಾರೆ. ಅದೇ ರೀತಿಯಾಗಿ ಮಂಗಳೂರಿನ ತಲಪಾಡಿಯಿಂದ ಕೇರಳದ ಕಡೆಗೆ ಹೋದರೆ, ಅಲ್ಲಿ ಸಮುದ್ರದ ಬದಿಯಲ್ಲಿಯೇ ರೈಲ್ವೆ ಹಳಿಗಳು ಹಾಗೂ ರೈಲ್ವೆ ನಿಲ್ದಾಣಗಳಿವೆ. ಅಲ್ಲಿ ಇನ್ನೂ ಬೇರೆ ಬೇರೆ ರೀತಿಯ ಮಳಿಗೆಗಳಿವೆ. ನಮಲ್ಲಿ ಬ್ಯಾಕ್ ವಾಟರ್ ಸೌಲಭ್ಯವೂ ಸಹ ಇದೆ. ಇದಲ್ಲದೇ ಇನ್ನೂ ಬೇಕಾದಷ್ಟು ವ್ಯವಸ್ಥೆಗಳಿವೆ. ಇಷ್ಟು ವ್ಯವಸ್ಥೆಗಳಿದ್ದರೂ ಸಹ ನಮ್ಮಲ್ಲಿ ನಿರೀಕ್ಷಿತ ಪ್ರಮಾಣಕ್ಕೆ ತಕ್ಕಂತೆ ಬದಲಾವಣೆಗಳು ಆಗಲಿಲ್ಲ. ಪ್ರವಾಸೋದ್ಯಮ ಖಾತೆಯನ್ನು ಹೊಂದಿರುವ ಶ್ರೀ ಹೆಚ್.ಕೆ.ಪಾಟೀಲ್ ರವರು ಖಂಡಿತವಾಗಿಯೂ ಸಹ ಇದರ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು. ಈಗಾಗಲೇ ಎಂ.ಓ.ಯು. ಮಾಡಿಕೊಂಡಿರುವಂತೆ ಅವುಗಳನ್ನು ಕೂಡಲೇ ಕಟ್ಟುವ ಕೆಲಸಗಳನ್ನು ಮಾಡಬೇಕು ಹಾಗೂ ಶೀಘ್ರಗತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ ನಮ್ಮ ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗಳು ಅಭಿವೃದ್ಧಿಯಾಗುತ್ತಿರುವಂತಹದ್ದು. "ಹೆಸರಿಗಷ್ಟೇ ಸೀಮಿತವಾದ ಕರಾವಳಿ ಅಭಿವೃದ್ಧಿ ಮಂಡಳಿ" ಎಂಬುದಾಗಿ ಪತ್ರಿಕೆಯಲ್ಲಿ ವರದಿಯಾಗಿದ್ದು, ಅದರಲ್ಲಿ 320 ಕಿಲೋ ಮೀಟರ್ ವ್ಯಾಪ್ತಿಗೆ ಬರೀ 10 ಕೋಟಿ ರೂಪಾಯಿ ಕೊಟ್ಟು, ಸರ್ಕಾರ ಏನೂ ಮಾಡಲಿಲ್ಲ ಎನ್ನುವ ರೀತಿಯಲ್ಲಿ ಅದರಲ್ಲಿ ವರದಿಯಾಗಿದೆ. ಸಚಿವರು ಕರಾವಳಿಗೆ ವಿಶೇಷವಾದ ಪ್ರವಾಸೋದ್ಯಮ ನೀತಿಯನ್ನು ಮಾಡುವುದಾಗಿ ಹಾಗೂ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡುವುದಾಗಿ ಈ ಹಿಂದೆಯೂ ಸಹ ಹೇಳಿದ್ದರು. ಇದು ಪ್ರಾರಂಭವಾಗಿದ್ದು, ಹೀಗಾಗಿ ಇದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ತಾವು ಹೆಚ್ಚು ಮುತುವರ್ಜಿಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೋರಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸರ್ಕಾರವು 10 ಕೋಟಿ ರೂಪಾಯಿಗಳನ್ನು ಒದಗಿಸಿದೆ ಎಂಬುದಾಗಿ ಸದಸ್ಯರು ಹೇಳಿದ್ದಾರೆ. ನಾನು ಸದಸ್ಯರಲ್ಲಿ ಇಷ್ಟು ಹೇಳುವುದೇನೆಂದರೆ, ಆ ಭಾಗದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ. ಇದರಿಂದಾಗಿ ನಾವು ಎಷ್ಟು ಹಣವನ್ನು ಒದಗಿಸಿದ್ದೇವೆ ಎನ್ನುವುದಲ್ಲ; ಎಷ್ಟು ಯೋಜನೆಗಳನ್ನು ಪ್ರೋತ್ಸಾಹಿಸುತ್ತಿದ್ದೇವೆ ಎನ್ನುವುದು ಬಹಳ ಮಹತ್ವದ್ದಾಗುತ್ತದೆ.

(ಮುಂದು)

(106)30-01-2026/7-10/bkp-bns **(ಸಭಾಪತಿಯವರು ಉಪಸ್ಥಿತಿ)**

**ಶ್ರೀ ಹೆಚ್.ಕೆ. ಪಾಟೀಲ್(ಮುಂದು)**

ಆದ್ದರಿಂದ, ಅಲ್ಲಿ ಹಣ ಹೂಡಿಕೆ ಆಗುವುದಕ್ಕೆ ನಾವು ಪ್ರಯತ್ನಿಸುತ್ತಿದ್ದೇವೆ. ನೀವು ಹೇಳಿದಂತೆ ಅಲ್ಲಿ Five Star hotel ಅನ್ನು ನಾವು ಸರ್ಕಾರದಿಂದ ಕಟ್ಟಲಿಕ್ಕೆ ಆಗುವುದಿಲ್ಲ. We can give them land, we can encourage them and we can give them some relaxation. ಅದನ್ನು ಬಿಟ್ಟು ನೀವು ಹೇಳಿದಂತೆ ನಾವು ಸರ್ಕಾರದವರೇ Five Star hotel ಗೆ ಹಣಕಾಸು ಹಾಕಬೇಕೆಂದರೆ ಆಗುವುದಿಲ್ಲ. ಅದರ ಬಗ್ಗೆ ನಾನು ನಿಮಗೆ ಕ್ಲಾರಿಫೈ ಮಾಡಿರುತ್ತೇನೆ, ಅಷ್ಟೆ. ಆದರೆ, ಜನರ ಹಣ ಹೂಡಿಕೆ ಮೂಲಕ ಈ ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜನ ಮಾಡುವಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ, ಸಾತ್ವಿಕವಾದಂತಹ ಪ್ರವಾಸೋಧ್ಯಮವನ್ನು ಉತ್ತೇಜಿಸುತ್ತೇವೆ.

**ಸಭಾಪತಿಯವರು:-** ಈಗ ನಿಯಮ 330 ರಡಿಯಲ್ಲಿ ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆಯನ್ನು ಮುಂದುವರಿಸಲಾಗುತಿದ್ದು, ಶ್ರೀಯತ ಕೆ.ಎಸ್. ನವೀನ್ ರವರು ಚರ್ಚೆಯನ್ನು ಪ್ರಾರಂಭ ಮಾಡುವುದು.

## 10. ನಿಯಮ 330ರ ಮೇರೆಗೆ ಚರ್ಚೆ

**ಅ) ಅಬಕಾರಿ ಇಲಾಖೆಯಲ್ಲಿ ಸಿಎಲ್-2, ಸಿಎಲ್-7 ಸಿಎಲ್-9ಗಳಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಮುಂದುವರಿದ ಚರ್ಚೆ.**

.......

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ನಿಯಮ 330 ರಡಿಯಲ್ಲಿ ನಾನು ಮೊದಲು ಪ್ರಶ್ನೆಯನ್ನು ಕೊಟ್ಟಿರುತ್ತೇನೆ. ಅದು ಪಟ್ಟಿಯಾಗಿತ್ತು. ತದನಂತರ ಅವರು ಇದನ್ನು ನಿಯಮ 330 ರಡಿಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ದಯಮಾಡಿ ನನಗೆ ತಾವು ಮೊದಲು ಅವಕಾಶ ಕೊಡಬೇಕು. ನನ್ನದು ಮುಗಿದ ಮೇಲೆ ಅವರು ಮಾತನಾಡಲಿ.

**ಸಭಾಪತಿಯವರು:-** ನಿನ್ನೆ ಈ ವಿಚಾರವಾಗಿ ನಾನು ಹೇಳಿದ್ದೇನೆ. ನೀವು ಹೇಳಿದಂತೆ ಎಲ್ಲವನ್ನೂ serial number ಪ್ರಕಾರ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಪರಿಸ್ಥಿತಿಗೆ ಅನುಗುಣವಾಗಿ ತೆಗೆದುಕೊಳಳಬೇಕಾಗುತ್ತದೆ. ಈ ವಿಷಯ ಅಜೆಂಡಾದಲ್ಲಿ ಬಂದಿದೆ, ಅವರನ್ನು ಕರೆದಿದ್ದೇನೆ. ಅವರು ಮಾತನಾಡುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ನಮಗೆ ಮಾತನಾಡಲಿಕ್ಕೆ ಅವಕಾಶವೇ ಸಿಗುತ್ತಿಲ್ಲ. ಈಗ ನೀವು ಅವರಿಗೆ ಚರ್ಚೆಗೆ ಅವಕಾಶ ಕೊಟ್ಟರೆ ನನಗೆ ಅವಕಾಶ ಸಿಗುವುದಿಲ್ಲ.

**ಸಭಾಪತಿಯವರು:-** ಆಯಿತು, ಬಿಡಿ ರಮೇಶ್ ಬಾಬು.

**ಶ್ರೀ ಕೆ.ಎಸ್. ನವೀನ್( ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿಯಮ 330 ರಡಿಯಲ್ಲಿ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಅಬಕಾರಿ ಇಲಾಖೆಯಲ್ಲಿ ನಿಯಮ ಬಾಹಿರವಾಗಿ ಪರವಾನಿಗಿಯನ್ನು ನೀಡುವಂತಹ ಸಂದರ್ಭದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ, ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣಕಾಸಿನ ವ್ಯವಹಾರಗಳು ನಡೆದಿದೆ ಎನ್ನುವ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಹೀಗಾಗಿ, ಈ ಬಗ್ಗೆ ಅವರು ಕೊಡದೇ ಇರುವಂತಹ ಮಾಹಿತಿಗಳನ್ನು mtftu ನನ್ನ ಹತ್ತಿರ ಲಭ್ಯವಿರುವಂತಹ ಮಾಹಿತಿಗಳನ್ನು ಕೊಡಲಿಕ್ಕೆ ನಾನು ಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ನಾನು ಇದೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ದಿನಾಂಕ 19-12-2024 ರಂದು ಅಂದರೆ, ಈ ಬಾರಿಯ ಬೆಳಗಾವಿ ಅಧಿವೇಶನವಲ್ಲ, ಹಿಂದಿನ ಬೆಳಗಾವಿ ಅಧಿವೇಶನದಲ್ಲಿ ನನ್ನ ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ಮಾನ್ಯ ಅಬಕಾರಿ ಸಚಿವರಿಗೆ ಕೇಳಿದ್ದೆನು. ಅಂದಿನದ್ದು ನನಗೆ ಚೆನ್ನಾಗಿ ನೆನಪು ಇದೆ.

ಆ ಸಮಯದಲ್ಲಿ ಅದು ಪ್ರಶ್ನೋತ್ತರ ಅವಧಿಯಾದ್ದರಿಂದ ತಾವೂ ಕೂಡ ಅದರ ಬಗ್ಗೆ ನನಗೆ ಹೆಚ್ಚಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಲಿಲ್ಲ. ಮಾನ್ಯ ಸಚಿವರು ಅವರದ್ದೇ ಆದಂತಹ ಸ್ಟೈಲ್‌ನಲ್ಲಿ ‘ಬಾಪ್ ರೇ’ ಎಂದು ಹೇಳಿದರು. ಏನು ಹೇಳುತ್ತಿದ್ದೀರಿ ಎನ್ನುವ ರೀತಿಯಲ್ಲಿ “ಈ ವಿಚಾರವಾಗಿ ಪತ್ರಿಕೆಯಲ್ಲಿ ಬಂದಿರುವುದನ್ನೆಲ್ಲಾ ಒಪ್ಪಲಿಕ್ಕೆ ಆಗುತ್ತದೇನ್ರಿ.” ಎಂದು ಹೇಳಿದರು. ಅಂದು ಪತ್ರಿಕೆಯಲ್ಲಿ ಬಂದಂತಹದ್ದು, ಟಿ.ವಿ. ಮಾಧ್ಯಮಗಳಲ್ಲಿ ಬಂದಂತಹದ್ದು, ಅಧಿಕಾರಿಗಳ ಮಧ್ಯೆ ಆದಂತಹ ಚರ್ಚೆಯನ್ನು ನಾನು ಉಲ್ಲೇಖ ಮಾಡಿ ಚುಕ್ಕೆ ಗುರುತಿನ ಪ್ರಶ್ನೆಗೆ ಮಾನ್ಯ ಸಚಿವರು ಹೇಳಿದಂತಹ ಉತ್ತರ ಏನೆಂದರೆ, “ ನಾನು ಪತ್ರಿಕೆಗಳಲ್ಲಿ ಬಂದಂತಹ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದಕ್ಕೂ ಕೂಡ ಉತ್ತರ ಕೊಡುವಂತಹ ಅವಶ್ಯಕತೆ ಇಲ್ಲ” ಎಂದು ಹೇಳಿದರು. ಈ ವೈನ್ ಮಾರಾಟಗಾರರ ಸಂಘವೇ ಇರುವುದಿಲ್ಲ. ಅದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎನ್ನುವಂತಹದ್ದನ್ನು ದಿನಾಂಕ: 19-12-2024 ರ ನನ್ನ ಪ್ರಶ್ನೆಗೆ ಸಂಬಂಧಪಟ್ಟಂತೆ ಸಚಿವರು ಉತ್ತರ ಕೊಟ್ಟಿದ್ದರು. ಅದಾದ ನಂತರ ಅದೇ ಪ್ರಶ್ನೆಗೆ ಸಂಬಂಧಪಟ್ಟಂತೆ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಕೇಳಿ ನಾನು ಈ ಬಾರಿ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಅಂದರೆ ದಿನಾಂಕ 11-12-2025 ರಂದು ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಸಹ ಇದಕ್ಕೆ ಉತ್ತರವನ್ನು ಕೊಟ್ಟರು. ಆಗ ಇದು ಚುಕ್ಕೆರಹಿತ ಪ್ರಶ್ನೆಯಾಯಿತು. ಇದು ಚುಕ್ಕೆರಹಿತ ಪ್ರಶ್ನೆಯಾದ ಕಾರಣಕ್ಕೋಸ್ಕರ ಆ ವಿಷಯ ಚರ್ಚೆಗೆ ಬರಲಿಲ್ಲ. ಬಹುಶಃ ಇಲ್ಲಿ ಏನು ಹಲವಾರು ರಾಜ್ಯ ಮಟ್ಟದ ಪತ್ರಿಕೆಗಳು, ಅದರಲ್ಲೂ ವಿಶೇಷವಾಗಿ ಸಂಯುಕ್ತ ಕರ್ನಾಟಕ ಪತ್ರಿಕೆಯಂತಹ ಅತ್ಯಂತ ಅಂದರೆ ಬಹಳ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಪತ್ರಿಕೆಯನ್ನು ನಡೆಸುತ್ತಿರುವಂತಹ ಒಂದು ರಾಜ್ಯ ಮಟ್ಟದ ಪತ್ರಿಕೆಯಲ್ಲಿ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷರ ಹೇಳಿಕೆ “ **ಅಬಕಾರಿ ಹಗರಣದ ಕುರಿತು ಶೀಘ್ರವೇ ರಾಹುಲ್‌ಗೆ ದೂರು**” ಎನ್ನುವಂತಹ ಶೀರ್ಷಿಕೆಯಡಿಯಲ್ಲಿ ಪತ್ರಿಕಾ ವರದಿ ಬಂದಿದೆ. ಅದೆಲ್ಲದಕ್ಕೂ ಪೂರಕವಾಗಿರುವಂತಹ ವಿವರವನ್ನು ಅವರ ಉತ್ತರದಲ್ಲಿ ಕೊಟ್ಟಿದ್ದಾರೆ. ಅಂದರೆ, ಅವರಿಗೆ ಅಧಿಕೃತವಾಗಿ ಕೇಳಿದ್ದೆ. ರಾಜ್ಯದಲ್ಲಿ ಎಷ್ಟು ಲೈಸೆನ್ಸ್ ಇದೆ, ಅಂದರೆ ನೀವು ಎಷ್ಟು ಲೈಸೆನ್ಸ್ ಕೊಟ್ಟಿದ್ದೀರಿ ಎಂದು ನಾನು ಕೇಳಿದ್ದೆ. ಇದರಲ್ಲಿ ಬಹಳ ಸ್ಪಷ್ಟವಾಗಿ ಉತ್ತರ ಇದೆ. ಆ ಉತ್ತರಕ್ಕೆ ಹೊಂದಿಕೊಂಡಂತೆ ಪತ್ರಿಕಾ ವರದಿ ಇದೆ. ಅಂದರೆ, ಮಾನ್ಯ ಅಬಕಾರಿ ಸಚಿವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ನಮ್ಮ ಸಿ.ಎಲ್.-7 ಲೈಸೆನ್ಸ್‌ಗಳ ಸಂಖ್ಯೆ ಹೇಗೆ ಏರಿಕೆಯಾಗಿದೆ. ಬೆಂಗಳೂರಿನಂತಹ ನಗರದಲ್ಲಿ ಕಳೆದ ಎರಡು ವರ್ಷದಲ್ಲಿ ಸಿ.ಎಲ್.-7 ಲೈಸೆನ್ಸ್‌ಗಳ ಸಂಖ್ಯೆ ನಿರೀಕ್ಷಿತ ಮಟ್ಟಕ್ಕಿಂತ ಹೇಗೆ ಜಾಸ್ತಿಯಾಯಿತು? ಒಂದೊಂದು division ನ ಮಾಹಿತಿಯನ್ನು ಇದರಲ್ಲಿ ಕೊಟ್ಟಿದ್ದು, ಬೆಂಗಳೂರು ಉತ್ತರ ವಿಭಾಗದಲ್ಲಿ, ಬೆಂಗಳೂರು ದಕ್ಷಿಣ ವಿಭಾಗದಲ್ಲಿ ಕಳೆದ 2 ವರ್ಷಗಳಲ್ಲಿ, as on 31.10.2025 ಎಷ್ಟು ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆ ಎನ್ನುವ ಮಾಹಿತಿ ಇದೆ. ಒಟ್ಟು ಲೈಸೆನ್ಸ್ ಎಷ್ಟು ಆಗಿದೆ? ಇಡೀ ರಾಜ್ಯದಲ್ಲಿ ಈಗ ಚಲಾವಣೆಯಲ್ಲಿರುವಂತಹ ಲೈಸೆನ್ಸ್‌ಗಳ ಸಂಖ್ಯೆ 14,048

ಬಾರ್ ಲೈಸೆನ್ಸ್‌ಗಳು ಬೇರೆ ಬೇರೆ ಅಂದರೆ, ಅದು ಸಿ.ಎಲ್.-2 ಇರಬಹುದು, ಸಿ.ಎಲ್.-4 ಇರಬಹುದು, ಸಿ.ಎಲ್.-7 ಇರಬಹುದು. ಸಿ.ಎಲ್.-9 ಇರಬಹುದು. ಇದು ನಮ್ಮ ಲೈಸೆನ್ಸ್ ಗಳನ್ನು ಕೊಡುವ ಸಂಖ್ಯೆ ISRO rocket ಹೋಗುವ ಸ್ಪೀಡ್‌ಗಿಂತ ಸ್ಪೀಡ್ ಆಗಿ ಹೋಗುತ್ತಿದೆ. ನಮ್ಮ ರಾಜ್ಯದಲ್ಲಿ ಬಹುತೇಕ ಕಳೆದ .....

**ಸಭಾಪತಿಯವರು:-** ನಿಯಮ 330 ರಡಿಯಲ್ಲಿ ಮಾತನಾಡುವವರು ಸಾಕಷ್ಟು ಮಂದಿ ಇದ್ದಾರೆ. ಸಂಕ್ಷಿಪ್ತವಾಗಿ ಮಾತನಾಡಿ. ಇದೇ ವಿಚಾರವಾಗಿ ಸಾಕಷ್ಟು ಜನ ಮಾನ್ಯ ಸದಸ್ಯರು ಎಲ್ಲಾ ವಿಚಾರವನ್ನು ಹೇಳಿದ್ದಾರೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ನಾನು ಮೂರನೆಯವನಾಗಿ ಮಾತನಾಡುತ್ತಿದ್ದೇನೆ. ನಾನು ಯಾವುದನ್ನೂ ಸಹ ಬೇಡವಾಗಿರುವುದನ್ನು ಮಾತನಾಡುತ್ತಿಲ್ಲ. ನಮ್ಮ ರಾಜ್ಯದಲ್ಲಿ ಏಕಾಏಕಿ ಕಳೆದ 2 ವರ್ಷಗಳಲ್ಲಿ ಲೈಸೆನ್ಸ್‌ಗಳನ್ನು ಕೊಡುವಂತಹ ಸಂಖ್ಯೆ ಇಷ್ಟು ದೊಡ್ಡ ಮಟ್ಟಕ್ಕೆ ಜಾಸ್ತಿಯಾಗಿದೆ ಎಂದು ಹೇಳಿದರೆ, ಅಬಕಾರಿ ಇಲಾಖೆಯಲ್ಲಿ ಅನೇಕ ಷರತ್ತುಗಳಿವೆ. ಆ ಲೈಸೆನ್ಸ್ ಗಳು ನಿಯಮಬಾಹಿರವಾಗಿ ಈ ಅಬಕಾರಿ ಇಲಾಖೆಯ ಭ್ರಷ್ಟಾಚಾರದ ಕಾರಣಕ್ಕೋಸ್ಕರ ಅನೇಕ ಷರತ್ತುಗಳು ಏನಿದೆ, ಆ ಷರತ್ತುಗಳನ್ನು violate ಮಾಡುತ್ತಾ, ಲೈಸೆನ್ಸ್‌ಗಳನ್ನು ಕೊಡುತ್ತಾ ಬಂದಿದ್ದಾರೆ. ವಿಶೇಷವಾಗಿ ಬೆಂಗಳೂರು ಮಹಾ ನಗರದಲ್ಲಿ ಅದು brewery ಗಳು ಇರಬಹುದು, ಅಥವಾ ಸಿ.ಎಲ್.-7 ಇರಬಹುದು, ಇವುಗಳಿಗೆ ಪತ್ರಿಕೆಯಲ್ಲಿ ಬಂದಿರುವ ಮಾಹಿತಿ ಪ್ರಕಾರ ಒಂದೊಂದು ಲೈಸೆನ್ಸ್‌ಗೆ ಒಂದೂವರೆ ಕೋಟಿ ರೂಪಾಯಿ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ದರವನ್ನು ನಿಗದಿ ಮಾಡಿದ್ದಾರೆ ಎನ್ನುವಂತಹದ್ದು ಇದೆ. ಜೊತೆಗೆ ಅವರು ಹೇಳುತ್ತಿರುವುದು ಮತ್ತು ಇಲ್ಲಿ ದಾಖಲೆಯಲ್ಲಿರುವುದಕ್ಕೆ ಪುಷ್ಟಿಯನ್ನು ಕೊಡುತ್ತಿದೆ. ಸಹಜವಾಗಿ ಇದರ ಬಗ್ಗೆ ದಾಖಲೆಯನ್ನು ಕೊಟ್ಟಿರುವಂತಹ... ಅಬಕಾರಿ ಇಲಾಖೆಯ ಸಂಖ್ಯೆಗಳನ್ನು ಮತ್ತು ಆ ಲಿಕ್ಕರ್ ಲೈಸೆನ್ಸ್, ಮಾರಾಟಗಾರರ ಸಂಘದ ಅಧ್ಯಕ್ಷರು ಕೊಟ್ಟಿರುವಂತಹದ್ದು ಈ ಎರಡೂ ಸಹ ತಾಳೆಯಾಗುತ್ತಿದೆ. ಶ್ರೀಯುತ ಲಕ್ಷ್ಮೀನಾರಾಯಣ, ಜಂಟಿ ಆಯುಕ್ತರು 25 ಲಕ್ಷ ರೂಪಾಯಿಗಳನ್ನು ಪಡೆಯುವಂತಹ ಸಂದರ್ಭದಲ್ಲಿ ಲೋಕಾಯುಕ್ತಕ್ಕೆ ದೂರು ಕೊಟ್ಟಾಗ ಸಿಕ್ಕಿ ಹಾಕಿಕೊಳ್ಳುತ್ತಾರೆ.

**ಸಭಾಪತಿಯವರು:-** ಶ್ರೀಯುತ ನವೀನ್ ರವರೆ, ಒಂದು ನಿಮಿಷ, ನಿಯಮ 330 ರಡಿಯಲ್ಲಿ ಅರ್ಧ ತಾಸು ಚರ್ಚೆಗೆ ಅವಕಾಶ ಕೊಡಬೇಕು. ಮೊನ್ನೆ 40 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿರುತ್ತೇನೆ. ಇವತ್ತು ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ನಿಮ್ಮನ್ನು ಕರೆದಿದ್ದೇನೆ. ಭಾಷಣ ಮಾಡಲಿಕ್ಕೆ ಅವಕಾಶ ಕೊಟ್ಟಿರುವುದಿಲ್ಲ. ಸಂಕ್ಷಿಪ್ತವಾಗಿ ಮಾತನಾಡಿ. ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದು ತಪ್ಪೇನು? ಏನು ಮುಖ್ಯವಾದ ವಿಷಯವಿದೆ ಅದನ್ನು ಹೇಳಿ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ನಾನು ಮುಖ್ಯವಾದ ವಿಷಯವನ್ನೇ ಹೇಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಅಬಕಾರಿ ಇಲಾಖೆ ಸಂಪೂರ್ಣವಾದಂತಹ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮಾನ್ಯ ಅಬಕಾರಿ ಸಚಿವರು ನನಗೆ ಇದರ ಬಗ್ಗೆ ಮಾಹಿತಿ ಇಲ್ಲ ಎನ್ನುವುದಾದರೆ ಅವರ ಇಲಾಖೆಯ ಮೇಲೆ ಅವರಿಗೆ ನಿಯಂತ್ರಣ ಇರುವುದಿಲ್ಲ. ಹಾಗಾಗಿ, ಅವರು ರಾಜಿನಾಮೆಯನ್ನು ಕೊಡಬೇಕು. ಮಾಹಿತಿ ಇದೆ ಎನ್ನುವುದಾದರೆ, 9 ಜನ ಅಧಿಕಾರಿಗಳು ಈ ಇಲಾಖೆಯಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಸಿಕ್ಕಿಹಾಕಿಕೊಳ್ಳುವಂತಹದ್ದಾಗಿದೆ. ಅಂದರೆ ಇದು hand in glove ಆಗಿರುವಂತಹ ವಿಷಯ. ಮಾನ್ಯ ಸಚಿವರಿಗೆ ಈ ವಿಷಯ ಗೊತ್ತಿರಬೇಕು. ಗೊತ್ತಿಲ್ಲವೆಂದರೆ ಇವರು ಆಡಳತವನ್ನು ಸರಿಯಾಗಿ ನಡೆಸುತ್ತಿಲ್ಲ ಎನ್ನುವ ಕಾರಣಕ್ಕೋಸ್ಕರ ಇವರು ರಾಜಿನಾಮೆಯನ್ನು ಕೊಡಬೇಕು. ಗೊತ್ತಿದೆ ಎನ್ನುವುದಾದರೆ, ಅದರಲ್ಲಿ ನನಗೆ ಪಾಲು ಸಿಕ್ಕಿದೆ ಎನ್ನುವ ಕಾರಣಕ್ಕೋಸ್ಕರವಾದರೂ ರಾಜಿನಾಮೆಯನ್ನು ಕೊಡಬೇಕು.

**(ಮುಂದು)**

**(107) 30.01.2026 07.20 ಎಸ್‌ವಿ-ಬಿಎನ್‌ಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ನವೀನ್ (ಮುಂದು):-**

ರಾಜ್ಯದಲ್ಲಿ ಒಂದು ಪ್ರಮುಖ ಖಾತೆಯನ್ನು ನಿರ್ವಹಿಸುತ್ತಿರುವ ಸಚಿವರು ನನಗೇನೂ ಗೊತ್ತಿಲ್ಲ, ನಾನು ಏನೂ ತಪ್ಪು ಮಾಡಿಲ್ಲ. ನಾನು ಬಹಳ ಒಳ್ಳೆಯ ವ್ಯಕ್ತಿ. ನನ್ನಲ್ಲಿ ಒಂದು ಸಣ್ಣ ಕಪ್ಪು ಚುಕ್ಕೆಯನ್ನು ನೀವು ಕಂಡುಹಿಡಿಯುವುದಕ್ಕಾಗುವುದಿಲ್ಲ ಎನ್ನುವವರು ಇಷ್ಟು ದೊಡ್ಡ ಹಗರಣವಾಗಿರುವ ವಿಚಾರದಲ್ಲಿ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಲಸವನ್ನು ಮಾಡುತ್ತಿರುವುದು ಈ ಸರ್ಕಾರಕ್ಕೆ ಶೋಭೆ ತರುವಂಥದ್ದಲ್ಲ. ಇಷ್ಟೆಲ್ಲಾ ಹಗರಣಗಳು ಪತ್ರಿಕೆಯಲ್ಲಿ ಬಂದಿದ್ದರೂ ಮಾನ್ಯ ಸಚಿವರು ಏಕೆ ಯಾವುದೇ ಒಂದು ತನಿಖೆಯನ್ನು initiate ಮಾಡಿರುವುದಿಲ್ಲ. ಯಾವ ಇಲಾಖೆಯಲ್ಲಿ ಇಷ್ಟು ಹಗರಣಗಳಾಗಿದ್ದು ಅವುಗಳ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆಯೋ ಅದರ ಬಗ್ಗೆ ನಾನೇ ತನಿಖೆಗೆ ಆದೇಶ ಮಾಡುತ್ತೇನೆ ಎನ್ನುವಂಥ ಒಂದೇ ಒಂದು ಮಾತನ್ನು ಕೂಡ ಮಾನ್ಯ ಅಬಕಾರಿ ಸಚಿವರು ಇಲ್ಲಿಯವರೆವಿಗೂ ಮಾತನಾಡಿಲ್ಲ.

ಅಷ್ಟೇ ಅಲ್ಲದೆ ಇವತ್ತು ರೂ.6,000 ಕೋಟಿಯವರೆಗೆ ಭ್ರಷ್ಟಾಚಾರವಾಗಿದ್ದು, ಇದು ಅವರ ಪಕ್ಷದ ರಾಷ್ಟ್ರೀಯ ನಾಯಕರವರೆಗೂ ದೂರು ಹೋಗುತ್ತದೆ ಎನ್ನುವುದು ಗೊತ್ತಿದ್ದರೂ ಅವರು ಇದರ ಬಗ್ಗೆ ಯಾವ ಯಾವ

ಲೈಸೆನ್ಸ್‌ಗಳಿಗೆ ಹಣವನ್ನು ನಿಗದಿ ಪಡಿಸಿ ವಸೂಲಿ ಮಾಡಿರುವ ಬಗ್ಗೆ ಏಕೆ ಸಚಿವರು ಸುಮ್ಮನಿದ್ದಾರೆ? Being silent is accepting.

**Sri PRIYANK KHARGE (Minister for RDPR):–** He has denied it sir. Acceptance ಹೇಗಾಗುತ್ತದೆ? ಸಾರ್ವಜನಿಕವಾಗಿ ಅವರ ಮೇಲೆ ಯಾವುದೇ ಆರೋಪವಿಲ್ಲ ಎಂದು ಹೇಳಿದ್ದಾರೆ.

**(Interruption)**

**Sri K.S.NAVEEN:–** He has to deny it with proof.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ನವೀನ್ ಅವರೇ, ಒಂದು ನಿಮಿಷ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರು ನನಗೆ ಸಮಯ ಕಡಿಮೆ ಕೊಟ್ಟಿದ್ದಾರೆ. ನಾನು yield ಆಗುವುದಿಲ್ಲ.

**ಶ್ರೀ ಎನ್. ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಹೇಳಿದ್ದನ್ನೇ ಮತ್ತೆ ರಿಪೀಟ್ ಮಾಡುತ್ತಿದ್ದಾರೆ. ಸ್ಪಷ್ಟನೆಯನ್ನು ಕೇಳಲಿ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಸಚಿವರು ಏನೂ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ಹೇಳುತ್ತಿದ್ದಾರೆ. ಯಾರು ಭ್ರಷ್ಟಾಚಾರದಲ್ಲಿ ಸಿಕ್ಕಿ ಬಿದ್ದಿದ್ದಾರೆಯೋ ಅವರ ಮೇಲೆ ಕೇಸ್ ಈಗಾಗಲೇ ರಿಜಿಸ್ಟರ್ ಆಗಿದೆ. ಅವರಿಗೆ ಶಿಕ್ಷೆಯೂ ಆಗಿದೆ. ಇಲ್ಲ, ಇಲ್ಲ ಎಂದು ಹೇಳಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಹೇಳುವಾಗ ಹೇಳುತ್ತಾರೆ ಬಿಡಿ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಐವನ್ ಡಿ'ಸೋಜ ಅವರಿಗೆ yield ಆಗುವುದಿಲ್ಲ. ಮಾನ್ಯ ಸಭಾನಾಯಕರು ಮಾತನಾಡಲಿ ಎಂದು yield ಆಗಿದ್ದೆನು. ನಾನು ಕೇಳುವುದಿಷ್ಟೆ. Being silent is accepting ಅಂದರೆ, deny ಮಾಡುವುದು ಮಾಧ್ಯಮದ ಮುಂದೆ ಬಂದು deny ಮಾಡುವುದಲ್ಲ. Deny ಮಾಡಬೇಕಾದರೆ ಅದಕ್ಕೆ ಸಾಕಷ್ಟು proof ಸಮೇತ "ಹೌದು, ನನ್ನ ಭಾಗ, ಭಾಗಿತ್ವ, ಸಹಭಾಗಿತ್ವ ಈ ಭ್ರಷ್ಟಾಚಾರ, ಲಂಚಾವತಾರದಲ್ಲಿ ಇಲ್ಲ ಎನ್ನುವ ದಾಖಲೆಗಳೊಂದಿಗೆ ಅವರು ಬಂದು deny ಮಾಡಬೇಕು. ತಮ್ಮನ್ನು ತಾವು ತನಿಖೆಗೆ ಒಳಪಡಿಸಿಕೊಳ್ಳಬೇಕು. ತಾವು ತಪ್ಪಿತಸ್ಥರಲ್ಲ ಎನ್ನುವುದಾದರೆ ಮೊದಲನೆಯದಾಗಿ

ತಮ್ಮನ್ನು ತಾವು ತನಿಖೆಗೆ ಒಳಪಡಿಸಿಕೊಳ್ಳಬೇಕು. ಅದಾದ ನಂತರ deny ಮಾಡುವಂಥ ಕೆಲಸ ಆಗಬೇಕಾಗಿದೆ. ಇಲ್ಲ ಎಂದರೆ ಇವತ್ತು ಇಷ್ಟು ಪತ್ರಿಕೆಗಳಲ್ಲಿ ಹತ್ತಾರು ರೀತಿಯ ವರದಿಗಳು ಈ ಅಬಕಾರಿ ಇಲಾಖೆಯ ಮೇಲೆ ಬಂದರೂ ಕೂಡ ಸ್ವಲ್ಪವಾದರೂ ಕಾಳಜಿಯನ್ನಿಟ್ಟುಕೊಂಡು ಸಚಿವರು ನೈತಿಕ ಹೊಣೆ ಹೊತ್ತು "ಹೌದು, ನಮ್ಮ ಇಲಾಖೆಗೆ ಇಷ್ಟು ಕಳಂಕ ಪುಂಖಾನುಪುಂಖವಾಗಿ ಬರುತ್ತಿದೆ. ಇದು ನಮ್ಮ ರಾಷ್ಟ್ರೀಯ ನಾಯಕರವರೆವಿಗೂ ಹೋಗುತ್ತದೆ ಎಂದು ಹೇಳುತ್ತಿದ್ದಾರೆ. ನಾನು ಮೂರು ತಿಂಗಳು ಅಧಿಕಾರದಿಂದ ಕೆಳಗಿಳಿದರೆ ನನಗೇನೂ ಆಗುವುದಿಲ್ಲ. ನಾನು ಸಂಪೂರ್ಣವಾಗಿ ನನ್ನನ್ನೂ ಸೇರಿದಂತೆ ತನಿಖೆಗೆ ಒಳಪಡಿಸಿಕೊಳ್ಳುತ್ತೇನೆ. ನಮ್ಮ ಇಲಾಖೆಯಲ್ಲಿ ಏನಾಗಿದೆಯೆಂದು ತನಿಖೆ ಮಾಡಲಿ" ಎಂದು ಹೇಳಲಿ. ನಾನು ಸುಮ್ಮನೆ ಯಾವುದೋ ಮಾಹಿತಿಯನ್ನು ಕೊಡುತ್ತಿಲ್ಲ. ತಾವೇ ಕೊಟ್ಟಿರುವ ಉತ್ತರದಂತೆ 8,000-8,500 ಲೈಸೆನ್ಸ್ ಇದ್ದಂಥದ್ದು 14,000 ಲೈಸೆನ್ಸ್‌ಗಳು ನಮ್ಮ ರಾಜ್ಯದಲ್ಲಿ ಬರುತ್ತಿದೆ. ಬೆಂಗಳೂರಿನಲ್ಲಿಯೇ ಸುಮಾರು 1000 ಲೈಸೆನ್ಸ್‌ಗಳು ಜಾಸ್ತಿಯಾಗಿದೆ. ಇದು ಹೇಗೆ ಜಾಸ್ತಿಯಾಗಿದೆ ಎಂದರೆ ನೀವು correlate ಮಾಡಬಹುದು. ಭ್ರಷ್ಟಾಚಾರದ figures ಗೂ ಲೈಸೆನ್ಸ್‌ಗಳ ಸಂಖ್ಯೆ ಜಾಸ್ತಿಯಾಗಿರುವುದಕ್ಕೂ ನೇರವಾದ linkage ಇದೆ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, this is not only related to Karnataka ಇದು ಕರ್ನಾಟಕದಲ್ಲಿ ಮಾತ್ರವಲ್ಲ. ಇಡೀ national phenomenon ಇದು. ಬೇಕಾದರೆ figures ಇದೆ.

**ಸಭಾಪತಿಯವರು:-** ಮಾನ್ಯ ಶಿವಕುಮಾರ್ ಅವರೆ, ನಿಮ್ಮನ್ನು ಯಾರು ಕರೆದಿದ್ದಾರೆ? ಏಕೆ ನಡುವೆ ಸುಮ್ಮನೆ ಏಳುತ್ತೀರಿ? ನೀವು ಯಾರು? ಮಂತ್ರಿಗಳಾ ನೀವು?

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ ನಾವು ಇದನ್ನು ನಿಲುವಳಿ ಸೂಚನೆಯಾಗಿ ಮಂಡಿಸಿದ್ದೇವೆ. ಏಕೆಂದರೆ ರಾಜ್ಯದ ಜನತೆಗೆ ಇದರ ಬಗ್ಗೆ ಮಾಹಿತಿ ಕೊಡಬೇಕು ಎನ್ನುವ ಉದ್ದೇಶದಿಂದ.

**ಸಭಾಪತಿಯವರು:-** ಅದೆಲ್ಲಾ ಮುಗಿದ ವಿಷಯ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ. ಕಳೆದ ಅಧಿವೇಶನದಲ್ಲಿ ನನ್ನದೊಂದು ಪ್ರಶ್ನೆ ಇತ್ತು. ಅಬಕಾರಿ ಇಲಾಖೆಯಲ್ಲಿ ಇವತ್ತು ಮಿತಿ ಮೀರಿದ ಮದ್ಯದ ಮಾರಾಟವಾಗುತ್ತಿದೆ ಎಂದು ಹೇಳಿ ಮಾತನಾಡಿರುವುದು ರಾಜ್ಯಾದ್ಯಂತ ಜನರು ನಮ್ಮ

ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ಮಿತಿ ಮೀರಿದಂತೆ ಎಣ್ಣೆ ವ್ಯಾಪಾರವಾಗುತ್ತಿದೆ ಎಂದು ಹೇಳುವಂತಾಗಿದೆ. ಆ ಎಣ್ಣೆಯ ಘಾಟು, ಭ್ರಷ್ಟಾಚಾರದ ಘಾಟು ಇವತ್ತು ನೇರವಾಗಿ ಅಬಕಾರಿ ಸಚಿವರನ್ನೇ ಬಂದು ತಲುಪಿದೆ.

ಆದ್ದರಿಂದ ನಾನು ಒತ್ತಾಯ ಮಾಡುತ್ತೇನೆ. ಅವರು ನಾನು ಮಾಡಿಲ್ಲ ಎಂದು ಏನು ಬೇಕಾದರೂ deny ಮಾಡಲಿ. ತನಿಖೆಗೆ ಒಳಪಟ್ಟು ಮಾನ್ಯ ಮುಖ್ಯಮಂತ್ರಿಗಳು ಅವರ ಬಳಿ ರಾಜೀನಾಮೆಯನ್ನು ಪಡೆದು ತನಿಖೆಗೆ ಒಳಪಡಿಸಲಿ. ಹೇಗೆ ಮಾನ್ಯ ಈಶ್ವರಪ್ಪನವರ ಮೇಲೆ ಯಾರೋ ಒಬ್ಬ ಗುತ್ತಿಗೆದಾರ ಬರೆದಿಟ್ಟ ಎನ್ನುವ ಒಂದೇ ಒಂದು ಕಾರಣಕ್ಕೆ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಇದೇ ಮಾನ್ಯ ಸಿದ್ಧರಾಮಯ್ಯನವರು ಹಠಕ್ಕೆ ಬಿದ್ದು ಮಾನ್ಯ ಈಶ್ವರಪ್ಪನವರ ರಾಜೀನಾಮೆಯನ್ನು ಪಡೆದುಕೊಂಡರು.

**ಶ್ರೀ ಐವನ್ ಡಿ'ಸೋಜ:–** ಆ ಪ್ರಕರಣದಲ್ಲಿ death note ನಲ್ಲಿ ಬರೆದಿಟ್ಟಿದ್ದರು. ಅದು ರುಜುವಾದ ಪ್ರಕರಣ. ಅಲ್ಲಿ death note ಇತ್ತು.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಅವತ್ತು ಮಾನ್ಯ ಈಶ್ವರಪ್ಪನವರಿಂದ ರಾಜೀನಾಮೆಯನ್ನು ಪಡೆಯುವಂಥ ಕೆಲಸ ಮಾಡಿದ್ದರು. ಇವತ್ತು ಸಿದ್ಧರಾಮಯ್ಯನವರು ಆ ರೀತಿಯಾದ ಆಡಳಿತಗಾರರಾಗಿದ್ದರೆ ಅಬಕಾರಿ ಸಚಿವರ ರಾಜೀನಾಮೆಯನ್ನು ಪಡೆಯಬೇಕು. ಅವರ ರಾಜೀನಾಮೆಯನ್ನು ಪಡೆದು ಆ ಇಲಾಖೆ ಮತ್ತು ಇಲಾಖೆಯಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ಇವತ್ತು ತನಿಖೆಯನ್ನು ಮಾಡಬೇಕು. ಮಾನ್ಯ ಸಿದ್ಧರಾಮಯ್ಯನವರು ಎರಡು ನಾಲಗೆಯ ವ್ಯಕ್ತಿಯಲ್ಲ, ಅವರು ಅವತ್ತೂ ಸಹ ಇದ್ದನ್ನೇ ಮಾತನಾಡಿದ್ದೇನೆ, ಇವತ್ತು ನಾನೇ ಮುಖ್ಯಮಂತ್ರಿಯಾದರೂ ಸಹ ಅದನ್ನು ಮಾಡುತ್ತೇನೆ ಎಂದು ತಿಳಿಸುವಂತಹ ಕೆಲಸವನ್ನು ಮಾಡಿ ಇಲಾಖೆಯಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ಇವತ್ತು ತನಿಖೆಯನ್ನು ಮಾಡಬೇಕು. ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಅಥವಾ ಅವರ ರಾಜೀನಾಮೆಯನ್ನು ಪಡೆಯಬೇಕು. ಈ ರಾಜ್ಯವನ್ನು ಕುಡುಕರ ರಾಜ್ಯವನ್ನಾಗಿ ಮಾಡುವುದರಿಂದ ತಪ್ಪಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ಇಲಾಖೆಯಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಗಮನ ಹರಿಸಿ ಸಮಗ್ರ ತನಿಖೆಯನ್ನು ಮಾಡಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ (ಐಟಿ ಮತ್ತು ಬಿಟಿ ಸಚಿವರು):–** ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದಾರೆ. ಒಂದು iota of evidence ಕೊಟ್ಟು ಮಾತನಾಡಲಿ. ಸುಮ್ಮನೆ correlation ಇದೆ ಎಂದರೆ ಸರ್ಕಾರ ಹೇಗೆ ಒಪ್ಪುವುದಕ್ಕೆ ಆಗುತ್ತದೆ? ಅವರು ಅನ್ಯಥಾ ಭಾವಿಸುವುದು ಬೇಡ. He is responsible as he is accusing the Government of corruption. He has not given a piece of paper.

**Sri K.S.NAVEEN:–** If he listens to me, I can give it.

**Sri PRIYANK KHARGE:–** Correlation cannot amount to corruption.

**Sri K.S.NAVEEN:–** Correlation amounts to corruption.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ನನಗೂ ಅವಕಾಶ ಕೊಟ್ಟಿದ್ದರೆ....

**ಶ್ರೀ ಕೆ.ಎಸ್.ನವೀನ್:–** ಮಾನ್ಯ ರಮೇಶ್ ಬಾಬು ಅವರೆ, ನೀವು ಯಾಕೆ ಸರ್ಕಾರದ ಬಗ್ಗೆ ಏನಾದರೂ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದರೆ ಮಧ್ಯದಲ್ಲಿ ಎದ್ದು ಮಾತನಾಡುತ್ತೀರಿ?

**ಸಭಾಪತಿಯವರು:–** ಆಯಿತು, ಕುಳಿತುಕೊಳ್ಳಿ. ಮಾನ್ಯ ಸರ್ಜಿಯವರೆ, ನೀವು ಮಾತನಾಡಿ. ಎರಡೇ ನಿಮಿಷ, ಜಾಸ್ತಿ ಮಾತನಾಡುವಂತಿಲ್ಲ.

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಾರ್‌ಗಳಲ್ಲಿ monthly fix ಎಂದು ಹೇಳಿ ಎಲ್ಲಾ ಕಡೆ ಪೇಪರ್‌ಗಳಲ್ಲಿ ಬಂದಿದೆ. Almost, monthly fix ಎಂದರೆ, ರೂ.15 ರಿಂದ 20,000ಗಳನ್ನು ಬಾರ್‌ಗಳಲ್ಲಿ ಕೊಡಬೇಕು. Kickback ನಲ್ಲಿ 70,000 ರೂಪಾಯಿಗಳನ್ನು ಸಿ.ಎಲ್.–7 ಗೆ, 1.5 ಕೋಟಿ ರೂಪಾಯಿಗಳನ್ನು microbrewery ಗೆ ಕೊಡಬೇಕು ಎಂದಿದೆ. ವರ್ಗಾವಣೆ ದಂಧೆಯಲ್ಲಿಯೂ ಕೂಡ ಲಂಚ ಎನ್ನುವುದು ಬಂದಿದೆ. ಉಪ ಆಯುಕ್ತರಿಗೆ 2.5 ಕೋಟಿ, ಅಧೀಕ್ಷಕರಿಗೆ 40 ಲಕ್ಷ, ಉಪ ಅಧೀಕ್ಷಕರಿಗೆ 30 ಲಕ್ಷ, ನಿರೀಕ್ಷಕರಿಗೆ 40 ಲಕ್ಷ, ಉಪ ನಿರೀಕ್ಷಕರಿಗೆ 20 ಲಕ್ಷ, ಮುಖ್ಯ ಪೇದೆಗೆ 5 ಲಕ್ಷ, ಪೇದೆಗೆ 3 ಲಕ್ಷ ಈ ರೀತಿ ಇದೆ. ಕೆಲವರಿಗೆ ಒಂದು ವರ್ಷದಲ್ಲಿ 3 ಬಾರಿ transfer ಕೂಡ ಆಗಿದೆ.

ನಾನು ಈ ಸದನಕ್ಕೆ ಬಹಳ ಸಣ್ಣವನು, ಕಿರಿಯವನು. ಕ್ರೋಧ ಬುದ್ಧಿಯನ್ನು ತಿನ್ನುತ್ತದೆ. ಅಹಂಕಾರ ಜ್ಞಾನವನ್ನು ತಿನ್ನುತ್ತದೆ. ಪ್ರಾಯಶ್ಚಿತ್ತ ಪಾಪವನ್ನು ತಿನ್ನುತ್ತದೆ. ಮೋಹ ಮರ್ಯಾದೆಯನ್ನು ತಿನ್ನುತ್ತದೆ. ಚಿಂತೆ

ಆಯುಷ್ಯವನ್ನು ತಿನ್ನುತ್ತದೆ. ಲಂಚ ಗೌರವವನ್ನು ತಿನ್ನುತ್ತದೆ. ಹಾಗಾಗಿ ಅಳತೆ ಮೀರಿ ಕಟ್ಟಿದ ಮನೆ, ಅಳತೆ ಮೀರಿ ಮಾಡಿದ ಸಾಲ, ಅದ್ದೂರಿಯಿಂದ ಮಾಡಿದ ಮದುವೆ ಎಲ್ಲವೂ ಮಿತಿ ಮೀರಿದ್ದು ಒಳ್ಳೆಯದಲ್ಲ. ಸಚಿವರು ಹಿರಿಯರಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು. ಮಾನ್ಯ ನವೀನ್ ಅವರು ಒತ್ತಾಯಿಸಿದಂತೆ ಮಾನ್ಯ ಸಚಿವರು ರಾಜೀನಾಮೆಯನ್ನು ಕೊಟ್ಟು ತನಿಖೆಗೆ ಒಳಪಡಿಸಿಕೊಂಡು ಸರಿಯಾದ ಮೇಲೆ ಮತ್ತೆ ಬರಬೇಕೆಂದು ಕೋರುತ್ತೇನೆ.

(ಮುಂದು)

(108) 30-01-2026 7.30 ಕೆ.ಜಿ ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಬಿ.ತಿಮ್ಮಾಪುರ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಮೊನ್ನೆ ದಿವಸವೇ ಉತ್ತರ ಕೊಡುತ್ತೇನೆಂದು ಹೇಳಿದ್ದೆ.

**ಸಭಾಪತಿಯವರು:-** ಮಾನ್ಯ ಸಚಿವರೇ ಆಯಿತು ಕೊಡಿ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ತಾವೀಗ ಇನ್ನು ಇಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಒಳ್ಳೆಯದು. ಈ ಅಬಕಾರಿ ಇಲಾಖೆ ಬಂದ ನಂತರ ಯಾವ ಯಾವ ಸಚಿವರ ಮೇಲೆ ಏನೇನು ಆರೋಪಗಳು ಬಂದವು ಎಂಬುದು ಗೊತ್ತಿದೆ. ಈ ಹಿಂದೆ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು license ನವೀಕರಣದಲ್ಲಿ ಲಂಚ ಕೇಳುತ್ತಿದ್ದಾರೆಂದು ಎಲ್ಲಾ ದಿನ ಪತ್ರಿಕೆಗಳಲ್ಲಿ ಬಂತು. ಇದು ಎಲ್ಲಾ ಪೇಪರ್‌ಗಳಲ್ಲಿಯೂ ಬಂತು. ಅದೇರೀತಿ Association ದವರು ಮಾಡಿದರು. ಶ್ರೀ ಆರ್.ರೇಣುಕಾಚಾರ್ಯ license ನವೀಕರಣದಲ್ಲಿ ಲಂಚ ಎಂದು ಬಂದಿತ್ತು. ನಾನು ಯಾವುದನ್ನು ಇಟ್ಟುಕೊಳ್ಳುವುದಿಲ್ಲ. ನಮ್ಮ ಸರ್ಕಾರದಲ್ಲಿ ಇರುವಂತಹ ಶ್ರೀ ಮನೋಹರ್ ತಹಶೀಲ್ದಾರ್‌ರವರ ಮೇಲೆ ಆರೋಪ ಬಂತು. ಶ್ರೀ ಸತೀಶ್ ಜಾರಕಿಹೊಳ್ಳಿ ಸಾಹೇಬರ ಮೇಲೆ ಆರೋಪ ಬಂತು. ಮಾನ್ಯ ಸಚಿವರಾಗಿದ್ದ ಶ್ರೀ ನಾಗೇಶ್‌ರವರ ಅವಧಿಯಲ್ಲಿ ಬಂತು. ಇನ್ನೂ ಬಹಳ ಜನರು ಇದ್ದಾರೆ. ಶ್ರೀ ವಿ.ಗೋಪಾಲಯ್ಯನವರು ಅಬಕಾರಿ ಸಚಿವರಾಗಿದ್ದಾಗ ಅವರ ವಿರುದ್ಧ ಪ್ರತಿ ದಿವಸ ಪತ್ರಿಕೆಗಳಲ್ಲಿ ಬರುತ್ತಿತ್ತು. ಅದು ಲೋಕಾಯುಕ್ತಕ್ಕೆ ಹೋಯಿತು. ನ್ಯಾಯಾಲಯಕ್ಕೆ ಹೋಯಿತು. ಇವರು ಯಾರು ಯಾರು ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನು ಅವರೇ ಅವಲೋಕನ ಮಾಡಿಕೊಳ್ಳಲಿ.

ಮಾನ್ಯ ಸಭಾಪತಿಯವರೇ, ಈ ಇಲಾಖೆಯಲ್ಲಿ ಈ ಎಲ್ಲಾ ಸಚಿವರ ಮೇಲೆ ಏನೇನು ಆರೋಪ ಬಂದಿದೆ, ಅದು ಏತಕ್ಕೆ ಬಂತು? ವರ್ಗಾವಣೆಯಲ್ಲಿ ಹಣ ತಿನ್ನುತ್ತಾರೆ, ನವೀಕರಣ ಮಾಡುವ ಸಂದರ್ಭದಲ್ಲಿ ಹಣ ತಿನ್ನುತ್ತಾರೆ, ಮತ್ತೆ license ಕೊಡುವುದರಲ್ಲಿ ಲಂಚ ಕೇಳುತ್ತಾರೆಂದು ಬಂದಿತ್ತು. ಈಗ ಅದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ಹಾಗಿದ್ದರೆ, ಇದನ್ನು ಯಾರು ಸುಧಾರಣೆ ಮಾಡಬೇಕು? ಜನಪ್ರತಿನಿಧಿಗಳಾದ ನಾವು ಅದನ್ನು ಸುಧಾರಣೆ ಮಾಡಬೇಕಲ್ಲವೇ; ಈಗ ಇಲಾಖೆಯ ಬಗ್ಗೆ ಜನರಿಗೆ ತಪ್ಪು ಅಭಿಪ್ರಾಯ ಹೋಗುತ್ತಿದೆ. ಅವರು ಇದು ಭ್ರಷ್ಟಾಚಾರವೆಂದು ಹೇಳುತ್ತಾರೆ. ಇದಕ್ಕಿಂತಹ worst ಆಗಿ ಎಲ್ಲರ ಮೇಲೂ ಪತ್ರಿಕೆಗಳಲ್ಲಿ ಬರೆದಿದ್ದಾರೆ. ನಾವು ಎಷ್ಟೋ ಜನರು ಅಬಕಾರಿ ಮಂತ್ರಿಗಳು ಆಗಿದ್ದೀರಿ ಅಲ್ಲವೇ; ಅವರೆಲ್ಲರ ಮೇಲೆಯೂ ದೊಡ್ಡ ಭ್ರಷ್ಟಾಚಾರ, ಬ್ರಹ್ಮಾಂಡ ಭ್ರಷ್ಟಾಚಾರ. ಹೋರಾಟ ಇವೆಲ್ಲವೂ ನಡೆದು ಬಂದಿವೆ. ಆಗ ಯಾರೂ ರಾಜೀನಾಮೆ ಕೊಟ್ಟಿಲ್ಲ. ಆ ವಿಷಯವನ್ನು ಒಂದು ಕಡೆ ಬಿಡೋಣ. ಹಾಗಿದ್ದರೆ, ಇದನ್ನು ಸುಧಾರಣೆ ಮಾಡಬೇಕಲ್ಲವೇ;

ಮಾನ್ಯ ಸಭಾಪತಿಯವರೇ, ನಾನು ಇದನ್ನು ಸುಧಾರಣೆ ಮಾಡುವುದಕ್ಕೆ ತಕ್ಷಣ ವರ್ಗಾವಣೆ ಸರಳೀಕರಣ ಮಾಡಿದೆ. ವರ್ಗಾವಣೆ ಮಾಡಿದೆ. ಆದರೆ, ಅವರು ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಡೆಯುತ್ತದೆ ಎಂದು ಹೇಳಿದ್ದಾರೆ. ಅದು ಮಂತ್ರಿಯವರ ಮೇಲೆಯಾಗಲಿ ಅಥವಾ ಅಧಿಕಾರಿಗಳ ಮೇಲೆಯಾಗಲಿ ಬಾರಬಾರದು ಎನ್ನುವ ದೃಷ್ಟಿಯಿಂದ ಅದಕ್ಕೆ counselling ವ್ಯವಸ್ಥೆಯನ್ನು ತೆಗೆದುಕೊಂಡು ಬಂದೆ. ಈ counselling system ಅನ್ನು ತೆಗೆದುಕೊಂಡು ಬಂದು ಸುಮಾರು 2,957 ಮೆರಿಟ್ ಅಧಿಕಾರಿಗಳ counselling ಅನ್ನು ಮಾಡಿ transfer ಮಾಡಿದ್ದೇವೆ. ಯಾರ ಮೇಲೆಯೂ ಆರೋಪ ಇಲ್ಲ. ಈ counselling ವ್ಯವಸ್ಥೆಯನ್ನು ಹಿಂದೆ ಯಾರಾದರೂ ತೆಗೆದುಕೊಂಡು ಬಂದಿದ್ದಾರೆಯೇ? ಈ counselling ವ್ಯವಸ್ಥೆಯನ್ನು ತಂದಿದ್ದರಿಂದ, ನಾವು ಇವತ್ತು ಈ ಇಲಾಖೆಯಲ್ಲಿ ಏನು ತಪ್ಪು ಅಭಿಪ್ರಾಯ ಹೋಗುತ್ತಿದೆ, ಜನರಲ್ಲಿ ಭಾವನೆ ಏನಿದೆ ಎಂಬುದನ್ನು ನೋಡಲಿ. ಈ ವರ್ಗಾವಣೆಯಲ್ಲಿ ಶ್ರೀ ಆರ್.ಬಿ.ತಿಮ್ಮಾಪುರರವರು ಇಲ್ಲ. ಯಾರು ಇಲ್ಲ. 48 ಗಂಟೆಗಳಲ್ಲಿ ಎಲ್ಲರನ್ನು ವರ್ಗಾವಣೆ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, secondly, 'ಎ' ಹಾಗೂ 'ಬಿ' ಗ್ರೂಪ್‌ಗಳ ಅಧಿಕಾರಿಗಳ ವಿರುದ್ಧ ಯಾವುದೇ ಒಂದು ಲೋಕಾಯುಕ್ತವಾಗಲಿ ಅಥವಾ ಇಲಾಖಾ ವಿಚಾರಣೆಯಾಗಲಿ, ಯಾವುದಾದರೂ ಬಂದರೆ ಅವರಿಗೆ non-executive post ಕೊಡುವುದಿಲ್ಲ. ಅವರಿಗೆ ಯಾವ ಕಾಲಕ್ಕೂ ಕೊಡುವುದಿಲ್ಲ. ಇನ್ನು ಜಂಟಿ ಆಯುಕ್ತರು, ಉಪ

ಆಯುಕ್ತರು, ಅಧೀಕ್ಷಕರು, ನಿರೀಕ್ಷಕರು ಇವರಿಗೆ ಸ್ವಂತ ಜಿಲ್ಲೆಯಲ್ಲಿ ಸೇವೆ ಸಲ್ಲಿಸುವುದಕ್ಕೆ ಅವಕಾಶ ಇಲ್ಲ. ಇದನ್ನು ನಾನು ಸಚಿವನಾದ ಮೇಲೆ ತೆಗೆದುಕೊಂಡು ಬಂದಿದ್ದೇನೆ. ಯಾರಾದರೂ ಅಮಾನತ್ತಿನಿಂದ ತೆರವಾದರೆ, ಅವರಿಗೆ executive post ಕೊಡುವುದಿಲ್ಲ. ಬೆಂಗಳೂರಿಗೆ ಬೇರೆ ಯಾವ ಅಧಿಕಾರಿಗಳು ಬರುವುದಕ್ಕೆ ಆಗುತ್ತಿರಲಿಲ್ಲ. ಬೆಂಗಳೂರಿನಲ್ಲಿ 5 ವರ್ಷಗಳ ಕಾಲ ಯಾರಾದರೂ executive post ನಲ್ಲಿ ಇದ್ದರು ಎಂದರೆ, ಮತ್ತೆ ಅವರಿಗೆ ಬೆಂಗಳೂರಿಗೆ ಅವಕಾಶ ಇಲ್ಲ. ಅವರನ್ನು ಹೊರಗಡೆ ಜಿಲ್ಲೆಗೆ ಹಾಕುತ್ತಿದ್ದೇವೆ. ಅವರು ಎರಡು ಅವಧಿಯಲ್ಲಿ ಏನಾದರೂ executive post ಮಾಡಿದ್ದರೆ, ಅವರಿಗೆ ಮತ್ತೆ non-executive post ಕೊಡುತ್ತಿದ್ದೇವೆ. ಇದನ್ನು ನಾನು ಸಚಿವನಾದ ಮೇಲೆ ಮಾಡಿದ್ದೇನೆ. 'ವರ್ಗಾವಣೆ ದಂಧೆ' 'ವರ್ಗಾವಣೆಯಲ್ಲಿ ಲೂಟಿ', 'ಭ್ರಷ್ಟಾಚಾರ', 'ಬ್ರಹ್ಮಾಂಡ ಭ್ರಷ್ಟಾಚಾರ'ವೆಂದು ಈ ಹಿಂದಿನ ಎಲ್ಲಾ ಸಚಿವರ ಮೇಲೆಯೂ ಆರೋಪ ಬಂದಿದೆ. ನಾನು ಇದನ್ನು ತಪ್ಪಿಸಲಿಕ್ಕೆ ಇದು ಆಗಬಾರದೆಂದು ಕೆಲಸ ಮಾಡಿದ್ದೇನೆ. ನಾನು ಸಚಿವನಾದ ಮೇಲೆ ಇದನ್ನು ಸುಧಾರಣೆ ತರುವುದಕ್ಕೆ ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, 'ನವೀಕರಣ' ದ ಬಗ್ಗೆ ಹೇಳುವುದಾದರೆ, ಒಂದು ವರ್ಷಕ್ಕೆ ಒಮ್ಮೆ ನವೀಕರಣಕ್ಕೆ ಬರುತ್ತದೆ. ಅಲ್ಲಿ ಅಧಿಕಾರಿಗಳು ಲಂಚ ಕೇಳುತ್ತಾರೆ ಎನ್ನುವುದು, ಅದು ಎಲ್ಲರ ಮೇಲೆ, ಅವರು ಹೆಸರುಗಳನ್ನು ಹೇಳಿದ್ದಾರೆ. ಅವರೆಲ್ಲರ ಮೇಲೆ ಪ್ರತಿ ವರ್ಷ ನವೀಕರಣದಲ್ಲಿ 20 ಕೋಟಿ ರೂಪಾಯಿಗಳು, 40,000 ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಯಾವ ಸಾವಿರ ಕೋಟಿ ರೂಪಾಯಿಗಳು ಏನೋ? ಅವರ ಲೆಕ್ಕವೇನೂ? ಅದಕ್ಕೆ ಅಳತೆ ಏನು? ಇದರಲ್ಲಿ ಇವರಲ್ಲಿ ಯಾವುದಿದೆ? 6 ಸಾವಿರ ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ, 6 ಸಾವಿರ ಕೋಟಿ ರೂಪಾಯಿಗಳೂ ಏನು? ಹಾಗಿದ್ದರೆ, ಅವರ ಅಧಿಕಾರ ಅವಧಿಯಲ್ಲಿ ಬದಲಾವಣೆ ತರಬೇಕಿತ್ತು. ಆದರೆ, ನಾನು ನವೀಕರಣವನ್ನು ಒಂದು ವರ್ಷಕ್ಕೆ ಮಾಡುವುದು ಬೇಡ, ಅದನ್ನು 5 ವರ್ಷಕ್ಕೆ ಒಮ್ಮೆ ಮಾಡೋಣವೆಂದು ಮಾಡಿದ್ದೇನೆ.

(ಈ **ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ಹರ್ಷ ವ್ಯಕ್ತಪಡಿಸಿದರು**)

ಪ್ರತಿ ವರ್ಷ ನವೀಕರಣ ಮಾಡಿ ಈ ಇಲಾಖೆಗೆ ಕೆಟ್ಟ ಹೆಸರು ಬಾರಬಾರದೆಂದು 5 ವರ್ಷಗಳಿಗೆ ಒಮ್ಮೆ ನವೀಕರಣ ಮಾಡುವಂತೆ ಮಾಡಿದ್ದೇನೆ. ನವೀಕರಣವನ್ನು ಎಷ್ಟು ದಿವಸಗಳಲ್ಲಿ ಮಾಡಬೇಕು ಸಭಾಪತಿಯವರೇ? ಅದನ್ನು 48 ಗಂಟೆಗಳಲ್ಲಿ ಎಲ್ಲಾ license ನವೀಕರಣ ಆಗಬೇಕೆಂದು ಮಾಡಿದ್ದೇವೆ. ಹಾಗಾದರೆ, ನಾವು ತಪ್ಪು ಮಾಡಿದ್ದೇವೆಯೇ? ಇಲ್ಲಿ 'ಬ್ರಹ್ಮಾಂಡ ಆಯಿತೇ? ಭ್ರಷ್ಟಾಚಾರ ಆಯಿತೇ?

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ನನ್ನ ಕಡೆಗೆ ನೋಡಿಕೊಂಡು ಮಾತನಾಡಿ.

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಆಯಿತು. ನಾವು ಈ ಇಲಾಖೆಯಲ್ಲಿ ಸುಧಾರಣೆಗಳನ್ನು ತರುವುದಕ್ಕೆ ಇಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. (ಗೊಂದಲ) ಅವರಿಗೆ ಇವು ಗೊತ್ತಾಗಬೇಕಲ್ಲವೇ; ಈ ಸನ್ನದು ಮಂಜೂರಾತಿ ಯಾವಾಗ ಕೊಡುತ್ತೇವೆ, CL–೨ and CL–೯ ಎಂದು ಬರೆದಿದ್ದಾರೆ. ಅವರು CL–೨ and CL–೯ ಕೊಡುವುದಿಲ್ಲ. CL–೪ and CL–೭ ಕೊಡುತ್ತಿದ್ದೇವೆ. ಅದಕ್ಕೆ ರೆವಿನ್ಯೂ ಜಿಲ್ಲಾಧಿಕಾರಿಯವರು ಕೊನೆಗೆ ಕೊಡುತ್ತಾರೆ. ಈ ಕಡತ ಒಟ್ಟು 16 ಹಂತಗಳಿಗೆ ಹೋಗುತ್ತಿತ್ತು. ಇದು 16 ಜನರ login ಗೆ ಹೋಗುತ್ತಿತ್ತು. ಇವರೆಲ್ಲರ ಬಳಿ ಹೋಗುತ್ತದೆ. ಇವರೆಲ್ಲರೂ ತಡಮಾಡುವುದರಿಂದ ಜನರ ಭಾವನೆ ಕೆಟ್ಟದಾಗಿ ಬರುತ್ತಿತ್ತು. ಈ 16 login ಗಳನ್ನು ತೆಗೆದು ಕೇವಲ ಈಗ 7 login ಗಳಿಗೆ ಇಟ್ಟಿದ್ದೇವೆ. ಆ ಕಡತ 7 ಜನರ login ಗಳಿಗೆ ಹೋದರೆ, ಅವರಿಗೆ license ಸಿಗುತ್ತದೆ. ಮತ್ತೆ ಇದಕ್ಕೆ ಒಬ್ಬರಿಗೆ 7 ದಿವಸ, ಇನ್ನೊಬ್ಬರಿಗೆ 8 ದಿವಸ ಹಾಗೂ ಇನ್ನೊಬ್ಬರಿಗೆ ೯ ದಿವಸ ಇರಬೇಕೆಂದು ಅವಧಿ fix ಮಾಡಿದ್ದೇನೆ. ಇದನ್ನು ಅಧಿಕಾರಿಗಳು ಏನಾದರೂ ಮಾಡದೆ ತಡ ಮಾಡಿದರೆ, ಅಂತಹವರ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಇಬ್ಬರು ಅಧಿಕಾರಿಗಳು delay ಮಾಡಿದ್ದಕ್ಕಾಗಿ, ಅವರನ್ನು suspend ಮಾಡಿದ್ದೇನೆ. ಇದು ಸನ್ನದು ಕೊಡುವಂತಹ ರೀತಿಯಾಗಿದೆ. ನಾವು ಮೊದಲು ಇದ್ದ 16 ಹಂತಗಳನ್ನು ತೆಗೆದು ಅದನ್ನೀಗ 7 ಹಂತಕ್ಕೆ ತೆಗೆದುಕೊಂಡು ಬಂದಿದ್ದೇವೆ.

ಮಾನ್ಯ ಸಭಾಪತಿಯವರೇ, ಇನ್ನು 'online ಸೇವೆಗಳ' ಬಗ್ಗೆ ಹೇಳುವುದಾದರೆ, ಈ ಇಲಾಖೆಯಲ್ಲಿ 41 ಸೇವೆಗಳನ್ನು faceless ಮಾಡಿದ್ದೇವೆ. ಈಗ ನಾವು 'ಇ–ಹರಾಜು' ಪ್ರಕ್ರಿಯೆಯನ್ನು ತೆಗೆದುಕೊಂಡು ಬರುತ್ತಿದ್ದೇವೆ. 'ಇ–ಹರಾಜಿಗೆ' ಎಲ್ಲಾ ಜಾತಿಯವರಿಗೆ reservation ತೆಗೆದುಕೊಂಡುಬಂದು ಕೊಡುತ್ತಿದ್ದೇವೆ. ಇದರಿಂದ ಕೆಲವರಿಗೆ ತೊಂದರೆಯಾಗುತ್ತದೆ. ಆಗ ನನ್ನ ಮೇಲೆ ಗುಲ್ಲು ಏಳಬಹುದು. ವರ್ಗಾವಣೆ ವಿಷಯದಲ್ಲಿ ಗುಲ್ಲು ಏಳಬಹುದು. ಬೆಂಗಳೂರಿನಲ್ಲಿ ಎಷ್ಟೋ ವರ್ಷಗಳಿಂದ ಇರುವಂತಹ ಗಟ್ಟಿಯಾದ ಅಧಿಕಾರಿಗಳು ರಾಯಚೂರು ಮತ್ತು ಗುಲ್ಬರ್ಗಾಕ್ಕೆ ಹೋಗುತ್ತಾರೆಂದರೆ, ಸಹಜವಾಗಿ ನನ್ನ ಮೇಲೆ ಗುಲ್ಲು ಏಳಬಹುದು. 'ಇ–ಹರಾಜು' ಅನ್ನು ಪರಿಶಿಷ್ಟ ಜಾತಿ/ಪಂಗಡಗಳಿಗೆ ಕೊಡಬೇಕೆಂದು ಮಾಡಿದ್ದೇವೆ. ಇದು ಈಗ ನ್ಯಾಯಾಲಯದಲ್ಲಿದೆ.

ನಮ್ಮ ಗೆಳೆಯರು ಹೋದರು ಎಂದು ಕಾಣುತ್ತದೆ. (ಗೊಂದಲ) Federation of Wine Merchants' Association ಸೇರಿ.,

**ಸಭಾಪತಿಯವರು:–** ಅವರು ಹೋಗಿ ನೀರು ಕುಡಿದಂತೆ ಕುಡಿದು ಬರುತ್ತಾರೆ.

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ನಾನು ಆಗಲೂ ಹೇಳಿದ್ದೇನೆ. ಆ license renewal ಆಗಿಲ್ಲ. ಅದು 20 ವರ್ಷಗಳು ಆಗಿದೆ. ಅದು ಅಸ್ತಿತ್ವದಲ್ಲಿ ಇಲ್ಲ. ಯಾರು ನಮ್ಮ federation... ಪೇಪರ್‌ನಲ್ಲಿ ನಿಮ್ಮದೇ association, ಇಷ್ಟು ಭ್ರಷ್ಟಾಚಾರವೆಂದು ಹೇಳುತ್ತಿದ್ದಾರೆ. ಏಕೆ license renewal ಮಾಡಿಲ್ಲ? ಅದು ಅಸ್ತಿತ್ವದಲ್ಲಿ ಇಲ್ಲವೆಂದು ಇದೆ, ಅದನ್ನು ತಮಗೆ ಕಳುಹಿಸುತ್ತಿದ್ದೇನೆ. Audit Report ಕೊಟ್ಟಿಲ್ಲ. ಇದನ್ನು ತಮ್ಮ ಗಮನಕ್ಕೆ ತಂದು ಕೊಡುತ್ತಿದ್ದೇನೆ. ಇನ್ನೂ license ಅನ್ನು ಯಾರು ಯಾರು ಯಾವಾಗಿನಿಂದ ಕೊಟ್ಟಿದ್ದಾರೆ? ಅವರು ಕೊರೊನಾ ಅವಧಿಯಲ್ಲಿಯೂ license ಕೊಡುವುದನ್ನು ಬಿಡಲಿಲ್ಲ. ಆಗಲೂ ಅವರು 1,404 license ಗಳನ್ನು ಕೊಟ್ಟಿದ್ದಾರೆ. License ಕೊಡುವುದು ಕೊರೊನಾ ಟೈಮ್‌ನಲ್ಲಿ ಬಿಟ್ಟು, ಕಡಿಮೆ ಅವಧಿಯಲ್ಲಿ 1,404 license ಗಳನ್ನು ಕೊಟ್ಟಿದ್ದಾರೆ.

(ಮುಂದು)

**(109) 30.01.2026/7.40/ಎಂವಿ–ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಬಿ.ತಿಮ್ಮಾಪೂರ (ಮುಂದು):–**

ಆಗ ಏನು ಭ್ರಷ್ಟಾಚಾರ ನಡೆಯಿತು? ಆಗ ಏನು ಬ್ರಹ್ಮಾಂಡ ಭ್ರಷ್ಟಾಚಾರ ಆಯಿತು. ಆಗ ಎಷ್ಟೆಷ್ಟು ಕೋಟಿ ರೂಪಾಯಿ ಕಲೆಕ್ಷನ್ ಆಯಿತು. ಅವರು ಹೇಳಿದ ಪ್ರಕಾರ ಕಲೆಕ್ಷನ್ ಆಗಬೇಕಲ್ಲವೇ? ಆಗಲೂ ಸಹ ಟಿ.ವಿ. ಮತ್ತು ಪೇಪರ್‌ಗಳಲ್ಲೂ ಸಹ ಬಂದಿತ್ತು ಅಲ್ಲವೇ? ಅಂದರೆ, ಕಲೆಕ್ಷನ್ ಆಯಿತಲ್ಲ? ಅದು ಎಷ್ಟಾಗಿತ್ತು ಎಂದು ಹೇಳಬೇಕಲ್ಲವೇ? ಈಗ ಗುರುಸ್ವಾಮಿ ಹೇಳುತ್ತಿದ್ದಾರಲ್ಲ. ಅವರು ಸಹ ಲೈಸೆನ್ಸ್ ತೆಗೆದುಕೊಂಡಿದ್ದಾರೆ. ಅವರು ಯಾರಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆಂದು ಹೇಳಬೇಕಲ್ಲವೇ? ಈಗ ಲೈಸೆನ್ಸ್ ತೆಗೆದುಕೊಳ್ಳುವಂತಹವರಿಗೆ ಎಷ್ಟು ಕೊಡುತ್ತಾರೆಂದು ಹೇಳಿದರೆ, ಅದನ್ನು ಅವರು ಹೇಳಬೇಕಲ್ಲವೇ? ನಾನು ಮೊನ್ನೆಯ ದಿವಸ ಪೇಪರ್ ಮತ್ತು ಟಿ.ವಿ.ಗಳಲ್ಲಿ ನೋಡಿದ್ದೇನೆ ಹಾಗೂ ನಮ್ಮ ನಾಯಕರೆಲ್ಲರೂ ಸಹ ಪೇಪರ್‌ನಲ್ಲಿ ಮಾತನಾಡಿದ್ದಾರೆ. ಅದಕ್ಕೆ shock ಆಗಿಬಿಟ್ಟಿದೆ. ಅದಕ್ಕೆ ನಾನು ನಮ್ಮ ಇಲಾಖೆಯವರನ್ನು ಕರೆದು ಏನಾಗಿದೆ ಎಂದು ಕೇಳಿದೆ. ಒಬ್ಬರು ಶ್ರೀ ಜಗದೀಶ್

ನಾಯಕ್ ರವರು ಇಷ್ಟು ಕೊಡಬೇಕೆಂದು ಹಣದ ಬೇಡಿಕೆ ಇಟ್ಟರು. ಅದಕ್ಕೆ ಅವರು ಹೇಳಿದರು ಇದು ಇಷ್ಟು ಮಂದಿಗೆ ಮಂತ್ರಿ ಆದಿಯಾಗಿ ಕೊಡಬೇಕು ಎಂದು. ಅವರು ಆ ರೀತಿ ಏಕೆ ಹೇಳಿದರು? ಹಣ ಹೆಚ್ಚಿಗೆ ಕೊಡಬೇಕಲ್ಲ, ಅವರು ಯಾರಾದರೂ ಹೆಸರನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಆ ರೀತಿ ಹೇಳಿಕೊಳ್ಳುತ್ತಾರೆ. ಆ ಅಧಿಕಾರಿ ಯಾರು? ಇದು Administrative line. ಇದರಲ್ಲಿ ನನ್ನ ಹೆಸರು ಬರುವುದಿಲ್ಲ. ಅದು ಇನ್ನು ಕೆಳಹಂತದಲ್ಲಿಯೇ ಇದೆ. ಈಗ ಏನು ಆ land ಇದೆ, ಅದು residential land. ಅಲ್ಲಿಗೆ ಲೈಸೆನ್ಸ್ ಕೊಡುವುದಕ್ಕೆ ಬರುವುದಿಲ್ಲ. ಅಲ್ಲಿಗೆ ಹೇಗೆ ಕೊಡಬೇಕು? ಮತ್ತೆ ಏಳನೇ ದಿವಸಕ್ಕೆ ಅಂದರೆ, login ನ ದಿವಸದಿಂದ ಏನು seven days ಕೆಳಗಡೆ ಹೋಗಬೇಕೆಂದು ಇತ್ತು. Seven days ಗೆ ಕರೆಸಿದ್ದಾರೆ. ಅದನ್ನು delay ಮಾಡಿಲ್ಲ. ಯಾವುದೂ ಸಹ delay ಆಗಿಲ್ಲ. ಅವರುಗಳು ಟಿ.ವಿ.ಗಳಲ್ಲಿ ಮಾತನಾಡುವುದು ಏನು? ಶ್ರೀ ಆರ್.ಬಿ.ತಿಮ್ಮಾಪೂರ ಎಂದು ಯಾವುದೋ ಒಂದು ಆಡಿಯೋದಲ್ಲಿ ಬಂದುಬಿಟ್ಟಿತು. ಅವರು ನನ್ನನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಮಾತನಾಡುತ್ತಾರೆ. ಅವರು ದುರುಪಯೋಗಕ್ಕೆ ಮಾತನಾಡಿದರೆ, ನಾನು ರಾಜೀನಾಮೆ ಕೊಟ್ಟುಬಿಡಬೇಕಾ? ಹಾಗಾದರೆ, ಶ್ರೀ ಕೆ.ಗೋಪಾಲಯ್ಯನವರು ಐದು ಲಕ್ಷಕ್ಕೆ ಕುದುರಿಸುತ್ತಾರೆಂದು ಯಾರು ಹೇಳಿದರು ಗೊತ್ತಾ? ಅಂದರೆ, ಕೊಪ್ಪಳ ಜಿಲ್ಲೆಯ ಸಲೀನಾ ಎನ್ನುವಂತಹ ಅಧಿಕಾರಿ. ಅವರು ಕೆ.ಡಿ.ಪಿ. ಮೀಟಿಂಗ್‌ನಲ್ಲಿಯೇ ಹೇಳುತ್ತಾರೆ. ಆಗ ಅವರು ರಾಜೀನಾಮೆ ಕೊಟ್ಟಿದ್ದಾರೆಯೇ?

**ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ರಾಜೀನಾಮೆ ಕೇಳಲಿಲ್ಲ, ಅದಕ್ಕೆ ಅವರು ಕೊಡಲಿಲ್ಲ. ಅವರು ಕೇಳಬೇಕಾಗಿತ್ತು.

**ಶ್ರೀ ಆರ್.ಬಿ.ತಿಮ್ಮಾಪೂರ (ಅಬಕಾರಿ ಸಚಿವರು):–** ಮಾನ್ಯ ಸಭಾಪತಿಯವರೇ, ಶಹಬ್ಬಾಸ್, ಶಹಬ್ಬಾಸ್, ಶಹಬ್ಬಾಸ್. ಮಾತನಾಡುವುದಕ್ಕೆ ನೈತಿಕತೆಯ ಮನುಷ್ಯ ಬೇಕು. ಶಹಬ್ಬಾಸ್, ನೈತಿಕತೆ ಬೇಕು. ಕೇವಲ ನೈತಿಕತೆ ಮಾತನಾಡುವವರಿಗೆ ಶಹಬ್ಬಾಸ್.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಹೋರಾಟ ಮಾಡಬೇಕಾಗಿತ್ತು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ತಾವುಗಳು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಸ್ಪಷ್ಟೀಕರಣವಾಗಲಿಲ್ಲ. ಅವರು ಮಾಡಿದ್ದಾರೆ, ಅದಕ್ಕೆ ನಾನು ಮಾಡುತ್ತೇನೆ ಎನ್ನುವುದಾದರೆ, ಅವರು ಮಾಡಿದ್ದಾರೆ ಎನ್ನುವಂತೆ ಆಯಿತು ಅಲ್ಲವೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, **(ಗೊಂದಲ)** ನೈತಿಕತೆ ಬಗ್ಗೆ ಮಾತನಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ತಾವುಗಳು ಕುಳಿತುಕೊಳ್ಳಿ. ಏಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಕೇಳುವುದಕ್ಕೆ ತಾಕತ್ತು ಇಲ್ಲ.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ಅದು ನಮ್ಮ ಜಿಲ್ಲೆಯಲ್ಲಿ ಆಗಿರುವಂಥದ್ದು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಹೇಳಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, **(ಗೊಂದಲ)** ಆಗ ಅವರು ಸದನದ ಬಾವಿಯಲ್ಲಿ ಇದ್ದರು. ಅದನ್ನು ಕೆಳಮನೆಯಲ್ಲಿ ಕೇಳಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟಂತಹವರು ಮಾಡಿದ್ದಾರೆ. ಸರಿಯಾಗಿ ಅಲ್ಲಿ ಲಂಚ ಸಿಕ್ಕಿದೆ ಮತ್ತು ಮಾನ್ಯ ಲೋಕಾಯುಕ್ತದವರು ಎಫ್.ಐ.ಆರ್. ಹಾಕಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೆ, ತಾವು ಕುಳಿತುಕೊಳ್ಳಿ. ಶ್ರೀ ಪ್ರತಾಪ್ ಸಿಂಹ ನಾಯಕ್ ರವರು ಮಾತನಾಡಿದ್ದು ಯಾವುದೂ ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ ರವರು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಅವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಸಾಕ್ಷಿ ಆಧಾರ ಇದ್ದರೆ ನಾನು ಈ ಕ್ಷಣದಲ್ಲಿ ರಾಜೀನಾಮೆ ಕೊಡುತ್ತೇನೆ. (**ಗೊಂದಲ**) ಯಾರ್ಯಾರು ಏನೇನು ಮಾಡಿದ್ದಾರೆ ಎಂಬುದು **(ಗೊಂದಲ)** ನನ್ನ ಬಳಿ pen drive ನಲ್ಲಿ ಇದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಶ್ರೀ ಆರ್.ಬಿ.ತಿಮ್ಮಾಪೂರ ರವರು ರಾಜೀನಾಮೆ ಕೊಡಲಿ.

**(ಗೊಂದಲ)**

**ಸಭಾಪತಿಯವರು:–** ನಿಮಗೆ ಮಾನ ಮರ್ಯಾದೆ ಇದೆಯೇ? ಎಲ್ಲರೂ ಸಹ ಕುಳಿತುಕೊಳ್ಳಿ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ನಿಂತುಕೊಂಡು ಬೇಕೆ ಬೇಕು ಶ್ರೀ ಆರ್.ಬಿ.ತಿಮ್ಮಾಪೂರ ರವರ ರಾಜೀನಾಮೆ ಬೇಕು ಎಂದು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎನ್.ರವಿಕುಮಾರ್ :–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–** ನಾನು ಎದ್ದು ನಿಂತಿದ್ದರೂ ಸಹ ತಾವುಗಳು ಮಾತನಾಡುತ್ತಿದ್ದಿರಲ್ಲ.

**(ಗೊಂದಲ)**

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಶ್ರೀ ಡಿ.ಟಿ.ಶ್ರೀನಿವಾಸ್‌ರವರೆ ಕುಳಿತುಕೊಳ್ಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೆ, ನಾನು ಎದ್ದು ನಿಂತಿದ್ದೇನೆ. At least, ಪೀಠಕ್ಕೆ ಗೌರವ ಕೊಡುವುದನ್ನಾದರೂ ಕಲಿಯಿರಿ. ತಮಗೆ ಏನು ತಿಳುವಳಿಕೆ ಇಲ್ಲವೆ. ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ. ಅವರು ಉತ್ತರ ಕೊಡುವವರೆಗೆ ಯಾರೂ ಸಹ ಮಾತನಾಡಬೇಡಿ. ಆಮೇಲೆ ಯಾರು ಕೇಳಿದರೂ ಸಹ ನಾನು ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ತಾವುಗಳು ನಡು ನಡುವೆ ಏಕೆ ಮಾತನಾಡುತ್ತೀರಿ?

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಕೇವಲ ನಾನು ಮಾತ್ರ ಮಾತನಾಡುತ್ತಿಲ್ಲ. ಮಾನ್ಯ ಮಂತ್ರಿಗಳು ಸಹ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೆ, ನಾನು ಕೇಳುವವರೆಗೂ ನೀವು ಹೇಳಬೇಡಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಅವರಿಗೆ ಈ ನಿಯಮ ಬರುವುದಿಲ್ಲವೇ?

**(ಗೊಂದಲ)**

**ಸಭಾಪತಿಯವರು:–** ನಾನು ಎಲ್ಲರಿಗೂ ಸಹ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಅವರುಗಳು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಪ್ರಿಯಾಂಕ್ ಖರ್ಗೆ ಯವರೆ, ನಾನು ಎಲ್ಲಾ ಮಂತ್ರಿಗಳಿಗೂ ಸಹ ಹೇಳುತ್ತೇನೆ. ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ಅವರು ಉತ್ತರ ಕೊಟ್ಟ ನಂತರ ನೀವು ಎಷ್ಟು ಹೊತ್ತು ಸಮಯ ಕೇಳುತ್ತೀರಿ, ಅಷ್ಟು ಸಮಯವನ್ನು ನೀಡುತ್ತೇನೆ. ಆಗ ನೀವು ಮಾತನಾಡಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ disturb ಮಾಡುವುದು ಬೇಡವೆಂದು ತಿಳಿಸಿ.

**ಸಭಾಪತಿಯವರು:–** ಮಾನ್ಯ ಸಚಿವರಿಗೆ ಯಾರೂ ಸಹ disturb ಮಾಡಬೇಡಿ. ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ರಾಜಕಾರಣದಲ್ಲಿ ಈ ರೀತಿಯ ಹಗರಣಗಳು ಬರುತ್ತವೆ. ಈಗ ಹಗರಣಗಳ ಬಗ್ಗೆ ಸಾಕ್ಷಿ ಪುರಾವೆಗಳು ಇಲ್ಲದೆ, ಯಾವುದೋ ಪೇಪರ್‌ಗಳಲ್ಲಿ ಬರೆದುಬಿಡುತ್ತಾರೆ. ನನ್ನ ಬಳಿ ಈ ರೀತಿಯ ನೂರು ಆಡಿಯೋಗಳು ಇವೆ. ಅಂದರೆ, ಯಾವ್ಯಾವ ಮಂತ್ರಿಗಳು ಏನೇನು ಮಾತನಾಡಿದ್ದಾರೆ, ಯಾವಾಗ ಮಾತನಾಡಿದರು ಎಂದು. ತಾವು ಅವುಗಳನ್ನು ತೆಗೆದು ನೋಡಿ. ಬೇಕಾದರೆ ಅವರುಗಳ ಹೆಸರನ್ನು ಹೇಳಿ ಎಂದರೆ, ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಬೇರೆ ಮಂತ್ರಿಯವರ ಬಗ್ಗೆ ಬರುವುದಿಲ್ಲ. ಇವರ ಬಗ್ಗೆಯೇ ಏಕೆ ಬರುತ್ತದೆ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಿದೆ?

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ತಾವು ನಾನು ಮಾತನಾಡುವುದಕ್ಕೆ ಅವಕಾಶ ನೀಡಿದ್ದೀರಿ. ನಾನು yield ಆಗಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಾನು ಸದನವನ್ನು ಹೇಗೆ ನಡೆಸುವುದು? ಮಾನ್ಯ ಐವನ್ ಡಿ'ಸೋಜಾರವರೆ ತಾವು ಕುಳಿತುಕೊಳ್ಳಿ. ನೀವು ಏಕೆ ಎದ್ದು ಮಾತನಾಡುತ್ತೀರಿ. ತಾವು ಕುಳಿತುಕೊಳ್ಳಿ. ನಾನು ಇಲ್ಲಿ ಏತಕೆ ಇದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅವರು ಏಕೆ ಮಾತನಾಡುತ್ತಾರೆ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, just a minute.

**(ಗೊಂದಲ)**

**ಸಭಾಪತಿಯವರು:–** ತಾವುಗಳು ನನಗೆ ತಲೆ ಬಿಸಿ ಮಾಡಬೇಡಿ. ನಾನು ಬೆಳಗ್ಗೆ 11.30ರಿಂದ ಕುಳಿತುಕೊಂಡಿದ್ದೇನೆ. ನನಗೆ ತಲೆ ಬಿಸಿಯಾದರೆ ನನ್ನ ಕಡೆಯಿಂದ ಬೇರೆ ಮಾತುಗಳು ಬರುತ್ತವೆ. ತಾವುಗಳು ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಸಚಿವರು yield ಆದರೆ ಮಾತ್ರ ತಾವುಗಳು ಮಾತನಾಡಿ. ಅಲ್ಲಿಯವರೆಗೆ ಯಾರೂ ಸಹ ಮಾತನಾಡಬೇಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವರ ವಿಷಯವೆಂದರೆ ತಲೆ ಬಿಸಿಯಾಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೆ, ತಾವು ಇದೇ ರೀತಿ ಮಾತನಾಡುತ್ತೀರಾ? ತಾವು ಏನು ಬೇಕಾದರೂ ಸಹ ಮಾತನಾಡುತ್ತೀರಿ. ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದಾರೆ. ತಾವುಗಳು ಅವರ ಉತ್ತರವನ್ನು ಕೇಳಿ. ತಾವು ನನ್ನನ್ನು ರಾತ್ರಿ 12.00 ಗಂಟೆಯವರೆಗೆ ಕುಳಿತುಕೊಳ್ಳಿ ಎಂದು ಹೇಳಿದರೆ, ನಾನು ಅಲ್ಲಿಯವರೆವಿಗೂ ಸಹ ಕುಳಿತುಕೊಳ್ಳುತ್ತೇನೆ. ನೀವು ಏನು ಕೇಳುತ್ತೀರಿ, ಅದಕ್ಕೆಲ್ಲಾ ಉತ್ತರ ಕೊಡಿಸಿಯೇ ಕಳುಹಿಸುತ್ತೇನೆ. ಈಗ ತಾವುಗಳು ಕುಳಿತುಕೊಳ್ಳಿ. ಸುಮ್ಮನೆ ಎದ್ದು ಮಾತನಾಡುತ್ತಿರಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಈಗತಾನೆ ಹೇಳಿದ್ದೇನೆ. ಯಾವ್ಯಾವ ರಾಜಕಾರಣಿಗಳ ಮೇಲೆ ಆಡಿಯೋ ಮತ್ತು ಪೇಪರ್‌ನಲ್ಲಿ ಬಂದಿದೆ, ಅವರುಗಳ ಹೆಸರನ್ನು ಹೇಳಿ ಎಂದರೆ, ಹೇಳುತ್ತೇನೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವರು ಹೇಳಿಬಿಡಲಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅದನ್ನು ಕಳುಹಿಸಿಕೊಡಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ತಡವಾಗಿ ಬಂದಿದ್ದಾರೆ. ನಾನು ಈಗಾಗಲೇ ಎಲ್ಲವನ್ನು ಸಹ ಹೇಳಿದ್ದೇನೆ. ಮತ್ತೆ ನಾನು ಎಲ್ಲವನ್ನು ಸಹ repeat ಮಾಡುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ತಿಮ್ಮಾಪೂರರವರೆ, ನನ್ನ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇಂತಹ ರಾಜಕೀಯ ಪ್ರೇರಿತ ಮಾತುಗಳು, ಯಾರೋ ಒಬ್ಬರನ್ನು ತೇಜೋವಧೆ ಮಾಡತಕ್ಕಂಥದ್ದು, ಸಾಕ್ಷಿ ಆಧಾರಗಳಿಲ್ಲದೆ ಮಾತನಾಡುವುದು. ಅವರು ಹೇಗೆ Governor ಗೆ ಅನ್ಯಾಯ ಮಾಡಿದ್ದೇವೆಂದು ಹೇಳುತ್ತಾರಲ್ಲ. ನಾನೂ ಒಬ್ಬ ದಲಿತ. ನನ್ನ ಶ್ರೇಯಸ್ಸನ್ನು ಸಹಿಸಿಕೊಳ್ಳದೇ ಇರುವುದಕ್ಕೆ ಇವರೆಲ್ಲರೂ ಕುತಂತ್ರ ಮತ್ತು ದುರುದ್ದೇಶದಿಂದ ನನ್ನನ್ನು ತೇಜೋವಧೆ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ನಾನು ನೋವು ಅನುಭವಿಸಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, Governor ರವರು ಕೂಡ ದಲಿತರು.

**ಸಭಾಪತಿಯವರು:–** ಇದು ಯಾವುದೂ ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:–** ಇದು ಯಾವುದೂ ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಸಭಾಪತಿಯವರೇ, ಇದು ಏನು ದಲಿತರು, ದಲಿತರು ಎನ್ನುವುದು. ಈಗ ದಲಿತ ಎನ್ನುವುದು ಪ್ರಶ್ನೆಯೇ? ಇದರ ಅರ್ಥವೇನು?

**ಸಭಾಪತಿಯವರು:–** ಮಾನ್ಯ ಶಿವಕುಮಾರ್ ರವರೆ, ತಮಗೆ ಏನಾದರೂ ತಿಳುವಳಿಕೆ ಇದೆಯೇ? ಇದು ಮೇಲ್ಮನೆ. ತಾವು ಇವತ್ತಿನ ಪೇಪರ್ ಓದಿದ್ದೀರಾ? ನಮ್ಮ ಮಾನ ಮರ್ಯಾದೆ ತೆಗೆಯುತ್ತಿದ್ದಾರೆ. ತಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ? ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದೇನೆ. ಮಾನ್ಯ ಸಚಿವರು yield ಆದರೆ ಮಾತ್ರ ಆಗ ನೀವು ಮಾತನಾಡಿ. ಮಾನ್ಯ ಸಚಿವರು yield ಆಗದೇ ಯಾರಾದರೂ ಮಾತನಾಡಿದರೆ, ಯಾವುದೂ ಸಹ ಕಡತಕ್ಕೆ ಹೋಗಬಾರದು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ನನ್ನ ಉತ್ತರವನ್ನು ಹೇಳಿದ್ದೇನೆ. ಇವರುಗಳು ಏನಾದರೂ ಸಾಕ್ಷಿ ಆಧಾರಗಳನ್ನು ಕೊಟ್ಟರೆ, ಈ ಕ್ಷಣದಲ್ಲಿಯೇ ನಾನು ರಾಜಕಾರಣದಲ್ಲಿ ಇರುವುದಿಲ್ಲ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**(ಮುಂದು)**

(110) 30.01.2026 07.50 **LL-MD** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್.:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ವಿರುದ್ಧ ಶೇಕಡ 40 ರಷ್ಟು...

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವರು ಏತಕ್ಕೆ ಎದ್ದು ನಿಲ್ಲುತ್ತಿದ್ದಾರೆ?

**ಸಭಾಪತಿಯವರು:–** ಏನು ಮಾಡುವುದು ಹೇಳಿ?

**ಶ್ರೀ ಸಲೀಂ ಅಹಮದ್:–** ಇವರಿಗೆ common sense ಇಲ್ಲವೇ?

**ಶ್ರೀ ಆರ್.ಬಿ. ತಿಮ್ಮಾಪೂರ(ಅಬಕಾರಿ ಸಚಿವರು):–** ಮಾನ್ಯ ಸಭಾಪತಿಯವರೇ, ಇಂತಹ ವಿಚಾರಗಳು ಬಹಳ ನೋವು ತರುವಂತಹ ವಿಚಾರಗಳಾಗಿರುತ್ತವೆ. ನನ್ನ ವಿರುದ್ಧ ಮಾಡಿರುವ ಇಲ್ಲಸಲ್ಲದ ಆರೋಪಗಳು ನನಗೆ ಬೇಸರ ತರಿಸಿವೆ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಯಾವುದೇ ವರ್ಗಾವಣೆಗಳಲ್ಲಿ ಆರೋಪಗಳು ಸಹಜವಾಗಿ ಬರುತ್ತವೆ. ಆದರೆ, ವರ್ಗಾವಣೆಗಳನ್ನು counselling ಮುಖಾಂತರ ಮಾಡಿದರೆ, ಯಾವುದಾದರೂ ಭ್ರಷ್ಟಾಚಾರಗಳು ಬರುವುದಕ್ಕೆ ಸಾಧ್ಯವಿದೆಯೇ?

**ಸಭಾಪತಿಯವರು:–** ಇಲ್ಲ ಸಾಧ್ಯವಿಲ್ಲ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಈ ಹಿಂದೆ ತಾವು ಕೂಡ ಶಿಕ್ಷಣ ಸಚಿವರಾಗಿದ್ದಾಗ ಮೊದಲು ಪ್ರಾರಂಭ ಮಾಡಿರುತ್ತೀರಿ.

**ಸಭಾಪತಿಯವರು:–** ಹೌದು, ನಾನು ದೇಶದಲ್ಲಿಯೇ ಮೊದಲ ಬಾರಿಗೆ ಪ್ರಾರಂಭ ಮಾಡಿರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಅದನ್ನು ತಾವು ಯಾವ ಉದ್ದೇಶದಿಂದ ಮಾಡಿರುತ್ತೀರಿ? ಈ ರೀತಿಯಾದಂತಹ ಆರೋಪಗಳು ಬರಬಾರದೆಂದು ತಾವು counselling ಮುಖಾಂತರ ವರ್ಗಾವಣೆ ಮಾಡಿರುತ್ತೀರಿ. ಅದೇ ರೀತಿ, ಮಾನ್ಯ ಆರ್.ಬಿ. ತಿಮ್ಮಾಪೂರರವರು ಅಬಕಾರಿ ಸಚಿವರಾಗಿ ಬಂದ ನಂತರ, counselling ಮುಖಾಂತರ ವರ್ಗಾವಣೆಯನ್ನು ಮಾಡುತ್ತಿದ್ದರೆ, "ಮಾನ್ಯ ಸಚಿವರು ಅಧಿಕಾರಿಗಳ ವರ್ಗಾವಣೆಯಲ್ಲಿ ದುಡ್ಡು ತಿಂದಿದ್ದಾರೆ" ಎಂದು ಮಾತನಾಡಿದರೆ ಹೇಗೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರ ಬೀದಿ ಬೀದಿಗಳಲ್ಲಿ ಪ್ರಚಾರವಾದ ನಂತರ, **(ಗೊಂದಲ)** ಮಾನ್ಯ ಮುಖ್ಯ ಸಚೇತಕರು, "common sense ಇಲ್ಲ ನಿಮಗೆ" ಎಂದು ಶ್ರೀ ಕೇಶವ ಪ್ರಸಾದ್ ರವರಿಗೆ ಹೇಳಿದರು. ಆ common sense ಅವರು ಮೊದಲು ಇಟ್ಟುಕೊಳ್ಳಬೇಕು.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಎಷ್ಟು ಸಲ ಹೇಳಬೇಕು ಅವರಿಗೆ ಕುಳಿತುಕೊಳ್ಳಿ ಎಂದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದನ್ನು ಅವರು ಹೇಳುವ ಹಾಗಿಲ್ಲ. ಅದನ್ನು ಪೀಠ ಹೇಳುತ್ತದೆ. ಆ common sense ಅನ್ನು ಪೀಠ ಕಲಿಸಿಕೊಡುತ್ತದೆ. ಅದನ್ನು ಇವರು ಹೇಳುವುದಲ್ಲ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾನು ಕೂಡ ಪೀಠಕ್ಕೆ ಹೇಳಿರುತ್ತೇನೆ. ಅವರಿಗೆ ಹೇಳಿರುವುದಿಲ್ಲ.

**ಸಭಾಪತಿಯವರು:–** ಆಯಿತು, ಮಾನ್ಯ ಸಲೀಂ ಅಹಮದ್‌ರವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ common sense ಇಲ್ಲವೇ ಎಂದು ಕೇಳುವುದಕ್ಕೆ ಇವರು ಯಾರು?

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅವರಿಗೆ common sense ಇಲ್ಲವೇ ಎಂದು ನಾನು ತಮಗೆ ಹೇಳಿರುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಅದನ್ನು ಪೀಠಕ್ಕೆ ಹೇಳಬೇಕು. ನಂತರ, ಪೀಠ ಅದನ್ನು ಸಂಬಂಧಪಟ್ಟವರಿಗೆ ಹೇಳುತ್ತದೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾನು ಕೂಡ ಪೀಠಕ್ಕೆ ಹೇಳಿರುತ್ತೇನೆ. ಮಾನ್ಯ ಸದಸ್ಯರಿಗೆ common sense ಇದೆಯೇ ಎಂದು ನಾನು ಪೀಠಕ್ಕೆ ಹೇಳಿರುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, common sense ಇಲ್ಲ ಅವರಿಗೆ ಎಂದು ಪೀಠಕ್ಕೆ ಏತಕ್ಕೆ ಹೇಳಬೇಕು? ಇವರಿಗೆ common sense ಇದೆಯೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇಲ್ಲ ನೀವು ನೇರವಾಗಿ ಮಾನ್ಯ ಸದಸ್ಯರಿಗೆ ಹೇಳಿರುತ್ತೀರಿ. You have no rights to talk to him.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, He does not have common sense ಎಂದು ನಾನು ಈಗಲೂ ಕೂಡ ಹೇಳುತ್ತೇನೆ. ಅದಕ್ಕೆ ನಾನು ಆಗಲೇ ಪೀಠಕ್ಕೆ ಹೇಳಿರುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಪೀಠಕ್ಕೆ ಮಾತ್ರ ಹೇಳಬೇಕು. ಮಾನ್ಯ ಸದಸ್ಯರಿಗೆ ನೇರವಾಗಿ ಹೇಳುವಂತಿಲ್ಲ. ನಾನು ಈಗ ಪೀಠಕ್ಕೆ ಮಾತನಾಡುತ್ತಿದ್ದೇನೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೇಶವ ಪ್ರಸಾದ್‌ರವರಿಗೆ ಕಾಮನ್‌ಸೆನ್ಸ್ ಇಲ್ಲವೆಂದು ನಾನು ಪೀಠಕ್ಕೆ ಹೇಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲ. ಅವರು ನೇರವಾಗಿ ಮಾನ್ಯ ಕೇಶವ ಪ್ರಸಾದ್‌ರವರಿಗೆ ಹೇಳುತ್ತಾರೆ. ಇದು ಇವರ ಪದ್ಧತಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, He does not have common sense ಎಂದು ನಾನು ಈಗಲೂ ಹೇಳುತ್ತೇನೆ. Common sense ಇದೆಯೇ ಅವರಿಗೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ರೀತಿ ಮಾತನಾಡುವುದು ಅವರ ಪದ್ಧತಿ. ಹಾಗಾಗಿ, ಮೊದಲು ಅವರು common sense ಇಟ್ಟುಕೊಳ್ಳಲಿ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ರೀತಿಯಲ್ಲಿ ನಾವೆಲ್ಲರೂ ನಡೆದುಕೊಳ್ಳೋಣವೆಂದು ಈಗಾಗಲೇ ತೀರ್ಮಾನ ಮಾಡಿರುತ್ತೇವೆ. ಅದರಂತೆ, ಮಾನ್ಯ ಸಭಾಪತಿಯವರು, “ಮಾನ್ಯ ಸಚಿವರು yield ಆದರೆ ತಾವು ಮಾತನಾಡಿ” ಎಂದು ಸುಮಾರು ಹತ್ತು ಬಾರಿ ಹೇಳಿರುತ್ತೀರಿ. ಆದರೆ, ಮಾನ್ಯ ಕೇಶವ ಪ್ರಸಾದ್‌ರವರು ಮತ್ತು ಶ್ರೀ ಪ್ರತಾಪ್ ಸಿಂಹ ನಾಯಕ್ ರವರು ಮಧ್ಯದಲ್ಲಿ ಎಷ್ಟು ಬಾರಿ ಎದ್ದು ನಿಂತಿರುತ್ತಾರೆ ಎಂಬುದು ತಮಗೆ ಗೊತ್ತಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು. ಅದಕ್ಕೆ ಅವರು ಪೀಠಕ್ಕೆ ಹೇಳಲಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾನು ಕೂಡ ಪೀಠಕ್ಕೆ ಹೇಳುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಅವರು ಕೂಡ ಹೇಳಿದ್ದಾರಲ್ಲವೇ? ಎಷ್ಟು ಬಾರಿ ಹೇಳಬೇಕು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ನೇರವಾಗಿ ಮಾನ್ಯ ಕೇಶವ ಪ್ರಸಾದ್‌ರವರಿಗೆ, "ನಿಮಗೆ common sense ಇಲ್ಲವೇ?" ಎಂದು ಹೇಳಿರುತ್ತಾರೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳುವಾಗ ಇದು ಸರಿಯಲ್ಲ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸರಿಯಾಗಿ ಮಾನ್ಯ ಸದಸ್ಯರಿಗೆ ಹೇಳಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, No, no. This is not allowed. ಅದನ್ನು ಪೀಠ ಹೇಳುತ್ತದೆ. ನಾನು ಕೂಡ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಆದರೆ, ಇವರು ಯಾರು ಕೂಡ ನೇರವಾಗಿ ಮಾನ್ಯ ಸದಸ್ಯರಿಗೆ address ಮಾಡಬಾರದು.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಅವರು ಸರ್ಕಾರದ ವಿರುದ್ಧ ಅನೇಕ ಆಪಾದನೆಗಳನ್ನು ಮಾಡಿದರು. ಅದನ್ನು ಅವರು ಪುನಃ ಸುಮಾರು ಹತ್ತಾರು ಬಾರಿ ಆಪಾದನೆಗಳನ್ನು ಮಾಡಿರುತ್ತಾರೆ. ಅವೆಲ್ಲವನ್ನೂ ಕೇಳಿಕೊಂಡು ನಾವು ಸುಮ್ಮನೆ ಇರಬೇಕೇ?

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, He does not have common sense ಎಂದು ನಾನು ಈಗಲೂ ಕೂಡ ಹೇಳುತ್ತೇನೆ. He does not have common sense. It is not unparliamentary word.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ common sense ಇವರಿಗೆ ಇರಬೇಕು. ಇವರಿಗೆ ಇಷ್ಟ ಬಂದ ಹಾಗೆ ಸದನ ನಡೆಯುವುದಿಲ್ಲ. ಪೀಠದ ಇಷ್ಟದಂತೆ ಸದನ ನಡೆಯುತ್ತದೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅದನ್ನು ಇವರು ನಮಗೆ ಹೇಳಬಾರದು. ತಾವು ನಮಗೆ ಹೇಳಬಹುದು. ಹಾಗಾಗಿ, ಅವರು ಕೂಡ ಅದನ್ನು ಪೀಠಕ್ಕೆ ಹೇಳಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವರು ನೇರವಾಗಿ ಮಾನ್ಯ ಸದಸ್ಯರಿಗೆ ಬೆದರಿಕೆ ಹಾಕುವುದು ಬೇಡ. ಈ ಬೆದರಿಕೆಗಳಿಗೆ ನಾವು ಹೆದರುವುದಿಲ್ಲ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ,...

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಇವರು ಯಾರಿಗೆ ಹೆದರಿಸುತ್ತಿದ್ದಾರೆ?

**ಸಭಾಪತಿಯವರು:–** ಏನ್ರಿ ಇದು?

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, Common sense ಇಲ್ಲ ಇವರಿಗೆ. He does not have common sense.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ದುಂಡಾವರ್ತಿಗೆ ನಾವೇನು ಹೆದರುವುದಿಲ್ಲ.

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ನನ್ನ ಮಾತನ್ನು ಕೇಳಿ. ಆ ರೀತಿ ಯಾರು ಕೂಡ ಮಾತನಾಡಬಾರದು. ಇದು ಸರಿಯಲ್ಲ. ನಾವೆಲ್ಲರೂ ಸ್ನೇಹಿತರಾಗಿದ್ದು, ಯಾರು ಕೂಡ ಆ ರೀತಿ ಮಾತನಾಡಬಾರದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,..

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ನೀಡಿ. ಮಾನ್ಯ ಐವನ್ ಡಿ'ಸೋಜಾ ರವರು ದಿನಕ್ಕೆ 25 ಬಾರಿ ಎದ್ದು ನಿಲ್ಲುತ್ತಾರೆ.

**ಸಭಾಪತಿಯವರು:–** ಮಾನ್ಯ ಕಿಶೋರ್ ಕುಮಾರ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಾತನಾಡುತ್ತಿದ್ದಾರೆ. ಕನಿಷ್ಠ ಪಕ್ಷ ಅವರ ಸ್ಥಾನಕ್ಕಾದರೂ ಮೊದಲು ಬೆಲೆ ಕೊಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಸುಮಾರು ಒಂದು ವಾರ ಅಥವಾ ಹತ್ತು ದಿನಗಳಲ್ಲಿ ಪ್ರತಿ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಅಂದರೆ, ಯಾರು Merchants' Association ನ ಅಧ್ಯಕ್ಷರಿದ್ದಾರೆ, ಅವರು ನೇರವಾಗಿ ಆಪಾದನೆ ಮಾಡಿರುತ್ತಾರೆ. ಅವರು ಇಲ್ಲಿ ಮಾತ್ರವಲ್ಲದೇ, ನಾವು ನಿಮ್ಮ ಪಕ್ಷದ ಮೇಲ್ವರ್ಗದಲ್ಲಿ ಇರುವಂತಹವರಿಗೆ complaint ಅನ್ನು ಸಲ್ಲಿಸುತ್ತೇವೆಂದು ಹೇಳಿರುತ್ತಾರೆ. ಇದು ಯಾರೋ ಮಾತನಾಡಿದಂತಹ ವಿಷಯವಲ್ಲ. ಇದಕ್ಕಿಂತಲೂ ಮುಂಚೆ ಮಾನ್ಯ ಲೋಕಾಯುಕ್ತರವರು

ಇದನ್ನು raid ಮಾಡಿ, ಅಬಕಾರಿ ಉಪ ಆಯುಕ್ತರಾದ ಶ್ರೀ ಜಗದೀಶ್ ನಾಯಕ್ ಎನ್ನುವವರು ರೂ.25 ಲಕ್ಷ ನಗದು ಲಂಚದ ಹಣವನ್ನು ಸ್ವೀಕರಿಸುವಾಗ ಅವರನ್ನು red hand ಆಗಿ ಹಿಡಿದಿದ್ದಾರೆ. ಜೊತೆಗೆ, ಈ ಲಂಚದ ಹಣದಲ್ಲಿ, ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಹಣ ಹೋಗುತ್ತದೆ ಎಂಬುದರ ಬಗ್ಗೆ audio record ಇದೆ. ಇದು ಅಧಿಕಾರಿಗಳ ಹಂತದ ಹಣ ಆಯಿತು. ಅದಾದ ನಂತರ, ಈ ಲಂಚದ ಹಣದಲ್ಲಿ ಯಾರು ಯಾರಿಗೆ ಪಾಲಿದೆ ಎಂಬುದನ್ನು ಸಹ ಹೇಳಿರುತ್ತಾರೆ. ಅದರಲ್ಲಿ ಮಾನ್ಯ ಅಬಕಾರಿ ಸಚಿವರ ಹೆಸರನ್ನು ಅವರು ಹೇಳಿರಲಿಲ್ಲವೆಂದರೆ, ಇದರಲ್ಲಿ ನಮಗೇನು ಪಾತ್ರ ಇತ್ತು? ತಪ್ಪು ಮಾಡಿದಂತಹ ಅಧಿಕಾರಿಗಳನ್ನು ಹಿಡಿದುಕೊಳ್ಳಲಿ. ಆದರೆ, ಇದರಲ್ಲಿ ಮಾನ್ಯ ಸಚಿವರ ಮಗನ ಹೆಸರು  ಕೇಳಿಬಂದಿರುತ್ತದೆ. ಇವುಗಳನ್ನು ನಾವು ಕೇಳಬಾರದೇ? ಒಂದು ಸಮಯ ಅದನ್ನೆಲ್ಲಾ ಕೇಳುವುದು ಬೇಡ ಎಂದರೆ, ನಾನು ಒಂದು ಮಾತನ್ನು ಹೇಳುವುದೇನೆಂದರೆ, ಅಧಿಕಾರ ನಡೆಸಲಿಕ್ಕೆ ನಾವು ಒಂದು ಸ್ಥಾನಮಾನದಲ್ಲಿ ಕುಳಿತಾಗ, ಅದರಲ್ಲಿ ಜಾತಿ ಇಲ್ಲ. ಆದರೆ, ಅಲ್ಲಿ ಜಾತಿಯ ರಕ್ಷಣೆಯ ಪಡೆಯುವುದು ನನಗೆ ಸರಿ ಕಾಣಿಸಲಿಲ್ಲ.

**ಸಭಾಪತಿಯವರು:–** ಆ ವಿಚಾರದಲ್ಲಿ ಮಾನ್ಯ ಸಚಿವರ apprehension ಏನೆಂದು ನಾನು ಹೇಳುತ್ತೇನೆ. "ಮೊನ್ನೆಯ ದಿವಸ ಮಾನ್ಯ ರಾಜ್ಯಪಾಲರ ವಿಚಾರ ಚರ್ಚೆ ಮಾಡುವಾಗ, "ಅವರು ದಲಿತರು" ಎಂದು ಮಾನ್ಯ ಸದಸ್ಯರೊಬ್ಬರು ಮಾತನಾಡಿದರು" ಎಂದು ಮಾನ್ಯ ಸಚಿವರು ಅದನ್ನು 'ರೆಫರೆನ್ಸ್' ಆಗಿ ತೆಗೆದುಕೊಂಡಿರುತ್ತಾರಷ್ಟೇ. ಅದನ್ನು ಅವರೂ ಮಾಡಬಾರದು, ತಾವು ಕೂಡ ಮಾಡಬಾರದು. ಇಲ್ಲಿ ಜಾತಿ ತರಬಾರದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ.

**ಶ್ರೀ ಶಿವಕುಮಾರ್ ಕೆ.:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಜಾತಿಯ ರಕ್ಷಣೆ ಪಡೆಯುತ್ತಿರುವುದಿಲ್ಲ. ಆ ರೀತಿ ರಕ್ಷಣೆ ಪಡೆದರೆ ಅದು ತಪ್ಪು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಜಾತಿಯ ರಕ್ಷಣೆ ಬೇಡ.

**ಸಭಾಪತಿಯವರು:–** ಹೌದು, ಬೇಡ. ಅದನ್ನು ಮಾಡಬಾರದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎರಡನೆಯ ವಿಚಾರವೇನೆಂದರೆ, ಈಗಾಗಲೇ ಈ ವಿಚಾರದ ಬಗ್ಗೆ ಮಾತನಾಡುವಾಗ, ಹಿಂದಿನ ಅನೇಕ ಸಚಿವರುಗಳ ವಿರುದ್ಧ ಈ ರೀತಿಯ

ಆಪಾದನೆಗಳು ಬಂದಿರುತ್ತವೆ. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಆಯಾಯ ಕಾಲಘಟಕ್ಕೆ ಅದು ಯಾವ ರೀತಿ ಬರುತ್ತದೆಯೋ; ಅದು ಅಲ್ಲಿ ಶಮನವಾಗಿದೆಯೇ; ಯಾರದ್ದಾದರೂ ರಾಜೀನಾಮೆ ಆಗಿದೆಯೇ; ಅಥವಾ ಯಾರ ಮೇಲಾದರೂ ಶಿಸ್ತು ಕ್ರಮ ಆಗಿದೆಯೇ ಅದು ಬೇರೆ ವಿಚಾರ. ಅದು ಆ ಸಂದರ್ಭಕ್ಕೆ ಆಗಬೇಕು. ಒಂದು ಸಮಯ ನಿಜವಾಗಿಯೂ ತಪ್ಪು ನಡೆದಿದ್ದು, ತಪ್ಪು ಮಾಡಿದವರ ವಿರುದ್ಧ ಅಗತ್ಯ ಕ್ರಮ ಆಗಿಲ್ಲವೆಂದರೆ, ಆ ಸಮಯದಲ್ಲಿ ಯಾರು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದರು, that is their failure. Don't blame us. ಆ ವಿಚಾರವನ್ನು ಈಗ ಇಲ್ಲಿ ಏತಕ್ಕೆ ಹೇಳುತ್ತಾರೆ? ನಂತರ, ಇಷ್ಟೆಲ್ಲಾ ವಿಚಾರಗಳು ಬಂದಾಗ, ಅವರು ಏನು ಮಾಡಬೇಕಾಗಿತ್ತೆಂದರೆ,.. ಈ ಹಿಂದೆ ಶ್ರೀ ಎಸ್. ನಿಜಲಿಂಗಪ್ಪರವರು ಇದ್ದರು. ಆ ಸಮಯದಲ್ಲಿ ಶ್ರೀ ಯಶೋಧರ ದಾಸಪ್ಪನವರು ಸಹ ಇದ್ದರು. ಇವರು ಯಾರೂ ಕೂಡ ರೈಲುಗಳನ್ನು ಓಡಿಸುತ್ತಿರಲಿಲ್ಲ ಅಥವಾ ಅವರು Loco Pilot ಕೂಡ ಅಲ್ಲ. ಆದರೆ, ಆ ಸಂದರ್ಭದಲ್ಲಿ ಒಂದು ರೈಲು ಅಪಘಾತವಾದ ಕಾರಣ, “ನನ್ನ ಇಲಾಖೆಯಿಂದ ಈ ರೀತಿಯ ದುರ್ಘಟನೆ ಆಯಿತು. ಇದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ” ಎಂದು ಹೇಳಿ ಅವರು ತಮ್ಮ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿದ್ದರು. ಆ ಕಾಲಘಟ್ಟ ಈಗ ಇಲ್ಲ. ಕಳ್ಳರೆಲ್ಲಾ ಸೇರಿ ಒಬ್ಬ ಕಳ್ಳನನ್ನು ರಕ್ಷಣೆ ಮಾಡುವುದು. ಅದೇ ರೀತಿ, ಅಪರಾಧಿಗಳೆಲ್ಲರೂ ಸೇರಿ, ಇನ್ನೊಬ್ಬ ಅಪರಾಧಿಯನ್ನು ರಕ್ಷಣೆ ಮಾಡುವುದು. ಇವೆಲ್ಲವೂ ನಡೆದಿದೆ. ಭ್ರಷ್ಟಾಚಾರ ಮಾಡುವಂತಹವರೆಲ್ಲಾ ಸೇರಿ, ಒಬ್ಬ ಭ್ರಷ್ಟನನ್ನು ರಕ್ಷಣೆ ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಈ ದಿನ ಮಧ್ಯಾಹ್ನ ಕೂಡ ಹೇಳಿರುತ್ತೇನೆ. ಭ್ರಷ್ಟಾಚಾರ ನಡೆದಾಗ, ನಿಜವಾಗಿಯೂ ಅದು ನಡೆದಿದ್ದರೆ ತಪ್ಪಿತಸ್ಥರ ವಿರುದ್ಧ ನಿಜವಾಗಿಯೂ ಕ್ರಮ ಆಗಬೇಕು. ಜನಪ್ರತಿನಿಧಿಗಳಾದ ನಮ್ಮನ್ನು ಜನ 5 ವರ್ಷಕೊಮ್ಮೆ ಜನಪ್ರತಿನಿಧಿಯಾಗಿ ಆಯ್ಕೆ ಮಾಡಿ ಕಳುಹಿಸಿದರೆ ಇಲ್ಲಿಗೆ ಬರುತ್ತೇವೆ, ಇಲ್ಲವಾದರೆ ಹೋಗುತ್ತೇವೆ. ಆದರೆ, ಇದರಲ್ಲಿ ‘ಅಧಿಕಾರಿ ವರ್ಗ’ ಎಂದು ಏನಿದೆ, ಅದು ಸುಮಾರು 30 ರಿಂದ 35 ವರ್ಷ ಇರುತ್ತದೆ. ಆ ಅಧಿಕಾರಿ ವರ್ಗವಾಗಿ ಇರತಕ್ಕಂತಹವರನ್ನು ಜನಪ್ರತಿನಿಧಿಗಳಾಗಿ ಆಯ್ಕೆಯಾಗಿ ಬರುವವರು ಬಳಸಿಕೊಳ್ಳುತ್ತಾರೆ. ಅದೇ ರೀತಿ, ಅಧಿಕಾರಿಗಳು ಕೂಡ ಬಳಕೆಯಾಗುತ್ತಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಸಂದರ್ಭಗಳು ಕೂಡ ಹಾಗೆಯೇ ಹುಟ್ಟಿ ಬರುತ್ತವೆ. ಆ ಅಧಿಕಾರಿಗಳಿಂದ ಮಾಡಿಸಬಹುದಾದಂತಹ ಭ್ರಷ್ಟಾಚಾರವನ್ನು ಜನಪ್ರತಿನಿಧಿಗಳಾದ ನಾವು ಮಾಡಿಸುತ್ತೇವೆ. ಒಂದು ವೇಳೆ ಆ ಭ್ರಷ್ಟಾಚಾರ ಬೆಳಕಿಗೆ ಬಂದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಜೈಲಿಗೆ ಕಳುಹಿಸುತ್ತೇವೆ. ಇಲ್ಲವಾದರೆ, ಭ್ರಷ್ಟಾಚಾರದಿಂದ ಬಂದಂತಹ ಹಣವನ್ನು ಮನೆಗೆ ತೆಗೆದುಕೊಂಡು ಹೋಗಿ, ಭದ್ರವಾಗಿ ಇಡುತ್ತೇವೆ. ಇದೇ ಆಗುತ್ತಿರುವುದು. ಹಾಗಾಗಿ, ಈ ವಿಚಾರದಲ್ಲಿಯೂ ಸಹ ತಪ್ಪಿತಸ್ಥ ಅಧಿಕಾರಿಗಳ

ವಿರುದ್ಧ ಸರ್ಕಾರ ಕ್ರಮ ಜರುಗಿಸಬೇಕಾಗಿತ್ತು. ಆದಾಗ್ಯೂ, ಈ ವಿಚಾರದಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಏನು ಪತ್ತೆ ಹಚ್ಚಿರುವುದಿಲ್ಲ.

ಮಾನ್ಯ ಸಭಾನಾಯಕರು ಆಗಲೇ ಮಾತನಾಡುತ್ತಾ, "ಮಾನ್ಯ ಸಚಿವರು ವರ್ಗಾವಣೆಯಲ್ಲಿ ಬದಲಾವಣೆ ತರುವುದಕ್ಕೆ ಶ್ರಮ ಹಾಕಿದ್ದಾರೆ" ಎಂದು ಹೇಳಿರುತ್ತಾರೆ. ಅದರಂತೆ, ಅವರು ಹಾಕಿದ ಶ್ರಮವನ್ನು ನಾವು ಕೂಡ ಸ್ವಾಗತ ಮಾಡುತ್ತೇವೆ.  ಬದಲಾವಣೆ ಆಗಬೇಕು. ಆದರೆ, ಆ ಬದಲಾವಣೆಯಲ್ಲಿ ಭ್ರಷ್ಟಾಚಾರ ಇಲ್ಲವೇ? ಅಲ್ಲಿಯೇ ತಪ್ಪು ಆಗಿರುವುದು. ವರ್ಗಾವಣೆ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಕೂಡ ಅಬಕಾರಿ ಇಲಾಖೆಯ ಕೆಲವು ಅಧಿಕಾರಿಗಳ ಜೊತೆ ಹಲವು ಬಾರಿ ಮಾತನಾಡಿರುತ್ತೇನೆ. ಯಾವ ಅಧಿಕಾರಿಗಳು ಎಂದು ನಾನು ಅವರ ಹೆಸರನ್ನು ಇಲ್ಲಿ ಹೇಳುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, "ಇಂತಹವರಿಂದ ಒಂದು phone call ಮಾಡಿಸಿಬಿಡಿ ಸರ್" ಎಂದು ನನಗೆ ಹೇಳಿರುವಂತಹ ನಿದರ್ಶನಗಳು ಕೂಡ ಇವೆ. ಆ ವಿಚಾರ ನನಗೆ ನೇರಾನೇರ ಗೊತ್ತಿದೆ. ಈಗ ಈ ವಿಚಾರದಲ್ಲಿ ಮಾನ್ಯ ಲೋಕಾಯುಕ್ತ ಕೆಲವು ಭ್ರಷ್ಟ ಅಧಿಕಾರಿಗಳನ್ನು ಹಿಡಿದು, ನಂತರ ಅವರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಅದರಂತೆ, ಮಾನ್ಯ ನ್ಯಾಯಾಧೀಶರು ಅವರನ್ನು ಜೈಲಿಗೆ ಕಳುಹಿಸಿರುತ್ತಾರೆ. ತದನಂತರ, ಆ ಅಧಿಕಾರಿಗಳು ಜೈಲಿನಿಂದ ಹೊರಗೆ ಬಂದಿರುತ್ತಾರೆ. ಅದು ಬೇರೆ ವಿಷಯ. This is the system. ಆದರೆ, ಇದರಲ್ಲಿ ಸರ್ಕಾರದ ಕ್ರಮ ಏನು? ಆಪಾದನೆ ಬಂದಿರುವುದು ಏನು? ಆದರೆ, ಸರ್ಕಾರದ ವಿರುದ್ಧ ಬಂದಿರುವಂತಹ ಆಪಾದನೆಯನ್ನು ಎಲ್ಲರೂ ಸೇರಿಕೊಂಡು defend ಮಾಡಿಕೊಳ್ಳುವುದೇ ಆಗಿದೆ. ಏಕೆಂದರೆ, ಇಂತಹ ಭ್ರಷ್ಟಾಚಾರದಿಂದ ನನ್ನ ಸರ್ಕಾರಕ್ಕೆ ಕೆಟ್ಟ ಹೆಸರು ಬರಬಾರದು ಎಂದು ಕೆಟ್ಟವರನ್ನು ರಕ್ಷಣೆ ಮಾಡುವ ಕೆಲಸ ಆಗಬಾರದು. ಮಾನ್ಯ ಮುಖ್ಯಮಂತ್ರಿಗಳು ಇಂತಹ ವಿಷಯಗಳು ಅವರ ಗಮನಕ್ಕೆ ಬಂದಾಗ, ಅವರು ಯಾವ ರೀತಿ ನಡೆದುಕೊಳ್ಳಬೇಕು? ನಾವು ಅವರಿಗೆ ಈ ಹಿಂದಿನ ಒಂದು ಘಟನೆಯನ್ನು ಹೇಳಿದ್ದೆವು. ಅದೇನೆಂದರೆ, 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ'ದಲ್ಲಿ ರೂ.187 ಕೋಟಿಗಳ ಹಣ ಕಳುವಾಗಿದೆ ಅಥವಾ ಆ ಹಣವನ್ನು ಯಾರೋ ದುರುಪಯೋಗಪಡಿಸಿಕೊಂಡಿದ್ದಾರೆಂದು ಹೇಳಿದೆವು.

(ಮುಂದು…)

(111) 30.01.2026 ವೈಎಲ್-ಎಂಡಿ 8.00 (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-

ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ರೂ.187 ಕೋಟಿಗಳಾಗಿಲ್ಲ, ರೂ.87 ಕೋಟಿ ಎಂದು ಇದೇ ಸದನದಲ್ಲಿ ಹೇಳಿದ್ದರು. ಅಂದರೆ, ರೂ.87 ಕೋಟಿ ಹಗರಣವಾಗಿದೆ ಎಂದು ಒಪ್ಪಿಕೊಂಡ ಮೇಲೆ ಅದಕ್ಕೆ ಜರುಗಿಸಿದ ಕ್ರಮವೇನು? ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಈ ರೀತಿ defend ಮಾಡಿಕೊಳ್ಳುವಂಥದ್ದಾಗಿರಬಹುದು ಅಥವಾ ಎಲ್ಲದರಲ್ಲಿಯೂ ಆಗಿರುವ ಹಾಗೆ ನನ್ನದ್ದು ಆಗಿದೆ ಎನ್ನುವಂಥದ್ದಾಗಿರಬಹುದು, ಇದು ಸಾಧುವಾದುದಲ್ಲ. ಹಾಗಾಗಿ, ನಾನು ಹೇಳುವುದೇನೆಂದರೆ, ನಾವು ಯಾರೂ ಅದನ್ನು ಹೋಗಿ ಕಂಡುಹಿಡಿಯಲಿಲ್ಲ. ಈಗ ಇರುವಂಥ ವ್ಯವಸ್ಥೆ ಅದನ್ನು ಕಂಡು ಹಿಡಿದಿದ್ದು, ಈ ವ್ಯವಸ್ಥೆಯಲ್ಲಿ ಯಾರಿಂದ ಈ ರೀತಿ ಹಣ ವಸೂಲಿ ಮಾಡುತ್ತಿದ್ದರು, ಅವರು ಹೇಳಿದ್ದಾರೆ. ಅದಕ್ಕೆ ಪುರಾವೆಯಾಗಿ ಯಾವ ವ್ಯಕ್ತಿಯಿಂದ ತನಗೆ ಅನ್ಯಾಯವಾಗಿದೆ, ಆ ವ್ಯಕ್ತಿಯೇ ಪತ್ರಿಕೆ ಮುಂದೆ ಹೇಳಿಕೆ ನೀಡಿದ್ದಾರೆ. ಜೊತೆಗೆ ಆ ವ್ಯಕ್ತಿಯೇ ಹೋಗಿ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದಾರೆ. ಇಷ್ಟೆಲ್ಲಾ ತರುವಾಯ ಅಸೋಸಿಯೇಷನ್ ಪ್ರೆಸಿಡೆಂಟ್ ಕೂಡ ಹೇಳಿದ್ದು, ಮತ್ಯಾವ ಪುರಾವೆಗೆ ಕಾಯುತ್ತಿದ್ದಾರೆ? ಇನ್ನೇನು ಸಾಕ್ಷಿ ಕೊಡಬೇಕಾಗಿತ್ತು? ಆಪಾದನೆಗಳು ಬರುತ್ತವೆ. ಆ ಆಪಾದನೆಯನ್ನು ಸಾಬೀತುಪಡಿಸಿ ಎಂದರೆ, corruption ಗೆ ಚೀಟಿ ಕೊಡುತ್ತಾರೆಯೇ? corruption ಗೆ ಇಷ್ಟೆಂದು ಬಿಲ್ ಕೊಡುತ್ತಾರೆಯೇ? ಇದು ಅದನ್ನು ಮೀರಿ ಆಗುವಂಥದ್ದಾಗಿದೆ. ಆ ಸಂದರ್ಭದಲ್ಲಿ ಗಮನಕ್ಕೆ ಬಂದಾಗ ಅವರೇ ಅವರನ್ನು ಪರೀಕ್ಷೆಗೆ ಒಳಪಡಿಸಿಕೊಳ್ಳಬೇಕು. ಈಗಾಗಲೇ ಮಾನ್ಯ ಕೆ.ಎಸ್.ಈಶ್ವರಪ್ಪನವರ ವಿಚಾರ ಪ್ರಸ್ತಾಪವಾಗಿದಾಗ ಕಾಂಗ್ರೆಸ್ ಪಕ್ಷದವರು ಹೋರಾಟ ಮಾಡಿದ ಕಾರಣ ನಾವು ಮಾನ್ಯ ಕೆ.ಎಸ್. ಈಶ್ವರಪ್ಪನವರಿಂದ ರಾಜೀನಾಮೆ ಕೊಡಿಸಿದ್ದೆವು. ಆದಾದ ನಂತರ ಮತ್ತೆ ಅಧಿಕಾರಕ್ಕೆ ಬಂದು ಅವರ ಸ್ಥಾನವನ್ನು ಮತ್ತೆ ಪಡೆದರು.

ಅದೇ ರೀತಿ ಮಾನ್ಯ ಕೆ.ಜೆ.ಜಾರ್ಜ್‌ರವರ ಮೇಲೆಯೂ ಆಪಾದನೆ ಬಂತು. ಅದರಂತೆ ಮಾನ್ಯ ಕೆ.ಜೆ.ಜಾರ್ಜ್‌ರವರು ಸಹ ರಾಜೀನಾಮೆ ನೀಡಿ, ಮತ್ತೆ ಎರಡು ತಿಂಗಳ ನಂತರ ಅಧಿಕಾರಕ್ಕೆ ಬಂದರು. ಅದೇ ರೀತಿ ಮಾನ್ಯ ಆರ್.ಬಿ.ತಿಮ್ಮಾಪುರರವರು ಸತ್ಯವಂಥರಾಗಿದ್ದು, ಅದರಲ್ಲಿ ಭಾಗಿಯಾಗಿಲ್ಲವೆಂದರೆ ತಪಾಸಣೆ ಮಾಡಲಿ. ನಂತರ ಅವರು ನಿರಾಪರಾಧಿ ಎಂದು ಸಾಬೀತಾದರೆ ಮತ್ತೆ ಅಧಿಕಾರಕ್ಕೆ ಬರಲಿ, ನಮ್ಮ ಅಭ್ಯಂತರವೇನಿಲ್ಲ. ಆಪಾದನೆ ಬಂದಾಗ ಮತ್ತು ನೇರ ನೇರವಾಗಿ ವಿಡಿಯೋಗಳು ಬಂದಾಗ ಅಧಿಕಾರಿಗಳು ಸಿಕ್ಕಿಬಿದ್ದ ಮೇಲೆ defend

ಮಾಡಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ? ಅದಲ್ಲದೇ ನಾವೂ ಕೂಡ ನೋಡುತ್ತಿರುವ ಹಾಗೆ ಬೆಂಗಳೂರಿಗಿಂತ ಮೈಸೂರು ಸಣ್ಣಪಟ್ಟಣವೇ ಆಗಿದ್ದು, ಒಂದು ತಿಂಗಳಿಗೆ Rate Card ಇದೆ. ಅದೇ ರೀತಿ ಬೆಂಗಳೂರಿನಲ್ಲಿಯೂ ಇದೆ. ಇಡೀ ಕರ್ನಾಟಕದಲ್ಲಿಯೇ Rate Card ಇದೆ, ಅದರಲ್ಲಿ ಯಾವುದೇ ಗುಟ್ಟಿಲ್ಲ. ಅಬಕಾರಿ ಇಲಾಖೆಯಲ್ಲಿ ಗುಟ್ಟಾಗಿ ನಡೆಯುವಂಥದು ಏನೂ ಇಲ್ಲ. ಅದರ ಬಗ್ಗೆ ಅಧಿಕಾರಿಗಳೇನಿದ್ದಾರೆ, ಅವರಿಗೂ ಗೊತ್ತಿರುತ್ತದೆ. ಹಾಗೆಯೇ ಮಾನ್ಯ ಸಚಿವರಿಗೂ ಗೊತ್ತಿರುತ್ತದೆ, ನಡೆಸುವವರಿಗೂ ಗೊತ್ತಿರುತ್ತದೆ. ಒಂದು ಬಾರ್ ಅಂಡ್ ರೆಸ್ಟೋರೆಂಟ್‌ನಿಂದ ಒಂದು ತಿಂಗಳಿಗೆ ಮೂರು ರೀತಿಯಲ್ಲಿ ಪೊಲೀಸ್‌ನವರಿಗೆ ಒಂದು ಚಾರ್ಜ್, ಅಬಕಾರಿ ಇಲಾಖೆಯ ಡಿ.ಸಿ.ಗೆ ಒಂದು ಚಾರ್ಜ್ ಮತ್ತು ಯಾರು handle ಮಾಡುತ್ತಾರೆ, ಅಲ್ಲಿಯ ಲೋಕಲ್ ಆಫೀಸರ್‌ಗೆ ಒಂದು ಚಾರ್ಜ್ ಇರುತ್ತದೆ. ಈ ರೀತಿಯಾಗಿ ಒಂದು ಬಾರ್ ಅಂಡ್ ರೆಸ್ಟೋರೆಂಟ್ ಅಥವಾ ವೈನ್ ಸ್ಟೋರ್‌ನಿಂದ ರೂ.೩೦,೦೦೦ ದಿಂದ ರೂ.೫೦,೦೦೦ ವರೆಗೂ ಸಂಗ್ರಹವಾಗುತ್ತದೆ. ನಾನು ಕೂಡ ನನಗೆ ಪರಿಚಯ ಇರುವವರನ್ನು ಕರೆ ಮೂಲಕ ಅದರ ಬಗ್ಗೆ ಕೇಳಿದ್ದು, ಅವರು ಸಹ 'ಹೌದು ಸಾರ್' ಇದೆಲ್ಲವೂ ಖಾಯಂ ಆಗಿ ನಡೆಯುತ್ತದೆ ಎಂದು ಹೇಳಿದ್ದಾರೆ. ಹೊಸ ಪರವಾನಗಿ ಕೊಡುವಂಥದು ಏನಿದೆ, ಅದು ಬೇರೆ ವಿಚಾರವಾಗಿದ್ದು, ಅದು ನಮಗೆ ಬರುವುದಿಲ್ಲ. ಅಲ್ಲಿ ಉನ್ನತ ಮಟ್ಟದ ಅಧಿಕಾರಿಗಳಿದ್ದು, ಸರ್ಕಾರದ ಮಟ್ಟದಲ್ಲಿ ನಡೆಯುತ್ತದೆ. ಆದರೆ, ನಮ್ಮಲ್ಲಿ ಪ್ರತಿ ತಿಂಗಳು ಇಷ್ಟೆಂದು Rate Card ಹಣ ತಲುಪಿಸಬೇಕು. ಇಲ್ಲದಿದ್ದರೆ ನಾವು ನಡೆಸುವಂಥ ಬಿಸಿನೆಸ್ ನಡೆಯುವುದಿಲ್ಲ. ಅಷ್ಟಾದರೂ ಕೆಲವೊಮ್ಮೆ ಏನೋ ಮಿಸ್‌ಯೂಸ್ ಆಗಿದೆ ಎಂದು ಪ್ರಕರಣ ದಾಖಲಿಸುತ್ತಾರೆ ಎಂದು ಹೇಳುತ್ತಾರೆ. ಏಕೆಂದರೆ, ಯಾವುದೇ ಕೇಸ್ ಕೊಡಲಿಲ್ಲ, ಏನೂ ಮಾಡಲಿಲ್ಲವೆಂದರೆ, ಏನು ಮಾಡುತ್ತಾರೆ ಎಂದರೆ,...

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಶಾಸನ ರಚನಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಯೀಲ್ಡ್ ಆಗುವುದಾದರೆ, ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನನ್ನ ಮಾತು ಇನ್ನೇನು ಮುಗಿಸುವ ಹಂತಕ್ಕೆ ಬಂದಿದೆ. ಅದಕ್ಕಾಗಿ ಏತಕ್ಕೆ yield ಆಗುವುದು. ಹಾಗಾಗಿ ಅಲ್ಲಿ ಏನಾದರೂ ಪ್ರಕರಣ ದಾಖಲಿಸಿದರೆ, ರೂ.೨೦,೦೦೦/– ರೂ.೨೫,೦೦೦/– ದಂಡ ಭರಿಸಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ಚೆನ್ನಾಗಿ ಮಾತನಾಡುತ್ತೀರಿ ಎಂದು ಅವಕಾಶ ನೀಡಿದರೆ, ಜಾಸ್ತಿಯೇ ಮಾತನಾಡುತ್ತಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ನಾನೇನು ಜಾಸ್ತಿ ಮಾತನಾಡುವುದಿಲ್ಲ. ಬೇರೆ ಸದಸ್ಯರು ಮಾತನಾಡಲಿ. ನನ್ನ ಮಾತು end up ಆಗುತ್ತಿದೆ. ಹಾಗಾಗಿ, ಯಾರಾದರೂ ಏತಕ್ಕೆ ಪ್ರಕರಣ ದಾಖಲಿಸಿದ್ದೀರಿ ಎಂದು ಕೇಳಿದರೆ, ಏನೂ ಮಾಡೋಣ. ಒಂದು ವೇಳೆ ನಮ್ಮ ಇಲಾಖೆಯಲ್ಲಿ ಕೇಸ್ ಹಾಕಿಲ್ಲವೆಂದರೆ, ಯಾರೂ ತಪ್ಪೇ ಮಾಡಿಲ್ಲವೇ? ಎಂದು ಕೇಳಿದರೆ ಅದಕ್ಕೆ ನಾವು ಏನು ಮಾಡಬೇಕು. ಅದರ ಸಲುವಾಗಿ ಇಬ್ಬರ ಮೇಲಾದರೂ ಕೇಸ್ ಹಾಕುತ್ತಿದ್ದೇವೆ ಎನ್ನುವ ರೀತಿ ಮಾಡುತ್ತಿದ್ದಾರೆ. ಅಂದರೆ, ಈ ರೀತಿಯಾಗಿ ಪದ್ಧತಿಯಾಗಿ ಬರುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಅದರ ಜವಾಬ್ದಾರಿಯನ್ನು ಹೊತ್ತಿದ್ದು, ನಾವು ವಿನಯದಿಂದ ಕೇಳುವುದೇನೆಂದರೆ, ಇದರ ಬಗ್ಗೆ ದಯವಿಟ್ಟು ತಪಾಸಣೆ ಆಗಬೇಕಾಗಿದ್ದು, ಮಾನ್ಯ ಸಚಿವರು ರಾಜೀನಾಮೆ ಕೊಡಬೇಕು. ಇದರ ಬಗ್ಗೆ ತಪಾಸಣೆ ಮಾಡಬೇಕೆಂಬುದು ನನ್ನ ಒತ್ತಾಯ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿಲ್ಲ. ಹಾಗಾಗಿ ನನಗೆ ಐದು ನಿಮಿಷ ಮಾತನಾಡಲು ಅವಕಾಶ ನೀಡಿ.

**ಸಭಾಪತಿಯವರು:–** ಆಗುವುದಿಲ್ಲ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಸಚಿವರು ಉತ್ತರ ನೀಡಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರು ಸಹ ಒಂದು ನಿಮಿಷವಾದರೂ ಮಾತನಾಡಲು ಅವಕಾಶ ನೀಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಸಚಿವರಿಗೆ ಮಾತನಾಡಲು ಅವಕಾಶ ನೀಡಿದ್ದು, ಅವರು ಮಾತನಾಡಲಿ. ಆದರೆ, ವಿರೋಧ ಪಕ್ಷದವರು ಕೇಳುವುದೇ ಇಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸದರಿ ವಿಚಾರದ ಕುರಿತು ಮಾತನಾಡಲು ಚೀಟಿಯಲ್ಲಿ ನನ್ನ ಹೆಸರು ಸಹ ಇದೆ. ನಾನೂ ಮಾತನಾಡಿಯೇ ಇಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವೇ ಈಗಾಗಲೇ ಯಾರೂ ಬೇಕಾದರೂ ಮಾತನಾಡಿ ಎಂದು ಹೇಳಿದ್ದೀರಿ.

**ಸಭಾಪತಿಯವರು:-** ನನ್ನ ಹತ್ತಿರ ಇರುವ ಚೀಟಿಯಲ್ಲಿ 13 ಮಂದಿಯ ಹೆಸರನ್ನು ಉಲ್ಲೇಖಿಸಲಾಗಿದ್ದು, ಮಾನ್ಯ ಎನ್.ರವಿಕುಮಾರ್‌ರವರ ಹೆಸರು ಈ ಚೀಟಿಯಲ್ಲಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಹೆಸರು ಸಹ ಚೀಟಿಯಲ್ಲಿ ಇದೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಮ್ಮ ಹೆಸರು ಇರುವುದಿಲ್ಲ. ಬೇಕಾದರೆ ಚೀಟಿಯನ್ನು ಕೊಡುತ್ತೇನೆ ನೀವೇ ನೋಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಇರುವ ಚೀಟಿಯ ಪ್ರಕಾರ ನನ್ನ ಹೆಸರು ಇದೆ. ನಾನೇ ಕೊಡುತ್ತೇನೆ ನೋಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಸಚಿವರು ಮಾತನಾಡಲಿ, ಆಮೇಲೆ ತಮಗೆ ಮಾತನಾಡಲು ಅವಕಾಶ ನೀಡುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರು ಮಾತನಾಡಲಿ. ಆಮೇಲೆ ಒಟ್ಟಿಗೆ ನಾನು ಉತ್ತರವನ್ನು ನೀಡುತ್ತೇನೆ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಮಾನ್ಯ ಎನ್. ರವಿಕುಮಾರ್‌ರವರು ನಿಲುವಳಿ ಸೂಚನೆ ಮೇರೆಗೆ 40 ನಿಮಿಷ ಮಾತನಾಡಿದ್ದಾರೆ. ಹಾಗಾಗಿ, ಇದು ನಿಯಮ 330 ರಡಿ ಇರುವುದರಿಂದ ಮತ್ತೆ ಅವರಿಗೆ ಮಾತನಾಡಲು ಅವಕಾಶ ನೀಡಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ರಮೇಶ್ ಬಾಬುರವರೇ, ಈ ಸದನದಲ್ಲಿ ಎಲ್ಲವೂ ನಿಯಮದ ಪ್ರಕಾರವೇ ನಡೆದರೆ ಬಹಳ ದೊಡ್ಡದು ಎಂದು ಹೇಳಬೇಕಾಗುತ್ತದೆ. ನೀವು ಯಾರೂ ನಿಯಮದ ಪ್ರಕಾರ ನಡೆದುಕೊಂಡಿಲ್ಲ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ನಿಯಮ ೩೩೦ ರಡಿ ನಮಗೂ ಮಾತನಾಡಲು ಅವಕಾಶ ಸಿಗಲಿ ಎನ್ನುವುದಷ್ಟೇ ನಮ್ಮ ಆಸೆ.

**ಸಭಾಪತಿಯವರು:–** ಆಗಲಿ. ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಯಾರನ್ನೂ ಸಹ ನಾನು hurt ಮಾಡುವುದಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅಬಕಾರಿ ಸಚಿವರು ಏತಕ್ಕಾಗಿ ರಾಜೀನಾಮೆ ಕೊಡಲೇಬೇಕೆಂದು ಆಗ್ರಹಪಡಿಸುತ್ತೇವೆ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ನಿನ್ನೆ ಸದರಿ ವಿಚಾರವಾಗಿ ಸಹ 15 ನಿಮಿಷ ಮಾತನಾಡಿದ್ದೀರಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಹೌದು. ಆದರೆ, ಮಾನ್ಯ ಸಚಿವರು ಸದನದಲ್ಲಿ ಇರುವುದರಿಂದ ಸ್ವಲ್ಪ ಮಾತನಾಡಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಇರುತ್ತದೆ. ಆದರೆ, ತಾವು ನಿನ್ನೆ ಸಹ ಮಾತನಾಡಿದ್ದು, ಮತ್ತೆ ಈಗಲೂ ಮಾತನಾಡುತ್ತಿದ್ದೀರಿ. ಏನು ಮಾಡುತ್ತೀರಿ ಎಂಬುದನ್ನು ಸ್ವಲ್ಪ ನೀವೇ ಯೋಚನೆ ಮಾಡಿ ನೋಡಿ.

**ಶ್ರೀ ಆರ್.ಬಿ.ತಿಮ್ಮಾಪುರ (ಅಬಕಾರಿ ಸಚಿವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಅವರ ಮಾತನ್ನು ಕೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಅನೇಕ ಪತ್ರಿಕೆಗಳು, ಮಾಧ್ಯಮದಲ್ಲಿ ವರದಿಯಾಗಿದೆ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ನಿನ್ನೆ ಸಹ ಇದೆ ವಿಚಾರವಾಗಿ ಮಾತನಾಡಿದ್ದೀರಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಲಂಚ ಪಡೆಯುವಾಗ audio record ಮಾಡಿದ್ದು, Audio record ನಲ್ಲಿ ಮಾನ್ಯ ಸಚಿವರ ಹೆಸರು ಉಲ್ಲೇಖವಾಗಿದೆ. ಏನೆಂದು ಉಲ್ಲೇಖ ಮಾಡಿದ್ದಾರೆ ಎಂಬುದರ ಬಗ್ಗೆ ಅಧಿಕಾರಿಗಳು ಹೇಳಿರುವುದೇನೆಂದರೆ, ದೂರು ಬಳಿಕ ದೃಶ್ಯ ಮಾಧ್ಯಮದ ಜೊತೆ ಮಾತನಾಡಿದ ದೂರುದಾರ trap ಆದ್ದಾಗ ಮೂರು ಮಂದಿ arrest ಆಗಿದ್ದು, ಅಬಕಾರಿ ಇಲಾಖೆಯ ಡಿ.ಸಿ.ಯವರೇ ಮಾನ್ಯ ಸಚಿವರಿಗೆ ಎಷ್ಟು ಕೊಡಬೇಕೆಂದು ಪ್ರಸ್ತಾಪಿಸಿದರು. ಈ ಬಗ್ಗೆ audio record ದಾಖಲೆಗಳನ್ನು ಲೋಕಾಯುಕ್ತ ಎಸ್.ಪಿ. ರವರಿಗೆ ಕೊಟ್ಟಿದ್ದೇನೆ. ಅಬಕಾರಿ ಡಿ.ಸಿ. ರವರೇ ಮಾನ್ಯ ಸಚಿವರಿಗೆ ಮೆಜರ್ ಅಮೌಂಟ್ ಕೊಡಬೇಕೆಂದು ಓಪನ್ ಆಗಿ ಮಾತನಾಡಿದ್ದು, ಈ ಬಗ್ಗೆ ನನ್ನ ಬಳಿ ಎಲ್ಲಾ ದಾಖಲೆಗಳಿವೆ. ನಾನು ಸರ್ಕಾರಕ್ಕೆ ಕಟ್ಟಬೇಕಾದ ಶುಲ್ಕವನ್ನು ಕಟ್ಟಿದ್ದಾಗ್ಯೂ ಲಂಚಕ್ಕೆ ಬೇಡಿಕೆಯನ್ನಿಟ್ಟು ಲೈಸೆನ್ಸ್ ಕೊಟ್ಟಿರಲ್ಲ. Trap ಆಗಿರುವ 5 ನಿಮಿಷಕ್ಕೂ ಮುಂಚೆ ಮಾತನಾಡಿರುವ ಆಡಿಯೋ ಸಮೇತ ದೂರು ಕೊಟ್ಟಿದ್ದು, ಮಾನ್ಯ ಸಚಿವರ ಪಾತ್ರದ ಬಗ್ಗೆ ತನಿಖೆಯಾಗಬೇಕೆಂದು ದೂರುದಾರರಾದ ಶ್ರೀ ಲಕ್ಷ್ಮೀನಾರಾಯಣ್ ಎಂಬುವವರು ಆಗ್ರಹಿಸಿದ್ದಾರೆ. ಅದರಂತೆ ಸರ್ಕಾರವು ಸದರಿ ಸಚಿವರ ರಾಜೀನಾಮೆ ಪಡೆದು, ಪ್ರಕರಣವನ್ನು ತನಿಖೆಗೆ ಒಳಪಡಿಸಬೇಕೆಂದು ಆಗ್ರಹಪಡಿಸಿದ್ದಾರೆ.

ಮುಂದುವರೆದು, ಮತ್ತೊಂದು ಪ್ರಕರಣದ ಬಗ್ಗೆ ಹೇಳುವುದೇನೆಂದರೆ, ಮದ್ಯದ ಅಂಗಡಿಗಳಿಂದ monthly money ಹೆಸರಿನಲ್ಲಿ ನಡೆಯುತ್ತಿರುವ ಬಲವಂತದ ವಸೂಲಿ ದಂಧೆಯಲ್ಲಿ ಬರೋಬರಿ ರೂ.2,500 ಕೋಟಿ ಬೃಹತ್ ಹಗರಣ ಎಂಬ ಆರೋಪಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಸದರಿ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ಭ್ರಷ್ಟಚಾರದ ಹೊಣೆ ಹೊತ್ತು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ರಾಜೀನಾಮೆ ತೆಗೆದುಕೊಳ್ಳಬೇಕೆಂದು ಆಗ್ರಹಿಸಿ, ರಾಜ್ಯಪಾಲರಿಗೆ, ಮಾನ್ಯ ಮುಖ್ಯಮಂತ್ರಿಯವರಿಗೆ, ಲೋಕಾಯುಕ್ತಕ್ಕೆ ಮನವಿ ಕೊಟ್ಟಿದ್ದಾರೆ. ಒಂದೊಂದು ಪೋಲೀಸ್ ಠಾಣೆಯವರಿಗೂ ಎಲ್ಲಾ Bar and Restaurant, ಎಲ್ಲಾ Wine Shops ಗಳವರು ಪ್ರತಿ ತಿಂಗಳು ಹಣ ಭರಿಸಬೇಕು. ಉದಾಹರಣೆಗೆ ಮೈಸೂರಿನ ವಿಚಾರವಾಗಿ ಹೇಳುವುದಾದರೆ, ಮೈಸೂರಿನಲ್ಲಿರತಕ್ಕಂಥ 400 ಅಂಗಡಿಗಳು ಪ್ರತಿ ತಿಂಗಳು ರೂ.11,000/- ಹಣ ಭರಿಸಬೇಕು. ಇದಕ್ಕೆ ಅವರು proof ಕೇಳಿದರೆ, ನಾನು ಶೇ.100 ಕ್ಕೆ 100 ರಷ್ಟು proof ನ್ನು ಸಲ್ಲಿಸುತ್ತೇನೆ.

(ಮುಂದು)

**(112) 30.01.2026/8.10/ ಎಸ್‌ಕೆ-ಎಕೆ** **ಸಭಾಪತಿಯವರ ಉಪಸ್ಥಿತಿ**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ನೀವು proof ಕೊಡಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ನಾನು proof ಕೊಡುತ್ತೇನೆ. ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಪತ್ರಿಕೆಗಳಲ್ಲಿ ಬಂದಿರುವಂತಹದ್ದು. ಇದು ಯಾವುದೂ ನನ್ನ ಸೃಷ್ಟಿಯಲ್ಲವೇ ಅಲ್ಲ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಅವರು ಯಾವ ರೀತಿ proof ಕೊಡುತ್ತಾರೆ ಎಂಬುದನ್ನು ಹೇಳಲಿ. ಅದು record ಆಗಲಿ. ಪತ್ರಿಕೆಯಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರಿಗೆ ಗೊತ್ತಿದ್ದ ಮೇಲೆ ಇಲ್ಲಿ ತಂದು ಇಡಬಹುದಾಗಿತ್ತಲ್ಲವೇ. ಇಲ್ಲಿ ತಂದು ಇಟ್ಟು ಬಿಟ್ಟರೆ ಮುಗಿತಲ್ಲ. ಅವರೇ....

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ನಾನು ಹೇಳುತ್ತೇನೆ.

**ಶ್ರೀ ಎನ್. ಎಸ್. ಬೋಸರಾಜು:-** ನೀವು ಯಾವ ತರಹ proof ಕೊಡುತ್ತೀರಾ ಹೇಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು audio record ತಂದಿರುವಂತಹದ್ದು. ಲೋಕಾಯುಕ್ತ ಆಸ್ತಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಏನು audio record? ನೀವು ಮಾಡಿರುವಂತಹದ್ದನ್ನು ನಾವು ಆಪಾದನೆ ಮಾಡುತ್ತೇವೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾನಾಯಕರಿಗೆ ಸ್ವಲ್ಪ ತಾಳ್ಮೆ ಇರಲಿ. ತಾವು ಮಾತನಾಡುವಾಗ, ನಾವು ಸುಮ್ಮನೆ ಕುಳಿತುಕೊಂಡು ಕೇಳಿಸಿಕೊಂಡಿದ್ದೇವೆ. ಪ್ರಿಯಾಂಕ್ ಖರ್ಗೆಯವರು ಮಾತನಾಡಬೇಕಾದರೂ ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ನಾವು ಏನು ಮಾತನಾಡಿಲ್ಲ. ನೀವು proof ಕೊಡುತ್ತೇನೆ ಎಂದು ಹೇಳಿದ್ದೀರಾ. ಅದನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ. He is ready to resign now. ನೀವು ಎಲ್ಲ proof ಕೊಟ್ಟರೆ, ಮಾನ್ಯ ಸಚಿವರು ರಾಜೀನಾಮೆ ಕೊಡುವುದಕ್ಕೆ ತಯಾರಿದ್ದಾರೆ. ಪೇಪರ ಅಲ್ಲ, proof ಕೊಡಿ.

**ಶ್ರೀ ಎನ್. ರವಿಕುಮಾರ್:–** ನಿಮಗೆ audio ಗಿಂತ proof ಬೇಕಾ? **(ಗೊಂದಲ)** 25 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರಲ್ಲ.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು:–** ನಿಮಗೆ ತಾಕತ್ತಿದ್ದರೆ, proof ಕೊಡಿ. …..

**ಶ್ರೀ ಆರ್.ಬಿ. ತಿಮ್ಮಾಪುರ್ (ಅಬಕಾರಿ ಸಚಿವರು):–** ಯಾವುದೇ ಆಧಾರಗಳಿಲ್ಲದೇ…

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ರವಿಕುಮಾರ್‌ರವರೇ, ನೀವು ಪೇಪರ್ ಕೊಡುವುದಲ್ಲ. ಸಾಕ್ಷಿ ಕೊಡಿ. ನಾನು proof ಕೊಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಎನ್. ರವಿಕುಮಾರ್:–** ಈ 25 ಲಕ್ಷ ರೂಪಾಯಿಗಳು ತೆಗೆದುಕೊಂಡಿದ್ದರಲ್ಲ...

**ಶ್ರೀ ಪ್ರಿಯಾಂಕ್ ಖರ್ಗೆ:–** Proof ಕೊಡಿ ಎಂದು ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):– (ಗೊಂದಲ)** ಇವರು ಕಾಗದ ಪತ್ರಗಳನ್ನು ಇಟ್ಟುಕೊಂಡು ರಾಜಕೀಯ ಮಾಡುತ್ತಾರೆಯೆ? .......ಇವರು ಬರೀ ಸುಳ್ಳು ಹೇಳುವುದಕ್ಕೆ ಬಂದಿರುವುದು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಎರಡು ತಾಸು ಆಯಿತು. ಭವಿಷ್ಯತ್ ಕಾಲ, ಭೂತ ಕಾಲ, ವರ್ತಮಾನ ಕಾಲದಲ್ಲಿ ಹೇಳಿಕೊಳ್ಳುತ್ತಾ ಹೋದರೆ, ಏನೆಂದು ಕೇಳಬೇಕು? ಅವರು ಉತ್ತರ ಕೊಟ್ಟಿದ್ದನ್ನು ತಾಳ್ಮೆಯಿಂದ ಕೇಳಲಿ. ಅವರು proof ಇದ್ದರೆ ಕೊಡಲಿ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಅದನ್ನು ಬಿಟ್ಟು ಹರಿಕಥೆ ಹೇಳುತ್ತಾ ಹೋದರೆ ಹೇಗೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಬೆಂಕಿ ಇಲ್ಲದೇ ಹೊಗೆ ಬರುವುದಿಲ್ಲ. ಬಹಳ ಇದನ್ನು ಮಾಡುವುದಕ್ಕೆ ಹೋಗಬೇಡಿ. ಬೆಂಕಿ ಇಲ್ಲದೇ ಹೊಗೆ ಬರುವುದಿಲ್ಲ. ನಿಮ್ಮ ಸರ್ಕಾರ ಏನೂ ಸತ್ಯವಲ್ಲ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಗೋಪಾಲಯ್ಯನವರು ಮಾಡಿದ್ದರು ಎಂದು ಅರ್ಥ. ರೇಣುಕಾಚಾರ್ಯ ಮಾಡಿದ್ದರು ಎಂದು ಅರ್ಥ. .....

**ಶ್ರೀ ಎನ್. ರವಿಕುಮಾರ್:–** ಈ 25 ಲಕ್ಷ ರೂಪಾಯಿಗಳನ್ನು ಕೊಡಬೇಕಾದರೆ red-hand ಆಗಿ ಹಿಡಿದಿದ್ದಾರಲ್ಲ. Is it not a proof?

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ತಾವು ಅದನ್ನೇ ಹೇಳುತ್ತೀರಾ?

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ 25 ಲಕ್ಷ ರೂಪಾಯಿಗಳನ್ನು ಕೊಡಬೇಕಾದರೆ, ಇದು red-hand ಅಲ್ಲವೇ?

**ಶ್ರೀ ಪ್ರಿಯಾಂಕ್ ಖರ್ಗೆ:–** ಇದನ್ನು ಯಾರಿಗೆ ಕೊಟ್ಟಿದ್ದಾರೆ?

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಂತ್ರಿಗೆ ಕೊಟ್ಟಿದ್ದರಾ?

**ಶ್ರೀ ಪ್ರಿಯಾಂಕ್ ಖರ್ಗೆ:–** ಸಿ.ಎಂ.ಗೆ ಕೊಟ್ಟಿದ್ದರಾ?

**ಶ್ರೀ ಎನ್. ರವಿಕುಮಾರ್:–** ಮಂತ್ರಿ ಹೆಸರು ಹೇಳಿ ಕೊಟ್ಟಿದ್ದಾರೆ. Is it not a proof?

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಚಿವರು ಅದಕ್ಕೆ ಸ್ಪಷ್ಟತೆಯನ್ನು ಕೊಟ್ಟಿದ್ದಾರೆ. ಇದು ಏನಿದು? ಅಂದರೆ ನಾಳೆ ಯಾರಾದರೂ ಬಂದು ಎಂ.ಎಲ್.ಸಿ. ನಿಮ್ಮ ಅನುದಾನಕ್ಕೆ ನಾವು ದುಡ್ಡು ಕೊಡಬೇಕೆಂದರೆ ನೀವು ರಕ್ಷಣೆ ಕೊಡುತ್ತೀರಾ…..

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್:–** ನೀವು proof ತನ್ನಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ನೀವು ಹೇಳಿದಂತೆ… …*(Interruption)*… the Cabinet is… …*(Interruption)*… on the Chief Minister, not on the opposition and definitely not you.

**ಶ್ರೀ ಕೇಶವ ಪ್ರಸಾದ್ ಎಸ್:–** ಇದು ಸರ್ಕಾರಕ್ಕೆ ಅವಮಾನ. ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಟಿ.ವಿ.ಯಲ್ಲಿ ಬಂದಿದೆ.

**ಶ್ರೀ ಪ್ರಿಯಾಂಕ್ ಖರ್ಗೆ:–** ನೀವು proof ಕೊಡುತ್ತೇನೆಂದವರು ಪೇಪರ್ ಓದುತ್ತಿದ್ದಾರೆ. ….

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಪ್ರಿಯಾಂಕ್ ಖರ್ಗೆಯವರೇ, ನೀವು ಎಲ್ಲಾ ಖಾತೆಗಳಿಗೂ ಸಚಿವರಾ?

**ಶ್ರೀ ಪ್ರಿಯಾಂಕ್ ಖರ್ಗೆ–** ನೀವು ಮಾತನಾಡಿದರೆ ಮೇಧಾವಿ.....What's your problem? I am responsible on the floor. I have every right to talk and defend my government. It's my government. I am defending it.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೀವು ಯಾವ proof ಇಟ್ಟುಕೊಂಡು ಹೇಳಿದಿರಿ?..... 40 ಪರ್ಸೆಂಟ್ ಸರ್ಕಾರ ಎಂದು ಅಂಟಿಸಿದಿರಲ್ಲ, ಯಾವು proof ಇಟ್ಟುಕೊಂಡು ಅಂಟಿಸಿದಿರಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ನೀವು proof ಕೊಡಿ.

**ಶ್ರೀ ಎನ್. ರವಿಕುಮಾರ್:–** ನೋಡಿ ನೈತಿಕತೆಯಿಂದ ಮಾತನಾಡಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ನಾನು P.S.I ಹಗರಣ proof ಸಮೇತ ಇಟ್ಟುಕೊಂಡು ಕೊಟ್ಟಿದ್ದೇನೆ.

**(ಗೊಂದಲ)**

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** 40 ಪರ್ಸೆಂಟ್ ಸರ್ಕಾರ ಎಂದು ಯಾವ proof ಇಟ್ಟುಕೊಂಡು ಅಂಟಿಸಿದಿರಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಒಬ್ಬ IPS Officer arrest ಆಗಿದ್ದು ನಿಮಗೆ ನೆನಪಿದೆಯಾ.

**ಶ್ರೀ ಶಿವರಾಜ ಎಸ್. ತಂಗಡಗಿ:–** ಇದಕ್ಕಿಂತ ಹೆಚ್ಚಿಗೆ ಏನು ಹೇಳುವುದು?

**ಶ್ರೀ ಕೆ.ಎಸ್. ನವೀನ್:–** ...ನೀವು ಯಾವ proof ಇಟ್ಟುಕೊಂಡು ಹೇಳುತ್ತೀರಿ. ಅವೋತ್ತು proof ಕೊಡಿ ಎಂದು ಕೇಳಬಹುದಾಗಿತ್ತು.

**Sri PRIYANK KHARGE:** At least ಸರ್ಕಾರ ಇತ್ತು. ಅದನ್ನು ನೆನಪಿಟ್ಟುಕೊಳ್ಳಿ. ......

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ತಾವು ಕುಳಿತುಕೊಳ್ಳಿ.

ಶ್ರೀ ಎನ್. ರವಿಕುಮಾರ್:– ಮಾನ್ಯ ಪ್ರಿಯಾಂಕ್ ಖರ್ಗೆಯವರು ಎಲ್ಲಾ ಖಾತೆಗಳಿಗೂ ಸಚಿವರಾ?

**ಶ್ರೀ ಕೆ.ಎಸ್. ನವೀನ್:–** …..**(ಗೊಂದಲ)** …. ಯಾವುದು proof ಇಲ್ಲ. ….

**Sri PRIYANK KHARGE:–** P.S.I ಹಗರಣ prove ಆಗಿಲ್ಲವೇ? ಚಾಮರಾಜನಗರದಲ್ಲಿ oxygen ಕಳವು ಆಗಿದ್ದು prove ಆಗಿಲ್ಲವೇ. Corona ಸಮಯದಲ್ಲಿ ಹಣ ಮಾಡಿವುದು prove ಆಗಿಲ್ಲವೇ? ನಿಮಗೆ ನಾಚಿಕೆ ಆಗಬೇಕು. ಎಂತಂಥವರನ್ನು ಮಾರ್ಯಾದಸ್ಥರನ್ನು ಇಟ್ಟುಕೊಂಡು, ಮಾಜಿ ಸಿ.ಎಂ. ಮಾಡಿದ್ದೀರಾ. ಮಾನ್ಯ ಯಡಿಯೂರಪ್ಪನವರಿಗೆ ಏತಕ್ಕೆ ರಾಜೀನಾಮೆ ಕೊಡಿಸಿದಿರಿ ಹೇಳಿ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಅವರು ಕಣ್ಣಿರು ಹಾಕಿ ರಾಜೀನಾಮೆ ಏತಕ್ಕೆ ಕೊಡಿಸಿದಿರಿ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಪ್ರಿಯಾಂಕ್ ಖರ್ಗೆಯವರು ಸರ್ವ ಖಾತೆಗೆ ಸಚಿವರಾ?

**ಶ್ರೀ ಕೆ.ಎಸ್. ನವೀನ್:– ……**ಇಲ್ಲದೇ ಇರುವಂತಹದ್ದನ್ನು ಸೃಷ್ಟಿ ಮಾಡಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಪ್ರಿಯಾಂಕ್ ಖರ್ಗೆ:–** ನಾವು P.S.I ಹಗರಣ ಅನ್ನು ಬಯಲು ಮಾಡಿದ ಮೇಲೆ ನಿಮ್ಮ ಸರ್ಕಾರ arrest ಮಾಡಿದೆ. ಅದು ನೆನಪಿರಲಿ. Re–exam ಮಾಡಿದ್ದು ನಾವು. ನಾವು ನಿಮಗೆ proof ತಂದು ಕೊಟ್ಟಿರುವುದು ನಿಮಗೆ ನೆನಪಿರಲಿ.

**ಶ್ರೀ ಎನ್. ರವಿಕುಮಾರ್:–** ಇಡೀ ದೇಶದಲ್ಲಿ number one corrupt government ನಿಮ್ಮದು. ಇದು ನಿಮಗೆ ನೆನಪಿರಲಿ.

**(ಗೊಂದಲ)**

**ಸಭಾಪತಿಯವರು:–** ಯಾರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:–** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ ಕುಳಿತುಕೊಳ್ಳಿ. ಮಾನ್ಯ ಸಚಿವರೇ ಉತ್ತರ ಕೊಡಿ.

**ಶ್ರೀ ಎನ್. ಎಸ್. ಬೋಸರಾಜು:–** ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ proof ಕೊಡುತ್ತೇನೆ ಎಂದು ಹೇಳಿದರು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎನ್. ಎಸ್. ಬೋಸರಾಜು:–** ಅವರು proof ಕೊಡಲಿ. ನಾವು challenge ಮಾಡುತ್ತೇವೆ. Proof ಕೊಡುತ್ತಾರಂತೆ proof.

**ಶ್ರೀ ಎನ್. ರವಿಕುಮಾರ್:–** ಇದೆ proof ರೀ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನ ಮಾತನ್ನು ಮುಗಿಸಿಲ್ಲ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡಿದ್ದು ಸಾಕು. ಸಮಯ ಮುಗಿಯಿತು. ಮಾನ್ಯ ಆರ್. ಬಿ. ತಿಮ್ಮಾಪುರರವರೇ ಉತ್ತರ ಹೇಳಿ. ಯಾರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿ ಮಾನ್ಯ ಸಚಿವರನ್ನು ಹೊರತು ಪಡಿಸಿ, ಇನ್ನುಳಿದವರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್. ಬಿ. ತಿಮ್ಮಾಪುರರವರು ಉತ್ತರ ಕೊಟ್ಟ ಮೇಲೆ….

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರ ಹೇಳಿ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಭಾರತೀಯ ಜನತಾ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಬಾವಿಗೆ ಬಂದ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಇವರದೊಂದು ಗುಂಡಾಗಿರಿ. ಇದು ದಬ್ಬಾಳಿಕೆ. ಮಾನ್ಯ ಸಭಾಪತಿಯವರೇ, ಇವರನ್ನು ಆಚೆಗೆ ಹಾಕಿ.

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ನಿಮಗೆ ಏನಾದರೂ ಮಾನ ಮಾರ್ಯಾದೆ ಇದೆಯಾ. ಇದನ್ನು ಧರ್ಮಶಾಲೆ ಮಾಡಿದ್ದೀರಾ? ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಸದನದ ಮಾರ್ಯಾದೆ ಕಳೆದಿರಿ. ಎಲ್ಲರೂ ಪೇಪರ್ ಓದಿರಿ. ಇಲ್ಲಿ ಕುಳಿತುಕೊಳ್ಳುವುದಕ್ಕೆ ನಮಗೆ ನಾಚಿಕೆ ಆಗುತ್ತದೆ. ಇದು ಏನು ಧರ್ಮಶಾಲೆನಾ. ನೀವೆಲ್ಲರೂ ಕುಳಿತುಕೊಳ್ಳುತ್ತೀರಾ ಇಲ್ಲವೋ ಹೇಳಿ. ಸದನದ ಬಾವಿಯಲ್ಲಿ ಯಾರೂ ಮಾತನಾಡುವಹಾಗಿಲ್ಲ. ಎಲ್ಲರೂ ಸದನದ ಬಾವಿಯಿಂದ ಹೊರಗಡೆ ನಡೆದು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ನಿಮಗೆ ಸ್ವಲ್ಪವಾದರೂ ಮಾನ ಮಾರ್ಯಾದೆ ಬೇಕಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಒಂದು ನಿಮಿಷ ಹೇಳುತ್ತೇನೆ. ಇದಕ್ಕೆ ಏನಾದರೂ ಒಂದು ರೀತಿ ನೀತಿ ಬೇಕಲ್ಲ. ನೀವು ಸ್ವಲ್ಪ ಅವರಿಗೆ ಹೇಳಿ. ನೀವು honest ಆಗಿ ಹೇಳಿ.

**(ಮುಂದು)**

(113) 30.01.2026 8.20 ಟಿಸಿಹೆಚ್–ಎಕೆ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಬಿ.ಜೆ.ಪಿಯ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು (ಮುಂದು)**

ಮಾನ್ಯ ಕಾನೂನು ಸಚಿವರು ಮಾತನಾಡುತ್ತಾರೆ. ಅವರು ಮಾತನಾಡಲು permission ಕೊಟ್ಟಿದ್ದೇನೆ. ಅವರು ಉತ್ತರ ಹೇಳುತ್ತಾರೆ. ಅವರು ಹೇಳಿದ್ದನ್ನು ಕೇಳುವಂಥ ಸೌಜನ್ಯ ವಿರೋಧ ಪಕ್ಷದವರಿಗೆ ಮತ್ತು ಆಡಳಿತ ಪಕ್ಷದವರಿಗೆ ಇಲ್ಲದಿದ್ದರೆ ಇನ್ನು ಈ ಸದನದಲ್ಲಿ ಯಾರಿಗೆ ಹೇಳಬೇಕು? **(ಗೊಂದಲ)** ಸದನದ ಬಾವಿಯಲ್ಲಿ ಇದ್ದುಕೊಂಡು ಯಾರಾದರೂ ಮಾತನಾಡಿದರೆ ಯಾವುದೂ ಕಡತಕ್ಕೆ ಹೋಗಬಾರದು. ಬಾವಿಯಲ್ಲಿ ಯಾರೂ ಮಾತನಾಡುವಂತಿಲ್ಲ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಸಲೀಂ ಅಹ್ಮದ್ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದ್ಯರುಗಳು ಸದನದ ಬಾವಿಗೆ ಬರುತ್ತಾರೆ, ಮತ್ತೆ ಅವರ ಸ್ಥಳಕ್ಕೆ ಹೋಗುತ್ತಾರೆ. ಅವರ ಸ್ಥಳಕ್ಕೆ ಹೋಗುತ್ತಾರೆ ಮತ್ತೆ ಬಾವಿಗೆ ಬರುತ್ತಿದ್ದಾರೆ. **(ಗೊಂದಲ)** ನೋಡಿ, ಹೋಗಿ ಮತ್ತೆ ಬರುತ್ತಿದ್ದಾರೆ. ನೀವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ಸಭಾನಾಯಕರೇ, ಒಂದು ನಿಮಿಷ ಅವರು ಹೇಳುತ್ತಾರೆ ಕುಳಿತುಕೊಳ್ಳಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮತ್ತು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರು)**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕಾನೂನು ಸಚಿವರು ಮಾತನಾಡುವುದಕ್ಕೆ ಬಿಡಿ. ಈಗ ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಸಭಾಪತಿಯವರೇ, ಇವರ** ನಾನು ಇವರ ಹತ್ತಿರ ಏನೂ ಕಲಿಯಬೇಕಾಗಿಲ್ಲ.

**(ಗೊಂದಲ)**

**ಸಭಾಪತಿಯವರು:** ಶ್ರೀ ಮಾನ್ಯ ಎನ್.ರವಿಕುಮಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಏನ್ರೀ ಇದು, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. **(ಗೊಂದಲ)** ನೋಡಿ, ಅಲ್ಲಿಗೆ ಹೋಗುವುದು ಬರುವುದು ಮಾಡಬೇಡಿ. Law Minister ರವರೇ, ಕೊನೆಯದಾಗಿ ತಾವು ಸರ್ಕಾರದಿಂದ ಉತ್ತರ ಹೇಳಿ. **(ಗೊಂದಲ)** ಬಾವಿಯಲ್ಲಿ ನಿಂತುಕೊಂಡು ಯಾರೂ ಮಾತನಾಡುವಂತಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಆಗುತ್ತಿರುವುದು . . .

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ನೋಡಿ ನಾನು ನಿಮಗೆ ಹೇಳುವುದೇನೆಂದರೆ, ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ಈಗ Law Minister ಉತ್ತರ ಹೇಳುತ್ತಾರೆ. ಅದನ್ನು ಕೇಳುವಂಥ ಸೌಜನ್ಯ ಇರಲಿ. ಅವರು ಮೊದಲು ಉತ್ತರ ಹೇಳಲಿ. ಆಮೇಲೆ ನಾನು ಹೇಳುತ್ತೇನೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಕಾನೂನು ಸಚಿವರೇ, ತಾವು ಉತ್ತರ ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಈ ಪ್ರಶ್ನೆ ಉದ್ಭವವಾಗಿದ್ದು ಏಕೆ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಷ್ಟು ಹೊತ್ತು ಚರ್ಚೆ ಆಯಿತು ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಗಂಟಲು ಜಾಸ್ತಿ ಇದೆಯೆಂದು ಕಿರುಚಿಕೊಳ್ಳುವುದಕ್ಕೇ ಕಾಲು ಕೆರೆದು ಜಗಳಕ್ಕೆ ಬರುವುದಕ್ಕೆ. . .

**ಸಭಾಪತಿಯವರು:–** ಆಯಿತು ಇಲ್ಲಿ ಯಾರು ಶುದ್ಧ ಇದ್ದಾರೆ?

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, 4 ಜನ ಸಚಿವರನ್ನಾದರೂ ಮಾಡಿ. **(ಗೊಂದಲ)** ಅವರ department ಗಳನ್ನು manage ಮಾಡುವುದಕ್ಕೆ ಯೋಗ್ಯತೆ ಇಲ್ಲದವರೆಲ್ಲಾ, ಎಲ್ಲದಕ್ಕೂ ಬಂದು ಕಿರುಚಾಡುತ್ತಿದ್ದರೆ ಹೇಗೆ? ವಿರೋಧ ಪಕ್ಷದ ವಿರುದ್ಧ ಕಿರುಚಾಡುವುದಕ್ಕೆ 4 ಜನ ಸಚಿವರನ್ನು ಮಾಡಲಿ. **(ಗೊಂದಲ)** ಇಲ್ಲಿ ಈ ರೀತಿ ಮಾಡಿ **ದುಂಡಾವರ್ತನೆ** ಮಾಡಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ಸದನದ ಬಾವಿಯಲ್ಲಿ ಮಾತನಾಡಿದವರದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಸಾಕಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಕೆಲವು ಸದಸ್ಯರು ನಮ್ಮ ಹತ್ತಿರ ಪುರಾವೆ ಇವೆಯೆಂದು ಅವರೇ ಹೇಳಿದ್ದಾರೆ. ಪತ್ರಿಕಾ ಪರಿಷತ್ ಅನ್ನು ಅಥವಾ ಅವರಿಗೆ ಬೇಕಾಗಿರತಕ್ಕಂಥವರು ಮಾಡಿರತಕ್ಕಂಥ ಪತ್ರಿಕಾ ಪರಿಷತ್ತಿನ ಆ ಏನು ಪತ್ರಿಕೆಗಳ ಪುಟಗಳಿವೆಯೋ ಅವುಗಳನ್ನು ತೆಗೆದುಕೊಂಡು ಬಂದು ಇಲ್ಲಿ ಓದಿದ್ದಾರೆ. ನಮ್ಮ ಹತ್ತಿರ ಪುರಾವೆಗಳಿವೆಯೆಂದು ಹೇಳಿದರು. ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಉತ್ತರ ಹೇಳುವವರೆಗೂ ನಿಮಗೆ ಏನೇನೋ ತಪ್ಪು ಕಲ್ಪನೆಗಳು ಇರಬಹುದು, ಎಲ್ಲವೂ ಎಲ್ಲರ ಮನಸ್ಸಿನಲ್ಲೂ ಪೂರ್ಣವಾಗಿ ರಾಜಕಾರಣದ ಸಲುವಾಗಿ ಮಾಡುತ್ತಿದ್ದೀರಿ ಎಂದು ನಾನು ಹೇಳುವುದಿಲ್ಲ, ಇರಬಹುದು. ಆದರೆ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಉತ್ತರ ಹೇಳಿದ ಮೇಲಾದರೂ ಕೂಡ ನೀವು ಈ ವ್ಯವಸ್ಥೆಯೊಳಗೆ ಈ ಸಚಿವರು ಹೇಳಿದ್ದು ಸರಿಯಿದೆಯೆಂದು ಅನಿಸಬೇಕಾಗಿತ್ತಲ್ಲವೇ? ಈಗ ನೀವು ಯಾವುದರ ಮೇಲೆ depend ಆಗಿದ್ದೀರಿ? ನೀವು ಎಲ್ಲರೂ ಕೂಡ ಶ್ರೀ ಲಕ್ಷ್ಮಿನಾರಾಯಣ ರವರ complaint ಮೇಲೆ depend ಆಗಿದ್ದೀರಿ.. ಪತ್ರಿಕೆಯವರಾಗಲೀ, ರಾಜಕೀಯ ಪಾರ್ಟಿಯವರಾಗಲೀ ಅಥವಾ ಯಾರು ಸಂಶಯದಲ್ಲಿ ಇದ್ದಾರೋ ಆ ಸಂಶಯ ಹೊಂದಿದವರಾಗಲೀ ಶ್ರೀ ಲಕ್ಷ್ಮಿನಾರಾಯಣರವರ complaint ಮೇಲೆ ಇವರು ಇದನ್ನೆಲ್ಲಾ ಮಾತನಾಡುತ್ತಿದ್ದಾರೆ. ಮಾನ್ಯ ಪ್ರತಾಪ್ ಸಿಂಹರವರೇ ನೀವೇ ಹೇಳಿ. Mr. Lakshminarayan himself has applied for a license where it cannot be given. Illegal ಆಗಿ ಕೊಡುವುದಾದರೆ ಮಾತ್ರ ಅವನಿಗೆ ಕೊಡುವುದಕ್ಕೆ ಸಾಧ್ಯ. ಅವನು ಕೊಟ್ಟಿರತಕ್ಕಂಥ complaint ಮೇಲೆ ವಿಧಾನ ಪರಿಷತ್‌ನೊಳಗೆ ಇಷ್ಟು ಚರ್ಚೆಯಾಗಬೇಕೇ? ಇಲ್ಲವೇ ಯಾವುದೋ ಒಂದು judgment ಬಂದಿದೆಯೇ ಅಥವಾ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರ ಮೇಲೆ ಯಾವುದಾದರೂ ಒಂದು stricture pass ಅಗಿದೆಯೇ ಅಥವಾ ಅವರ ಮೇಲೆ ಯಾವುದಾದರು ಒಂದು ಪ್ರಕರಣದಲ್ಲಿ F.I.R. ಆಗಿ charge sheet ಆಗಿದೆಯೇ? ಅಂತಹ ಸಮಯದಲ್ಲಿ ನೀವು ಈ ರೀತಿ ಚರ್ಚೆ

ಮಾಡುವುದಕ್ಕೆ ಅಡ್ಡಿಯಿಲ್ಲ. ಯಾವ ಶ್ರೀ ಲಕ್ಷ್ಮಿನಾರಾಯಣ ರವರು illegal license ಸಲುವಾಗಿ ಅರ್ಜಿ ಹಾಕಿದ್ದಾರೆ. ಅವರ ಸಲುವಾಗಿ, ಅವರ complaint ಮೇಲೆ ನೀವು ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ರಾಜೀನಾಮೆ ಕೊಡುವಂತೆ ಕೇಳುತ್ತಿದ್ದೀರಲ್ಲ. ಅವರು ತಮ್ಮ ಇಲಾಖೆಯಲ್ಲಿ ಏನು reforms ತೆಗೆದುಕೊಂಡು ಬಂದಿದ್ದಾರೆಂದು ನೀವೆಲ್ಲಾ ನೋಡಿದ್ದೀರಿ. ಆ reforms ಬಗ್ಗೆ ನೀವೇ ಹೇಳಿ ಮಾನ್ಯ ಸಭಾಪತಿಯವರೇ. ಆ reforms ಒಪ್ಪಿ ಅದಕ್ಕೆ ತಾವು ಮೆಚ್ಚಬೇಕು. ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಲಂಚದ ಅವ್ಯವಹಾರ ಆಗುವುದಕ್ಕೆ ತಾವು ಈ reforms ಅನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ಹೇಳುವಂತಹದ್ದು ಯಾವುದಾದರೂ ಇದ್ದರೆ ಹೇಳಿ. ಒಬ್ಬರು ಮಾನ್ಯ ಸಚಿವರು counselling ಮಾಡುತ್ತಾರೆಂದರೆ ಅದರ ಬಗ್ಗೆ ತಮ್ಮದು ಒಂದು ಅಭಿಪ್ರಾಯ ಇರಬೇಕಲ್ಲವೇ? ಮಾನ್ಯ ಸಭಾಪತಿಯವರು ಶಿಕ್ಷಣ ಸಚಿವರಾಗಿದ್ದಾಗ ಕೂಡ ಎಲ್ಲಾ ಶಿಕ್ಷಕ ವರ್ಗವನ್ನೇ ಎದುರಾಕಿಕೊಂಡು counselling ತೆಗೆದುಕೊಂಡು ಬಂದರು. ಅದರ ಉದ್ದೇಶ ಏನಿತ್ತು? ಯಾವ ಕಾರಣಕ್ಕೂ ಲಂಚದ ವ್ಯವಹಾರಗಳು ಆಗಬಾರದು ಎಂದು ತಂದರು. ಅವೊತ್ತಿನ ದಿನಮಾನದೊಳಗೆ ಈ ಶಿಕ್ಷಕರ ಮಧ್ಯೆದೊಳಗೂ ಕೂಡ ಲಂಚದ ವ್ಯವಹಾರ ಇತ್ತು. ಲಂಚದ ಅವ್ಯವಹಾರ ಆಗಬಾರದೆಂದು ಅದಕ್ಕೆ counselling ತಂದು ಅದಕ್ಕೆ ಪೂರ್ಣ ವಿರಾಮ ಇಟ್ಟರು. ಅದೇ ರೀತಿ ಇವತ್ತಿನ ದಿವಸ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಕೂಡ ಅವರ ಇಲಾಖೆಯಲ್ಲಿ counselling ತೆಗೆದುಕೊಂಡು ಬಂದಿದ್ದಕ್ಕೆ at least one small appreciation ಮಾಡಬೇಕಿತ್ತು. ಆಯಿತು ಮಿಕ್ಕಿದ್ದು ಏನೇನೋ ಅಪಾದನೆ ಇವೆ, ಅವುಗಳನ್ನು ಮತ್ತೆ ನೋಡುವುದಂತೆ. ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಈಗ counselling ತಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಸಾರ್ವಜನಿಕ ಬದುಕಿನಲ್ಲಿ ಇದ್ದಾರೆ. ಅವರು ಸಾರ್ವಜನಿಕ ಬದುಕಿನಲ್ಲಿ ಇರತಕ್ಕಂಥವರು. ನೀವು ಕೂಡ ಸಾರ್ವಜನಿಕ ಬದುಕಿನಲ್ಲಿ ಇದ್ದೀರಿ. ಅವರನ್ನು ತೇಜೋವಧೆ ಮಾಡುವುದು ನಮ್ಮ ಉದ್ದೇಶ ಅಲ್ಲ. ಏನಾದರೂ ತಪ್ಪು ಮಾಡಿದ್ದರೆ ಸರಿ. ಆದರೆ ಅವರು ಏನು ನೀವು ಪುರಾವೆಗಳನ್ನು ತಂದುಕೊಟ್ಟರೆ ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಟೇಬಲ್ ಬಡಿದು ಹೇಳಿದ್ದರು. ಇವರು ಯಾವ ಅರ್ಜಿದಾರರ ಬಗ್ಗೆ ಮಾತನಾಡುತ್ತೀದ್ದಾರೋ ಆ ಅರ್ಜಿದಾರರು ಅಬಕಾರಿ ಸಚಿವರಾದ ಸನ್ಮಾನ್ಯ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರನ್ನು ಭೇಟಿ ಕೂಡ ಆಗಿಲ್ಲ. ಅವನು wrong application, illegal application ಸಲ್ಲಿಸಿದ್ದಾರೆ. ನೀವು ಅದನ್ನು base ಆಗಿ ಇಟ್ಟುಕೊಂಡು ಮಾನ್ಯ ಸಚಿವರ ರಾಜೀನಾಮೆಯನ್ನು ಅದು ಇಷ್ಟು ಆಕ್ರೋಶದಲ್ಲಿ ಕೇಳುತ್ತಿದ್ದೀರಿ. ಯಾವ ಕಾರಣಕ್ಕಾಗಿ ಕೇಳುತ್ತಿದ್ದೀರಿ? ಅದಕ್ಕೆ ಕಾರಣ ಇರಬೇಕಲ್ಲವೇ? Yes, ನೋಡಪ್ಪಾ, ಅವನು

ಇಂತಹ ಒಳ್ಳೆಯವನು ಅರ್ಜಿ ಸಲ್ಲಿಸಿದ್ದರು. ಆದರೆ ಅವನಿಗೆ ನೀವು ಲೈಸೆನ್ಸ್ ಕೊಡಲಿಲ್ಲ. ನೀವು ಏಕೆ ಲೈಸೆನ್ಸ್ ಕೊಡಲಿಲ್ಲ ಎಂದು ನೀವು ಒಂದಲ್ಲ ಎರಡು ಬಾರಿ ಕೇಳಿ. ಆಮೇಲೆ ಬಹಳ ದಿನಗಳಿಂದ ಅರ್ಜಿಗಳು pending ಇವೆಯೆಂದು ಕೆಲವು ಪತ್ರಿಕೆಯಲ್ಲೆಲ್ಲಾ ಬರುತ್ತಿತ್ತು. ಮಾನ್ಯ ಸಚಿವರು 7 ದಿನಗಳು ಅಥವಾ 8 ದಿನದೊಳಗೆ ಅವೆಲ್ಲಾ clear ಆಗಿವೆ ಎಂದು ಹೇಳಿದರು.

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು:–** ಮಾನ್ಯ ಸಭಾಪತಿಯವರೇ, ಅವೆಲ್ಲಾ next levelಗೆ ಹೋಗಿವೆ.

**ಶ್ರೀ ಹೆಚ್.ಕೆ.ಪಾಟೀಲ್:–** ಅವೆಲ್ಲಾ next levelಗೆ ಹೋಗಿವೆ ಎಂದು ಅವುಗಳನ್ನು ಅವರು ಏನು defend ಮಾಡಿಕೊಂಡಿದ್ದಾರೆ. ನೀವು ಆಪಾದನೆ ಮಾಡುವುದಕ್ಕೆ ನಮ್ಮದೇನೂ ತಕರಾರಿಲ್ಲ. ಆದರೆ ನೀವು ಆಪಾದನೆ ಮಾಡಿದಾಗ ಉತ್ತರವನ್ನು ಕೂಡ ತಾವು ದಯಮಾಡಿ ಗಮನಿಸಬೇಕು. ಇಲ್ಲದಿದ್ದರೆ ನೀವು ಒಬ್ಬ ವ್ಯಕ್ತಿಯನ್ನು, ಒಬ್ಬ ರಾಜಕಾರಣಿಯನ್ನು ಮತ್ತು ಒಬ್ಬ ಮುಖಂಡನನ್ನು ತೇಜೋವಧೆ ಮಾಡಿದಂತಾಗುತ್ತದೆ. ಆದ್ದರಿಂದ ಇವತ್ತು ಅವರು ಏನು ಹೇಳಿದ್ದಾರಲ್ಲ, ನೀವು ಇವತ್ತು ರಾತ್ರಿ 8 ಗಂಟೆಯೊಳಗೇ ತಂದುಕೊಟ್ಟರೆ ರಾಜೀನಾಮೆ ಅಲ್ಲ. ನೀವು ನಾಳೆ ಆ ಪುರಾವೆಯನ್ನು ತೆಗೆದುಕೊಂಡು ಬನ್ನಿ. ನೀವು ಆಡಿಯೋ ಮತ್ತು ವಿಡಿಯೋ ಇವುಗಳನ್ನೆಲ್ಲಾ ತಾವು ಕೂಡ ನೋಡುತ್ತಿದ್ದೀರಿ. ಅವು ಯಾವ ಮಟ್ಟಕ್ಕೆ ಹೋಗಿವೆ? ಶಿಕ್ಷೆ ಆದಮೇಲೆ ಕೋರ್ಟ್‌ನೊಳಗೆ ಅದನ್ನೇ ಇಟ್ಟುಕೊಂಡು, ಏನೆಲ್ಲಾ, ಅದು false ಕೇಸ್ ಇದೆಯೆಂದು ಹೇಳಿ; ಅದನ್ನು ಯಾರು ಮಾಡಿದ್ದಾರೆ ಯಾರು present ಮಾಡಿದ್ದಾರೋ ಅದರಲ್ಲಿ ಯಾರು ಇದ್ದಾರೋ ಅವರೇ ಬಂದು ಹೇಳುತ್ತಿದ್ದಾರೆ. This is what is going on in the country and in the society. ಈ ನಮ್ಮ technology, ನಾನು ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಆಗ ನಮ್ಮ ಚರ್ಚೆಯ ಗುಣಮಟ್ಟ ಯಾವ ಎತ್ತರದಲ್ಲಿತ್ತೆಂದರೆ, ಆಗಿನ ಮಾಜಿ ಮುಖ್ಯಮಂತ್ರಿಯವರಾದ ಜೆ.ಹೆಚ್.ಪಟೇಲ್ ರವರ ಮೇಲೂ ಇಂತಹದ್ದೇ ದೊಡ್ಡ ಹಗರಣ ಬಂದಿತ್ತು. ಆಗ CL-7 ಮತ್ತು CL-5 ಎಂದು ಏನೇನೋ ಹೇಳುತ್ತಿದ್ದರು. ಅದು ಮಾನ್ಯ ಜೆ.ಹೆಚ್.ಪಟೇಲ್‌ರವರ ಮೇಲೂ 1990 ರಲ್ಲಿ ಬಂದಿತ್ತು. ಇದು ತಮಗೂ ಗೊತ್ತಿದೆ. ಆಗ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಯಿತು. ಇಲ್ಲಿಗಿಂತಲೂ ವಿಧಾನಸಭೆಯಲ್ಲಿ ಹೆಚ್ಚು ಚರ್ಚೆಯಾಯಿತು. Ultimately what happened? What came out? ಏನು ಮಾನ್ಯ ಸದಸ್ಯರೊಬ್ಬರು ಮೈಸೂರಿನಲ್ಲಿ ರೂ.11,000 ಗಳನ್ನು ಕೇಳುತ್ತಾರೆಂದು ಹೇಳಿದರು. ನಾವು ಒಟ್ಟಾರೆ ವ್ಯವಸ್ಥೆಯ ಎಲ್ಲಾನೂ ಹಾಗೆಯೇ ನೀವು ಹೇಳಿದ್ದೆಲ್ಲಾ ಥೇಟ್ ಸುಳ್ಳು

ಅಲ್ಲ; no. Is Mr. Thimmapur wrong? Has he committed any mistake? ಈ Counselling ಮಾಡಿಕೊಂಡು ಅವರು ವರ್ಗಾವರ್ಗಿಗೆ concentrate ಮಾಡಿದ್ದಾರೆಂದರೆ, yes, there is a doubt that Mr. Thimmapur might have done wrong. But, he has gone for proper reforms. Transparency, reforms ಇವೆಲ್ಲಾ ಹಿನ್ನೆಲೆಯೊಳಗೆ ನಾವು ಉಳಿದ ಏನೇನು ಉದಾರಣೆಗಳವೆಯೋ ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಬೇರೆಯವರ ಮೇಲೆ ಬಂದಿರತಕ್ಕಂಥ ಆಪಾದನೆಯ ಸಲುವಾಗಿ ಈಗ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರ ಮೇಲೆ ಬಂದಿರತಕ್ಕಂಥ ಆಪಾದನೆ ಅದು ತಪ್ಪು ಎಂದು ಅಲ್ಲ. ನೀವು ಆ ಆಪಾದನೆಯನ್ನು wrong premise ಮೇಲೆ ತೆಗೆದುಕೊಂಡು ಹೋಗುತ್ತಿದ್ದೀರಿ. ಅವನು ತಪ್ಪು ಅರ್ಜಿ ಸಲ್ಲಿಸಿದವನು. ಕಾನೂನು ಬಾಹಿರವಾಗಿ ಅರ್ಜಿ ಸಲ್ಲಿಕೆ ಮಾಡಿದವನ complaint ತೆಗೆದುಕೊಂಡು ನೀವು ವಿಧಾನ ಪರಿಷತ್‌ನೊಳಗೆ, ಅದು ಕೂಡ ಒಬ್ಬರು ಜವಾಬ್ದಾರಿಯುತ ಸಚಿವರ ಮೇಲೆ ತಾವು ಆಕ್ರೋಶ ಮತ್ತು ಆಪಾದನೆಯನ್ನು ವ್ಯಕ್ತ ಮಾಡುತ್ತಿದ್ದೀರಿ. ಆದ್ದರಿಂದ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಏನೂ ತಪ್ಪು ಮಾಡಿಲ್ಲ. ಮಾನ್ಯ ಅಬಕಾರಿ ಸಚಿವರಾದ ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪನವರು ಅಲ್ಲಿನ ವ್ಯವಸ್ಥೆಯನ್ನು ಸುಧಾರಣೆ ಮಾಡಿದ್ದಾರೆ. ಈ ಹಿನ್ನೆಲೆಯೊಳಗೆ ಮಾನ್ಯ ಸಚಿವರು ಹೇಳತಕ್ಕಂಥ ಆ ಉತ್ತರ. ಅದರ ಜೊತೆಗೆ ಅವರು ಏನು ಸವಾಲು ಹಾಕಿದ್ದಾರೆ, that challenge is not only for you few. It is for all those who are making a complaint. ಆ ಹಿನ್ನೆಲೆಯೊಳಗೆ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಸಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

**(ಮುಂದು)**

**(114)30.1.2026/8.30/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಈ ವಿಷಯವನ್ನು ಮುಕ್ತಾಯ ಮಾಡಲಾಗಿದೆ. ಮಾನ್ಯ ರಮೇಶ್ ಬಾಬುರವರೇ, ನಿಯಮ 330 ಪ್ರಾರಂಭಿಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದಕ್ಕೆ ಒಂದು ಮಾತನ್ನು ಹೇಳುತ್ತೇನೆ. Reforms ಆಗುತ್ತೆ. It is not leading to eradication of corruption.

ಅದನ್ನು ಮಾಡಿಯೂ ಕೂಡ corruption ಆಗುತ್ತಿದೆ. ಅದನ್ನು ಬಹಳ ಲಘು ಮಾಡಿಕೊಂಡಿದ್ದಾರೆ. Proof ಏನು ಅಂದರೆ ಇಪ್ಪತ್ತೈದು ಲಕ್ಷ ಹಣ ಹಿಡಿದಿದ್ದಾರಲ್ಲಾ ಅದು Proof ಅಲ್ಲವೇ? ಅದಾದ ತಕ್ಷಣವೇ ಅವರು ಹೆಸರುಗಳನ್ನು ಹೇಳುತ್ತಾರಲ್ಲಾ ಅದು proof ಅಲ್ಲವೇ?

**(ಗೊಂದಲ)**

**ಆ) ವಿಷಯ:- ರಾಜ್ಯದಲ್ಲಿ ಬಹುತೇಕ ಕೈಗಾರಿಕೆಗಳು ಹಾಗೂ ಕಂಪನಿಗಳು ತಮ್ಮ ಲಾಭಾಂಶದಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್.) ನಿಧಿಯನ್ನು ರಾಜ್ಯದ ಮೂಲಭೂತ ಸೌಕರ್ಯಗಳಿಗೆ ನೀಡದೆ ವಂಚಿಸುತ್ತಿರುವ ಕುರಿತು.**

– – – – –

**ಶ್ರೀ ರಮೇಶ್‌ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇವತ್ತು ಇಡೀ ದೇಶದಲ್ಲಿಯೇ ಕೊಡುತ್ತಿರುವಂತಹ ಸಿ.ಎಸ್.ಆರ್ ಫಂಡ್‌ನಲ್ಲಿ ರಾಜ್ಯವು 3ನೇ ಸ್ಥಾನದಲ್ಲಿ ಹಣವನ್ನು ಪಡೆದುಕೊಳ್ಳುತ್ತಿದೆ.

**ಶ್ರೀ ಎನ್ .ರವಿಕುಮಾರ್:** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಎಷ್ಟೆಷ್ಟು ಫಿಕ್ಸ್ ಆಗಿದೆಯೆಂದು ಕೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ರಮೇಶ್‌ಬಾಬು:-** ಬಹಳ ವಿಶೇಷವೇನೆಂದರೆ, ಇತ್ತೀಚಿನ ವರದಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸಿ.ಎಸ್.ಆರ್ ನಿಧಿ ಇದೆ ಎನ್ನುವುದೇ ಬಹಳ ಜನರಿಗೆ ಗೊತ್ತಿರಲಿಲ್ಲ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಮುಕ್ತಾಯ ಮಾಡಿದ ಮೇಲೆ ಮುಗಿಯಿತು. ಮುಕ್ತಾಯ ಮಾಡಿದ್ದೇನೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳುವುದಕ್ಕೆ ನಮಗೇನು ಹುಚ್ಚು ಹಿಡಿದಿಲ್ಲ.

**ಶ್ರೀ ರಮೇಶ್‌ಬಾಬು:-** ಇವತ್ತು ಕೇಂದ್ರ ಸರ್ಕಾರದ ನೀತಿಗನುಗುಣವಾಗಿ ಸಿ.ಎಸ್.ಆರ್. ನಿಧಿ ಸಾಮಾಜಿಕ ಜವಾಬ್ದಾರಿ ಏನು ಕಂಪನಿಗಳು ತಮ್ಮ ಲಾಭಾಂಶದಲ್ಲಿ ;

**ಸಭಾಪತಿಯವರು:-** ಮಾನ್ಯ ರಮೇಶ್‌ಬಾಬುರವರೇ, ಒಂದು ನಿಮಿಷ. ಉತ್ತರ ಬಂದಿಲ್ಲವಂತೆ. ಉತ್ತರ ಬಂದಿದೆ ಎಂದು ತಿಳಿದುಕೊಂಡಿದ್ದೆ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):–** ನಾನು ಮಾನ್ಯ ರಮೇಶ್‌ಬಾಬುರವರಲ್ಲಿ ವಿನಂತಿ ಮಾಡುತ್ತೇನೆ. ಇದಕ್ಕೆ ಮುಂದಿನ ಸೋಮವಾರ ಅಥವಾ ಮಂಗಳವಾರದಂದು ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

**(ಈ ಹಂತದಲ್ಲಿ ಬಿ.ಜೆ.ಪಿ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೆ, ಯಾರು ಬಾವಿಯಲ್ಲಿ ನಿಂತು ಸ್ಲೋಗನ್ ಕೂಗುತ್ತಿದ್ದಾರೆ ದಯಮಾಡಿ ಅವರನ್ನು ಸದನದಿಂದ ಆಚೆ ಹಾಕಿ.

**ಸಭಾಪತಿಯವರು:–** ಆಯಿತು. ಮಾನ್ಯ ನವೀನ್‌ರವರೇ, ನಿಯಮ ೩೩೦ನ್ನು ಪ್ರಾರಂಭಿಸಿ. ಇಲ್ಲ. ಈಗ ಸದನವನ್ನು ದಿನಾಂಕ ೨ನೇ ಫೆಬ್ರವರಿ ೨೦೨೬ರಂದು ಬೆಳಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ ೮ ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ ೦೨ನೇ ಫೆಬ್ರವರಿ ಮಾಹೆ ೨೦೨೬ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**